ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಅಫ್ಗಾನಿಸ್ತಾನದಲ್ಲಿ ಮತ್ತೆ ತಾಲಿಬಾನ್‌ನ ಪಟ್ಟಾಭಿಷೇಕವಾಗಿದೆ. ಅಲ್ಲಿನ ಹಿಂಸೆಗೆ ಕೊನೆ, ಮಕ್ಕಳ ಕಲಿಕೆ, ಹಸಿವು ಸಹಿತ ನೂರಾರು ಪ್ರಶ್ನೆಗಳಿಗೆ ಉತ್ತರಿಸಲಾಗದೆ 'ದೇವರು' ಸಹ ಅಳುತ್ತಿದ್ದಾನೆ!

ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್: ಬೆಳ್ಳಿ ಪಥದಲ್ಲಿ ಅಮಿತ್ ನಡಿಗೆ 14
ದೆಹಲಿಗೆ ಜಮೀರ್: ಮತ್ತೆ ಇ.ಡಿ ನೋಟಿಸ್? 5
ಅತ್ಯಾಧುನಿಕ ಹೊರರೋಗಿ ವಿಭಾಗ ಸೇರಿದಂತೆ ವಿವಿಧ ಘಟಕಗಳು ನಿರ್ಮಾಣ
ವಿಶ್ವ ದರ್ಜೆಯ ಸೇವೆಗೆ ಕಿದ್ವಾಯಿ ಸಜ್ಜು 7

ನಕಲಿ ವ್ಯಾಜ್ಯ ಹೂಡಿ ವಂಚಿಸುವ ಜಾಲ • ವಕೀಲರು, ಅಧಿಕಾರಿಗಳು ಶಾಮೀಲು?

ಭೂಕಬಳಿಕೆಗೆ 'ರಾಜಿ ಡಿಕ್ರಿ' ಕೈಚಳಕ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: 'ನಕಲಿ ವ್ಯಾಜ್ಯ' ಹೂಡಿ ನ್ಯಾಯಾಲಯಗಳನ್ನೇ ನಂಬಿಸಿ 'ರಾಜಿ ಡಿಕ್ರಿ' ಪಡೆದು ಆಸ್ತಿ ಕಬಳಿಸುತ್ತಿರುವ ಜಾಲದ ದಾಳಿಗೆ ಸಿಲುಕಿ ಜನರು ಹೈರಾಣಾಗುತ್ತಿದ್ದಾರೆ. ಭೂಗಳ್ಳರ ಜಾಲದೊಂದಿಗೆ ವಕೀಲರು, ಕೆಲ ಅಧಿಕಾರಿಗಳೂ ಕೈಜೋಡಿಸಿದ್ದು, ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಆಸ್ತಿಗಳು ವಂಚಕರ ಪಾಲಾಗುತ್ತಲೇ ಇವೆ.

ನಕಲಿ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಿ ಜಮೀನುಗಳನ್ನು ಕಬಳಿಸುವುದು, ಬೆದರಿಕೆ ಅಥವಾ ಬಲವಂತದಿಂದ ಖಾಸಗಿ ವ್ಯಕ್ತಿಗಳ ಆಸ್ತಿಗಳನ್ನು ಕಿತ್ತುಕೊಳ್ಳುವ ಕೃತ್ಯಗಳಿಗೆ ಬೆಂಗಳೂರಿನಲ್ಲಿ ದೀರ್ಘ ಇತಿಹಾಸವಿದೆ. ಆದರೆ ಅತ್ಯಂತ ರಹಸ್ಯವಾಗಿ ಕಾರ್ಯಾಚರಣೆ ನಡೆಸಿ ಆಸ್ತಿಗಳನ್ನು ಕಬಳಿಸುತ್ತಿದ್ದ ಬೃಹತ್ ಜಾಲವೊಂದು, ಈಗ ಹೈಕೋರ್ಟ್ ಆದೇಶದಂತೆ ನಡೆಯುತ್ತಿರುವ ತನಿಖೆಯಿಂದ ಬಯಲಿಗೆ ಬಂದಿದೆ.

ಆಸ್ತಿಯ ಮಾಲೀಕರಿಗೆ ಕಿಂಚಿತ್ತೂ ಸುಳಿವೇ ಸಿಗದಂತೆ ನ್ಯಾಯಾಲಯದಿಂದ 'ರಾಜಿ ಡಿಕ್ರಿ' ಪಡೆದುಕೊಳ್ಳುವ ಈ ಗುಂಪು, ಸದ್ದಿಲ್ಲದೇ ಆಸ್ತಿಯನ್ನು ಬೇರೊಬ್ಬರಿಗೆ ಪರಭಾರೆ ಮಾಡುತ್ತದೆ. ಆಸ್ತಿಯ ಮೇಲಿನ ಹಕ್ಕು ಕಳೆದುಕೊಂಡಿರುವ ಬಹುತೇಕರಿಗೆ ಕೋಟ್ಯಂತರ ರೂಪಾಯಿ ಮೌಲ್ಯದ ಸ್ವತ್ತು ಕೈತಪ್ಪಿರುವುದು ಈಗಲೂ ಗೊತ್ತೇ ಇಲ್ಲ. ವಿಷಯ ತಿಳಿದ ಬೆರಳೆಣಿಕೆಯಷ್ಟು ಮಂದಿ ಕಾನೂನು ಹೋರಾಟಕ್ಕೆ ಅಣಿಯಾಗುವಷ್ಟರಲ್ಲೇ ಆಸ್ತಿ ನಾಲ್ಕಾರು ಮಂದಿಯ ಕೈ ಬದಲಾಗಿ ಗಗನಚುಂಬಿ ಕಟ್ಟಡಗಳು ತಲೆ ಎತ್ತಿ ನಿಂತಿವೆ.

ನಕಲಿ ದಾಖಲೆಗಳನ್ನು ಬಳಸಿಕೊಂಡು ನ್ಯಾಯಾಲಯದಿಂದ 'ರಾಜಿ ಡಿಕ್ರಿ' ಪಡೆದುಕೊಂಡು ಷಾ ಹರಿಲಾಲ್ ಭಿಕಾಬಾಯ್ ಅಂಡ್ ಕಂಪನಿಗೆ ಸೇರಿದ ಸ್ವತ್ತನ್ನು ಕಬಳಿಸಿದ ಪ್ರಕರಣದ ವಿಚಾರಣೆ ನಡೆಸಿದ ಹೈಕೋರ್ಟ್, ಈ ಕುರಿತು ವಿಸ್ತೃತ ತನಿಖೆ ನಡೆಸುವಂತೆ ಸಿಐಡಿ ಪೊಲೀಸರಿಗೆ ಆದೇಶಿಸಿತ್ತು. ಒಂದೇ ತಂಡ, ಒಂದೇ ರೀತಿಯ ಕಾರ್ಯವಿಧಾನ ಬಳಸಿಕೊಂಡು ನೂರಾರು ಸ್ಥಿರಾಸ್ತಿಗಳನ್ನು ಕಬಳಿಸಿ, ಕೈ ಬದಲಾವಣೆ ಮಾಡಿರುವುದನ್ನು ತನಿಖಾ ತಂಡ ಪತ್ತೆಮಾಡಿದೆ.

ವಂಚನೆಯ ಜಾಡು: ವಾರಸುದಾರರು ಸಮೀಪದಲ್ಲಿ ಇಲ್ಲದ, ಅನಿವಾಸಿ ಭಾರತೀಯರ ಒಡೆತನದ ಆಸ್ತಿಗಳನ್ನು ವಂಚಕರ ಜಾಲ ಪತ್ತೆಹಚ್ಚುತ್ತಿತ್ತು. ಆಸ್ತಿಯ ಒಡೆತನಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ 'ನಕಲಿ ವ್ಯಾಜ್ಯ'ಕ್ಕೆ ಈ ತಂಡ ತಯಾರಿ ನಡೆಸುತ್ತಿತ್ತು. ಆಸ್ತಿಯ ಮಾಲೀಕನೆಂದು ಒಬ್ಬನನ್ನು, ಅತಿಕ್ರಮ ಪ್ರವೇಶ ಮಾಡಿರುವ ಪ್ರತಿವಾದಿ ಎಂದು ಒಬ್ಬನನ್ನು ಹಾಗೂ ಕೆಲವು ಪ್ರಕರಣಗಳಲ್ಲಿ ಬಾಡಿಗೆದಾರ ಎಂದು ಇನ್ನೊಬ್ಬನನ್ನು ಸೃಷ್ಟಿಸಲಾಗುತ್ತಿತ್ತು. ಅದಕ್ಕೆ ಪೂರಕವಾಗಿ ನಕಲಿ ದಾಖಲೆ ಸೃಷ್ಟಿಸಿ, ಈ ಮೂವರ ಹೆಸರಿನಲ್ಲೇ ನ್ಯಾಯಾಲಯಗಳಲ್ಲಿ ದಾವೆ ಹೂಡುವ ಕೆಲಸ ಮಾಡುತ್ತಿತ್ತು.

ವಿಚಾರಣೆ ಆರಂಭವಾದ ಕೆಲ ದಿನಗಳಲ್ಲಿ ರಾಜಿ ಸಂಧಾನದ ಅಪೇಕ್ಷೆಯನ್ನು ನ್ಯಾಯಾಲಯದ ಮುಂದೆ ಇಟ್ಟು, 'ರಾಜಿ ಡಿಕ್ರಿ' ಪಡೆಯುವುದು. ಒಬ್ಬನ ಹೆಸರಿಗೆ ಆಸ್ತಿಯನ್ನು ಬಿಟ್ಟುಕೊಡುವ ರಾಜಿ ತೀರ್ಮಾನದ ಅನುಸಾರ ನ್ಯಾಯಾಲಯದಿಂದ ಆದೇಶ ಪಡೆಯುವುದು. ಅದನ್ನು ಬಳಸಿಕೊಂಡು ಆಸ್ತಿಯ ಮೇಲೆ ಹಕ್ಕು ಸಾಧಿಸಿ, ದಿಢೀರನೆ ಬೇರೊಬ್ಬರಿಗೆ ಪರಭಾರೆ ಮಾಡಿ ಕೋಟ್ಯಂತರ ರೂಪಾಯಿ ಸಂಪಾದಿಸುವ ಕೆಲಸವನ್ನು ಈ ಜಾಲ ಮಾಡುತ್ತಾ ಬಂದಿದೆ.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6



ಪ್ರ.ವಾ. ಗ್ರಾಫಿಕ್ಸ್

ಒಳನೋಟ
ಭೂಗಳ್ಳರ ಜಾಲ
ಪ್ರತಿಕ್ರಿಯಿಸಿ: 9606038256
feedback@prajavani.co.in

ಹೈಕೋರ್ಟ್ ಹೇಳಿರುವುದೇನು?

'ವಂಚನೆ, ಫೋರ್ಜರಿ ಮತ್ತು ನಕಲಿ ದಾಖಲೆಗಳನ್ನು ಸೃಷ್ಟಿಸುವ ಕೃತ್ಯಗಳು ಸಾಮಾನ್ಯವಾಗಿ ಒಳಗಿನವರ ಭಾಗಿದಾರಿಕೆ ಇಲ್ಲದೇ ನಡೆಯುವುದಿಲ್ಲ' ಎಂದು 'ಷಾ ಹರಿಲಾಲ್ ಕಂಪನಿಯ ಪ್ರಕರಣದಲ್ಲಿ ನೀಡಿರುವ ತೀರ್ಪಿನಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ನೇತೃತ್ವದ ಏಕಸದಸ್ಯ ಪೀಠ ಹೇಳಿದೆ.

'ಅರ್ಜಿಯ ಮೇಲಿನ ಶಾಯಿ ಆರುವ ಮುನ್ನವೇ ನ್ಯಾಯಾಲಯದಿಂದ ಡಿಕ್ರಿ ಆದೇಶ ಪಡೆಯಲಾಗಿದೆ. 2018ರ ಮೇ 31ರಂದು ರಾಕೆಟ್ ವೇಗದಲ್ಲಿ ಈ ಆದೇಶ ಹೊರಡಿಸುವುದಕ್ಕೆ ಪೂರಕವಾದ ಯಾವ ಕಾರಣಗಳೂ ಕಾಣಿಸುತ್ತಿಲ್ಲ. ಪ್ರಕರಣದ ವಾದಿ ಅರ್ಜಿದಾರ ಮತ್ತು ಪ್ರತಿವಾದಿ ಸಂಶಯಾಸ್ಪದ ವೇಗದಲ್ಲಿ ವರ್ತಿಸಿದ್ದರೂ ಲಘು ಪ್ರಕರಣಗಳ ನ್ಯಾಯಾಲಯದ ನ್ಯಾಯಾಧೀಶರು ಈ ಬಗ್ಗೆ ಯೋಚನೆಯನ್ನೇ ಮಾಡಿಲ್ಲ ಎಂಬ ಅಭಿಪ್ರಾಯ ಈ ಪೀಠಕ್ಕೆ ಮೂಡುತ್ತಿದೆ' ಎಂಬ ಉಲ್ಲೇಖ ತೀರ್ಪಿನಲ್ಲಿದೆ.

ವಂಚಕರ ಜಾಲಕ್ಕೆ ಖಾಕಿ ಅಭಯ

ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಖಾಸಗಿ ಆಸ್ತಿಗಳ ಮಾಲೀಕತ್ವಕ್ಕೆ ಸಂಬಂಧಿಸಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಮಾಲೀಕರನ್ನೇ ಬೆದರಿಸಿ ಭೂಗಳವು ಮಾಡುವ ತಂಡಗಳು ದಶಕಗಳಿಂದ ಸಕ್ರಿಯವಾಗಿವೆ. ರೌಡಿಗಳು, ವಂಚಕರು ಶಾಮೀಲಾಗಿರುವ ಈ ಜಾಲಕ್ಕೂ ಪೊಲೀಸರೇ ರಕ್ಷಣೆ ನೀಡುತ್ತಿರುವ ಆರೋಪವಿದೆ.

ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ, ಆನೇಕಲ್ ಸೇರಿದಂತೆ ಹಲವು ತಾಲ್ಲೂಕುಗಳಲ್ಲಿ ಈ ರೀತಿ ಆಸ್ತಿ ಲಪಟಾಯಿಸುವ ತಂಡಗಳು ಇವೆ. ಕೆಲವು ಪೊಲೀಸ್ ಅಧಿಕಾರಿಗಳೇ ಈ ತಂಡಗಳ 'ನಾಯಕ'ರಂತೆ ಇದ್ದಾರೆ. ನೂರಾರು ವರ್ಷಗಳ ಹಿಂದಿನ ಅವಧಿಗೂ ನಕಲಿ ದಾಖಲೆ ಸೃಷ್ಟಿಸುವಷ್ಟರ ಮಟ್ಟಿಗೆ ಈ ತಂಡಗಳು ಬೆಳೆದು ನಿಂತಿವೆ ಎಂಬ ಮಾತುಗಳು ಪೊಲೀಸರ ವಲಯದಲ್ಲೇ ಸದ್ದು ಮಾಡುತ್ತಿವೆ.

150 ಭಾರತೀಯರ ಬಿಡುಗಡೆ

ಅಫ್ಗಾನಿಸ್ತಾನ: ಪ್ರಯಾಣಿಕರ ಗುಂಪನ್ನು ತಡೆದು ಪರಿಶೀಲನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಹುತೇಕ ಭಾರತೀಯರೇ ಇದ್ದ 150 ಪ್ರಯಾಣಿಕರ ಗುಂಪನ್ನು ಕಾಬೂಲ್‌ನಲ್ಲಿ ಶನಿವಾರ ಬೆಳಗಿನ ಜಾವ ತಡೆದ ತಾಲಿಬಾನ್ ಬಂಡುಕೋರರು, ಬಳಿಕ ಅವರನ್ನು ಬಿಡುಗಡೆ ಮಾಡಿದ್ದಾರೆ.

ವಿಮಾನ ಹತ್ತುವ ಸಲುವಾಗಿ ಅಫ್ಗನ್ ಹಿಂದೂಗಳು ಹಾಗೂ ಸಿಖ್ಖರಿಂದ ಕೂಡಿದ್ದ ಈ ಗುಂಪು 12 ವಾಹನಗಳಲ್ಲಿ ಶನಿವಾರ ಬೆಳಿಗ್ಗೆ ವಿಮಾನ ನಿಲ್ದಾಣಕ್ಕೆ ಹೊರಟಿತ್ತು. ಪ್ರಯಾಣದ ದಾಖಲೆಗಳ ಪರಿಶೀಲನೆಗಾಗಿ ತರಾಖಿಲ್ ಎಂಬ ಜಾಗಕ್ಕೆ ಬಂಡುಕೋರರು ಇವರನ್ನು ಕರೆದೊಯ್ದದ್ದು ಆತಂಕಕ್ಕೆ ಕಾರಣವಾಗಿತ್ತು. ಈ ವೇಳೆ ವ್ಯಕ್ತಿಯೊಬ್ಬರು ತಮ್ಮ ಪತ್ನಿ ಜೊತೆ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಬಿಡುಗಡೆಗೂ ಮುನ್ನ ಕೆಲವರ ಮೇಲೆ ಹಲ್ಲೆ ಮಾಡಲಾಗಿದೆ ಎಂದು ಕಾಬೂಲ್ ನೌ ನ್ಯೂಸ್ ಪೋರ್ಟಲ್ ವರದಿ ಮಾಡಿದೆ. ಬಂಡುಕೋರರು ಈ ಗುಂಪನ್ನು ಅಪಹರಿಸಿದ್ದಾರೆ ಎಂಬುದಾಗಿ ಆರಂಭದಲ್ಲಿ ವರದಿಯಾಗಿತ್ತು. ನಂತರ ಎಲ್ಲರನ್ನೂ ಬಿಡುಗಡೆ ಮಾಡಲಾಯಿತು ಎಂದು ತಿಳಿಸಿತು.

8ನೇ ಪುಟ ನೋಡಿ

ದೇಶ ತೊರೆಯಲು ಕಾಬೂಲ್ ವಿಮಾನ ನಿಲ್ದಾಣಕ್ಕೆ ತಲುಪಿದ ಅಫ್ಗನ್ ಪ್ರಜೆಗಳ ಮಕ್ಕಳೊಂದಿಗೆ ಆಟವಾಡಿದ ಅಮೆರಿಕದ ಯೋಧ –ಎಪಿ ಚಿತ್ರ

ಅಂತರ ಮರೆತು ಜಮಾಯಿಸಿದ್ದ ಅಭಿಮಾನಿಗಳು

ಜೈಲಿನಿಂದ ಬಿಡುಗಡೆ: ವಿನಯಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಧಾರವಾಡ ಜಿಲ್ಲಾ ಪಂಚಾಯ್ತಿ ಸದಸ್ಯ ಯೋಗೀಶಗೌಡ ಗೌಡರ ಕೊಲೆ ಪ್ರಕರಣದಲ್ಲಿ ಸಿಬಿಐನಿಂದ ಬಂಧಿತರಾಗಿ ಇಲ್ಲಿನ ಕೇಂದ್ರ ಕಾರಾಗೃಹದಿಂದ ಜಾಮೀನಿನ ಮೇಲೆ ಶನಿವಾರ ಬಿಡುಗಡೆಯಾದ ಕಾಂಗ್ರೆಸ್ ಮುಖಂಡ ವಿನಯ ಕುಲಕರ್ಣಿ, ನೇರವಾಗಿ ಕೆಲ ಸ್ವಾಮೀಜಿಗಳ ಬಳಿ ತೆರಳಿ ಆಶೀರ್ವಾದ ಪಡೆದರು. ಶ್ರೀಗಳು ಹೂಮಾಲೆ ಹಾಕಿ, ಶಾಲು ಹೊದಿಸಿ, ಪುಸ್ತಕ ನೀಡಿ ಸನ್ಮಾನಿಸಿದರು.

7ನೇ ಪುಟ ನೋಡಿ

ಬೆಳಗಾವಿಯ ಕೇಂದ್ರ ಕಾರಾಗೃಹದಿಂದ ಜಾಮೀನಿನ ಮೇಲೆ ಶನಿವಾರ ಬಿಡುಗಡೆಯಾದ ಕಾಂಗ್ರೆಸ್ ಮುಖಂಡ ವಿನಯ ಕುಲಕರ್ಣಿ ಅವರನ್ನು ಧಾರವಾಡ ಮುರುಘಾ ಮಠದ ಮಲ್ಲಿಕಾರ್ಜುನ ಸ್ವಾಮೀಜಿ ಮತ್ತು ಡಾ.ಅಲ್ಲಮಪ್ರಭು ಸ್ವಾಮೀಜಿ ನಾಗನೂರು ರುದ್ರಾಕ್ಷಿಮಠದಲ್ಲಿ ಸನ್ಮಾನಿಸಿದರು. ಮುಖಂಡ ಪ್ರಕಾಶ ಹುಕ್ಕೇರಿ ಇದ್ದಾರೆ

67 ವೈದ್ಯಕೀಯ ವಿದ್ಯಾರ್ಥಿಗಳ ಪ್ರವೇಶ ರದ್ದತಿ

'ಹಿಂಬಾಗಿಲಿನಿಂದ ಬಂದವರಿಗೆ ಅನುಕಂಪ ತೋರಿಸಲಾಗದು'

ನವದೆಹಲಿ: ವೈದ್ಯಕೀಯ ಕಾಲೇಜಿಗೆ ಹಿಂಬಾಗಿಲಿನಿಂದ ಪ್ರವೇಶ ಪಡೆದವರಿಗೆ ಅನುಕಂಪ ತೋರಿಸಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕಳೆದ ವರ್ಷ ಜುಲೈ 20ರಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಮರು-ಪರಿಶೀಲಿಸುವಂತೆ, ಗ್ಲೋಕಲ್ ವೈದ್ಯಕೀಯ ಕಾಲೇಜು ಸಲ್ಲಿಸಿದ್ದ ಮನವಿಯನ್ನು ನ್ಯಾಯಾಲಯ ತಳ್ಳಿಹಾಕಿದೆ. ಉತ್ತರ ಪ್ರದೇಶ ಸರ್ಕಾರವು ಸಾಮಾನ್ಯ ಕೌನ್ಸೆಲಿಂಗ್‌ಗೆ ಅಧಿಸೂಚನೆ ಹೊರಡಿಸಿದರೂ ಖಾಸಗಿ ಕೌನ್ಸೆಲಿಂಗ್ ಮೂಲಕ 67 ವಿದ್ಯಾರ್ಥಿಗಳು ಎಂಬಿಬಿಎಸ್ ಕೋರ್ಸ್ ಪ್ರವೇಶ ಪಡೆದಿದ್ದರು. ಆ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ರದ್ದುಗೊಳಿಸಿದ್ದ ಭಾರತೀಯ ವೈದ್ಯಕೀಯ ಪರಿಷತ್ತಿನ (ಎಂಸಿಐ) ನಿರ್ಧಾರವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿತ್ತು.

9ನೇ ಪುಟ ನೋಡಿ

ಉತ್ತರ ಪ್ರದೇಶ ಮಾಜಿ ಸಿ.ಎಂ ಕಲ್ಯಾಣ್ ಸಿಂಗ್ ನಿಧನ

ಲಖನೌ (ಪಿಟಿಐ): ಉತ್ತರ ಪ್ರದೇಶ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ (89) ಬಹು ಅಂಗಾಂಗ ವೈಫಲ್ಯದಿಂದ ಶನಿವಾರ ನಿಧನರಾದರು.

ಕೆಲ ದಿನಗಳಿಂದ ಅಸ್ವಸ್ಥರಾಗಿದ್ದ ಅವರಿಗೆ ಇಲ್ಲಿನ ಸಂಜಯಗಾಂಧಿ ಸ್ನಾತಕೋತ್ತರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಜುಲೈ 4ರಿಂದ ಅವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿಸಲಾಗಿತ್ತು.1992ರ ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನು ಧ್ವಂಸಗೊಳಿಸಿದಾಗ ಇವರು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದರು. ನಂತರ ರಾಜಸ್ಥಾನದ ರಾಜ್ಯಪಾಲರಾಗಿಯೂ ಸೇವೆ ಸಲ್ಲಿಸಿದ್ದರು.

ಇನ್ನೊಂದು ಸುದ್ದಿ 9

ಚಿನಕುರಳಿ
ಪ್ರಕಾಶ್ ಶೆಟ್ಟಿ

ರಾಜ್ಯ ಕೋವಿಡ್ ಅಂಕಿ–ಅಂಶ

29,37,427 ▲ ಒಟ್ಟು ಸೋಂಕಿತರು
(29,36,077 ನಿನ್ನೆಯ ವಿವರ)

20,845 ▼ ಸಕ್ರಿಯ ಪ್ರಕರಣಗಳು

28,79,433 ▲ ಗುಣಮುಖರಾದವರು

37,123 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,350	▼
ಗುಣಮುಖ	1,648	▲
ಸಾವು	18	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್



ಭಾನುವಾರದ ಉಷ್ಣಾಂಶ 28° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ. ಬೆಂಗಳೂರು– ಮಂಗಳೂರು ಹೆದ್ದಾರಿಯಲ್ಲಿ ಅಲ್ಲಲ್ಲಿ ಮಳೆ ಸಾಧ್ಯತೆ.

ಹವಾಮಾನ

ಸೋಮವಾರ	ಮಂಗಳವಾರ	ಬುಧವಾರ
29° 21°	28° 21°	28° 21°

ಭಾನುವಾರ • ಆಗಸ್ಟ್ 22, 2021 ✹ ಸೂರ್ಯೋದಯ: 6.07 ಸೂರ್ಯಾಸ್ತ : 6:37 ☾ ಚಂದ್ರೋದಯ: ಸಂ. 6:00 ಚಂದ್ರಾಸ್ತ: ಬೆ. 4:47 ಶನಿವಾರದ ಹವಾಮಾನ : ಗರಿಷ್ಠ 28° ಕನಿಷ್ಠ 20° ಪ್ರಜಾವಾಣಿ

ನೈಋತ್ಯ ರೈಲ್ವೆ

E-Tender Notice No. 26/MYS/2021
Dated: 16.08.2021

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ವಲಯ ಎ –3 (ಎಪಿ ಕಾಲೋನಿಗಳು) ನಲ್ಲಿ 01.07.2021 ರಿಂದ 30.06.2022 ರವರೆಗಿನ ಅವಧಿಗೆ ಸಿಮೆಂಟ್ ಮತ್ತು ಸ್ಟೀಲ್ ಪೂರೈಕೆ ಸೇರಿದಂತೆ ಕಾಮಗಾರಿಗಳನ್ನು ನಿರ್ವಹಿಸುವುದು ಮತ್ತು ಸಾಮಗ್ರಿಗಳ ಪೂರೈಕೆಗಾಗಿ ವಲಯ ಒಪ್ಪಂದ.	Rs. 45,00,000/-
2	ಬೀರೂರು–ಹರಿಹರ ವಿಭಾಗದಲ್ಲಿ ಸೇತುವೆ ಸಂಖ್ಯೆ 92 ರಲ್ಲಿ 1X9.14 ಮೀ ವ್ಯಾಪ್ತಿಯ ಉಕ್ಕಿನ ಗಿರ್ಡರ್ ಹೊಂದಿರುವ ಸೇತುವೆಗಳನ್ನು ಪಿಎಸ್‌ಸಿ ಸ್ಲ್ಯಾಬ್‌ನೊಂದಿಗೆ ಬದಲಿಸುವುದು (ಮರು–ಟೆಂಡರ್).	Rs. 71,79,418/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07–09–2021, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವಿಭಾಗೀಯ ರೈಲ್ವೆ ವ್ಯವಸ್ಥಾಪಕರು (ಕಾಮಗಾರಿಗಳು) ಮೈಸೂರು

PUB/153/AAV/PRB/SWR/2021-22

ರಾಯಣ್ಣ ಭಾವಚಿತ್ರಕ್ಕೆ ಸೆಗಣಿ: ಪ್ರತಿಭಟನೆ

ಗುಳೇದಗುಡ್ಡ: ತಾಲ್ಲೂಕಿನ ಚಿಮ್ಮಲಗಿ ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿದ್ದ ಸಂಗೊಳ್ಳಿ ರಾಯಣ್ಣ ಭಾವಚಿತ್ರಕ್ಕೆ ಶುಕ್ರವಾರ ಕಿಡಿಗೇಡಿಗಳು ಸೆಗಣಿ ಎರಚಿಸಿದ್ದಾರೆ. ಈ ಅವಮಾನ ಸಹಿಸೆವು ಎಂದು ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಸದಸ್ಯರು, ಗ್ರಾಮಸ್ಥರು ಪ್ರತಿಭಟಿಸಿದರು.

ತಿದ್ದುಪಡಿ

ದಿ ನೆಹರೂನಗರ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ಇವರು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ದಿನಾಂಕ : 18–04–2021ರಂದು ಪ್ರಕಟಣೆಗೆ ಸಂಬಂಧಿಸಿದಂತೆ ನಂ. 587, 2ನೇ 'ಎ' ಮುಖ್ಯರಸ್ತೆ, 11ನೇ ಬ್ಲಾಕ್, ನಾಗರಭಾವಿ 2ನೇ ಸ್ಟೇಜ್, ಪಾಪರೆಡ್ಡಿಪಾಳ್ಯ ಸರ್ಕಲ್ ಹತ್ತಿರ, ಬೆಂಗಳೂರು–560072 ಎಂದು ಪ್ರಕಟಣೆಯಾಗಿತ್ತು ಇದರ ಬದಲಾಗಿ ನಂ. 172, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560020 ಎಂದು ತಿಳಿಯತಕ್ಕದ್ದು.

ಸಹಿ/– ಅಧಿಕೃತ ಅಧಿಕಾರಿ
ದಿ ನೆಹರೂನಗರ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ,

ಬಿಬಿಎಂಪಿ ಶಾಲಾ–ಕಾಲೇಜುಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳ ಬಹುಮಾನಕ್ಕೆ ಈ ಬಾರಿ ₹ 44.20ಲಕ್ಷ ವಿನಿಯೋಗ

ದಾಖಲೆ ಸಂಖ್ಯೆಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ !

• ಗುರು ಪಿ.ಎಸ್.

ಬೆಂಗಳೂರು: ನಗರದಲ್ಲಿರುವ ಬಿಬಿಎಂಪಿ ಶಾಲಾ–ಕಾಲೇಜುಗಳಲ್ಲಿ ಈ ಬಾರಿ ಹೊಸ ಹುರುಪು ಕಂಡು ಬರುತ್ತಿದೆ. ಇದೇ ಮೊದಲ ಬಾರಿಗೆ ದಾಖಲೆ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರೋತ್ಸಾಹ ಧನ ಪಡೆಯುವ ಉತ್ಸಾಹದಲ್ಲಿದ್ದಾರೆ.

ಬಿಬಿಎಂಪಿ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿಯಲ್ಲಿ ಶೇ 85ಕ್ಕಿಂತ ಹೆಚ್ಚು ಅಂಕ ಗಳಿಸಿದರೆ ತಲಾ ₹25 ಸಾವಿರ, ಕಾಲೇಜು ವಿದ್ಯಾರ್ಥಿಗಳು ದ್ವಿತೀಯ ಪಿಯುಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದರೆ ತಲಾ ₹35 ಸಾವಿರ ಪ್ರೋತ್ಸಾಹ ಧನ ನೀಡಲಾಗುತ್ತದೆ. ಪ್ರತಿ ವರ್ಷ ಈ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಬೆರಳೆಣಿಕೆಯಷ್ಟು ಇರುತ್ತಿತ್ತು. ಈ ಉದ್ದೇಶಕ್ಕಾಗಿ ಮೀಸಲಿಟ್ಟ ಅನುದಾನವೂ ಬಳಕೆಯಾಗದೇ ಉಳಿಯುತ್ತಿತ್ತು.

> **ದಾಖಲೆಯ ವಿದ್ಯಾರ್ಥಿಗಳು ಈ ಬಾರಿ ಅತ್ಯುನ್ನತ ಶ್ರೇಣಿ ಪಡೆದಿದ್ದಾರೆ. ಶಿಕ್ಷಕರ ದಿನಾಚರಣೆಯಂದು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ವಿತರಿಸಲಾಗುವುದು**
> **ರೆಡ್ಡಿ ಶಂಕರ ಬಾಬು**
> ಬಿಬಿಎಂಪಿ ವಿಶೇಷ ಆಯುಕ್ತ (ಶಿಕ್ಷಣ)

ಈ ಬಾರಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಿರುವುದರಿಂದ ಈ ಸೌಲಭ್ಯಕ್ಕೆ ಅರ್ಹರಾಗಿರುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಗಿದೆ. ಬಿಬಿಎಂಪಿ ಶಾಲೆಗಳಲ್ಲಿ ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದಿದ್ದವರಲ್ಲಿ 62 ವಿದ್ಯಾರ್ಥಿಗಳು ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆ ಬರೆದಿದ್ದವರಲ್ಲಿ 82 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಪಡೆದಿದ್ದಾರೆ. ಅಂದರೆ, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ₹15.50 ಲಕ್ಷ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ₹28.70 ಲಕ್ಷ ಸೇರಿ ಒಟ್ಟು ₹44.20 ಲಕ್ಷ ಪ್ರೋತ್ಸಾಹಧನವನ್ನು ಈ ಬಾರಿ ವಿತರಿಸಲಾಗುತ್ತಿದೆ.

ಪ್ರಜಾವಾಣಿ ವಿಶೇಷ

ಫಲಿತಾಂಶ ಪ್ರಕಟವಾಗಿ ಕೆಲವು ದಿನಗಳಲ್ಲಿಯೇ ಪ್ರೋತ್ಸಾಹ ಧನ ವಿತರಣೆ ಮಾಡಲಾಗುತ್ತಿತ್ತು. ಆದರೆ, ಈ ಬಾರಿ ಕೋವಿಡ್ ಬಿಕ್ಕಟ್ಟು ಇರುವುದರಿಂದ ವಿಳಂಬವಾಗಿದೆ. 15 ದಿನಗಳಲ್ಲಿ ಎಲ್ಲ ಅರ್ಹ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ವಿತರಿಸಲಾಗುವುದು ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.

'2019–20ನೇ ಸಾಲಿನಲ್ಲಿ ₹50 ಲಕ್ಷ, 2020–21ನೇ ಸಾಲಿನಲ್ಲಿ ₹50 ಲಕ್ಷವನ್ನು ಈ ಉದ್ದೇಶಕ್ಕಾಗಿ ಮೀಸಲಿಡಲಾಗಿತ್ತು. ಆದರೆ, ಅರ್ಹ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇತ್ತು. 2020–21ನೇ ಸಾಲಿನಲ್ಲಿ ಪ್ರೋತ್ಸಾಹ ಧನ ಮತ್ತು ಶಿಷ್ಯವೇತನ ವಿತರಣೆಗಾಗಿಯೇ ₹1.10 ಕೋಟಿ ಮೀಸಲಿಡಲಾಗಿದೆ' ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ನಿರ್ದೇಶಕ ಹನುಮಂತಯ್ಯ ಹೇಳಿದರು.

'ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸಕಲ ಪ್ರೋತ್ಸಾಹ ನೀಡಲಾಗುತ್ತಿದೆ. ಎಷ್ಟೇ ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಪಡೆದರೂ ಅವರಿಗೆ ಪ್ರೋತ್ಸಾಹಧನ ವಿತರಿಸುವಷ್ಟು ಹಣ ಮೀಸಲಿಡಲಾಗುತ್ತಿದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಶಿಕ್ಷಣ) ರೆಡ್ಡಿ ಶಂಕರ ಬಾಬು ತಿಳಿಸಿದರು.

'ಬಿಬಿಎಂಪಿ ಶಾಲಾ–ಕಾಲೇಜುಗಳಲ್ಲಿ ಓದುತ್ತಿರುವವರಿಗೆ ವಿದ್ಯಾರ್ಥಿ ವೇತನ, ಶಿಷ್ಯ ವೇತನ, ಪ್ರೋತ್ಸಾಹ ಧನ ಸೇರಿದಂತೆ ಹಲವು ಸೌಲಭ್ಯಗಳನ್ನು ಬಿಬಿಎಂಪಿ ನೀಡುತ್ತಿದೆ. ಈ ವರ್ಷ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣವೂ ಹೆಚ್ಚಾಗಿದೆ' ಎಂದು ಮುಖ್ಯಶಿಕ್ಷಕಿಯೊಬ್ಬರು ಹೇಳಿದರು.

ಅತ್ಯುನ್ನತ ಶ್ರೇಣಿ ಪಡೆದ ವಿದ್ಯಾರ್ಥಿಗಳ ವಿವರ

ಪ್ರೌಢಶಾಲೆ	ವಿದ್ಯಾರ್ಥಿಗಳು
ಸಿಎಚ್‌ಎಸ್ ಹೇರೋಹಳ್ಳಿ	11
ಸಿಜಿಎಚ್‌ಎಸ್ ಶ್ರೀರಾಮಪುರ	3
ಸಿಎಚ್‌ಎಸ್ ಭೈರವೇಶ್ವರನಗರ	8
ಸಿಎಚ್‌ಎಸ್ ಗಂಗಾನಗರ	7
ಸಿಎಚ್‌ಎಸ್ ಪಾದರಾಯನಪುರ	1
ಸಿಎಚ್‌ಎಸ್ ವಿಜಯನಗರ	7
ಸಿಎಚ್‌ಎಸ್ ಕ್ಲೀವ್‌ಲ್ಯಾಂಡ್ ಟೌನ್	22
ಸಿಎಚ್‌ಎಸ್ ಚಾಮರಾಜಪೇಟೆ	1
ಸಿಬಿಎಚ್‌ಎಸ್ ಬ್ರಾಡ್‌ವೇ	1
ಸಿಎಚ್‌ಎಸ್ ಲಗ್ಗೆರೆ	1
ಒಟ್ಟು	62

ಪಿಯು ಕಾಲೇಜು

ಸಿಜೆಸಿ ಭೈರವೇಶ್ವರನಗರ	4
ಸಿಜೆಸಿ ಶ್ರೀರಾಮಪುರ	15
ಸಿಜೆಸಿ ಬನ್ನಪ್ಪ ಪಾರ್ಕ್	5
ಸಿಜೆಸಿ ಕ್ಲೀವ್‌ಲ್ಯಾಂಡ್ ಟೌನ್	20
ಸಿಜೆಸಿ ಪಾದರಾಯನಪುರ	5
ಸಿಜೆಸಿ ಚಾಮರಾಜಪೇಟೆ	2
ಸಿಜೆಸಿ ಮತ್ತಿಕೆರೆ	5
ಸಿಜೆಸಿ ಡಿಸ್ಪೆನ್ಸರಿ ರಸ್ತೆ	5
ಸಿಜೆಸಿ ಮಾಗಡಿ ರಸ್ತೆ	9
ಸಿಜೆಸಿ ಕಸ್ತೂರಬಾ ನಗರ	5
ಸಿಜೆಸಿ ಹೇರೋಹಳ್ಳಿ	2
ಸಿಜೆಸಿ ಜೋಗುಪಾಳ್ಯ	3
ಸಿಜೆಸಿ ಕಾವೇರಿಪುರ	2
ಒಟ್ಟು	82

ವಿಶ್ವದರ್ಜೆಯ 400 ಆಸನಗಳ ಸಭಾಂಗಣ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವದರ್ಜೆಯ 400 ಆಸನಗಳ ಸಭಾಂಗಣ, ಕಲಾ ಕೇಂದ್ರ, ವಿಶಾಲ ಗ್ರಂಥಾಲಯ, ವಿವಿಧ ಪ್ರಕಾರಗಳ ಕಲೆ ಮತ್ತು ಸಾಂಸ್ಕೃತಿಕ ತರಬೇತಿ ಕೇಂದ್ರವನ್ನು ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ' ಎಂದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಂಸ್ಥೆಯ ಗೌರವ ಕಾರ್ಯದರ್ಶಿ ಅರಕಲಿ ವೆಂಕಟೇಶ್ ಪ್ರಸಾದ್ ತಿಳಿಸಿದರು.

ಸಂಸ್ಥೆಯ 75ನೇ ವರ್ಷಾಚರಣೆ ಪ್ರಯುಕ್ತ ನಗರದಲ್ಲಿ ಹಮ್ಮಿಕೊಂಡಿದ್ದ 'ಕಾಫಿ ಟೇಬಲ್ ಪುಸ್ತಕ' ಲೋಕಾರ್ಪಣೆ ಕಾರ್ಯಕ್ರಮದಲ್ಲಿಅವರು ಮಾತನಾಡಿದರು. ಈ ಪುಸ್ತಕದಲ್ಲಿ ಸಂಸ್ಥೆಯು ಸಾಂಸ್ಕೃತಿಕ ಲೋಕಕ್ಕೆ ನೀಡಲಾದ ಕೊಡುಗೆಯನ್ನು ವಿವರಿಸಲಾಗಿದೆ.

'ಬಿ.ಪಿ. ವಾಡಿಯ ಅವರ ಚಿಂತನೆಯ ಕೂಸಾಗಿರುವ ಈ ಸಾಂಸ್ಕೃತಿಕ ಸಂಸ್ಥೆಯು 1945ರ ಆ.11ರಂದು ನಗರದ ಹೃದಯ ಭಾಗವಾದ ಬಸವನಗುಡಿಯಲ್ಲಿ ಆರಂಭವಾಯಿತು. ವಿವಿಧ ಕ್ಷೇತ್ರಗಳ ಸಾಧಕರು, ಕಲಾವಿದರು, ಸಾಹಿತಿಗಳು, ಸಂಗೀತಗಾರರು, ನೃತ್ಯಗಾರರು ಇಲ್ಲಿಗೆ ಭೇಟಿ ನೀಡುವ ಜೊತೆಗೆ ತಮ್ಮ ವಿದ್ವತ್ಪೂರ್ಣ ಉಪನ್ಯಾಸಗಳಿಂದ ಸಂಸ್ಥೆಯ ಉದ್ದೇಶವನ್ನು ಸಾಕಾರಗೊಳಿಸಿದ್ದಾರೆ. ಈವರೆಗೆ 2,100 ಕ್ಕೂ ಹೆಚ್ಚು ಉಪನ್ಯಾಸಗಳು ಹಾಗೂ 3,000ಕ್ಕೂ ಅಧಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಇಲ್ಲಿ ಏರ್ಪಾಡಾಗಿವೆ' ಎಂದು ತಿಳಿಸಿದರು.

ಶಿಕ್ಷಣ ತಜ್ಞ ಗುರುರಾಜ ಕರಜಗಿ ಮಾತನಾಡಿ, 'ಈ ಸಂಸ್ಥೆಯು ನಾಡಿನ ಸಾಂಸ್ಕೃತಿಕ ಲೋಕಕ್ಕೆ ನೀಡಿರುವ ಕೊಡುಗೆಗಳನ್ನು ಮರೆಯಲು ಸಾಧ್ಯವಿಲ್ಲ. ಈ ಸ್ಥಳದಲ್ಲಿ ಜರುಗಿದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಆನಂದಿಸಿದ್ದೇನೆ' ಎಂದು ಹೇಳಿದರು.

ರಾಜಕಾರಣಿಗಳು ಬಳಸುವ ಭಾಷೆ ಕುರಿತು ಬರಗೂರು ಬೇಸರ

ಭಾಷಿಕ ಭ್ರಷ್ಟಾಚಾರ: ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕಾರಣಿಗಳು ಬಳಸುವ ಭಾಷೆಯನ್ನು ಗಮನಿಸಿದರೆ ಆರ್ಥಿಕ ಭ್ರಷ್ಟಾಚಾರದ ಜೊತೆಗೆ ಭಾಷಿಕ ಭ್ರಷ್ಟಾಚಾರ ಕೂಡ ನಡೆಯುತ್ತಿರುವ ಬಗ್ಗೆ ಆತಂಕ ಮೂಡುತ್ತಿದೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಕಳವಳ ವ್ಯಕ್ತಪಡಿಸಿದರು.

ವಸಂತ ಪ್ರಕಾಶನ ಮತ್ತು ಸಿವಿಜಿ ಪಬ್ಲಿಕೇಷನ್ಸ್ ನಗರದಲ್ಲಿ ಶನಿವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಆರ್. ಲಕ್ಷ್ಮೀನಾರಾಯಣ ಅವರ ಕಾದಂಬರಿ 'ಮುಗಿಯದ ಮಾಯೆ' ಮತ್ತು ಅನುವಾದಿತ ಕಥೆಗಳ ಸಂಕಲನ 'ಹಲವು ಭೂಮಿ ಹಲವು ಬಣ್ಣ' ಕೃತಿಯನ್ನು ಬಿಡುಗಡೆ ಮಾಡಿ, ಮಾತನಾಡಿದರು.

'ಇತ್ತೀಚಿನ ದಿನಗಳಲ್ಲಿ ಕೆಲವು ರಾಜಕಾರಣಿಗಳು ಬಳಸುವಂತಹ ಭಾಷೆ ನೋಡಿದರೆ ಇದು ಕನ್ನಡವೇ ಎಂಬ ಪ್ರಶ್ನೆ ಕಾಡುತ್ತದೆ. ಇದೇ ವೇಳೆ ಕನ್ನಡ ಭಾಷೆಯನ್ನು ಹೀಗೆಲ್ಲ ಬಳಸಬಹುದೇ ಎಂಬ ಅನುಮಾನಗಳೂ ಮೂಡುತ್ತಿವೆ. ನಮ್ಮನ್ನು ಅಗಲಿರುವವರ ಬಗ್ಗೆ ಗೌರವವೇ ಇಲ್ಲದ ರೀತಿಯಲ್ಲಿ ಮಾತನಾಡುತ್ತಿರುವುದು ಬೇಸರದ ಸಂಗತಿ. ಅಸಹನೆ ಮತ್ತು ಅಹಂಕಾರದ ಕಾಲದಲ್ಲಿ ನಾವಿದ್ದೇವೆಯೇ ಎಂಬ ಆತಂಕ ವ್ಯಕ್ತವಾಗುತ್ತಿದೆ' ಎಂದು ಅವರು ಹೇಳಿದರು.

'ನಮ್ಮ ದೇಶವು ಬಹು ಭಾಷೆ, ಬಹು ಸಂಸ್ಕೃತಿ ಮತ್ತು ಬಹು ಧಾರ್ಮಿಕತೆಯನ್ನು ಒಳಗೊಂಡಿದೆ. ಈ ಬಹುತ್ವದಲ್ಲಿಯೇ ಭಾರತೀಯರ ಅಸ್ಮಿತೆಯಿದೆ. ಬಹು ಭಾಷೆ ಮತ್ತು ಸಂಸ್ಕೃತಿಗೆ ಎಲ್ಲಿ ಗೌರವ ಕೊಡಲಾಗುತ್ತದೆಯೋ ಅಲ್ಲಿ ಅಸಹನೆ, ಅಹಂಕಾರ ಇರುವುದಿಲ್ಲ. ಲಕ್ಷ್ಮೀನಾರಾಯಣ ಅವರ ಎರಡೂ ಕೃತಿಗಳಲ್ಲಿ ಬಹುತ್ವವನ್ನು ನೋಡಬಹುದಾಗಿ' ಎಂದು ತಿಳಿಸಿದರು.

'ಮುಗಿಯದ ಮಾಯೆ' ಕಾದಂಬರಿ ಬಗ್ಗೆ ಮಾತನಾಡಿದ ವಿಮರ್ಶಕ ಎಚ್. ದಂಡಪ್ಪ, 'ಈ ಕಾದಂಬರಿ ಇತಿಹಾಸ ಮತ್ತು ಸಾಹಿತ್ಯದ ಜೊತೆ ಜೊತೆಯಲ್ಲಿ ಸಾಗುತ್ತದೆ. ಸೃಜನಶೀಲತೆಯ ನೆಲೆಗಟ್ಟಿನಲ್ಲಿ ಕೃತಿಯನ್ನು ರಚನೆ ಮಾಡಲಾಗಿದೆ' ಎಂದರು.

'ಹಲವು ಭೂಮಿ ಹಲವು ಬಣ್ಣ' ಕೃತಿಯ ಬಗ್ಗೆ ಕಥೆಗಾರ ಕಂನಾಡಿಗಾ ನಾರಾಯಣ ಅವರು ಮಾತನಾಡಿದರು.

ವಸಂತ ಪ್ರಕಾಶನ ಮತ್ತು ಸಿವಿಜಿ ಪಬ್ಲಿಕೇಷನ್ಸ್ ನಗರದಲ್ಲಿ ಶನಿವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ 'ಮುಗಿಯದ ಮಾಯೆ' ಮತ್ತು 'ಹಲವು ಭೂಮಿ ಹಲವು ಬಣ್ಣ' ಕೃತಿಯನ್ನು ಬರಗೂರು ರಾಮಚಂದ್ರಪ್ಪ ಬಿಡುಗಡೆ ಮಾಡಿದರು. (ಎಡದಿಂದ) ಕೃತಿಗಳ ಲೇಖಕ ಆರ್. ಲಕ್ಷ್ಮೀನಾರಾಯಣ, ಲೇಖಕ ಪಿ.ವಿ. ನಾರಾಯಣ, ಎಚ್. ದಂಡಪ್ಪ ಹಾಗೂ ಕಂನಾಡಿಗಾ ನಾರಾಯಣ ಇದ್ದರು
– ಪ್ರಜಾವಾಣಿ ಚಿತ್ರ

Online Tender Document "Equipment" for M.P. Police
POLICE HEAD QUARTER, M.P., BHOPAL

No. PHQ/15/GPC/2530-5/2021 Bhopal, Dated : 18/08/2021

" ONLINE TENDER NOTICE "

Online tender are invited by Assistant Inspector General of Police (Provisioning) Police Head Quarter, Bhopal on behalf of DGP MP Bhopal for the following on website https://mptenders.gov.in/nicgep/app

S.No.	Name of Item(s)	Qty.	Tender Fees (Rs.)	EMD Paid Online Through mptender.gov.in
1.	Laptop	251	12,500	2,50,000

1. Cost of tender document (Tender Fee) is non refundable and cannot be exempted in any condition & **must submit online through website** https://mptenders.gov.in/nicgep/app
2. Tender document can be download from the website of MP Police (www.mppolice.gov.in)
3. Bids shall be submitted online only at MP Tenders website: https://mptenders.gov.in/nicgep/app
4. **Critical Date sheet:**

Published Date	30/07/2021	Time 14:00 PM
Bid Document Download Start Date	31/07/2021	Time 11:00 PM
Pre bid meeting	09/08/2021	Time 12:00 PM
Bid Submission Start Date	15/08/2021	Time 11:00 PM
Bid Submission End Date	24/08/2021	Time 14:30 PM
Bid Opening Date	25/08/2021	Time 16:30 PM

5. Intending Bidders are advised to visit this website regularly till closing date of submission to keep themselves updated as any change/modification in the tender will be intimated through this website only by corrigendum / addendum /amendment.
6. Bids will be opened as per date/time as mentioned in the Tender Critical Date Sheet. After online opening of Technical-Bid the result of their qualification as well Price-Bid opening will be intimated later.

Sd/- A.I.G. (Provisioning)
For : Director General of Police M.P.

G-15897/21

ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ,
ನಂ.14, ರಜತ ಭವನ, 1 ನೇ ಮುಖ್ಯರಸ್ತೆ, ಹಕ್ಕ ರಸ್ತೆ,
ಹಂಪಿನಗರ 2ನೇ ಹಂತ, ವಿಜಯನಗರ, ಬೆಂಗಳೂರು–560104
ದೂರವಾಣಿ: 23300497–41159606 ಫ್ಯಾಕ್ಸ್: 23359600, Email: vjn@jscbl.com

ಟೆಂಡರ್/ಸ್ಥಿರಾಸ್ತಿಯ ಬಹಿರಂಗ ಹರಾಜು

ಸೆಕ್ಯೂರಿಟೈಸೇಶನ್ ಮತ್ತು ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸ್ಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002 ರಡಿಯಲ್ಲಿ ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ., ಪ್ರಧಾನ ಕಛೇರಿ: ನಂ 14, ರಜತ ಭವನ, 1ನೇ ಮುಖ್ಯ ರಸ್ತೆ, ಹಕ್ಕ ರಸ್ತೆ, ಹಂಪಿನಗರ 2ನೇ ಹಂತ, ವಿಜಯನಗರ, ಬೆಂಗಳೂರು–560104 ರ ಇವರಿಗೆ ಈ ಸಾಲಗಾರರಿಂದ ಬರಬೇಕಾದ ಸಾಲ ವಸೂಲಿಗಾಗಿ ಬ್ಯಾಂಕಿಗೆ ಅಡಮಾನ ಮಾಡಿರುವ ಕೆಳಕಂಡ ಸ್ಥಿರಾಸ್ತಿಯನ್ನು "ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಏನಿದೆಯೋ ಹಾಗಿನ ಆಧಾರದ" ಮೇಲೆ ಹರಾಜು ನಡೆಸಿ ಮಾರಾಟ ಮಾಡಲಾಗುವುದು.

ಸಾಲಗಾರರ ಹೆಸರು ಹಾಗೂ ಸಾಲಕ್ಕೆ ಜಾಮೀನು / ಅಡಮಾನುದಾರರು ನೀಡಿರುವವರ ಹೆಸರು ಮತ್ತು ವಿಳಾಸ

ಮೆ: ಶ್ರೀ ಸರ್ವಜ್ಞ ಎಜುಕೇಶನ್ ಸೊಸೈಟಿ. ಇದರ ಪರವಾಗಿ ಪ್ರತಿನಿಧಿಸುವ ಕಾರ್ಯದರ್ಶಿ ಶ್ರೀ ಮಹಾದೇವ್‌ಪ್ರಸಾದ್. ಬಿ.ಪಿ. S/o ಶ್ರೀ ಪರಮಶಿವಯ್ಯ. ಬಿ.ಎಸ್. ನಂ 7 & 8, 14ನೇ ಕ್ರಾಸ್, ಎಂ. ಸಿ. ಲೇಔಟ್ ವಿಜಯನಗರ, ಬೆಂಗಳೂರು–40 ಮತ್ತೊಂದು ವಿಳಾಸ ನಂ.1125/12, ಸರ್ವಿಸ್ ರಸ್ತೆ, ಹಂಪಿನಗರ (ಅರ್.ಪಿ.ಸಿ ಲೇಔಟ್), ಬೆಂಗಳೂರು–104 ಮತ್ತು **ಜಾಮೀನುದಾರರು / ಅಡಮಾನುದಾರರು** – ಲೇಟ್ ಶ್ರೀಮತಿ ಸರ್ವಮಂಗಳ W/o ಶ್ರೀ ಪರಮಶಿವಯ್ಯ. ಬಿ.ಎಸ್. ಮರಣ ಹೊಂದಿದಾಗಿನಿಂದ ಇವರ ಕಾನೂನು ಉತ್ತರಾಧಿಕಾರಿಗಳಾಗಿ ಪ್ರತಿನಿದಿಸಲ್ಪಟ್ಟ 1) ಶ್ರೀ ಪರಮಶಿವಯ್ಯ. ಬಿ.ಎಸ್. H/o ಲೇಟ್ ಶ್ರೀಮತಿ ಸರ್ವಮಂಗಳ, ನಂ.29 (ಹಳೆ ನಂ.1149), 11ನೇ ಮುಖ್ಯರಸ್ತೆ, ಹಂಪಿನಗರ (ಅರ್.ಪಿ.ಸಿ.ಲೇಔಟ್), ಬೆಂಗಳೂರು–560 104. 2) ಡಾ॥ ಬಿ.ಪಿ. ಮಧುಮತಿ D/o ಲೇಟ್ ಶ್ರೀಮತಿ ಸರ್ವಮಂಗಳ, ನಂ.29 (ಹಳೆ ನಂ.1149), 11ನೇ ಮುಖ್ಯರಸ್ತೆ, ಹಂಪಿನಗರ (ಅರ್.ಪಿ.ಸಿ.ಲೇಔಟ್), ಬೆಂಗಳೂರು–560 104. 3) ಡಾ॥ ಬಿ.ಪಿ. ರೇಣುಕಾಂಬ D/o ಲೇಟ್ ಶ್ರೀಮತಿ ಸರ್ವಮಂಗಳ, ನಂ.29 (ಹಳೆ ನಂ.1149), 11ನೇ ಮುಖ್ಯರಸ್ತೆ, ಹಂಪಿನಗರ (ಅರ್.ಪಿ.ಸಿ.ಲೇಔಟ್), ಬೆಂಗಳೂರು–560 104. 4) ಶ್ರೀ ಮಹಾದೇವ್‌ಪ್ರಸಾದ್. ಬಿ.ಪಿ. S/o ಶ್ರೀ ಪರಮಶಿವಯ್ಯ. ಬಿ.ಎಸ್., ನಂ.29 (ಹಳೆ ನಂ.1149), 11ನೇ ಮುಖ್ಯರಸ್ತೆ, ಹಂಪಿನಗರ (ಅರ್.ಪಿ.ಸಿ.ಲೇಔಟ್), ಬೆಂಗಳೂರು–560 104.

ಸಾಲದ ಖಾತೆಗಳ ವಿವರ

BL–118 ಬಾಕಿ ಮೊತ್ತ 9,42,96,503/–(ರೂ. ಒಂಭತ್ತು ಕೋಟಿ ನಲವತ್ತೆರಡು ಲಕ್ಷದ ತೊಂಬತ್ತಾರು ಸಾವಿರದ ಐನೂರ ಮೂರು ಮಾತ್ರ) 07/08/2021ಕ್ಕೆ ಇದ್ದಂತೆ, ನಂತರದ ಬಡ್ಡಿ ಹಾಗೂ ಇತರೇ ವೆಚ್ಚಗಳು

ಹರಾಜಿಗಿರುವ ಸ್ಥಿರಾಸ್ತಿಯ ವಿವರ	ಬಹಿರಂಗ ಹರಾಜು ನಡೆಯುವ ದಿನಾಂಕ ಹಾಗೂ ಸಮಯ ಸ್ಥಳ	ಕನಿಷ್ಠ ಮೀಸಲು ಬೆಲೆ ಮತ್ತು ಮುಂಗಡ ಠೇವಣಿ (ಇ.ಎಂ.ಡಿ)
The Immovable House Property bearing New Municipal No.29(Old No.1149) PID No.34-112-29, 11th Main Road, Railway Line, Pipeline R.P.C Layout, Vijayanagara, PID No.34-112-29, Bangalore. Measuring East to West 90 feet North to south 60 feet in all measuring 5400 Sq. Ft. Bounded on: East By: Road, West By: Site No.1126, North By: Site No.1148, South By: Site No.1150	ದಿನಾಂಕ:06/09/2021, ಸೋಮವಾರ, ಬೆಳಗ್ಗೆ 11.30 ಘಂಟೆಗೆ ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ., ನಂ 14, ರಜತ ಭವನ, 1ನೇ ಮುಖ್ಯ ರಸ್ತೆ, ಹಕ್ಕ ರಸ್ತೆ, ಹಂಪಿನಗರ 2ನೇ ಹಂತ, ವಿಜಯನಗರ, ಬೆಂಗಳೂರು–560104	ರೂ.9,50,00,000/– (ರೂ ಒಂಭತ್ತು ಕೋಟಿ ಐವತ್ತು ಲಕ್ಷ ಮಾತ್ರ) ರೂ.95,00,000/– (ಮೀಸಲು ಬೆಲೆಯ ಶೇ.10) (ರೂ ತೊಂಬತ್ತೈದು ಲಕ್ಷ ಮಾತ್ರ)

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು:

1. ಹರಾಜಿನಲ್ಲಿ ಭಾಗವಹಿಸುವ ಆಸಕ್ತರು ಹಿಂತಿರುಗಿಸಲಾಗುವ ಇ.ಎಂ.ಡಿ.ಗಾಗಿ ಕಾಯ್ದಿಟ್ಟ ಬೆಲೆಯ ಶೇಕಡ 10% ರಷ್ಟನ್ನು ಡಿ.ಡಿ/ಪೇ ಆರ್ಡ್‌ರ್ ಮುಖಾಂತರ **ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ, ವಿಜಯನಗರ ಶಾಖೆ, ಬೆಂಗಳೂರು.** ಇವರಿಗೆ ಮೇಲೆ ತಿಳಿಸಿರುವ ಸ್ಥಿರಾಸ್ತಿಯ ಹರಾಜಿನ ದಿನ ಅಥವಾ 04/09/2021,5:30 ಪಿ.ಎಂ. ಮುಂಚೆ ಪಾವತಿಸಿ ರಸೀದಿ ಪಡೆಯುವುದು, ವಿಜಯಿ ಬಿಡ್ಡುದಾರರು ಹರಾಜಿನ ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂಗಡವಾಗಿ ಕೊಟ್ಟ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
2. ಮುಂಗಡ ಠೇವಣಿಯನ್ನು ಪಾವತಿಸಿದ ಬಿಡ್ಡ್‌ದಾರರರು ಬ್ಯಾಂಕಿನಿಂದ ನೀಡಲಾಗುವ ಫಾರಂನಲ್ಲಿ ಮುಚ್ಚಿದ ಲಕೋಟೆಯಲ್ಲಿ ಬಿಡ್ಡನ್ನು ಸಲ್ಲಿಸುವುದು. ಎಲ್ಲಾ ಲಕೋಟೆಗಳು ಬಂದ ನಂತರ ಎಲ್ಲರ ಸಮ್ಮುಖದಲ್ಲಿ ದಿನಾಂಕ:06/09/2021, ಸೋಮವಾರ, 11.30 ಘಂಟೆಗೆ ಅಧಿಕೃತ ಅಧಿಕಾರಿಯು ಲಕೋಟೆಯನ್ನು ತೆರೆದು ಅಂತಿಮಗೊಳಿಸುವರು.
3. ಬಿಡ್ಡಿನಲ್ಲಿ ಯಶಸ್ವಿಯಾಗದ ಬಿಡ್‌ದಾರರಿಗೆ ಇ.ಎಂ.ಡಿ. ಗಳನ್ನು ತಕ್ಷಣವೇ ಮರುಪಾವತಿಸಲಾಗುವುದು. ಸ್ಥಿರ ಸ್ವತ್ತನ್ನು ಯಾವುದೇ ಕಾರಣಕ್ಕೂ ಮೀಸಲು ಬೆಲೆಗಿಂತ ಕಡಿಮೆ ಮೌಲ್ಯಕ್ಕೆ ಮಾರಾಟ ಮಾಡಲಾಗುವುದಿಲ್ಲ.
4. ವಿಜಯಿ ಬಿಡ್‌ದಾರು ಹರಾಜಿನ ಮೊಬಲಿಗಿನ ಶೇ.25 ರಷ್ಟು (ಮುಂಗಡವಾಗಿ ಪಾವತಿಸಿದ ಹಣವನ್ನು ಸೇರಿ) ಮೊತ್ತವನ್ನು ಹರಾಜಿನ ದಿನವೇ ಪಾವತಿಸತಕ್ಕದ್ದು, ಆ ಹಣವನ್ನು ಸ್ವೀಕರಿಸಿದ ಮತ್ತು ಕೆವೈಸಿ ದಾಖಲೆಗಳ ಮೂಲ ಪ್ರತಿಗಳನ್ನು (ಫೋಟೋ ಐಡಿ ಮತ್ತು ವಿಳಾಸದ ದಾಖಲೆ) ಪರಿಶೀಲಿಸಿದ ನಂತರ ಅಧಿಕೃತ ಅಧಿಕಾರಿಯು ಮಾರಾಟ ಧೃಡೀಕರಣ ಪತ್ರವನ್ನು ನೀಡುತ್ತಾರೆ. ಉಳಿದ ಹಣವನ್ನು 15 ದಿನಗಳ ಒಳಗಾಗಿ ಪಾವತಿಸಬೇಕು.
5. ವಿಜಯಿಯಾದ ಬಿಡ್ಡುದಾರರು ಈ ಪ್ರಕಟಣೆಯ ನಿಯಮಗಳನ್ನು ಪಾಲಿಸದಿದ್ದರೆ ಮತ್ತು ಯಾವುದೇ ರೀತಿಯಲ್ಲಾದರು ತಪ್ಪುಗಳನ್ನು ಮಾಡಿದರೆ ಅವರು ಪಾವತಿಸಿದ ಹಣವನ್ನು ಬ್ಯಾಂಕ್ ಯಾವುದೇ ಸೂಚನೆ ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಹಾಗೂ ಮತ್ತೆ ಹರಾಜು ಮಾಡಲಾಗುತ್ತದೆ.
6. ವಿಜಯಿಯಾದ ಬಿಡ್ಡುದಾರರು ತನ್ನ ಪರವಾಗಿ ನೊಂದಣಿ ಮಾರಾಟ ಪತ್ರವನ್ನು ಪಡೆದುಕೊಳ್ಳಲು ತೆರಿಗೆಗಳು, ನೋಂದಣಿ ಶುಲ್ಕ ಮತ್ತು ಸಾಮನ್ಯ ಮುದ್ರಾಂಕ ಟಿ.ಡಿ.ಎಸ್. ಮತ್ತಿತರ ಖರ್ಚುಗಳನ್ನು ಭರಿಸತಕ್ಕದ್ದು.
7. ಬ್ಯಾಂಕಿನ ಅಧಿಕೃತ ಅಧಿಕಾರಿಗಳು ಹರಾಜನ್ನು ಯಾವುದೇ ಕಾರಣ ಕೊಡದೆ ಅಂಗೀಕರಿಸುವ, ಮುಂದೂದುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತಾರೆ.
8. ಸದರಿ ಸ್ಥಿರಾಸ್ತಿಯ ಬಗ್ಗೆ ಬಾಕಿ ಇರುವ ಸ್ಥಿರಾಸ್ತಿ ತೆರಿಗೆ ಮತ್ತು ಇತರೆ ಖರ್ಚುಗಳಿಗೆ ಹಾಗೂ ಇತರೆ ಯಾವುದೇ ಸಾಲಗಳಿಗೆ ಬ್ಯಾಂಕು ಜವಾಬ್ದಾರಿಯಾಗಿರುವುದಿಲ್ಲ. ಬಿಡ್ಡುದಾರರು ಇಚ್ಛಿಸಿದ ಆಧಾರದ ಮೇಲೆ ಮತ್ತು ಸೆಕ್ಯೂರಿಟೈಸೇಷನ್ ಅಧಿನಿಯಮ–2002 ರಲ್ಲಿ ನಿಗಧಿಪಡಿಸಿರುವ ಷರತ್ತುಗಳಿಗೆ ಒಳಪಟ್ಟು ಮಾರಾಟ ಮಾಡಲಾಗುತ್ತದೆ.
9. ಹರಾಜು ಮಾಡಲಿರುವ ಸ್ಥಿರಾಸ್ತಿಯನ್ನು ಬಿಡ್ಡುದಾರರು ಆಡಳಿತ ಕಛೇರಿಯಲ್ಲಿ ಅಧಿಕೃತ ಅಧಿಕಾರಿಯನ್ನು ದೂ.ಸಂ. 23300497, 41159606, ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಿ, ಬಿಡ್ಡುದಾರರು ಆಸ್ತಿಯ ಬಗ್ಗೆ ವಿಚಾರಿಸುವ ಮತ್ತು ಆಸ್ತಿಯ ಮೇಲಿನ ಸಾಲದ ವಿವರಗಳನ್ನು ಪಡೆಯಲು ಸ್ವತಂತ್ರರಿರುತ್ತಾರೆ.
10. ಅಧಿಕೃತ ಬಿಡ್ಡುದಾರರು ಹೊರತು ಜಿ.ಪಿ.ಎ. ಹೋಲ್ಡರ್, ಏಜೆಂಟರು ಅಥವಾ ಇತರೆ ಯಾವುದೇ ವ್ಯಕ್ತಿಗಳು ಹರಾಜಿನಲ್ಲಿ ಭಾಗವಹಿಸಲು ಅರ್ಹರಲ್ಲ .
11. ಸ್ಥಿರ ಸತ್ತು "ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಏನಿದೆಯೋ ಹಾಗಿನ ಆಧಾರದ" ಮೇಲೆ ಮಾರಾಟ ಮಾಡಲಾಗುವುದು.
12. ಡಿ.ಆರ್.ಟಿ/ಡಿ.ಆರ್.ಎ.ಟಿ/ಹೈಕೋರ್ಟ್ ಅಥವಾ ಯಾವುದೇ ನ್ಯಾಯಾಲಯದ ಪ್ರಕ್ರಿಯೆಗಳ ಅನ್ವಯ ಈ ಹರಾಜಿಗೆ ತಡೆಯಾಜ್ಞೆ ನೀಡಿದರೆ ಈ ಹರಾಜನ್ನು ಮುಂದೂಡಲಾಗುವುದು ಅಥವಾ ರದ್ದು ಮಾಡಲಾಗುವುದು, ಹರಾಜಿನ ಮುಂದೂಡಿಕೆ ಅಥವಾ ರದ್ದು ಆದಾಗ ಹರಾಜಿನಲ್ಲಿ ಭಾಗವಹಿಸುವವರು ಯಾವುದೇ ರೀತಿಯ ನಷ್ಟ ಪರಿಹಾರ ಅಥವಾ ಮೊತ್ತವನ್ನು ಪಡೆಯುವ ಹಕ್ಕು ಹೊಂದಿರುವುದಿಲ್ಲ.
13. ಪೂರ್ಣವಾಗಿ ಬಾಕಿ ಹಣವನ್ನು ಪಾವತಿ ಮಾಡದಿದ್ದಲ್ಲಿ ಮೇಲೆ ತಿಳಿಸಿರುವ ದಿನಾಂಕದಂದು ಹರಾಜು ನಡೆಸುವ ಬಗ್ಗೆ ಸದರಿಯವರು (ಸಾಲಗಾರರು, ಜಾಮೀನುದಾರರು ಅಥವಾ ಈಡುದಾರರು) ಇದನ್ನು ನೋಟೀಸೆಂದು ಪರಿಗಣಿಸಬೇಕು.

ಬಿಡ್ಡ್‌ದಾರರು ಟೆಂಡರ್‌ನ ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಅಧಿಕಾರಿ, **ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ, ನಂ 14 ರಜತ ಭವನ, 1 ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560 104. ದೂರವಾಣಿ: 23300497, 41159606 ಫ್ಯಾಕ್ಸ್: 23359600 Email: vjn@jscbl.com**

ಸ್ಥಳ : ಬೆಂಗಳೂರು
ದಿನಾಂಕ : 21–08–2021

ಸಹಿ/– ಅಧಿಕೃತ ಅಧಿಕಾರಿ,
ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ,

ಬೊಮ್ಮಸಂದ್ರ ಕೈಗಾರಿಕೆ: ಮೀಸಲಾತಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಸ್ಥಳೀಯರಿಗೆ ಶೇ 30ರಷ್ಟು ಮೀಸಲಾತಿ ನೀಡಬೇಕು ಎಂದು ಬೊಮ್ಮಸಂದ್ರ ಸ್ಥಳೀಯ ಹಿತರಕ್ಷಣಾ ವೇದಿಕೆ ಒತ್ತಾಯಿಸಿದೆ.

ಬೊಮ್ಮಸಂದ್ರ ಸುತ್ತಮುತ್ತಲ ಪ್ರದೇಶವನ್ನು ಕೈಗಾರಿಕಾ ಉದ್ದೇಶಕ್ಕಾಗಿ ಎಪ್ಪತ್ತರ ದಶಕದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ(ಕೆಐಎಡಿಬಿ) ಸ್ವಾಧೀನಪಡಿಸಿಕೊಂಡಿದೆ. ಭೂಮಿ ಕಳೆದುಕೊಂಡ ರೈತರಿಗೆ ಆದ್ಯತೆ ಮೇರೆಗೆ ಕನಿಷ್ಠ ಮನೆಗೊಬ್ಬರಿಗೆ ಉದ್ಯೋಗ ನೀಡುವ ಭರವಸೆಯನ್ನು ಸರ್ಕಾರ ನೀಡಿತ್ತು.

ಆರಂಭದಲ್ಲಿ ಈ ಭರವಸೆ ತಕ್ಕಮಟ್ಟಿಗೆ ಸಾಕಾರಗೊಂಡಿತ್ತಾದರೂ ಕಾಲಕ್ರಮೇಣ ಸ್ಥಳೀಯರು ನಿರುದ್ಯೋಗಿಗಳಾಗಿದ್ದಾರೆ. ಅರ್ಹತೆ ಇದ್ದರೂ ಯುವಕರಿಗೆ ಕಾರ್ಖಾನೆಗಳಲ್ಲಿ ಉದ್ಯೋಗ ದೊರಕದಂತಾಗಿದೆ ಎಂದು ವೇದಿಕೆ ಹೇಳಿದೆ.

'ಸ್ಥಳೀಯರಿಗೆ ಅವರ ವಿದ್ಯಾರ್ಹತೆಗೆ ತಕ್ಕಂತೆ ಉದ್ಯೋಗದಲ್ಲಿ ಶೇ 30ರಷ್ಟು ಮೀಸಲಾತಿ ನೀಡಬೇಕು. ಸಣ್ಣ ಉದ್ದಿಮೆಗಳಿಗೆ ವ್ಯಾವಹಾರಿಕ ಖರೀದಿ ನಡೆಸುವಾಗ ಸ್ಥಳೀಯರಿಗೆ ಆದ್ಯತೆ ನೀಡಬೇಕು' ಎಂದು ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ ಸಂಘವನ್ನು ವೇದಿಕೆ ಒತ್ತಾಯಿಸಿದೆ.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ನೆಲದಡಿ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 23ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ವಿದ್ಯುತ್ ಪೂರೈಕೆ ವ್ಯತ್ಯಯವಾಗುವ ಪ್ರದೇಶಗಳು: ಗಾಳಿ ಆಂಜನೇಯ ದೇವಸ್ಥಾನ, ಚೌಡಪ್ಪ ಬಡಾವಣೆ, ಹೊಯ್ಸಳ ವೃತ್ತ, ಅಪೂರ್ವ ಬಡಾವಣೆ, ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ, ಮಾರುತಿ ನಗರ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳು.

9ರಿಂದ 12ರವರೆಗಿನ ಭೌತಿಕ ತರಗತಿ ಆರಂಭ ನಾಳೆಯಿಂದ

‘ಮಕ್ಕಳೇ ಧೈರ್ಯವಾಗಿ ಶಾಲೆಗೆ ಬನ್ನಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲ ರೀತಿಯ ಸುರಕ್ಷತೆ ಕ್ರಮಗಳನ್ನು ಕೈಗೊಂಡು 9ರಿಂದ 12ರ ವರೆಗಿನ ಭೌತಿಕ ತರಗತಿಗಳನ್ನು ಇದೇ 23ರಿಂದ ಮತ್ತೆ ಆರಂಭಿಸಲು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಯಾವುದೇ ಆತಂಕ ಇಲ್ಲದೆ ಶಾಲೆಗೆ ಬರಲಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕರೆ ನೀಡಿದ್ದಾರೆ.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಶಾಲೆ ಆರಂಭಿಸುವ ವೇಳೆ ಪಾಲಿಸಬೇಕಾದ ಮುನ್ನೆಚ್ಚರಿಕೆಗಳ ಕುರಿತು ಸರ್ಕಾರಿ ಹಾಗೂ ಖಾಸಗಿ ಶಾಲೆಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಜೊತೆ ಬೆಂಗಳೂರಿನ ಕೆಲವು ಶಾಲೆಗಳಿಗೆ ಮೊದಲ ದಿನ ನಾನೂ ಭೇಟಿ ನೀಡಲಿದ್ದೇನೆ. ಶಾಲೆಗಳನ್ನು ಆರಂಭಿಸುವ ಸಂದರ್ಭದಲ್ಲಿ ಹೆಚ್ಚಿನ ಕಾಳಜಿ ವಹಿಸಲಾಗುವುದು’ ಎಂದರು.

ಕೋವಿಡ್ ಕಾರಣ ಕಳೆದ ಒಂದೂವರೆ ವರ್ಷದಿಂದ ವಿದ್ಯಾರ್ಥಿಗಳು ಶಾಲೆಗಳಿಗೆ ಹೋಗಿಲ್ಲ. ಹೀಗಾಗಿ, ಹಂತ ಹಂತವಾಗಿ ಮಕ್ಕಳು ಶಾಲೆಗೆ ಬರಬೇಕು ಎನ್ನುವುದು ನಮ್ಮ ಉದ್ದೇಶ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಅತ್ಯಂತ ಮಹತ್ವದ ಘಟ್ಟ: ‘ಕೋವಿಡ್ ಕಾರಣ ಶೈಕ್ಷಣಿಕ ಅವಧಿಯನ್ನು ಮಕ್ಕಳು ಕಳೆದುಕೊಂಡಿರುವುದು ಬೇಸರದ ಸಂಗತಿ. ಈಗ ಕೋವಿಡ್ ಸುರಕ್ಷತಾ ಕ್ರಮಗಳು, ತ್ವರಿತಗತಿಯ ಲಸಿಕಾಕರಣ, ಜನರು ಆರೋಗ್ಯದ ಕಡೆ ಹೆಚ್ಚಿನ ಗಮನರಿಸಿರುವ ಕಾರಣ ಕೋವಿಡ್ ಭೀತಿ ಕಡಿಮೆಯಾಗಿ ಭೌತಿಕ ತರಗತಿಗಳನ್ನು ಮತ್ತೆ ಆರಂಭಿಸಲಾಗುತ್ತಿದೆ’ ಎಂದು ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಕೆ–ಟಿಇಟಿ ಇಂದು

ಬೆಂಗಳೂರು: ಸರ್ಕಾರಿ ಶಾಲಾ ಶಿಕ್ಷಕರ ಹುದ್ದೆಯ ಅರ್ಹತೆಗಾಗಿ ನಡೆಸುವ ಕರ್ನಾಟಕ-ಶಿಕ್ಷಕರ ಅರ್ಹತಾ ಪರೀಕ್ಷೆ (ಕೆ-ಟಿಇಟಿ) ಭಾನುವಾರ (ಆ. 22) ನಡೆಯಲಿದೆ. ವಾರಾಂತ್ಯದ ಕರ್ಫ್ಯೂ ಇರುವ ಜಿಲ್ಲೆಗಳು ಸೇರಿದಂತೆ ರಾಜ್ಯದ ಎಲ್ಲ 34 ಶೈಕ್ಷಣಿಕ ಜಿಲ್ಲಾ ಕೇಂದ್ರಗಳ 634 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಒಂದು ಡೆಸ್ಕ್‌ಗೆ ಒಬ್ಬ ವಿದ್ಯಾರ್ಥಿ ಮಾತ್ರ ಕುಳಿತುಕೊಳ್ಳಲು ಅವಕಾಶ ನೀಡಲಾಗಿದೆ. ಬೆಳಿಗ್ಗೆ 9.30ರಿಂದ 12ರವರೆಗೆ ಪತ್ರಿಕೆ-1, ಮಧ್ಯಾಹ್ನ 2.30ರಿಂದ 4ರವರೆಗೆ ಪತ್ರಿಕೆ-2ರ ಪರೀಕ್ಷೆ ನಡೆಯಲಿದೆ. ಮೊದಲ ಪತ್ರಿಕೆಗೆ 1,03,267 ಅಭ್ಯರ್ಥಿಗಳು, ಪತ್ರಿಕೆ–2ಕ್ಕೆ 1,51,095 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಪರೀಕ್ಷಾ ಕೇಂದ್ರದ ಸಿಬ್ಬಂದಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಮಾಸ್ಕ್ ಕಡ್ಡಾಯವಾಗಿದೆ. ಅಭ್ಯರ್ಥಿಗಳು ನೀರಿನ ಬಾಟಲಿ, ಆಹಾರದ ಡಬ್ಬಿ ತೆಗೆದುಕೊಂಡು ಬರಲು ಅನುಮತಿ ನೀಡಲಾಗಿದೆ. ಕೋವಿಡ್ ಕಾರಣ, ಪರೀಕ್ಷಾ ಕೇಂದ್ರಗಳನ್ನು ಸಂಪೂರ್ಣವಾಗಿ ಸ್ಯಾನಿಟೈಜ್ ಮಾಡಲಾಗಿದೆ. ಪರೀಕ್ಷೆಗೆ ಹಾಜರಾಗುವ ಕೇರಳ, ಮಹಾರಾಷ್ಟ್ರ ಸೇರಿದಂತೆ ಹೊರರಾಜ್ಯಗಳ ವಿದ್ಯಾರ್ಥಿಗಳು ಕೋವಿಡ್ ನೆಗೆಟಿವ್ ವರದಿ ತರಲೇಬೇಕು. ಕೋವಿಡ್ ಲಕ್ಷಣಗಳಿರುವ ಅಭ್ಯರ್ಥಿಗಳಿಗೆ ಪ್ರತ್ಯೇಕ ಕೊಠಡಿಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ.

‘ಹೊಸೂರಿನವರೆಗೂ ಮೆಟ್ರೊ ವಿಸ್ತರಿಸಿ’

ಬೆಂಗಳೂರು: ನಮ್ಮ ಮೆಟ್ರೊ ಮಾರ್ಗವನ್ನು ಗಡಿಭಾಗದ ಹೊಸೂರಿನವರೆಗೂ ವಿಸ್ತರಿಸಲು ಕ್ರಮ ಕೈಗೊಳ್ಳುವಂತೆ ತೆಲುಗು ವಿಜ್ಞಾನ ಸಮಿತಿಯು ಉಪ ರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಅವರಿಗೆ ಮನವಿ ಮಾಡಿದೆ.

‘ಉಪರಾಷ್ಟ್ರಪತಿಯವರು ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದ ವೇಳೆ ಅವರನ್ನು ಭೇಟಿ ಮಾಡಿದ್ದೆವು. ಹೊಸೂರಿನವರೆಗೂ ಮೆಟ್ರೊ ಮಾರ್ಗ ವಿಸ್ತರಿಸುವುದರಿಂದ 30 ಸಾವಿರಕ್ಕೂ ಅಧಿಕ ಉದ್ಯೋಗಿಗಳಿಗೆ ಅನುಕೂಲವಾಗಲಿರುವ ವಿಷಯವನ್ನು ಅವರ ಗಮನಕ್ಕೆ ತಂದಿದ್ದೇವೆ. ಈ ಕುರಿತು ಸಂಬಂಧಪಟ್ಟವರೊಂದಿಗೆ ಚರ್ಚಿಸುವ ಭರವಸೆ ನೀಡಿದ್ದಾರೆ’ ಎಂದು ಸಮಿತಿಯ ಅಧ್ಯಕ್ಷ ಎ.ರಾಧಾಕೃಷ್ಣ ರಾಜು ತಿಳಿಸಿದ್ದಾರೆ.

‘ತಮಿಳುನಾಡು ಸರ್ಕಾರವು ದ್ವಿಭಾಷಾ ನೀತಿ ಜಾರಿಗೊಳಿಸಿದೆ. ಇದರ ಅನ್ವಯ ಅಲ್ಲಿನ ಶಾಲೆಗಳಲ್ಲಿ ತಮಿಳು ಮತ್ತು ಇಂಗ್ಲಿಷ್ ಮಾತ್ರ ಕಲಿಸಲಾಗುತ್ತದೆ. ಇದರಿಂದ ಕನ್ನಡ ಸೇರಿದಂತೆ ಇತರ ಭಾಷಿಕ ಮಕ್ಕಳಿಗೆ ತೊಂದರೆಯಾಗಲಿದೆ. ಈ ವಿಷಯವನ್ನೂ ಉಪರಾಷ್ಟ್ರಪತಿಯವರ ಗಮನಕ್ಕೆ ತಂದಿದ್ದೇವೆ’ ಎಂದರು.



ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಬಿಬಿಎಂಪಿ ಆಯುಕ್ತ ಗೌರವ್ ಗುಪ್ತ ಭೇಟಿ

ರಸ್ತೆ ಅಭಿವೃದ್ಧಿಗೆ – ಕಸ ವಿಲೇವಾರಿಗೆ ಶೀಘ್ರ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೀಣ್ಯದ ಕೈಗಾರಿಕಾ ಪ್ರದೇಶದ ಪ್ರಮುಖ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ 14ನೇ ಮುಖ್ಯ ರಸ್ತೆಯನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಬೇಕು. ಈ ಪ್ರದೇಶಕ್ಕೆ ಮೂಲಸೌಕರ್ಯಗಳನ್ನು ಆದ್ಯತೆ ಮೇರೆಗೆ ಕಲ್ಪಿಸಬೇಕು. ಕಸ ವಿಲೇವಾರಿ ಕ್ರಮಬದ್ಧವಾಗಿ ನಡೆಯುವಂತೆ ನೋಡಿಕೊಳ್ಳಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಶನಿವಾರ ಭೇಟಿ ನೀಡಿದ ಅವರು ಪೀಣ್ಯ ಕೈಗಾರಿಕಾ ಸಂಸ್ಥೆ ಪದಾಧಿಕಾರಿಗಳ ಜೊತೆ ಸಭೆ ನಡೆಸಿದರು. ದಾಸರಹಳ್ಳಿ ಕ್ಷೇತ್ರದ ಶಾಸಕ ಆರ್.ಮಂಜುನಾಥ್ ಅವರ ಜೊತೆ ಕೈಗಾರಿಕಾ ಪ್ರದೇಶಗಳಿಗೂ ಭೇಟಿ ನೀಡಿ ಕೈಗಾರಿಕೋದ್ಯಮಿಗಳ ಹಾಗೂ ಸ್ಥಳೀಯರ ಅಹವಾಲು ಆಲಿಸಿದರು.

‘ಇಲ್ಲಿನ ರಸ್ತೆಗಳು ಗುಂಡಿಗಳು ಬಿದ್ದು ವರ್ಷಗಳೇ ಕಳೆದರೂ ದುರಸ್ತಿ ಆಗಿಲ್ಲ. ಕೈಗಾರಿಕಾ ಕಸ ಎಂಬ ನೆಪ ಹೇಳುವ ಬಿಬಿಎಂಪಿ ಅಧಿಕಾರಿಗಳು ಯಾವ ಕಸವನ್ನೂ ಒಯ್ಯುತ್ತಿಲ್ಲ. ಇಲ್ಲಿನ ಬೀದಿದೀಪಗಳು ಉರಿಯುತ್ತಿಲ್ಲ. ಈ ಪ್ರದೇಶಕ್ಕೆ ಪ್ರಮುಖ ಸಂಪರ್ಕ ಕೊಂಡಿಯಂತಿರುವ 14ನೇ ಮುಖ್ಯರಸ್ತೆಯೂ ಅಧ್ವಾನ ಸ್ಥಿತಿ ತಲುಪಿದೆ’ ಎಂದು ಉದ್ಯಮಿಗಳು ಮುಖ್ಯ ಆಯುಕ್ತರ ಗಮನ ಸೆಳೆದರು.

ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಗೌರವ್ ಗುಪ್ತ ಶನಿವಾರ ಭೇಟಿ ನೀಡಿ ಅಹವಾಲು ಆಲಿಸಿದರು. ಬಿಬಿಎಂಪಿಯ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್‌.ಪ್ರಹ್ಲಾದ್, ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಪ್ರಕಾಶ್, ಶಾಸಕ ಆರ್‌.ಮಂಜುನಾಥ್, ದಾಸರಹಳ್ಳಿ ವಲಯದ ಜಂಟಿ ಆಯುಕ್ತ ನರಸಿಂಹ ಮೂರ್ತಿ ಇದ್ದರು

‘ಕೈಗಾರಿಕಾ ವಲಯದ ನಾಲ್ಕು ವಾರ್ಡ್‌ಗಳ ಪ್ರಮುಖ ಸಮಸ್ಯೆಗಳನ್ನು ಉದ್ಯಮಿಗಳು ಗಮನಕ್ಕೆ ತಂದಿದ್ದಾರೆ. ರಸ್ತೆಗಳ ಗುಂಡಿಗಳನ್ನು ಮುಚ್ಚುವುದೂ ಸೇರಿದಂತೆ ಇಲ್ಲಿನ ಸಣ್ಣ ಪುಟ್ಟ ನ್ಯೂನತೆಗಳನ್ನು ತಕ್ಷಣವೇ ಸರಿಪಡಿಸಲಿದ್ದೇವೆ. ದೀರ್ಘಕಾಲದ ಸಮಸ್ಯೆಗಳನ್ನು ನಿವಾರಿಸುವ ಕುರಿತು ಸರ್ಕಾರದ ಮಟ್ಟದಲ್ಲಿ ಚರ್ಚಿಸುತ್ತೇವೆ. ಕಸ ವಿಲೇವಾರಿ ಸಮಸ್ಯೆ ನೀಗಿಸುವ ಕುರಿತು ಕಸ ನಿರ್ವಹಣಾ ವಿಭಾಗದ ಅಧಿಕಾರಿಗಳ ತಂಡವು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಿದೆ. ಈ ಸಮಸ್ಯೆ ನೀಗಿಸಲು ಅಧಿಕಾರಿಗಳ ಪ್ರತ್ಯೇಕ ತಂಡವನ್ನು ನಿಯೋಜನೆ ಮಾಡಲಿದ್ದೇವೆ. ಬೀದಿದೀಪದ ಸಮಸ್ಯೆಯನ್ನು ವಾರದೊಳಗೆ ಬಗೆಹರಿಸುತ್ತೇವೆ’ ಎಂದು ಮುಖ್ಯ ಆಯುಕ್ತರು ಸಭೆಯ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ಶಾಸಕ ಆರ್.ಮಂಜುನಾಥ್, ‘ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಮೂಲಸೌಕರ್ಯಗಳ ಕೊರತೆ ತೀವ್ರವಾಗಿದೆ. ಬಿಬಿಎಂಪಿಗೆ ಸೇರ್ಪಡೆಯಾದ 110 ಹಳ್ಳಿಗಳಲ್ಲಿ ಸೇರ್ಪಡೆಯಾಗಿರುವ ಪ್ರದೇಶದಲ್ಲಿ ರಸ್ತೆಗಳ ದುರಸ್ತಿ ಆಗಬೇಕಿದೆ. ನೆಲಗದರನಹಳ್ಳಿ ರಸ್ತೆ ಹಾಗೂ ಹೆಸರಘಟ್ಟ ಮುಖ್ಯ ರಸ್ತೆಗಳಲ್ಲಿ ಕಾವೇರಿ 5ನೇ ಹಂತದ ಕೊಳವೆ ಮಾರ್ಗ ಅಳವಡಿಸಲಾಗುತ್ತಿದೆ. ಹಾಗಾಗಿ ಇಲ್ಲಿನ ರಸ್ತೆ ಸಂಪೂರ್ಣ ಹಾಳಾಗಿದೆ. ಅದನ್ನು ಸರಿಪಡಿಸಿಕೊಡಬೇಕು’ ಎಂದು ಒತ್ತಾಯಿಸಿದರು.

ರಾಜ್ ಗೋಪಾಲ್ ನಗರ ವಾರ್ಡ್, ಕೆಂಪೇಗೌಡ ಗಾರ್ಡನ್ ಹಾಗೂ ಸುತ್ತಮುತ್ತಲಿನ ಪ್ರದೇಶದ ರಸ್ತೆಗಳನ್ನು ಮುಖ್ಯ ಆಯುಕ್ತರು ತಪಾಸಣೆ ನಡೆಸಿದರು. ರಸ್ತೆಗಳು ಹದಗೆಟ್ಟಿದ್ದು ಕಂಡು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಅವುಗಳನ್ನು ಕೂಡಲೇ ದುರಸ್ತಿ ಪಡಿಸುವಂತೆ ಸೂಚನೆ ನೀಡಿದರು.

‘ರಾಜಕಾಲುವೆ ದುರಸ್ತಿಗೆ ಕ್ರಮ’

ರಾಜಕಾಲುವೆಗಳು ಸಮರ್ಪಕವಾಗಿಲ್ಲದ ಕಾರಣ ಮಳೆಗಾಲದಲ್ಲಿ ಪ್ರವಾಹ ಉಂಟಾಗುತ್ತಿರುವ ಕುರಿತು ಶಾಸಕ ಆರ್.ಮಂಜುನಾಥ್ ಹಾಗೂ ಸ್ಥಳೀಯರು ಮುಖ್ಯ ಆಯುಕ್ತರ ಗಮನ ಸೆಳೆದರು.

‘ಎಲ್ಲೆಲ್ಲಿ ಮಳೆ ನೀರಿನ ಸಹಜ ಹರಿವಿಗೆ ಅಡ್ಡಿಯಾಗುತ್ತಿದೆ ಎಂದು ಪತ್ತೆ ಹಚ್ಚಬೇಕು. ಪ್ರವಾಹ ಉಂಟಾಗುವುದನ್ನು ತಡೆಯಲು ಇಲ್ಲಿನ ರಾಜಕಾಲುವೆಗಳನ್ನು ದುರಸ್ತಿಗೊಳಿಸಲು ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಬೇಕು’ ಎಂದು ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

‘ತಿಂಗಳಿಗೊಮ್ಮೆ ಸಭೆ’

‘ಕೈಗಾರಿಕಾ ಪ್ರದೇಶದ ತೆರಿಗೆ ವಸೂಲಿ ಸಮಸ್ಯೆ ಇಲ್ಲ. ಬಾಕಿ ಇರುವ ತೆರಿಗೆ ಪಾವತಿಸಲು ಉದ್ಯಮಿಗಳೂ ಒಪ್ಪಿದ್ದಾರೆ. ಪೀಣ್ಯ ಕೈಗಾರಿಕಾ ಸಂಸ್ಥೆಯ ಪದಾಧಿಕಾರಿಗಳ ಜೊತೆ ತಿಂಗಳಿಗೊಮ್ಮೆ ಸಭೆ ನಡೆಸುವ ಮೂಲಕ ಈ ಪ್ರದೇಶದ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳುತ್ತೇವೆ’ ಎಂದು ಗೌರವ್ ಗುಪ್ತ ತಿಳಿಸಿದರು.

‘ಸುಗಮ ಸಂಗೀತ ಪ್ರಶಸ್ತಿ ಅನ್ಯರ ಪಾಲು’

ಬೆಂಗಳೂರು: ‘ಸಂಗೀತದ ವಿವಿಧ ಪ್ರಕಾರಗಳ ಸಾಧಕರಿಗೆ ನೀಡುತ್ತಿರುವ ‘ಸಂತ ಶಿಶುನಾಳ ಷರೀಫ ಪ್ರಶಸ್ತಿ’ ಯನ್ನು ಸುಗಮ ಸಂಗೀತ ಕ್ಷೇತ್ರದ ಸಾಧಕರಿಗೆ ಮಾತ್ರ ನೀಡಬೇಕು’ ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ತು ಆಗ್ರಹಿಸಿದೆ.



ವೈ.ಕೆ. ಮುದ್ದುಕೃಷ್ಣ

ನಗರದಲ್ಲಿ ಶನಿವಾರ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ನೇತೃತ್ವದಲ್ಲಿ ಸಭೆ ನಡೆಯಿತು. ಶ್ರೀನಿವಾಸ ಉಡುಪ, ನರಸಿಂಹ ನಾಯಕ್, ಮೃತ್ಯುಂಜಯ ದೊಡ್ಡವಾಡ, ಆನಂದ ಮಾದಲಗೆರೆ, ಪ್ರೇಮಲತಾ ದಿವಾಕರ್, ಕಿಕ್ಕೇರಿ ಕೃಷ್ಣಮೂರ್ತಿ, ನಾಗಚಂದ್ರಿಕಾ ಭಟ್ ಸೇರಿದಂತೆ ಸುಗಮ ಸಂಗೀತ ಕ್ಷೇತ್ರದ ಪ್ರಮುಖರು ಭಾಗವಹಿಸಿದ್ದರು.

‘ಸರ್ಕಾರವು 1995ರಲ್ಲಿ ‘ಸಂತ ಶಿಶುನಾಳ ಷರೀಫ ಪ್ರಶಸ್ತಿ’ಯನ್ನು ಸ್ಥಾಪಿಸಿ, ಸುಗಮ ಸಂಗೀತ ಕ್ಷೇತ್ರದಲ್ಲಿ ಹೆಸರಾಗಿರುವ ಕಲಾವಿದರಿಗೆ ನೀಡಬೇಕೆಂದು ಆದೇಶ ಹೊರಡಿಸಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಸಂಗೀತದ ಬೇರೆ ಬೇರೆ ಪ್ರಕಾರಗಳಲ್ಲಿ ಸಾಧನೆ ಮಾಡಿದವರಿಗೂ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಇದರಿಂದ ಸುಗಮ ಸಂಗೀತ ಕ್ಷೇತ್ರದ ಸಾಧಕರು ಪ್ರಶಸ್ತಿಯಿಂದ ವಂಚಿತರಾಗುತ್ತಿದ್ದಾರೆ’ ಎಂದು ವೈ.ಕೆ. ಮುದ್ದುಕೃಷ್ಣ ಬೇಸರ ವ್ಯಕ್ತಪಡಿಸಿದರು.

‘ಜಾನಪದ ಶ್ರೀ, ಕನಕ-ಪುರಂದರ ಸೇರಿದಂತೆ ವಿವಿಧ ಪ್ರಶಸ್ತಿಗಳನ್ನು ಸಂಗೀತದ ಪ್ರಕಾರಗಳಿಗೆ ಇಡಲಾಗಿದೆ. ಹಾಗಾಗಿ, ಸುಗಮ ಸಂಗೀತಕ್ಕೆ ಮೀಸಲಿಟ್ಟಿರುವ ಪ್ರಶಸ್ತಿಯನ್ನು ಈ ಕ್ಷೇತ್ರದ ಸಾಧಕರಿಗೆ ಮಾತ್ರ ನೀಡಬೇಕು. ಸುಗಮ ಸಂಗೀತ ಕ್ಷೇತ್ರದಲ್ಲಿಯೇ ಹಲವು ಸಾಧಕರಿದ್ದಾರೆ’ ಎಂದು ತಿಳಿಸಿದರು.

ದೂರಶಿಕ್ಷಣ: ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯವು 2020–21ನೇ ಸಾಲಿನ ದ್ವಿತೀಯ, ತೃತೀಯ ವರ್ಷದ ಪದವಿ ಹಾಗೂ ದ್ವಿತೀಯ ವರ್ಷದ ಸ್ನಾತಕೋತ್ತರ ಪದವಿಗಳಿಗೆ ದೂರಶಿಕ್ಷಣ ಪ್ರವೇಶ ಪ್ರಕ್ರಿಯೆಯನ್ನು ಇದೇ 25ರಿಂದ ಪ್ರಾರಂಭಿಸಲಿದೆ.

ಇದೇ 25ರಿಂದ ಸೆ.30ರವರೆಗೆ ಅರ್ಜಿಗಳನ್ನು ವಿತರಿಸಲಾಗುತ್ತಿದೆ. ದಂಡವಿಲ್ಲದೆ ಸೆ.30ರೊಳಗೆ ಅರ್ಜಿ ಪಡೆಯಬಹುದು. ₹200 ದಂಡ ಶುಲ್ಕದೊಂದಿಗೆ ಅ.30ರವರೆಗೆ ಅರ್ಜಿ ವಿತರಿಸಲಾಗುತ್ತದೆ. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ನ.15 ಕೊನೆಯ ದಿನ.

ಸಂಪರ್ಕ: 080-22961264, 22961265; ವಿಶ್ವವಿದ್ಯಾಲಯದ ವೆಬ್‌ಸೈಟ್: www.bangaloreuniversity.ac.in

ನಗರದಲ್ಲಿ ಇಂದು

ನುಡಿನಮನ: ಡಾ.ಎಚ್. ಗಿರಿಜಮ್ಮ ಅವರಿಗೆ, ಉಪಸ್ಥಿತಿ: ವಿಜಯಮ್ಮ, ನುಡಿನಮನ: ಸಿ.ಆರ್. ಚಂದ್ರಶೇಖರ್, ನಾಗತಿಹಳ್ಳಿ ಚಂದ್ರಶೇಖರ್, ಜಿ.ಎನ್. ಮೋಹನ್, ಎಚ್.ಎಲ್. ಪುಷ್ಪ, ವಸುಂಧರಾ ಭೂಪತಿ, ಎಸ್.ಜಿ. ತುಂಗಾರೇಣುಕಾ, ಕೃಷ್ಣ ಮಾಸಡಿ, ಆರ್. ಜಿ. ಹಳ್ಳಿ ನಾಗರಾಜ್, ಬಿ.ಎನ್. ಮಲ್ಲೇಶ್, ನಿರ್ವಹಣೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಕದಳಿ ಮಹಿಳಾ ವೇದಿಕೆ, ಬೆಳಿಗ್ಗೆ 11.30 (ಆನ್‌ಲೈನ್ ಕಾರ್ಯಕ್ರಮ)

ಸಂವಾದ ಸರಣಿ: ಸತ್ಯಜೀತ್ ರೇ ಅವರ 100 ಚಲನಚಿತ್ರಗಳ ಹೊರಳು ನೋಟ, ಉದ್ಘಾಟನೆ: ಗಿರೀಶ್ ಕಾಸರವಳ್ಳಿ, ಆಯೋಜನೆ: ಸಮುದಾಯ ಕರ್ನಾಟಕ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ವಿಶ್ವ ಸಂಸ್ಕೃತ ದಿನ: ‘ಸಂಸ್ಕೃತ ಸಂಸ್ಕೃತಿ’ ಮಹಿಳಾ ಕಲಾ ಉತ್ಸವ, ಸಂಗೀತ ವೃಂದ: ಮಾನಸಿ ಪ್ರಸಾದ್, ಅದಿತಿ ಕೃಷ್ಣಪ್ರಕಾಶ್, ಶುಭಾ ಸಂತೋಷ್, ದೀಪಿಕಾ ಶ್ರೀನಿವಾಸನ್, ವಿಜೇತಾ ಹೆಗಡೆ, ಆಯೋಜನೆ: ಇಂಟರ್‌ನ್ಯಾಷನಲ್ ಆರ್ಟ್ಸ್ ಆ್ಯಂಡ್ ಕಲ್ಚರಲ್ ಫೌಂಡೇಶನ್, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 5

ಮಾನಸಿ ಪ್ರಸಾದ್

ಉಪನ್ಯಾಸ: ಸ್ವಾತಂತ್ರ್ಯೋತ್ತರ ಭಾರತದಲ್ಲಿ ಧರ್ಮ ನಿರಪೇಕ್ಷತೆ ಮತ್ತು ಪ್ರಜಾಪ್ರಭುತ್ವ: ಪ್ರೊ ಇರ್ಫಾನ್ ಹಬೀಬ್, ಉಪಸ್ಥಿತಿ: ಪುರುಷೋತ್ತಮ ಬಿಳಿಮಲೆ, ಆಯೋಜನೆ: ಭಾರತ ಜ್ಞಾನ ವಿಜ್ಞಾನ ಸಮಿತಿ, ಸಂಜೆ 6 (ಆನ್‌ಲೈನ್ ಕಾರ್ಯಕ್ರಮ)

ನಮ್ಮ ಮೆಟ್ರೊ: ವಿಸ್ತರಿತ ಮಾರ್ಗದಲ್ಲಿ ನಿತ್ಯ 75 ಸಾವಿರ ಪ್ರಯಾಣಿಕರ ಸಂಚಾರ ನಿರೀಕ್ಷೆ

ಮೈಸೂರು ರಸ್ತೆ– ಕೆಂಗೇರಿ: 29ರಿಂದ ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ಮೈಸೂರು ರಸ್ತೆ–ಕೆಂಗೇರಿ ವಿಸ್ತರಿತ ಮಾರ್ಗದಲ್ಲಿ ರೈಲಿನ ಪರೀಕ್ಷಾರ್ಥ ಸಂಚಾರ ನಡೆದ ಸಂದರ್ಭ –ಪ್ರಜಾವಾಣಿ ಚಿತ್ರ

ಬೆಂಗಳೂರು: ಮೈಸೂರು ರಸ್ತೆಯಿಂದ ಕೆಂಗೇರಿವರೆಗೆ ಮೆಟ್ರೋದಲ್ಲಿ ಸಂಚರಿಸುವ ನಿರೀಕ್ಷೆ ಆ.29ರಂದು ಕೈಗೂಡಲಿದೆ. ಶ್ರೀಕೃಷ್ಣ ಜನ್ಮಾಷ್ಟಮಿಯಂದು ಈ ಮಾರ್ಗದಲ್ಲಿ ಮೆಟ್ರೊ ರೈಲಿನ ವಾಣಿಜ್ಯ ಸೇವೆಗೆ ಚಾಲನೆ ಸಿಗಲಿದೆ.

ಕೇಂದ್ರ ನಗರಾಭಿವೃದ್ಧಿ ಸಚಿವ ಹರ್‌ದೀಪ್ ಸಿಂಗ್ ಪುರಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 6.2 ಕಿ.ಮೀವರೆಗಿನ ವಿಸ್ತರಿತ ಮಾರ್ಗದಲ್ಲಿ ಮೆಟ್ರೊ ರೈಲು ಸಂಚಾರಕ್ಕೆ ಹಸಿರು ನಿಶಾನೆ ತೋರಲಿದ್ದಾರೆ.

‘ರೈಲ್ವೆ ಸುರಕ್ಷತಾ ಆಯುಕ್ತರು (ಸಿಆರ್‌ಎಸ್) ಆ.11 ಮತ್ತು 12ರಂದು ಈ ಮಾರ್ಗದ ಪರಿಶೀಲನೆ ನಡೆಸಿದ್ದರು. ಪ್ರಯಾಣಿಕರ ಸುರಕ್ಷತೆಗೆ ಸಂಬಂಧಿಸಿದಂತೆ ಕೆಲವು ಸಲಹೆಗಳನ್ನೂ ನೀಡಿದ್ದರು. ಅವುಗಳನ್ನು ಪಾಲಿಸಲಾಗಿದೆ. ಕೇಂದ್ರ ನಗರಾಭಿವೃದ್ಧಿ ಸಚಿವರು ಮತ್ತು ಮುಖ್ಯಮಂತ್ರಿಯವರ ದಿನಾಂಕ ಕೋರಿ ಪತ್ರ ಬರೆಯಲಾಗಿತ್ತು. ಇಬ್ಬರು ಗಣ್ಯರು ಅಂದು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ಖಚಿತವಾಗಿದೆ. ಆ.29ರ ಮಧ್ಯಾಹ್ನ 12ಕ್ಕೆ ಕಾರ್ಯಕ್ರಮ ನಡೆಯಲಿದೆ’ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕ ಅಂಜುಮ್ ಪರ್ವೇಜ್ ‘ಪ್ರಜಾವಾಣಿ’ಗೆ ತಿಳಿಸಿದರು.

ಗರಿಷ್ಠ ಪ್ರಯಾಣ ದರ ₹56 ?: ಉದ್ದೇಶಿತ ಮಾರ್ಗದಲ್ಲಿ ನಾಯಂಡಹಳ್ಳಿ ಮುಂದೆ ನಿರ್ಮಾಣವಾಗಲಿರುವ ಚಲ್ಲಘಟ್ಟ ನಿಲ್ದಾಣವೂ ಸೇರಿ ಒಟ್ಟು ಏಳು ನಿಲ್ದಾಣಗಳು ಇರಲಿದ್ದು, ನಿತ್ಯ 75 ಸಾವಿರ ಜನರಿಗೆ ಇದರಿಂದ ಅನುಕೂಲ ಆಗಲಿದೆ. ಸೇವೆಗೆ ಮುಕ್ತಗೊಂಡ ನಂತರ ನೇರಳೆ ಮಾರ್ಗದ (ಬೈಯಪ್ಪನಹಳ್ಳಿಯಿಂದ ಕೆಂಗೇರಿ) ಗರಿಷ್ಠ ಪ್ರಯಾಣ ದರ ಅಂದಾಜು ₹56 ಆಗುವ ಸಾಧ್ಯತೆ ಇದೆ.

ಹಲವು ಗಡುವು: ಕೆಂಗೇರಿ ಮಾರ್ಗವು ಈಗಾಗಲೇ ಹಲವು ಗಡುವುಗಳನ್ನು ಮೀರಿದೆ. ವಾಸ್ತವವಾಗಿ 2018ರ ಡಿಸೆಂಬರ್‌ನಲ್ಲೇ ಇದು ಲೋಕಾರ್ಪಣೆ ಆಗಬೇಕಿತ್ತು. ಆದರೆ, ಕಾರಣಾಂತರಗಳಿಂದ 2019ರ ಮಾರ್ಚ್‌ಗೆ ಮುಂದೂಡಲ್ಪಟ್ಟಿತ್ತು. ಅಲ್ಲಿಂದ 2019ರ ನವೆಂಬರ್, 2020ರ ಅಕ್ಟೋಬರ್, 2021ರ ಫೆಬ್ರುವರಿ, ಏಪ್ರಿಲ್, ಜೂನ್‌ಗೆ ಸೇವೆಗೆ ಮುಕ್ತಗೊಳಿಸುವ ಗುರಿ ಇತ್ತು. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಈ ಮಾರ್ಗ ಪರಿಶೀಲನೆ ನಡೆಸಿದ್ದರು. 2021ರ ಜುಲೈನಲ್ಲಿ ಈ ಮಾರ್ಗವನ್ನು ಲೋಕಾರ್ಪಣೆ ಮಾಡಲಾಗುತ್ತದೆ ಎಂದು ಬಿಎಂಆರ್‌ಸಿಎಲ್ ಆ ಸಂದರ್ಭದಲ್ಲಿ ಹೇಳಿತ್ತು. ಇದಾಗಿ ಒಂದು ತಿಂಗಳ ನಂತರ ‘ಮುಹೂರ್ತ’ ಕೂಡಿ ಬಂದಿದೆ.

ಅಂಕಿ-ಅಂಶಗಳು

7.5 ಕಿ.ಮೀ ಮೈಸೂರು ರಸ್ತೆ ವಿಸ್ತರಿತ ಮಾರ್ಗದ ಉದ್ದ (ಚಲ್ಲಘಟ್ಟದವರೆಗೆ)

₹1,560 ಕೋಟಿ ಒಟ್ಟು ಯೋಜನಾ ವೆಚ್ಚ

₹254 ಕೋಟಿ ಪ್ರತಿ ಕಿ.ಮೀ. ಮೆಟ್ರೊ ಮಾರ್ಗ ನಿರ್ಮಾಣ ವೆಚ್ಚ

₹300 ಕೋಟಿ ಭೂಸ್ವಾಧೀನ ಪರಿಹಾರ ವೆಚ್ಚ

ನಮ್ಮ ಮೆಟ್ರೊ

ಈ ಮಾರ್ಗದಲ್ಲಿನ ನಿಲ್ದಾಣಗಳು

- ನಾಯಂಡಹಳ್ಳಿ
- ರಾಜರಾಜೇಶ್ವರಿ ನಗರ
- ಜ್ಞಾನ ಭಾರತಿ
- ಪಟ್ಟಣಗೆರೆ
- ಕೆಂಗೇರಿ ಬಸ್ ಟರ್ಮಿನಲ್
- ಕೆಂಗೇರಿ
- ಚಲ್ಲಘಟ್ಟ

ಸುದ್ದಿ 2 ನಿಮಿಷ

ಒಕ್ಕಲಿಗರ ಸಂಘದಿಂದ ಎಚ್‌.ಡಿ.ದೇವೇಗೌಡರಿಗೆ ಮನವಿ

ಬೆಂಗಳೂರು: ‘ಯಶವಂತಪುರ ಹೋಬಳಿಯ ಶ್ರೀಗಂಧದ ಕಾವಲ್ ಸರ್ವೆ ನಂಬರ್ 129ರಲ್ಲಿರುವ 15 ಎಕರೆ ಜಮೀನನ್ನು ರಾಜ್ಯ ಒಕ್ಕಲಿಗರ ಸಂಘಕ್ಕೆ ಮುಂಜೂರಾತಿ ಮಾಡಿಕೊಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಲಹೆ ನೀಡಬೇಕು’ ಎಂದು ಸಂಘದ ನಿಯೋಗ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಅವರಿಗೆ ಮನವಿ ಸಲ್ಲಿಸಿದೆ.

ರಾಜ್ಯ ಒಕ್ಕಲಿಗರ ಸಂಘದ ಆಸ್ತಿ ಉಳಿವಿನ ಹೋರಾಟ ಸಮಿತಿಯ ಪ್ರಧಾನ ಸಂಚಾಲಕ ಆಡಿಟರ್ ನಾಗರಾಜ್ ಯಲಚವಾಡಿ, ಸಂಚಾಲಕರಾದ ಕೆನಾಲಿ ಗೌಡ, ಗಾಯಕ ಆಲೂರು ನಾಗಪ್ಪ, ಪ್ರೊಫೆಸರ್ ಮಲ್ಲಯ್ಯ, ಸಮಾಜದ ಮುಖಂಡರುಗಳಾದ ಯಲಹಂಕ ಕೃಷ್ಣಪ್ಪ ಜಕ್ಕನಹಳ್ಳಿ ಕೃಷ್ಣಪ್ಪ, ಬೆಳ್ಳಿ ಲೋಕೇಶ್, ಹುತ್ರಿದುರ್ಗ ರಂಗಸ್ವಾಮಿ, ದಿನೇಶ್ ಕರಿಯಪ್ಪ, ವಿಶ್ವೇಶ್ವರಯ್ಯ, ರಾಮೇಗೌಡ, ಬಾಲಕೃಷ್ಣ ಮುಂತಾದವರು ನಿಯೋಗದಲ್ಲಿ ಇದ್ದರು.

680 ಜನರ ಆರೋಗ್ಯ ತಪಾಸಣೆ

ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ವೈದ್ಯಕೀಯ ಘಟಕವು ಬಸವನಗುಡಿ ವಿಧಾನಸಭಾ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ವೈದ್ಯಕೀಯ ತಪಾಸಣಾ ಶಿಬಿರದಲ್ಲಿ ಒಟ್ಟು 680 ಮಂದಿಗೆ ಶನಿವಾರ ಆರೋಗ್ಯ ತಪಾಸಣೆಯನ್ನು ಉಚಿತವಾಗಿ ನೆರವೇರಿಸಲಾಯಿತು.

ಬನಶಂಕರಿ 1ನೇ ಹಂತದ ಬ್ಯಾಂಕ್ ಕಾಲೊನಿ ಬಸ್‌ನಿಲ್ದಾಣದ ಹಿಂಭಾಗದಲ್ಲಿರುವ ಕೆಪಿಸಿಸಿ ಬೆಂಗಳೂರು ದಕ್ಷಿಣ ವಿಭಾಗದ ವೈದ್ಯಕೀಯ ಘಟಕದ ಕಚೇರಿಯಲ್ಲಿ ಶಿಬಿರ ಆಯೋಜಿಸಲಾಗಿತ್ತು. ಬನ್ನೇರುಘಟ್ಟ ರಸ್ತೆಯಲ್ಲಿರುವ ಅಪೋಲೊ ಆಸ್ಪತ್ರೆ ಹಾಗೂ ಜೆ.ಪಿ ನಗರದ ಶೇಖರ್ ನೇತ್ರಾಲಯದ ಹಿರಿಯ ವೈದ್ಯರು ಪಾಲ್ಗೊಂಡಿದ್ದರು. ಶಿಬಿರದಲ್ಲಿ ಭಾಗವಹಿಸಿದವರಿಗೆ ಔಷಧಗಳನ್ನು ಉಚಿತವಾಗಿ ವಿತರಿಸಲಾಯಿತು.

ವೈದ್ಯಕೀಯ ಘಟಕದ ಪ್ರಧಾನ ಕಾರ್ಯದರ್ಶಿ ಡಾ.ಶಂಕರ ಗುಹಾ ದ್ವಾರಕಾನಾಥ್ ಬೆಳ್ಳೂರು ‘ಇನ್ನು ಪ್ರತಿ ವಾರ ಕಚೇರಿ ಆವರಣದಲ್ಲಿ ಆರೋಗ್ಯ ಶಿಬಿರ ಆಯೋಜಿಸುತ್ತೇವೆ. 300ಕ್ಕೂ ಅಧಿಕ ಜನರ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ಮಾಡಿಸುತ್ತೇವೆ’ ಎಂದು ತಿಳಿಸಿದರು.

ಶಿಬಿರಕ್ಕೆ ಚಾಲನೆ ನೀಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ಶಂಕರ ಗುಹಾ ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಲಯನ್ಸ್ ಕ್ಲಬ್ ಗವರ್ನರ್ ಭಕ್ತವತ್ಸಲ ರೆಡ್ಡಿ ಹಾಗೂ ಕೆಪಿಸಿಸಿ ವೈದ್ಯಕೀಯ ಘಟಕದ ಅಧ್ಯಕ್ಷ ಡಾ.ಬಿ.ಕೆ. ಮಧುಸೂದನ್ ಇದ್ದರು.

‘ಕಾಂಗ್ರೆಸ್ ಪಕ್ಷ ದಲಿತರ ವಿರೋಧಿ’

ಛಲವಾದಿ ನಾರಾಯಣ ಸ್ವಾಮಿ

ಬೆಂಗಳೂರು: ‘ದಲಿತರ ಪರ ಕಾಳಜಿ, ಸಾಮಾಜಿಕ ನ್ಯಾಯ ಎಂಬುದು ಕಾಂಗ್ರೆಸ್ ಪಕ್ಷದ ನಾಯಕರಿಗೆ ಬಾಯಿ ಮಾತಿಗೆ ಸೀಮಿತವಾದ ವಿಚಾರಗಳು. ವಾಸ್ತವದಲ್ಲಿ ಕಾಂಗ್ರೆಸ್ ಪಕ್ಷ ದಲಿತ ವಿರೋಧಿ’ ಎಂದು ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ.

‘ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ ಮತ್ತು ಆರ್. ಧ್ರುವನಾರಾಯಣ್ ಅವರು ಪಕ್ಷದಲ್ಲಿ ಅಸ್ತಿತ್ವಕ್ಕಾಗಿ ಹೋರಾಡುತ್ತಿದ್ದಾರೆ. ಈ ಕಾರಣಕ್ಕಾಗಿ ಬಿಜೆಪಿ ನಾಯಕರ ವಿರುದ್ಧ ಹೇಳಿಕೆಗಳನ್ನು ನೀಡಿ, ಪ್ರಚಾರ ಗಿಟ್ಟಿಸಲು ಯತ್ನಿಸುತ್ತಿದ್ದಾರೆ. ‘ಅಳಿಯನ ಕುರುಡು ಬೆಳಗಾದರೆ ಗೊತ್ತಾಗುತ್ತೆ’ ಎಂಬ ಗಾದೆ ಮಾತಿನಂತಾಗಿದೆ ಈ ಇಬ್ಬರ ಸ್ಥಿತಿ’ ಎಂದು ಅವರು ಟೀಕಿಸಿದ್ದಾರೆ.

‘ಕಾಂಗ್ರೆಸ್ ನಾಯಕರಿಗೆ ದಲಿತರ ಕಾಳಜಿ ಎಂಬುದು ಗಂಟಲಿನಿಂದ ಹೊರಗಿನ ವಿಚಾರವಾಗಿ ಎಂದೂ ಕಂಡಿಲ್ಲ. ಧ್ರುವನಾರಾಯಣ್ ಅವರು ಸಂಸದರಾಗಿದ್ದ ಅವಧಿಯಲ್ಲಿ ಶೋಷಿತ ಸಮುದಾಯಗಳ ಪರವಾಗಿ ಯಾವ ಕೆಲಸವನ್ನೂ ಮಾಡಿಲ್ಲ. ಅಧಿಕಾರದಲ್ಲಿ ಇದ್ದಾಗ ದಲಿತ ಸಮುದಾಯದ ಜನರ ಅಭಿವೃದ್ಧಿ ಕುರಿತು ತುಟಿ ಬಿಚ್ಚಿರಲಿಲ್ಲ. ಸೋತು ಸುಣ್ಣವಾದ ಬಳಿಕ ಅಧಿಕಾರಕ್ಕಾಗಿ ಮಾತನಾಡುತ್ತಿದ್ದಾರೆ’ ಎಂದು ದೂರಿದ್ದಾರೆ.

‘ದಲಿತರೊಬ್ಬರನ್ನು ಮುಖ್ಯಮಂತ್ರಿ ಮಾಡಲು ಕಾಂಗ್ರೆಸ್ ಯಾವತ್ತೂ ಪ್ರಯತ್ನಿಸಿಲ್ಲ. ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಅಂತಹ ಅವಕಾಶವಿದ್ದರೂ ಬಳಸಲಿಲ್ಲ. ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್‌ನ ಎಲ್ಲ ನಾಯಕರೂ ಚಾತುರ್ವರ್ಣ ಪದ್ಧತಿಯ ಪ್ರತಿಪಾದಕರು. ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಸಂಪುಟದಲ್ಲಿ ದಲಿತರಿಗೆ ಹೆಚ್ಚು ಪ್ರಾತಿನಿಧ್ಯ ನೀಡಿದ್ದಾರೆ. ಬಿಜೆಪಿಯನ್ನು ಟೀಕಿಸುವ ನೈತಿಕತೆ ಕಾಂಗ್ರೆಸ್ ನಾಯಕರಿಗೆ ಇಲ್ಲ’ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೋವಿಡ್: 28.79 ಲಕ್ಷ ಮಂದಿ ಗುಣಮುಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೊರೊನಾ ಸೋಂಕಿತರಲ್ಲಿ 1,648 ಮಂದಿ ಶನಿವಾರ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 28.79 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 20,845ಕ್ಕೆ ಇಳಿಕೆಯಾಗಿದೆ.

ಹೊಸದಾಗಿ 1,350 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.37 ಲಕ್ಷ ದಾಟಿದೆ. ಒಂದು ದಿನದಲ್ಲಿ 1.57 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.85ರಷ್ಟು ವರದಿಯಾಗಿದೆ.

10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 11 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಹಾವೇರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 320, ಮೈಸೂರಿನಲ್ಲಿ 102 ಹಾಗೂ ಕೊಡಗಿನಲ್ಲಿ 63 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 260, ಉಡುಪಿಯಲ್ಲಿ 177 ಹಾಗೂ ಹಾಸನದಲ್ಲಿ 101 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 18 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 12 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ 4, ಶಿವಮೊಗ್ಗ, ಕೋಲಾರ ಹಾಗೂ ಹಾಸನದಲ್ಲಿ ತಲಾ ಇಬ್ಬರು, ಬೆಂಗಳೂರು ಸೇರಿದಂತೆ ಎಂಟು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.33 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,123ಕ್ಕೆ ತಲುಪಿದೆ.

ಬೆಂಗಳೂರು ನಗರ ಜಿಲ್ಲಾ
ಕೋವಿಡ್ ಅಂಕಿ–ಅಂಶ

12,34,769 ▲ ಒಟ್ಟು ಸೋಂಕಿತರು

7,797 ▼	12,11,014 ▲	15,957 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	260 ▼
ಗುಣಮುಖ	374 ▼
ಸಾವು	1 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	21.18 ಕೋಟಿ ▲	3.24 ಕೋಟಿ
ಸಕ್ರಿಯ ಪ್ರಕರಣ	1.78 ಕೋಟಿ ▲	3.47 ಲಕ್ಷ ▼
ಗುಣಮುಖ	18.96 ಕೋಟಿ ▲	3.16 ಕೋಟಿ
ಸಾವು	44.33ಲಕ್ಷ ▲	4.34 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	6.85 ಲಕ್ಷ ▼	30,830 ▼
ಗುಣಮುಖ	5.13 ಲಕ್ಷ ▼	37,991 ▼
ಸಾವು	10,279 ▼	400 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ಬ್ರೆಜಿಲ್
1.58 ಲಕ್ಷ ▲	37,222 ▲	33,877 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ಇರಾನ್
70.89 ▲	13.10 ▲	6.47 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.35 ಲಕ್ಷ ▲
ತಮಿಳುನಾಡು	34,663 ▲
ದೆಹಲಿ	25,079

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	64.20 ▲
ಕೇರಳ	38.03 ▲
ತಮಿಳುನಾಡು	25.97

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಲಸಿಕೆ ಪಡೆಯಲು ದಾಸಪ್ಪ ಆಸ್ಪತ್ರೆಯಲ್ಲಿ ಜನ ಸಾಲುಗಟ್ಟಿ ನಿಂತಿರುವುದು ಶನಿವಾರ ಕಂಡು ಬಂತು– ಪ್ರಜಾವಾಣಿ ಚಿತ್ರ

‘ಹೊರವಲಯದ ವಾರ್ಡ್‌ಗಳಲ್ಲಿನ್ನು ನಿತ್ಯ 400 ಮಂದಿಗೆ ಲಸಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಾರದಿಂದ ಈಚೆಗೆ ಕೋವಿಡ್ ಲಸಿಕೆ ನೀಡುವ ಪ್ರಮಾಣ ಕಡಿಮೆಯಾಗಿದೆ. ಕಳೆದ ವಾರ ಬಿಬಿಎಂಪಿ ವ್ಯಾಪ್ತಿಯಲ್ಲಿ ನಿತ್ಯ ಸರಾಸರಿ 44,401 ಮಂದಿಗೆ ಕೋವಿಡ್ ಲಸಿಕೆ ನೀಡಲಾಗಿದೆ. ಆದರೆ, ಕಳೆದೆರಡು ದಿನಗಳಲ್ಲಿ ಪಾಲಿಕೆಗೆ ಪೂರೈಕೆಯಾಗುವ ಲಸಿಕೆ ಪ್ರಮಾಣ ಹೆಚ್ಚಳವಾಗಿದ್ದು, ಲಸಿಕೆ ವಿತರಣೆಯೂ ಹೆಚ್ಚುವ ನಿರೀಕ್ಷೆ ಇದೆ.

‘ಬಿಬಿಎಂಪಿಗೆ ಲಸಿಕೆ ಪೂರೈಕೆ ಪ್ರಮಾಣವನ್ನು ಸರ್ಕಾರ ಹೆಚ್ಚಿಸಲು ಒಪ್ಪಿಕೊಂಡಿದೆ. ವಿಶೇಷವಾಗಿ ದಾಸರಹಳ್ಳಿ ವಲಯದಲ್ಲಿ ಮತ್ತು ನಗರದ ಹೊರ ವಲಯದ ವಾರ್ಡ್‌ಗಳಲ್ಲಿ, ವಲಸೆ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ವಾರ್ಡ್‌ಗಳಲ್ಲಿ ನಿತ್ಯ ಕನಿಷ್ಠ 400 ಮಂದಿಗೆ ಲಸಿಕೆ ನೀಡುವಂತೆ ಆದೇಶ ಮಾಡಿದ್ದೇನೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಯೊಬ್ಬರು, ‘ಸದ್ಯಕ್ಕೆ ಲಸಿಕೆ ಕೊರತೆ ಇಲ್ಲ. ಎರಡು ದಿನಗಳಿಂದ ಪಾಲಿಕೆಗೆ ಕೋವಿಡ್ ಲಸಿಕೆಯ 70 ಸಾವಿರಕ್ಕೂ ಅಧಿಕ ಡೋಸ್‌ಗಳು ಪೂರೈಕೆ ಆಗಿವೆ. ಕೆಲ ದಿನಗಳಿಂದ ಪೂರೈಕೆ ಕಡಿಮೆ ಇದ್ದುದರಿಂದ ಲಸಿಕಾ ಕೇಂದ್ರಗಳಿಗೆ ಬಂದ ಎಲ್ಲರಿಗೂ ಲಸಿಕೆ ನೀಡಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ಲಸಿಕೆ ಪಡೆಯಲು ಬರುವವರ ಸಂಖ್ಯೆಯೂ ಕ್ರಮೇಣ ಕಡಿಮೆಯಾಗಿತ್ತು. ಲಸಿಕೆ ಸಿಗುವ ಭರವಸೆ ಮೂಡಿದ ಬಳಿಕ ಲಸಿಕೆ ಪಡೆಯುವವರ ಸಂಖ್ಯೆಯೂ ಹೆಚ್ಚಾಗುವ ನಿರೀಕ್ಷೆ ಇದೆ’ ಎಂದು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಜನಜಂಗುಳಿ ಹೆಚ್ಚಳ: ಹಬ್ಬದ ಖರೀದಿ ಭರಾಟೆ ಜೋರಾಗಿದ್ದರಿಂದ ನಗರದ ಮಾರುಕಟ್ಟೆಗಳಲ್ಲಿ ಜನಜಂಗುಳಿ ಜಾಸ್ತಿ ಇತ್ತು. ಈ ವೇಳೆ ಅನೇಕರು ಮಾಸ್ಕ್ ಕೂಡಾ ಧರಿಸಿರಲಿಲ್ಲ. ಈ ಕುರಿತು ಪ್ರತಿಕ್ರಿಯಿಸಿದ ಗೌರವ್ ಗುಪ್ತ, ‘ಯಾವುದೇ ವ್ಯಕ್ತಿ ಲಸಿಕೆ ಪಡೆದಿರಲಿ, ಇಲ್ಲದಿರಲಿ, ಅದರೆ, ಸಾರ್ವಜನಿಕ ಪ್ರದೇಶಗಳಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು’ ಎಂದು ಸ್ಪಷ್ಟಪಡಿಸಿದರು

ಕೋವಿಡ್ ಲಸಿಕೆ ವಿವರ

ದಿನಾಂಕ	ನೀಡಿದ ಲಸಿಕೆ
ಆ.15	39,046
ಆ.16	51,190
ಆ.17	51,018
ಆ.18	39,543
ಆ.19	43,625
ಆ.20	41,984

ಚಿತ್ರಾವಳಿ

ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ವಿಮರ್ಶಕ ಎಸ್‌. ದಿವಾಕರ್ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲಿಕಾ ಎಸ್‌. ಘಂಟಿ ಅವರಿಗೆ ‘ಕ.ಸಾ.ಪ ಗೌರವ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಪರಿಷತ್ತಿನ ಗೌರವ ಕಾರ್ಯದರ್ಶಿ ಕೆ. ರಾಜಕುಮಾರ್, ಗೌರವ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಜಿ. ರವಿಶಂಕರ್, ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಹಾಗೂ ಗೌರವ ಕಾರ್ಯದರ್ಶಿ ಪದ್ಮರಾಜ ದಂಡಾವತಿ ಇದ್ದರು. ಈ ಪ್ರಶಸ್ತಿ ತಲಾ ₹ 30 ಸಾವಿರ ನಗದು ಒಳಗೊಂಡಿದೆ.

ರೋಟರಿ ಬೆಂಗಳೂರು ಪಶ್ಚಿಮ ವತಿಯಿಂದ ಮಠದಹಳ್ಳಿಯ ಕಬೀರ್ ಪ್ರಾಥಮಿಕ ಶಾಲೆಯಲ್ಲಿ ಸ್ಥಾಪಿಸಿರುವ ಶೌಚಾಲಯವನ್ನು ಶನಿವಾರ ಉದ್ಘಾಟಿಸಲಾಯಿತು. ಇದೇ ವೇಳೆ ಕುಡಿಯುವ ನೀರಿನ ಯಂತ್ರವನ್ನೂ ಕೊಡುಗೆ ನೀಡಲಾಯಿತು. ರೋಟರಿ ಜಿಲ್ಲೆ 3190ರ ಅಧ್ಯಕ್ಷ ಸೂರ್ಯಪ್ರಕಾಶ್ ರತ್ನಂ, ಕಬೀರ್ ಟ್ರಸ್ಟ್ ಅಧ್ಯಕ್ಷ ಟಿ.ಪ್ರಭಾಕರ್, ರೋಟರಿ ಜಿಲ್ಲೆ 3190ರ ಗವರ್ನರ್ ಫಜಲ್ ಮಹಮೂದ್ ಹಾಗೂ ಸಿಎಸ್‌ಆರ್‌ನ ನವೀನ್ ಕಾಳವಾರ ಇದ್ದಾರೆ – ಪ್ರಜಾವಾಣಿ ಚಿತ್ರ

ಸದಾಶಿವನಗರದಲ್ಲಿರುವ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ನಿವಾಸ ‘ಕೆಂಗಲ್ ಕೃಪ’ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಭೇಟಿ ನೀಡಿ ಅಪರೂಪದ ಛಾಯಾಚಿತ್ರಗಳನ್ನು ವೀಕ್ಷಿಸಿದರು. ಕೆಂಗಲ್ ಹನುಮಂತಯ್ಯ ಅವರ ಪುತ್ರಿ ವಿಜಯಲಕ್ಷ್ಮಿ ತಿಮ್ಮಯ್ಯ ಹಾಗೂ ಮೊಮ್ಮಗ ಡಾ.ಟಿ. ವೆಂಕಟವರ್ಧನ್ ಇದ್ದಾರೆ ಪ್ರಜಾವಾಣಿ ಚಿತ್ರ

ಕೋವಿಡ್ ‘ವಿಘ್ನ’: ಸಣ್ಣ ಮೂರ್ತಿ ತಯಾರಿಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಹನುಮಂತನಗರದ ಮಳಿಗೆಯೊಂದರಲ್ಲಿ ಗಣೇಶನ ಮಣ್ಣಿನ ಮೂರ್ತಿಗಳಿಗೆ ಕಲಾವಿದರು ಮಂಗಳವಾರ ಅಂತಿಮ ಸ್ಪರ್ಶ ನೀಡಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಕೋವಿಡ್ ಕಾರಣದಿಂದಾಗಿ ಈ ಬಾರಿಯೂ ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ನಿಷೇಧಿಸಿ, ಮನೆಗಳಲ್ಲಿ ಸರಳವಾಗಿ ಆಚರಿಸಲು ಸರ್ಕಾರ ಮಾರ್ಗಸೂಚಿ ಹೊರಡಿಸಿರುವುದರಿಂದ ಗಣೇಶ ಮೂರ್ತಿ ತಯಾರಕರು ಸಣ್ಣ ಗಾತ್ರದ ಮಣ್ಣಿನ ಮೂರ್ತಿಗಳ ತಯಾರಿಗೆ ಮುಂದಾಗಿದ್ದಾರೆ.

ಗಣೇಶ ಚತುರ್ಥಿಗೆ ಕೆಲವೇ ದಿನಗಳು ಬಾಕಿ ಇರುವಾಗಲೇ ಮಾರ್ಗಸೂಚಿ ಹೊರಡಿಸಿರುವುದರಿಂದ ಕಲಾವಿದರು ಕಂಗಾಲಾಗಿದ್ದರು. ಈ ವರ್ಷ ಸಿದ್ಧಪಡಿಸಿದ್ದ ಗಣೇಶನ ಬೃಹತ್ ಮೂರ್ತಿಗಳು ಗೋದಾಮುಗಳಲ್ಲೇ ಉಳಿದಿವೆ.

ಆದರೆ, ಮನೆಗಳಲ್ಲಿ ಹಾಗೂ ದೇವಸ್ಥಾನಗಳಲ್ಲಿ ಮೂರ್ತಿ ಪ್ರತಿಷ್ಠಾಪನೆಗೆ ಅವಕಾಶ ಕಲ್ಪಿಸಿರುವುದರಿಂದ ಸಣ್ಣ ಗಾತ್ರದ ಗಣೇಶ ಮೂರ್ತಿಗಳನ್ನು ಗ್ರಾಹಕರು ಖರೀದಿಸುತ್ತಾರೆ ಎಂಬ ನಿರೀಕ್ಷೆಯಲ್ಲಿ ಕಲಾವಿದರು ಸಣ್ಣ ಮೂರ್ತಿಗಳ ತಯಾರಿಯಲ್ಲಿ ತೊಡಗಿದ್ದಾರೆ.

‘ಕಳೆದ ಮಾರ್ಚ್ ಅವಧಿಯಲ್ಲಿ ಕೋವಿಡ್ ನಿಯಂತ್ರಣಕ್ಕೆ ಬಂದಿದ್ದರಿಂದ ಎಂದಿನಂತೆ ಗಣೇಶ ಮೂರ್ತಿಗಳ ತಯಾರಿ ಆರಂಭಿಸಿದೆವು. ಅಷ್ಟರಲ್ಲಿ ಎರಡನೇ ಅಲೆ ಬಂತು. ಮೂರನೇ ಅಲೆಯ ನಿರೀಕ್ಷೆಯ ಬಗ್ಗೆ ತಜ್ಞರು ಆಗಲೇ ಎಚ್ಚರಿಸಿದ್ದರಿಂದ ಮುಂದಾಲೋಚನೆಯಿಂದ ದೊಡ್ಡ ಗಾತ್ರದ ಮಣ್ಣಿನ ಮೂರ್ತಿಗಳ ಬದಲಿಗೆ ಮಧ್ಯಮ ಗಾತ್ರದವರೆಗಿನ ಮೂರ್ತಿಗಳನ್ನು ಸಿದ್ಧಪಡಿಸಿದ್ದೇವೆ’ ಎಂದು ಹನುಮಂತನಗರದಲ್ಲಿ ಗಣೇಶ ಮೂರ್ತಿಗಳನ್ನು ತಯಾರಿಸುವ ಕಲಾವಿದೆ ಭಾಗ್ಯ ತಿಳಿಸಿದರು.

‘ಕೋವಿಡ್ ಇನ್ನೂ ನಿಯಂತ್ರಣಕ್ಕೆ ಬರಲಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಷ್ಠಾಪನೆಗೆ ಅವಕಾಶ ಇಲ್ಲ. ಮನೆಗಳಲ್ಲಿ ಪ್ರತಿಷ್ಠಾಪಿಸಲು ಸಣ್ಣ ಮೂರ್ತಿಗಳನ್ನು ಗ್ರಾಹಕರು ಖರೀದಿಸುತ್ತಾರೆ ಎಂಬ ನಿರೀಕ್ಷೆಯಲ್ಲಿ 4 ಸಾವಿರ ಸಣ್ಣ ಮೂರ್ತಿಗಳನ್ನು ತಯಾರಿಸುತ್ತಿದ್ದೇವೆ. ಈ ಬಾರಿ ಗ್ರಾಹಕರೇ ನಮ್ಮ ಕೈಹಿಡಿಯಬೇಕು’ ಎಂದರು.

‘ಕಳೆದ ವರ್ಷ ಗಣೇಶ ಚತುರ್ಥಿಗೆ ಕೋವಿಡ್ ಅಡ್ಡಿಪಡಿಸಿತು. ಸಿದ್ಧಪಡಿಸಿದ್ದ ಗಣೇಶ ಮೂರ್ತಿಗಳು ಖರೀದಿಯಾಗದೆ, ನಷ್ಟ ಅನುಭವಿಸಿದೆವು. ಈ ವರ್ಷದ ಹಬ್ಬಕ್ಕೂ ಮೂರನೇ ಅಲೆಯ ಕರಿನೆರಳು ಬಿದ್ದಿದೆ. ಈಗಾಗಲೇ ತಯಾರಿಸಿರುವ ದೊಡ್ಡ ಮೂರ್ತಿಗಳನ್ನು ಏನು ಮಾಡುವುದು‘ ಎನ್ನುತ್ತಾರೆ ಜಕ್ಕೂರಿನ ಗಣೇಶ ಮೂರ್ತಿ ತಯಾರಕ ಮಹೇಶ್ ಕುಮಾರ್.

‘ಪ್ರತಿ ವರ್ಷ ₹2 ಲಕ್ಷದವರೆಗೆ ಬಂಡವಾಳ ಹಾಕಿ ಗಣೇಶ ಮೂರ್ತಿಗಳನ್ನು ಸಿದ್ಧಪಡಿಸುತ್ತೇವೆ. ಬಂಡವಾಳದ ಶೇ 20ರಷ್ಟು ಲಾಭ ಮಾತ್ರ ನಮ್ಮ ಕೈಸೇರುತ್ತದೆ. ಸಾಲ ಮಾಡಿ ಕೆಲಸಕ್ಕೆ ಕೈ ಹಾಕುತ್ತೇವೆ. ಕಳೆದ ವರ್ಷದ ಸಾಲದ ಹೊರೆ ಇನ್ನೂ ತೀರಿಲ್ಲ. ಈ ವರ್ಷವಾದರೂ ಲಾಭ ಸಿಗಬಹುದು ಎಂಬ ನಿರೀಕ್ಷೆಯೂ ಸುಳ್ಳಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಕಲಾವಿದರನ್ನು ಕಡೆಗಣಿಸಿದ ಸರ್ಕಾರ’

‘ಹಲವು ದಶಕಗಳಿಂದ ಗಣೇಶ ಮೂರ್ತಿಗಳನ್ನು ತಯಾರಿಸುವ ಕಲಾವಿದರ ಕುಟುಂಬಗಳಿಗೆ ಸರ್ಕಾರದಿಂದ ಯಾವುದೇ ಸೌಲಭ್ಯಗಳಿಲ್ಲ. ಹಬ್ಬವನ್ನೇ ನಂಬಿ ವರ್ಷವಿಡೀ ಬದುಕು ಕಟ್ಟಿಕೊಳ್ಳುವ ನಮ್ಮನ್ನು ಗುರುತಿಸುವ ಕೆಲಸವೂ ನಡೆದಿಲ್ಲ’ ಎಂದು ಹನುಮಂತನಗರದ ಕಲಾವಿದ ಶಿವು ದೂರಿದರು.

‘ಮೂರ್ತಿ ತಯಾರಕರು ಈಗಲೂ ಅಸಂಘಟಿತರಾಗಿ ಉಳಿದಿದ್ದಾರೆ. ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ಈ ಕೆಲಸದಲ್ಲಿ ತೊಡಗಿರುವವರನ್ನು ಸಮೀಕ್ಷೆ ನಡೆಸಿ, ಸರ್ಕಾರದಿಂದ ಗುರುತಿನ ಚೀಟಿ ನೀಡಬೇಕು. ಇದರಿಂದ ಯಾವುದೇ ಸೌಲಭ್ಯಗಳನ್ನು ಪಡೆದುಕೊಳ್ಳಲು ನಮಗೆ ಅನುಕೂಲವಾಗಲಿದೆ. ಮೂರ್ತಿಗಳನ್ನು ತಯಾರಿಸಲು ಗರಿಷ್ಠ ₹2 ಲಕ್ಷದವರೆಗೆ ಬಡ್ಡಿರಹಿತ ಸಾಲ ನೀಡಬೇಕು’ ಎಂದು ಒತ್ತಾಯಿಸಿದರು.

ಪರಿಸರಸ್ನೇಹಿ ಮೂರ್ತಿಗೆ ಬೇಡಿಕೆ

‘ಹೊಸ ಮಾರ್ಗಸೂಚಿ ಘೋಷಣೆಯಾದ ನಂತರ ಮನೆಗಳಲ್ಲೇ ಮೂರ್ತಿಗಳನ್ನು ಪ್ರತಿಷ್ಠಾಪಿಸಲು ಜನರು ಆಸಕ್ತಿ ತೋರಿದ್ದು, ಬಣ್ಣರಹಿತವಾದ ಪರಿಸರಸ್ನೇಹಿ ಮೂರ್ತಿಗಳು ಬೇಕೆಂದು ಮುಂಗಡವಾಗಿ ಕೇಳುತ್ತಿದ್ದಾರೆ. ಐದು ದಿನಗಳಿಂದ 30ಕ್ಕೂ ಹೆಚ್ಚು ಜನ ಪರಿಸರಸ್ನೇಹಿ ಮೂರ್ತಿಗಳಿಗೆ ಬೇಡಿಕೆ ಇಟ್ಟಿದ್ದಾರೆ’ ಎಂದು ಗಣೇಶ ಮೂರ್ತಿಗಳ ವ್ಯಾಪಾರಿ ವೆಂಕಟೇಶ್ ಮಾಹಿತಿ ನೀಡಿದರು.

ಹೈದರಾಬಾದ್ ರೇಸ್

‘ಕಾರ್ಫೆ ಕ್ಯಾಸಲ್’ ಗೆಲ್ಲುವ ನಿರೀಕ್ಷೆ

ಗವರ್ನರ್ಸ್ ಕಪ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕಾರ್ಫೆ ಕ್ಯಾಸಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮ್ಯಾಕ್ಸಿಮಮ್ ಗ್ಲಾಮರ್ 9, ಸಾಲಿಸ್‌ಬರಿ 3, ವ್ಯಾಲಪ್ ಅಂಡ್ ಗ್ಯಾಲಪ್ 4,
2ನೇ ರೇಸ್: ಮಿಸ್ ಮಾರ್ವೆಲಸ್ 1, ಲಾಕ್‌ಹಾರ್ಟ್ 2
3ನೇ ರೇಸ್: ಸೋಲಾಯಿಸ್ಟ್ 10, ವಿನ್ನಿಂಗ್ ಸ್ಟ್ರೀಕ್ 4, ಓವರ್ ಜಾಯ್ 9
4ನೇ ರೇಸ್: ಲಮ್ಹಾ 2, ಕ್ಯಾಂಪೇನಿಯ 3, ಕೆಟಲೇನಿಯಾ 5
5ನೇ ರೇಸ್: ಸ್ಟಾರ್ ಬೇಬ್ 3, ಏರ್ ಸೆಲ್ಯೂಟ್ 1, ಸೇಕ್ರೆಡ್ ಲ್ಯಾಂಪ್ 7
6ನೇ ರೇಸ್: ಹರ್ ಲೆಗಸಿ, ಎನ್‌.ಆರ್‌.ಐ ವಿಶನ್ 8, ಇಂಕ್ರೆಡ್ಯುಲಸ್ 5
7ನೇ ರೇಸ್: ಕಾರ್ಫೆ ಕ್ಯಾಸಲ್ 1, ಕನ್‌ಸಿಗ್ಲಿಯೋರಿ 4, ಪ್ರಿನ್ಸ್ ವ್ಯಾಲಿಯೆಂಟ್ 5
8ನೇ ರೇಸ್: ಬರ್ಕ್‌ಲಿ 1, ಬಿಗ್ ಡೇ 9, ಹರಿಕೇನ್ 4.

ಉತ್ತಮ ಬೆಟ್: ಹರ್ ಲೆಗಸಿ

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
4,5,6,7,8	2,3,4,5	5,6,7,8
1ನೇ ಟ್ರಿಬಲ್	**2ನೇ ಟ್ರಿಬಲ್**	**3ನೇ ಟ್ರಿಬಲ್**
1,2,3	3,4,5	6,7,8

ಅಫ್ಗನ್ ಮಹಿಳೆಯರಿಗೆ ಇನ್ನು ಸ್ವಾತಂತ್ರ್ಯ ಕನಸು; ಹಲೀಮಾ

ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ!

• ಕೆ.ಓಂಕಾರ ಮೂರ್ತಿ

ಭರವಸೆ ಕಳೆದುಕೊಳ್ಳಲಾರೆ. ಕತ್ತಲು ಮುಗಿದು ಬೆಳಕಾಗಲಿದೆ. ದೇಶದ ಜನರಿಗೂ ಇದೇ ಮಾತು ಹೇಳುತ್ತೇನೆ

ಹಲೀಮಾ ಅಕ್ಬಾರಿ, ಬಿ.ಎ ವಿದ್ಯಾರ್ಥಿನಿ, ಮೈಸೂರು

ಮೈಸೂರು: ‘ಸದ್ಯಕ್ಕೆ ಮೈಸೂರು ಬಿಟ್ಟು ಬರಬೇಡ. ಚೆನ್ನಾಗಿ ಓದಿಕೋ ಎಂದು ಅಮ್ಮ ಒತ್ತಾಯಿಸುತ್ತಿದ್ದಾರೆ. ಆದರೆ, ನಾನಿಲ್ಲಿ ನೆಮ್ಮದಿಯಿಂದ ಇರಲಾರೆ, ನನ್ನ ದೇಶ ಅಫ್ಘಾನಿಸ್ತಾನಕ್ಕೂ ಹೋಗಲಾರೆ’

–ನಗರದ ಮಹಾರಾಜ ಕಾಲೇಜಿನ ಬಿ.ಎ ವಿದ್ಯಾರ್ಥಿನಿ ಹಲೀಮಾ ಅಕ್ಬಾರಿ ಹೀಗೆ ಹೇಳಿದಾಗ ಅವರ ಕಣ್ಣಾಲಿಗಳಲ್ಲಿ ನೀರು ಜಿನುಗಿತು.

‘ಮಹಿಳೆಯರು ಶಿಕ್ಷಣ ಪಡೆಯುವುದನ್ನು ತಾಲಿಬಾನಿಗಳು ಇಷ್ಟಪಡುವುದಿಲ್ಲ. ಈಗ ಶಾಲಾ ಕಾಲೇಜು, ಕಚೇರಿ ಮುಚ್ಚಿವೆ. ಒಂದು ಕಡೆ ಭಯ, ಇನ್ನೊಂದು ಕಡೆ ಉದ್ಯೋಗವಿಲ್ಲದೆ ಹಣಕ್ಕೂ ತೊಂದರೆ. ನಮ್ಮ ಜನ ತಪ್ಪು ಮಾಡದಿದ್ದೂ ಏಕೆ ಶಿಕ್ಷೆ? ಕುಟುಂಬಸ್ಥರು ಭಯದಲ್ಲಿದ್ದಾರೆ. ನನಗೆ ಅವರ ಚಿಂತೆ, ಅವರಿಗೆ ನನ್ನ ಚಿಂತೆ. ನೆಮ್ಮದಿಯೇ ಇಲ್ಲದ ಬದುಕು. ನಿದ್ದೆ ಬರುತ್ತಿಲ್ಲ, ಊಟ ಸೇರುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

2019ರಿಂದ ನಗರದಲ್ಲಿರುವ ಅವರು ಬಾಡಿಗೆ ಮನೆಯಲ್ಲಿ ಸ್ನೇಹಿತೆಯರೊಂದಿಗೆ ನೆಲೆಸಿದ್ದಾರೆ. ಕೊರೊನಾ ಲಾಕ್‌ಡೌನ್ ಕೂಡ ಬಾಧಿಸಿದೆ. ಈಗ ತಾಲಿಬಾನ್ ಬಂಡುಕೋರರು ಅಫ್ಘಾನಿಸ್ತಾನವನ್ನು ವಶಕ್ಕೆ ಪಡೆದ ಬಳಿಕ ತಮ್ಮ ಕುಟುಂಬದ ಪರಿಸ್ಥಿತಿ ಕುರಿತು ಆತಂಕಿತರಾಗಿದ್ದಾರೆ. ಈ ವಿದ್ಯಾರ್ಥಿನಿಯ ಪೋಷಕರು, ಅಣ್ಣ ಹಾಗೂ ತಂಗಿ ಘಸ್ನಿ ಪ್ರಾಂತ್ಯದಲ್ಲಿ ನೆಲೆಸಿದ್ದಾರೆ. ತಂದೆ ವ್ಯಾಪಾರಿಯಾಗಿದ್ದು, ಅಣ್ಣ ಕಂಪನಿಯೊಂದರ ಉದ್ಯೋಗಿ. ಈಗ ಮನೆಯಿಂದಾಚೆ ಬರುತ್ತಿಲ್ಲ.

‘ನಾನಿಲ್ಲಿ ಸುರಕ್ಷಿತವಾಗಿರುವೆ. ಆದರೆ, ನನ್ನ ಹೃದಯ ನನ್ನ ದೇಶದ ಜನರಿಗಾಗಿ ತುಡಿಯುತ್ತಿದೆ. ನಮ್ಮವರೆಲ್ಲ ಅಪಾಯದಲ್ಲಿದ್ದಾರೆ. ನಾಳೆ ಏನಾಗುತ್ತದೋ ಗೊತ್ತಿಲ್ಲ. ಮಹಿಳೆಯರು ಮತ್ತೆ ಉದ್ಯೋಗಕ್ಕೆ, ಹೆಣ್ಣು ಮಕ್ಕಳು ಮತ್ತೆ ಶಾಲೆ–ಕಾಲೇಜಿಗೆ ಹೋಗಲು ಸಾಧ್ಯವೇ?’ ಎಂದು ಮೌನವಾದರು.

‘ನಮ್ಮ ಮನೆಯ ಎಲ್ಲರೂ ಮಾನಸಿಕವಾಗಿ ಜರ್ಜರಿತಗೊಂಡಿದ್ದಾರೆ. ಬ್ಯಾಂಕ್ ಮುಚ್ಚಿರುವುದರಿಂದ ಹಣಕಾಸಿಗೂ ತೊಂದರೆಯಾಗಬಹುದು. ನಾನು ಶಿಕ್ಷಣ ಮುಂದುವರಿಸಲೂ ಕಷ್ಟವಾಗಬಹುದು’ ಎಂದು ಹಲೀಮಾ ಆತಂಕ ವ್ಯಕ್ತಪಡಿಸಿದರು.

‘ನನ್ನ ದೇಶದ ಜನ ಶ್ರಮಜೀವಿಗಳು. ಹಲವು ಬಾರಿ ದಾಳಿಗಳು ನಡೆದಿದ್ದರೂ ಆತಂಕ್ಕೆ ಒಳಗಾಗಿರಲಿಲ್ಲ. ದೇಶವನ್ನು ಅಭಿವೃದ್ಧಿ ಹಾದಿಯಲ್ಲಿ ಕೊಂಡೊಯ್ಯುತ್ತಿರುವಾಗಲೇ ಮತ್ತೆ ಸಂಕಟ ಎದುರಾಗಿದೆ’ ಎಂದು ಮರುಕಪಟ್ಟರು.

ಹೊಟ್ಟೆಯಲ್ಲಿ ₹ 11ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿಡ್ನಿ ಶಸ್ತ್ರಚಿಕಿತ್ಸೆಗೆಂದು ವೀಸಾ ಪಡೆದು ನಗರಕ್ಕೆ ಬಂದಿದ್ದ ಆಫ್ರಿಕಾ ಪ್ರಜೆಯೊಬ್ಬರ ಹೊಟ್ಟೆಯಲ್ಲಿ ₹ 11 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆಯಾಗಿದ್ದು, ಆತನನ್ನು ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

'ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶನಿವಾರ ಬಂದಿಳಿದಿದ್ದ ಆಫ್ರಿಕಾ ಪ್ರಯಾಣಿಕನನ್ನು ಪರಿಶೀಲನೆಗೆ ಒಳಪಡಿಸಲಾಗಿತ್ತು. ಆತನ ಹೊಟ್ಟೆಯಲ್ಲಿ 1 ಕೆ.ಜಿ 300 ಗ್ರಾಂ ತೂಕದ ಕೊಕೇನ್ ಮಾತ್ರೆಗಳು ಸಿಕ್ಕಿವೆ. ಆತ, ಅಂತರರಾಷ್ಟ್ರೀಯ ಮಾದಕ ವಸ್ತು ಸಾಗಣೆದಾರರೊಂದಿಗೆ ಸಂಪರ್ಕ ಹೊಂದಿರುವ ಅನುಮಾನವಿದೆ. ತನಿಖೆ ಮುಂದುವರಿದಿದೆ' ಎಂದು ಮೂಲಗಳು ಹೇಳಿವೆ.

'ವಿಮಾನದ ಮೂಲಕ ಡ್ರಗ್ಸ್ ಸಾಗಿಸುತ್ತಿದ್ದ ಬಗ್ಗೆ ಡಿಆರ್‌ಐ ಅಧಿಕಾರಿಗಳಿಗೆ ಮಾಹಿತಿ ಬಂದಿತ್ತು. ನಿಲ್ದಾಣದಲ್ಲಿ ಮೊಕ್ಕಾಂ ಹೂಡಿದ್ದ ಅಧಿಕಾರಿಗಳು, ಪ್ರಯಾಣಿಕರ ಮೇಲೆ ಕಣ್ಣಿಟ್ಟಿದ್ದರು. ಆಫ್ರಿಕಾದಿಂದ ಬಂದಿದ್ದ 30 ವರ್ಷದ ವ್ಯಕ್ತಿ, ಅನುಮಾನಾಸ್ಪದವಾಗಿ ಓಡಾಡುತ್ತಿದ್ದ. ಆತನನ್ನು ವಿಚಾರಿಸಿದಾಗ, ವೈದ್ಯಕೀಯ ವೀಸಾ ತೋರಿಸಿದ್ದ. ಕಿಡ್ನಿ ಶಸ್ತ್ರಚಿಕಿತ್ಸೆಗಾಗಿ ನಗರಕ್ಕೆ ಬಂದಿರುವುದಾಗಿ ಹೇಳಿದ್ದ. ಹೊಟ್ಟೆ ನೋವಿದೆಂದು ನರಳಾಡಿದ್ದ.

'ನರಳಾಟ ನೋಡಿದ್ದ ಅಧಿಕಾರಿಗಳು, ತಿಂಡಿ ಹಾಗೂ ನೀರು ಕೊಟ್ಟಿದ್ದರು. ಎರಡನ್ನೂ ನಿರಾಕರಿಸಿದ್ದ ಆರೋಪಿ, ತನ್ನನ್ನು ನಿಲ್ದಾಣದಿಂದ ಹೊರಗೆ ಕಳುಹಿಸುವಂತೆ ಹೇಳಿದ್ದ. ಆತನ ನಡೆಯಿಂದ ಅಧಿಕಾರಿಗಳಿಗೆ ಅನುಮಾನ ಬಂದಿತ್ತು. ಕೂಡಲೇ ಆತನನ್ನು ವಶಕ್ಕೆ ಪಡೆದ ಅಧಿಕಾರಿಗಳು, ದೇಹದ ಸ್ಕ್ಯಾನಿಂಗ್‌ಗೆ ಒಳಪಡಿಸಿದ್ದರು. ಅದೇ ವೇಳೆಯೇ ಆತನ ಹೊಟ್ಟೆಯಲ್ಲಿ ಮಾತ್ರೆಗಳು ಇರುವುದು ಪತ್ತೆಯಾಯಿತು. ವೈದ್ಯರ ಸಹಾಯದಿಂದ ಮಾತ್ರೆಗಳನ್ನು ಹೊರಗೆ ತೆಗೆದಾಗ, ಅವು ಕೊಕೇನ್ ಮಾತ್ರೆಗಳೆಂಬುದು ತಿಳಿಯಿತು' ಎಂದೂ ಮೂಲಗಳು ತಿಳಿಸಿವೆ.

'ಆರೋಪಿ ಇದುವರೆಗೂ ಹಲವು ಬಾರಿ ನಗರಕ್ಕೆ ಬಂದು ಹೋಗಿರುವ ಮಾಹಿತಿ ಇದೆ. ನಗರದ ವ್ಯಕ್ತಿಯೊಬ್ಬರಿಗೆ ಡ್ರಗ್ಸ್ ಕೊಡಲು ಬಂದಿದ್ದ ಅನುಮಾನವಿದೆ. ಆ ವ್ಯಕ್ತಿ ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದೂ ಮೂಲಗಳು ಹೇಳಿವೆ.

'ಭ್ರಷ್ಟಾಚಾರ: 22 ಪೊಲೀಸರ ಅಮಾನತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಂಚ ಪಡೆಯುವ ಪೊಲೀಸರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. ಭ್ರಷ್ಟಾಚಾರ ಆರೋಪದಡಿ ಪ್ರಸಕ್ತ ವರ್ಷ 22 ಪೊಲೀಸರನ್ನು ಅಮಾನತು ಮಾಡಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

ಕಮಲ್ ಪಂತ್

'ಫೇಸ್‌ಬುಕ್‌'ನಲ್ಲಿ ಶನಿವಾರ ನೇರಪ್ರಸಾರದಲ್ಲಿ ಪಾಲ್ಗೊಂಡಿದ್ದ ಕಮಲ್ ಪಂತ್, ಸಾರ್ವಜನಿಕರ ಸಮಸ್ಯೆ ಆಲಿಸಿದರು. ಸಾರ್ವಜನಿಕರೊಬ್ಬರು, 'ಹಲವು ಪೊಲೀಸರು ಲಂಚಕ್ಕೆ ಬೇಡಿಕೆ ಇಡುತ್ತಿದ್ದಾರೆ' ಎಂದು ದೂರಿದರು.

ಕಮಲ್ ಪಂತ್, 'ಲಂಚ ಕೇಳಿದವರ ವಿರುದ್ಧ ದೂರು ನೀಡಿ. ನಿಮ್ಮ ಹೆಸರು ಗೌಪ್ಯವಾಗಿರಿಸಲಾಗುವುದು. ತಪ್ಪಿತಸ್ಥ ಪೊಲೀಸರ ವಿರುದ್ಧ ಕಠಿಣ ಕ್ರಮ ನಿಶ್ಚಿತ' ಎಂದರು.

ಸ್ಥಳದಲ್ಲಿ ದಂಡ ವಿಧಿಸುವುದು ಅನಿವಾರ್ಯ: ಸಂಚಾರ ಪೊಲೀಸರ ಕಿರಿಕಿರಿ ಬಗ್ಗೆ ಹಲವು ಸಾರ್ವಜನಿಕರು ದೂರು ಹೇಳಿಕೊಂಡರು.

ಕಮಲ್ ಪಂತ್, 'ನಿಯಮ ಉಲ್ಲಂಘಿಸಿದವರಿಗೆ ನೋಟಿಸ್ ನೀಡಲಾಗುತ್ತಿದೆ. ಅಷ್ಟಾದರೂ ಬಹುತೇಕರು ದಂಡ ಪಾವತಿಸುತ್ತಿಲ್ಲ. ಹೀಗಾಗಿ, ಸ್ಥಳದಲ್ಲೇ ದಂಡ ವಿಧಿಸುವುದು ಅನಿವಾರ್ಯ' ಎಂದರು.

'ವಾಹನ ನಿಲುಗಡೆ ನಿಷೇಧಿಸಿರುವ ಜಾಗದಲ್ಲಿ ನಿಲ್ಲಿಸುವ ಹಾಗೂ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಉಂಟು ಮಾಡುವ ವಾಹನಗಳನ್ನು ಟೋಯಿಂಗ್ ಮಾಡಲಾಗುತ್ತಿದೆ. ಟೋಯಿಂಗ್ ಸಿಬ್ಬಂದಿ ಮೇಲೆ ಹಲ್ಲೆ ಮಾಡುವುದು ಹಾಗೂ ಬೆದರಿಸುವುದು ಸರಿಯಲ್ಲ' ಎಂದು ಕಮಲ್ ಪಂತ್ ಎಚ್ಚರಿಸಿದರು.

ಸಂಚಾರ ಪೊಲೀಸರಿಗೂ ಸೂಚನೆ ನೀಡಿದ ಕಮಿಷನರ್, 'ನೋ ಪಾರ್ಕಿಂಗ್ ಅಥವಾ ನಡುರಸ್ತೆಯಲ್ಲಿ ವಾಹನ ನಿಲ್ಲಿಸಿರುವುದನ್ನು ವಿಡಿಯೊ ಮಾಡಿಕೊಳ್ಳಬೇಕು. ನಂತರ, ಧ್ವನಿವರ್ಧಕದಲ್ಲಿ ವಾಹನದ ನೋಂದಣಿ ಸಂಖ್ಯೆ ಕೂಗಬೇಕು. ಬಳಿಕವೇ ವಾಹನ ಟೋಯಿಂಗ್ ಮಾಡಬೇಕು' ಎಂದು ಸ್ಪಷ್ಟಪಡಿಸಿದರು.

ಪ್ರಜಾವಾಣಿ DH
EXAM ಪರಿಚಯಿಸುತ್ತಿದ್ದೇವೆ
MASTERMIND

ಪ್ರಿಯ ಸ್ಪರ್ಧಾರ್ಥಿಗಳೇ,

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದೀರಾ? ರ‍್ಯಾಂಕ್, ಅತ್ಯುತ್ತಮ ಅಂಕ ಗಳಿಸಿ ಸರ್ಕಾರಿ ಉದ್ಯೋಗ ಗಿಟ್ಟಿಸುವ ಕನಸು ಕಂಡಿದ್ದೀರಾ? ಹಾಗಾದರೆ ನಿಮ್ಮ ಕನಸನ್ನು ನನಸಾಗಿಸಲು ನಿಮ್ಮ ಹೆಮ್ಮೆಯ 'ಪ್ರಜಾವಾಣಿ –ಡೆಕ್ಕನ್ ಹೆರಾಲ್ಡ್' ಇನ್ನೊಂದು ಮಹತ್ವದ ಹೆಜ್ಜೆ ಇಟ್ಟಿವೆ ಯುಪಿಎಸ್‌ಸಿ, ಕೆಪಿಎಸ್‌ಸಿ, ಬ್ಯಾಂಕಿಂಗ್, ರೈಲ್ವೆ, ಸಬ್ ಇನ್‌ಸ್ಪೆಕ್ಟರ್, ಪೊಲೀಸ್ ಕಾನ್‌ಸ್ಟೇಬಲ್, ಎಫ್‌ಡಿಎ.. ಹೀಗೆ ಎಲ್ಲಾ ಬಗೆಯ ಸ್ಪರ್ಧಾತ್ಮಕ ಪರೀಕ್ಷೆಗಳ ಓದಿಗೆ ನೆರವು ನೀಡುವ 'ಎಕ್ಸಾಂ ಮಾಸ್ಟರ್‌ಮೈಂಡ್' ಇ-ಪೇಪರ್ ಹೊರತರುತ್ತಿವೆ.

ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಯಲ್ಲಿರುವ ಮತ್ತು ವಾರದ ಐದು ದಿನ ಲಭ್ಯವಿರುವ 'ಎಕ್ಸಾಂ ಮಾಸ್ಟರ್‌ಮೈಂಡ್' ಈ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಸೂಕ್ತ ಅಧ್ಯಯನ ಸಾಮಗ್ರಿಯನ್ನು ಒಳಗೊಂಡಿದೆ. **ಜನರಲ್ ಸ್ಟಡೀಸ್, ಸ್ಟ್ಯಾಟಿಕ್, ಕರೆಂಟ್ ಅಫೇರ್ಸ್, ರೀಸನಿಂಗ್ ಎಬಿಲಿಟಿ, ಇಂಗ್ಲಿಷ್ ಲ್ಯಾಂಗ್ವೇಜ್ ಆ್ಯಂಡ್ ವರ್ಬಲ್ ಎಬಿಲಿಟಿ, ಕ್ವಾಲಿಟೇಟಿವ್ ಆಪ್ಟಿಟ್ಯೂಡ್, ಪ್ರಬಂಧಗಳು, ಉಪಯುಕ್ತ ಸಲಹೆಗಳು** ಮುಂತಾದವುಗಳ ಜೊತೆಗೆ ಮಾದರಿ ಪ್ರಶ್ನೋತ್ತರಗಳನ್ನು ಹಾಗೂ ಪೂರಕವಾದ ಆಡಿಯೊ ಮತ್ತು ವಿಡಿಯೊಗಳನ್ನು ನೀಡಲಿದೆ.

ಚಂದಾದಾರರಾಗಲು ಸಂಪರ್ಕಿಸಿ
ಎಕ್ಸಿಕ್ಯೂಟಿವ್ ಹೆಸರು: ಅರುಣ್ ಸ್ಟ್ಯಾನ್ಲಿ
ಮೊಬೈಲ್: 98454 42703
bit.ly/emmstudent

ಚಾಕುವಿನಿಂದ ಇರಿದು ಯುವಕನ ಕೊಲೆ

ಬೆಂಗಳೂರು: ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ರವಿ (28) ಎಂಬಾತನನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಪರಿಚಯಸ್ಥರೇ ಕೃತ್ಯ ಎಸಗಿರುವ ಅನುಮಾನ ವ್ಯಕ್ತವಾಗಿದೆ.

'ವ್ಯಾಸಂಗ ಮುಗಿಸಿದ್ದ ರವಿ, ಕೆಲಸಕ್ಕಾಗಿ ಹುಡುಕಾಟ ನಡೆಸುತ್ತಿದ್ದರು. ಆಚಾರ್ಯ ಕಾಲೇಜು ಮೈದಾನ ಸಮೀಪದಲ್ಲಿ ಶನಿವಾರ ಸಂಜೆ ಅವರ ಕೊಲೆಯಾಗಿದೆ. ಹಣಕಾಸಿನ ವಿಚಾರಕ್ಕಾಗಿ ಕೊಲೆ ನಡೆದಿರುವ ಶಂಕೆ ಇದೆ' ಎಂದು ಪೊಲೀಸರು ತಿಳಿಸಿದರು.

ಪತ್ರಿಕಾ ವಿತರಕರು ಸೇರಿ ಹಲವರನ್ನು ದೋಚಿದ್ದ ಪ್ರಕರಣ

'ಸಿಬಿಡಿ'ಯಲ್ಲಿ ಸುಲಿಗೆ; ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧ ಸುತ್ತಮುತ್ತಲಿನ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ (ಸಿಬಿಡಿ) ಸಾರ್ವಜನಿಕರನ್ನು ಅಡ್ಡಗಟ್ಟಿ ಚಾಕು ತೋರಿಸಿ ಬೆದರಿಸಿ ಸುಲಿಗೆ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಕಮರ್ಷಿಯಲ್ ಸ್ಟ್ರೀಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಗಳಾದ ನದೀಂ (20), ಇರ್ಫಾನ್ (20) ಹಾಗೂ ಸಲೀಂ (20) ಬಂಧಿತರು. ಅವರಿಂದ ₹ 1 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನಿತ್ಯವೂ ನಸುಕಿನಲ್ಲಿ ಸಿಬಿಡಿ ಪ್ರದೇಶಗಳಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಸಾರ್ವಜನಿಕರನ್ನು ಅಡ್ಡಗಟ್ಟಿ ಚಾಕು ತೋರಿಸಿ ಬೆದರಿಸುತ್ತಿದ್ದರು. ನಂತರ, ಮೊಬೈಲ್ ಹಾಗೂ ನಗದು ದೋಚಿಕೊಂಡು ಪರಾರಿಯಾಗುತ್ತಿದ್ದರು. ದಾರಿಯುದ್ದಕ್ಕೂ ಆರೋಪಿಗಳು ಕೃತ್ಯ ಎಸಗುತ್ತಿದ್ದರು. ಅಶೋಕನಗರ, ಕಮರ್ಷಿಯಲ್ ಸ್ಟ್ರೀಟ್, ಶಿವಾಜಿನಗರ ಹಾಗೂ ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳು ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ತಿಳಿಸಿದರು.

ಪತ್ರಿಕಾ ವಿತರಕರ ಸುಲಿಗೆ: 'ಅಶೋಕನಗರ ಠಾಣೆ ವ್ಯಾಪ್ತಿಯಲ್ಲಿ ಆ. 9ರಂದು ನಸುಕಿನ 4.15ರ ಸುಮಾರಿಗೆ ಪತ್ರಿಕಾ ವಿತರಕ ಎಸ್.ಟಿ. ತಿಮ್ಮಪ್ಪ ಎಂಬುವರ ಅಡ್ಡಗಟ್ಟಿದ್ದ ಆರೋಪಿಗಳು, ಸುಲಿಗೆ ಮಾಡಿ ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣವೂ ದಾಖಲಾಗಿತ್ತು' ಎಂದೂ ಪೊಲೀಸರು ವಿವರಿಸಿದರು.

'ಆಟೊದಲ್ಲಿ ಪತ್ರಿಕೆಗಳ ಬಂಡಲ್ ಹಾಕಿಕೊಂಡು ತಿಮ್ಮಪ್ಪ ರಸ್ತೆಯಲ್ಲಿ ಹೊರಟಿದ್ದರು. ಬ್ರಿಗೇಡ್ ರಸ್ತೆಯಲ್ಲಿರುವ ಔಷಧಿ ಮಳಿಗೆಯೊಂದರ ಎದುರು ಪಲ್ಸರ್ ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು, ಆಟೊ ಅಡ್ಡಗಟ್ಟಿದ್ದರು. ಸ್ಟೇರಿಂಗ್‌ಗೆ ಕಟ್ಟಿದ್ದ ಮೊಬೈಲ್ ಕಿತ್ತುಕೊಳ್ಳಲು ಯತ್ನಿಸಿ ವಿಫಲರಾಗಿದ್ದರು. ಜೇಬಿಗೆ ಕೈ ಹಾಕಿ ₹ 2,000 ನಗದು ಕಿತ್ತುಕೊಂಡಿದ್ದರು. ತಿಮ್ಮಪ್ಪ ಅವರ ತಲೆಗೆ ಚಾಕುವಿನಿಂದ ಚುಚ್ಚಿದ್ದರು' ಎಂದೂ ಪೊಲೀಸರು ಹೇಳಿದರು.

'ಅದೇ ದಿನವೇ ಹಾಲು ಮಾರಾಟಗಾರ ಅಶ್ವಿನ್‌ಕುಮಾರ್ ಶರ್ಮ ಎಂಬುವವರನ್ನೂ ಸುಲಿಗೆ ಮಾಡಿದ್ದ ಆರೋಪಿಗಳು, ₹15 ಸಾವಿರ ಕಿತ್ತೊಯ್ದಿದ್ದರು' ಎಂದೂ ತಿಳಿಸಿದರು.

ಗಸ್ತು ಹೆಚ್ಚಿಸಿದ್ದ ಪೊಲೀಸರು

ಕೇಂದ್ರ ಹಾಗೂ ಪೂರ್ವ ವಿಭಾಗ ವ್ಯಾಪ್ತಿಯ ಸಿಬಿಡಿ ಪ್ರದೇಶದಲ್ಲಿ ಸುಲಿಗೆ ಪ್ರಕರಣಗಳು ಹೆಚ್ಚಾಗಿದ್ದರಿಂದ ಪೊಲೀಸರ ಗಸ್ತು ಹೆಚ್ಚಿಸುವಂತೆ ಸ್ಥಳೀಯ ನಿವಾಸಿಗಳು ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಮನವಿ ಸಲ್ಲಿಸಿದ್ದರು. ಅದರಂತೆ ಗಸ್ತು ಹೆಚ್ಚಿಸಲಾಗಿತ್ತು. ಕೆಲ ಸುಳಿವು ಆಧರಿಸಿ ತನಿಖೆ ಕೈಗೊಂಡಿದ್ದ ಕಮರ್ಷಿಯಲ್ ಸ್ಟ್ರೀಟ್ ಪೊಲೀಸರು, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ವಸತಿ ಸಚಿವ ವಿ.ಸೋಮಣ್ಣ ಹೇಳಿಕೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಟೇಕಾಫ್ ಆಗಿದೆ. ಇದರಲ್ಲಿ ಎರಡು ಮಾತಿಲ್ಲ. ಬೊಮ್ಮಾಯಿ ಅತ್ಯುತ್ತಮ ಕೆಲಸ ಮಾಡುತ್ತಿದ್ದಾರೆ.

'ಸಿದ್ದರಾಮಯ್ಯ ಇನ್ನಾದರೂ ಸರಿಯಾಗಿ ಮಾತನಾಡಲಿ'

ದಾವಣಗೆರೆ: 'ಸಿದ್ದರಾಮಯ್ಯ ಅವರು ಜಿಂದಾಲ್ ಪ್ರಕೃತಿ ಚಿಕಿತ್ಸಾಲಯಕ್ಕೆ ಚಿಕಿತ್ಸೆಗೆ ಹೋಗುತ್ತಿದ್ದಾರೆ ಎಂಬ ಮಾಹಿತಿ ಇದೆ. ಅಲ್ಲಿಗೆ ಹೋಗಿ ಬಂದ ಬಳಿಕವಾದರೂ ಸರಿಯಾಗಿ ಮಾತನಾಡಲಿ' ಎಂದು ವಸತಿ ಸಚಿವ ವಿ.ಸೋಮಣ್ಣ ವ್ಯಂಗ್ಯವಾಡಿದ್ದಾರೆ.

'ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದವರು. ಐದು ವರ್ಷ ಆಡಳಿತ ನಡೆಸಿದವರು. ಎಲ್ಲಾ ವಿಚಾರವೂ ಅವರಿಗೆ ಗೊತ್ತಿದೆ. ಎಲ್ಲೋ ಕುಳಿತು ಏನೋ ಮಾತನಾಡುತ್ತಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಟೇಕಾಫ್ ಆಗಿದೆ. ಇದರಲ್ಲಿ ಎರಡು ಮಾತಿಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಕೋವಿಡ್ ಪಿಡುಗು, ಪ್ರವಾಹ ಪರಿಸ್ಥಿತಿಯನ್ನು ರಾಜ್ಯ ಸರ್ಕಾರ ಸಮರ್ಥವಾಗಿ ನಿಭಾಯಿಸುತ್ತಿದೆ. ಬೊಮ್ಮಾಯಿ ಅವರು ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಇಂಥ ವೇಳೆಯಲ್ಲಿ ಸುಮ್ಮನೆ ಆರೋಪ ಮಾಡುವುದು ಸರಿಯಲ್ಲ. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಜನಪರ ಕೆಲಸ ಮಾಡಿದ್ದಾರೆ. ಬೊಮ್ಮಾಯಿ ಅತ್ಯುತ್ತಮ ಕೆಲಸ ಮಾಡುತ್ತಿದ್ದಾರೆ. ನಮ್ಮ ಕೆಲಸ ನಾವು ಮಾಡ್ತೇವೆ. ಉಳಿದಿದ್ದು ಜನರು ತೀರ್ಮಾನ ಮಾಡುತ್ತಾರೆ' ಎಂದು ಹೇಳಿದರು.

ಆರೋಪಿ ಬೆನ್ನಟ್ಟಿ ಹಿಡಿದ ಜನರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ವಿಭಾಗ ವ್ಯಾಪ್ತಿಯಲ್ಲಿ ಮಹಿಳೆಯರ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗುತ್ತಿದ್ದ ಆರೋಪಿ ಇಮ್ರಾನ್ ಖಾನ್ ಎಂಬಾತನನ್ನು ಸಾರ್ವಜನಿಕರೇ ಬೆನ್ನಟ್ಟಿ ಹಿಡಿದು ಚಾಮರಾಜಪೇಟೆ ಪೊಲೀಸರಿಗೆ ಒಪ್ಪಿಸಿದ್ದಾರೆ.

'ಸರ ಕಳವು ಮಾಡುತ್ತಿದ್ದ ಆರೋಪದಡಿ ಇಮ್ರಾನ್ ಖಾನ್‌ನನ್ನು ಬಂಧಿಸಲಾಗಿದೆ. ಆತನಿಂದ ₹2 ಲಕ್ಷ ಮೌಲ್ಯದ ಚಿನ್ನಾಭರಣ, ಎರಡು ದ್ವಿಚಕ್ರ ವಾಹನ, 220 ಗ್ರಾಂ ಗಾಂಜಾ ಹಾಗೂ ಮಚ್ಚು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಗಾಂಜಾ ಮತ್ತಿನಲ್ಲಿದ್ದ ಆರೋಪಿ, ಶುಕ್ರವಾರ ರಾತ್ರಿ ವಿಜಯನಗರ ಹಾಗೂ ಕಾಟನ್‌ಪೇಟೆ ಠಾಣೆ ವ್ಯಾಪ್ತಿಯಲ್ಲಿ ಮಹಿಳೆಯರಿಬ್ಬರ ಸರ ಕಳವು ಮಾಡಿದ್ದ. ನಂತರ, ದ್ವಿಚಕ್ರ ವಾಹನದಲ್ಲಿ ಚಾಮರಾಜಪೇಟೆ ಠಾಣೆ ವ್ಯಾಪ್ತಿಗೆ ಬಂದು ಮಹಿಳೆಯೊಬ್ಬರ ಸರ ಕಿತ್ತುಕೊಳ್ಳಲು ಯತ್ನಿಸಿ ವಿಫಲನಾಗಿದ್ದ.' 'ಮಹಿಳೆ ರಕ್ಷಣೆಗಾಗಿ ಕೂಗಾಡಿದ್ದರು. ಆರೋಪಿ ಸ್ಥಳದಿಂದ ಕಾಲ್ಕಿತ್ತಿದ್ದ. ಅದೇ ಮಾರ್ಗದಲ್ಲಿ ಹೊರಟಿದ್ದ ಇಬ್ಬರು ದ್ವಿಚಕ್ರ ವಾಹನದಲ್ಲಿ ಆರೋಪಿಯನ್ನು ಬೆನ್ನಟ್ಟಿದ್ದರು. ಮಾರ್ಗಮಧ್ಯೆಯೇ ಆಟೊ ಚಾಲಕರು, ದ್ವಿಚಕ್ರ ವಾಹನವನ್ನು ಅಡ್ಡಗಟ್ಟಿ ಆರೋಪಿಯನ್ನು ಹಿಡಿದಿದ್ದರು. ಗಸ್ತಿನಲ್ಲಿದ್ದ ಪೊಲೀಸರು ಸ್ಥಳಕ್ಕೆ ಹೋಗಿ ಆರೋಪಿಯನ್ನು ವಶಕ್ಕೆ ಪಡೆದರು' ಎಂದೂ ಪೊಲೀಸರು ತಿಳಿಸಿದರು.

'ದ್ವಿಚಕ್ರ ವಾಹನವನ್ನು ಕಳವು ಮಾಡಿದ್ದ ಆರೋಪಿ, ಅದನ್ನೇ ಕೃತ್ಯಕ್ಕೆ ಬಳಸಿದ್ದ' ಎಂದೂ ಹೇಳಿದರು.

ಪ್ರಶಂಸಾ ಪತ್ರ: ಆರೋಪಿಯನ್ನು ಬೆನ್ನಟ್ಟಿ ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಇಬ್ಬರು ಸ್ಥಳೀಯರನ್ನು ಸನ್ಮಾನಿಸಿರುವ ಡಿಸಿಪಿ ಸಂಜೀವ್ ಪಾಟೀಲ, ಪ್ರಶಂಸಾ ಪತ್ರ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

₹52 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

ಜಪ್ತಿ ಮಾಡಲಾದ ಚಿನ್ನಾಭರಣ

ಬೆಂಗಳೂರು: ನಗರದಲ್ಲಿ ಸರ ಕಳವು ಮಾಡಿ ಹೊರ ಜಿಲ್ಲೆ ಹಾಗೂ ರಾಜ್ಯಗಳಲ್ಲಿ ಚಿನ್ನಾಭರಣ ಮಾರುತ್ತಿದ್ದ ಮೂವರು ಆರೋಪಿಗಳನ್ನು ಸಿಸಿಬಿಯ ಮಹಿಳಾ ಸಂರಕ್ಷಣಾ ದಳದ ಅಧಿಕಾರಿಗಳು ಬಂಧಿಸಿದ್ದಾರೆ.

'ಚಂದ್ರಶೇಖರ್, ಅಚ್ಯುತ್ ಕುಮಾರ್, ಶಿವರಾಜ್ ಬಂಧಿತರು. ಅವರಿಂದ ₹ 52 ಲಕ್ಷ ಮೌಲ್ಯದ 1 ಕೆ.ಜಿ 90 ಗ್ರಾಂ ತೂಕದ 18 ಚಿನ್ನದ ಸರಗಳನ್ನು ಜಪ್ತಿ ಮಾಡಿದ್ದಾರೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ಕೆ.ಆರ್.ಪುರ, ಮಹಾಲಕ್ಷ್ಮಿ ಲೇಔಟ್, ಯಲಹಂಕ ನ್ಯೂ ಟೌನ್, ಬನಶಂಕರಿ, ಮೈಕೊ ಲೇಔಟ್, ಹೆಬ್ಬಾಳ, ಬೈಯಪ್ಪನಹಳ್ಳಿ, ಬ್ಯಾಟರಾಯನಪುರ, ಸದಾಶಿವನಗರ, ಪೀಣ್ಯ, ಸುಬ್ರಮಣ್ಯಪುರ, ಯಶವಂತಪುರ ಹಾಗೂ ವಿವೇಕನಗರ ಠಾಣೆ ವ್ಯಾಪ್ತಿಯಲ್ಲಿ 2016ರಿಂದಲೇ ಆರೋಪಿಗಳು ಕೃತ್ಯ ಎಸಗಿದ್ದರು. ಯಾವುದೇ ಸುಳಿವು ಉಳಿಸದೇ ಪರಾರಿಯಾಗುತ್ತಿದ್ದರು.'

'ಬೆಳಿಗ್ಗೆ ಹಾಗೂ ಸಂಜೆ ರಸ್ತೆಯಲ್ಲಿ ಒಂಟಿಯಾಗಿ ಓಡಾಡುವ ಮಹಿಳೆಯರು ಮತ್ತು ವೃದ್ಧೆಯರನ್ನು ಗುರಿಯಾಗಿಸಿಕೊಂಡು ಆರೋಪಿಗಳು ಸರ ಕಳವು ಮಾಡುತ್ತಿದ್ದರು. ಕದ್ದ ಚಿನ್ನಾಭರಣವನ್ನು ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ತೆಗೆದುಕೊಂಡು ಹೋಗಿ ಮಾರುತ್ತಿದ್ದರು. ಬಂದ ಹಣವನ್ನು ಹಂಚಿಕೊಂಡು ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದೂ ತಿಳಿಸಿದರು.

'ಆರೋಪಿಗಳ ಬಳಿ ಚಿನ್ನ ಖರೀದಿಸಿದ್ದ ಹಿರಿಯೂರಿನ ನವೀನ್ ಎಂಬಾತನನ್ನೂ ಬಂಧಿಸಲಾಗಿದೆ. ತುಮಕೂರು ಹಾಗೂ ಬೆಳಗಾವಿಗೆ ಹೋಗಿ ಆಭರಣ ಜಪ್ತಿ ಮಾಡಿಕೊಂಡು ಬರಲಾಗಿದೆ' ಎಂದೂ ಅಧಿಕಾರಿ ಹೇಳಿದರು.

ಪ್ರತಿ ಜಿಲ್ಲೆಯಲ್ಲಿ 500 ಎಕರೆ ಕೈಗಾರಿಕಾ ವಸಾಹತು: ನಿರಾಣಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಕೃಷಿಗೆ ಯೋಗ್ಯವಿರದ ಜಮೀನು ಸ್ವಾಧೀನಪಡಿಸಿಕೊಂಡು ರಾಜ್ಯದ ಪ್ರತಿ ಜಿಲ್ಲೆಯಲ್ಲಿ 500 ಎಕರೆ ಯಲ್ಲಿ ಕೈಗಾರಿಕಾ ವಸಾಹತು ನಿರ್ಮಿಸಲು ಯೋಜನೆ ರೂಪಿಸಲಾಗುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ ನಿರಾಣಿ ತಿಳಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯಲ್ಲಿ ಗದ್ದನಕೇರಿ-ಕೆರೂರ ಮಾರ್ಗದಲ್ಲಿ ಕೃಷಿಗೆ ಯೋಗ್ಯವಿರದ ಜಮೀನು ಸ್ವಾಧೀನಪಡಿಸಿಕೊಂಡು ಹೊಸ ಕೈಗಾರಿಕಾ ಪ್ರದೇಶ ಸ್ಥಾಪಿಸಲಾಗುವುದು. ಅದಕ್ಕಾಗಿ ಸೂಕ್ತ ಭೂಮಿ ಗುರುತಿಸಲು ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಹೇಳಿದರು.

ಮುರುಗೇಶ ನಿರಾಣಿ

ರಾಜ್ಯದಲ್ಲಿ ಲಕ್ಷಾಂತರ ಉದ್ಯೋಗ ಸೃಷ್ಟಿಸಲು ಯಶಸ್ವಿ ಉದ್ಯಮಿಗಳಿಗೆ ಅಗತ್ಯವಿರುವ ಎಲ್ಲ ಸೌಕರ್ಯ ದೊರಕಿಸಿ ಕೊಡಲು ಸಿಂಗಲ್ ವಿಂಡೋ ಸಿಸ್ಟಮ್ ವ್ಯವಸ್ಥೆ, ಉದ್ಯಮಿಗಳ ಸಮಸ್ಯೆ ನಿವಾರಣೆಗೆ ಕೈಗಾರಿಕಾ ಅದಾಲತ್, ಲ್ಯಾಂಡ್ ಬ್ಯಾಂಕ್ ನಿರ್ಮಿಸಲಾಗುವುದು. ಕೈಗಾರಿಕೆ ವಸಾಹತು ಪಕ್ಕದಲ್ಲೇ ಉದ್ಯಮಿಗಳ ವಸತಿಗೆ ನಗರಗಳನ್ನು ನಿರ್ಮಿಸಲಾಗುವುದು ಎಂದರು.

ರಾಜ್ಯದಲ್ಲಿ ಈ ಹಿಂದೆ ಎರಡು ಗ್ಲೋಬಲ್ ಮೀಟ್‌ಗಳನ್ನು ನಡೆಸಿ 15 ಲಕ್ಷ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸಿ ಕೊಡಲಾಯಿತು. 2022ರಲ್ಲಿ ಇನ್ವೆಸ್ಟ್ ಕರ್ನಾಟಕ ನಡೆಸಿ ವಿಶ್ವದ ಉದ್ಯಮಿಗಳನ್ನು ಆಕರ್ಷಿಲಾಗುವುದು ಎಂದು ನಿರಾಣಿ ತಿಳಿಸಿದರು.

ರಾಜ್ಯದ ಎಲ್ಲ ಕೈಗಾರಿಕಾ ಅಸೋಸಿಯೇಷನ್‌ಗಳ ಜೊತೆಗೆ 'ಇನ್‌ವೆಸ್ಟ್ ಕರ್ನಾಟಕ' ಕುರಿತಂತೆ ದುಂಡು ಮೇಜಿನ ಸಭೆ ಕರೆಯಲಾಗುವುದು. ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ಭೂಮಿ ಗುರುತಿಸಲು ಜಿಲ್ಲಾಧಿಕಾರಿಗೆ ತಿಳಿಸಲಾಗಿದೆ ಎಂದು ಹೇಳಿದರು.

ರನ್ನ ಶುಗರ್ಸ್ ಕುರಿತಂತೆ ಮಾತನಾಡಿದ ನಿರಾಣಿ, ಸರ್ಕಾರದಿಂದ ಒಪ್ಪಿಗೆ ಪತ್ರ ಬಂದ ತಕ್ಷಣವೇ ರನ್ನ ಶುಗರ್ಸ್ ಸಮಸ್ಯೆ ಇತ್ಯರ್ಥಕ್ಕೆ ತಕ್ಷಣವೇ ಕ್ರಮಕೈಗೊಳ್ಳಲಾಗುವುದು ಎಂದರು.

ಜಿಲ್ಲಾಧಿಕಾರಿ ಕ್ಯಾಪ್ಟನ್ ಡಾ.ಕೆ. ರಾಜೇಂದ್ರ, ಜಿ.ಪಂ.ಸಿಇಒ ಟಿ.ಭೂಬಾಲನ್, ಕೆಐಎಡಿಬಿ ಇಇ ಲಕ್ಷ್ಮೀಶ ಉಪಸ್ಥಿತರಿದ್ದರು.

ಕೊಲೆಗೆ ಯತ್ನ; ಆರೋಪಿ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆಗೆ ಯತ್ನಿಸಿ ಪರಾರಿಯಾಗಿದ್ದ ರೌಡಿ ಅವಿನಾಶ್‌ನನ್ನು (24) ಸಂಜಯನಗರ ಪೊಲೀಸರು ಕಾಲಿಗೆ ಗುಂಡು ಹಾರಿಸಿ ಶನಿವಾರ ಸೆರೆ ಹಿಡಿದಿದ್ದಾರೆ.

'ಇಸ್ರೊ ವಸತಿ ಸಮುಚ್ಚಯ ಬಳಿ ಜುಲೈ 29ರಂದು ಮುನಿರಾಜು ಎಂಬುವರ ಕೊಲೆಗೆ ಅವಿನಾಶ್ ಯತ್ನಿಸಿದ್ದ. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ಬಂಧಿಸಲು ಹೋದ ಪೊಲೀಸರ ಮೇಲೆಯೇ ಆತ ಹಲ್ಲೆ ಮಾಡಿದ್ದ. ಆತ್ಮರಕ್ಷಣೆಗಾಗಿ ಇನ್‌ಸ್ಪೆಕ್ಟರ್ ಜಿ. ಬಾಲರಾಜ್ ಅವರು ಆರೋಪಿ ಎಡ ಕಾಲಿಗೆ ಗುಂಡು ಹಾರಿಸಿದ್ದಾರೆ' ಎಂದು ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ಹೇಳಿದರು.

ರೌಡಿ ಅವಿನಾಶ್

'ಗಾಯಗೊಂಡಿರುವ ಅವಿನಾಶ್‌ನನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಆತನ ಹಲ್ಲೆಯಿಂದ ಗಾಯಗೊಂಡಿರುವ ಕಾನ್‌ಸ್ಟೆಬಲ್ ಸಂತೋಷ್ ಅವರಿಗೂ ಚಿಕಿತ್ಸೆ ಕೊಡಿಸಲಾಗುತ್ತಿದೆ' ಎಂದೂ ತಿಳಿಸಿದರು.

22 ದಿನದಿಂದ ಹುಡುಕಾಟ: 'ರೌಡಿ ಅವಿನಾಶ್ ವಿರುದ್ಧ ಕೊಲೆ ಹಾಗೂ ಕೊಲೆ ಯತ್ನ ಸೇರಿದಂತೆ 5 ಪ್ರಕರಣಗಳು ದಾಖಲಾಗಿದ್ದವು. ರಾಮಮೂರ್ತಿನಗರ, ಯಲಹಂಕ ಹಾಗೂ ಹೆಬ್ಬಾಳ ಪೊಲೀಸರಿಗೆ ಆತ ಬೇಕಿದ್ದ' ಎಂದು ಅಧಿಕಾರಿ ಹೇಳಿದರು.

'ಸಂಜಯನಗರ ಠಾಣೆ ವ್ಯಾಪ್ತಿಯಲ್ಲಿ ಕೊಲೆ ಯತ್ನ ನಡೆಸಿದ್ದ ಅವಿನಾಶ್, ತಲೆಮರೆಸಿಕೊಂಡು ಓಡಾಡುತ್ತಿದ್ದ. ಆತನಿಗಾಗಿ 22 ದಿನದಿಂದ ಹುಡುಕಾಟ ನಡೆದಿತ್ತು. ಗುಡ್ಡದಹಳ್ಳಿ ಮೈದಾನ ಬಳಿ ಶನಿವಾರ ಬೆಳಿಗ್ಗೆ ಆತ ಕಾಣಿಸಿಕೊಂಡಿದ್ದ. ಮಾಹಿತಿ ಬರುತ್ತಿದ್ದಂತೆ ಇನ್‌ಸ್ಪೆಕ್ಟರ್ ನೇತೃತ್ವದ ತಂಡ ಸ್ಥಳಕ್ಕೆ ಹೋಗಿತ್ತು.'

'ಪೊಲೀಸರಿಂದ ತಪ್ಪಿಸಿಕೊಳ್ಳಲು ಯತ್ನಿಸಿದ್ದ ಅವಿನಾಶ್, ಕಾನ್‌ಸ್ಟೆಬಲ್ ಸಂತೋಷ್ ಮೇಲೆ ಹಲ್ಲೆ ಮಾಡಿದ್ದ. ಗಾಳಿಯಲ್ಲಿ ಗುಂಡು ಹಾರಿಸಿದ್ದ ಇನ್‌ಸ್ಪೆಕ್ಟರ್ ಶರಣಾಗುವಂತೆ ಎಚ್ಚರಿಸಿದ್ದರು. ಅವರ ಮೇಲೆಯೇ ಆರೋಪಿ ದಾಳಿ ಮಾಡಲು ಮುಂದಾಗಿದ್ದ. ಅದೇ ಸಂದರ್ಭದಲ್ಲೇ ಆತನ ಕಾಲಿಗೆ ಗುಂಡು ಹಾರಿಸಲಾಗಿದೆ' ಎಂದೂ ಅಧಿಕಾರಿ ವಿವರಿಸಿದರು.

'ಸ್ನೇಹಿತನ ಜೊತೆ ಸೇರಿ ಸುಪಾರಿ ನೀಡಿದ್ದ ಬಾಲಕಿ'

'ಹಲ್ಲೆಗೀಡಾಗಿದ್ದ ಮುನಿರಾಜು, ಖಾಸಗಿ ಕಂಪನಿ ಉದ್ಯೋಗಿ. ಹೆಬ್ಬಾಳದ ಮಹಿಳೆಯೊಬ್ಬರ ಜೊತೆ ಸಲುಗೆ ಇಟ್ಟುಕೊಂಡಿದ್ದ. ಆಕೆಯ ಪುತ್ರಿಯಾದ ಬಾಲಕಿಗೂ ಕಿರುಕುಳ ನೀಡುತ್ತಿದ್ದರು. ಅದರಿಂದ ಬೇಸತ್ತ ಬಾಲಕಿ, ತನ್ನ ಸ್ನೇಹಿತನ ಮೂಲಕ ರೌಡಿ ಅವಿನಾಶ್‌ನನ್ನು ಸಂಪರ್ಕಿಸಿ ಸುಪಾರಿ ನೀಡಿದ್ದಳು. ಅದರಂತೆ ಅವಿನಾಶ್, ಮುನಿರಾಜು ಕೊಲೆಗ ಯತ್ನಿಸಿದ್ದ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ತ್ಯಾಜ್ಯದ ರಾಶಿ...

ವರಮಹಾಲಕ್ಷ್ಮಿ ಹಬ್ಬದ ಮರುದಿನವಾದ ಶನಿವಾರ ಬಾಳೆ ಕಂಬ, ಮಾವಿನ ಎಲೆಗಳು ಮತ್ತು ಹೂವಿನ ತ್ಯಾಜ್ಯವನ್ನು ಗಂಗಾನಗರ ಬಳಿಯ ಮುಖ್ಯರಸ್ತೆಯ ಬದಿಯಲ್ಲಿಯೇ ಎಸೆದಿದ್ದ ದೃಶ್ಯ ಶನಿವಾರ ಕಂಡು ಬಂತು ಪ್ರಜಾವಾಣಿ ಚಿತ್ರ

ಅತಿ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ನೇತೃತ್ವದಲ್ಲಿ ಹಕ್ಕೊತ್ತಾಯ

2ಎಗೆ ಪಂಚಮಸಾಲಿ ಸೇರ್ಪಡೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಾಮಾಜಿಕ, ಆರ್ಥಿಕ ಸಮೀಕ್ಷೆ (ಜಾತಿ ಗಣತಿ) ವರದಿ ಬಹಿರಂಗಕ್ಕೆ ಆಗ್ರಹ
- 2ಎಗೆ ಪಂಚಮಸಾಲಿ ಸಮುದಾಯ ಸೇರ್ಪಡೆಗೆ ವಿರೋಧ
- ಹಿಂದುಳಿದ ವರ್ಗಗಳಿಗೆ ಒಳ ಮೀಸಲಾತಿಗೆ ಬೇಡಿಕೆ

ತುಮಕೂರು: ಹಿಂದುಳಿದ ಪ್ರವರ್ಗ 2ಎಗೆ ವೀರಶೈವ ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಸೇರ್ಪಡೆ ಮಾಡಿ, ಮೀಸಲಾತಿ ಕಲ್ಪಿಸಬಾರದು. ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷೆ (ಜಾತಿ ಗಣತಿ) ವರದಿಯನ್ನು ಜನರ ಮುಂದಿಡಬೇಕು ಎಂದು ಅತಿ ಹಿಂದುಳಿದ ವರ್ಗಗಳ ಸಮುದಾಯದ ಮುಖಂಡರು ಒಮ್ಮತದಿಂದ ಒತ್ತಾಯಿಸಿದರು.

ಅತಿ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ನೇತೃತ್ವದಲ್ಲಿ ಶನಿವಾರ ನಡೆದ ಹಿಂದುಳಿದ ವರ್ಗಗಳ ಜಾಗೃತಿ ಸಭೆಯಲ್ಲಿ ಮಾತನಾಡಿದ ಮುಖಂಡರು, 'ಸದಾಶಿವ ಆಯೋಗದ ವರದಿಯಲ್ಲಿ ಒಳಮೀಸಲಾತಿ ಪ್ರಸ್ತಾಪಿಸಿರುವ ಮಾದರಿಯಲ್ಲಿ ಹಿಂದುಳಿದ ವರ್ಗಗಳಿಗೂ ಒಳಮೀಸಲಾತಿ ನೀಡಬೇಕು. ಕೆಲವೇ ಸಮುದಾಯ ಮೀಸಲಾತಿ ಸೌಲಭ್ಯ ಪಡೆದುಕೊಳ್ಳುತ್ತಿದ್ದು, ಹಿಂದುಳಿದವರಲ್ಲಿ ಅತಿ ಹಿಂದುಳಿದವರಿಗೂ ಸಾಮಾಜಿಕ ನ್ಯಾಯ ವ್ಯವಸ್ಥೆ ಜಾರಿಯಾಗಬೇಕು' ಎಂಬ ಹಕ್ಕೊತ್ತಾಯ ಮಂಡಿಸಿದರು.

ಶಾಸಕ ಡಾ.ಜಿ.ಪರಮೇಶ್ವರ ಮಾತನಾಡಿ, 'ಸರ್ಕಾರದಲ್ಲಿ ಹುದ್ದೆಗಳನ್ನು ಭರ್ತಿ ಮಾಡುವ ಬದಲು ಹೊರ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿಸಲಾಗುತ್ತಿದೆ. ಪರಿಶಿಷ್ಟರು ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯ, ಉದ್ಯೋಗ ಸಿಗದಂತೆ ಮಾಡುವ ಕುತಂತ್ರದ ಭಾಗವಾಗಿ ಹೊರ ಗುತ್ತಿಗೆ ವ್ಯವಸ್ಥೆ ಜಾರಿಗೆ ತರಲಾಗಿದೆ' ಎಂದು ಆತಂಕ ವ್ಯಕ್ತಪಡಿಸಿದರು.

'ಶೇ 3ರಷ್ಟು ಇರುವ ಒಂದು ಸಮುದಾಯ ಶೇ 10ರಷ್ಟು ಮೀಸಲಾತಿ ಪಡೆದುಕೊಂಡಿದೆ. ಹಿಂದುಳಿದ ನಿರ್ಲಕ್ಷಿತ ಸಮುದಾಯಗಳಿಗೆ ಮೀಸಲಾತಿ ಸಿಗುತ್ತಿಲ್ಲ. ಹಿಂದುಳಿದ ವರ್ಗಗಳಲ್ಲೂ ಕೆಲವೇ ಜಾತಿಗಳು ಮೀಸಲಾತಿ ಲಾಭ ಪಡೆದುಕೊಳ್ಳುತ್ತಿವೆ' ಎಂದು ಆರೋಪಿಸಿದರು.

ಸ್ಥಳೀಯ ಸಂಸ್ಥೆಗಳ ಮೀಸಲಾತಿ ವಿಧಾನವನ್ನು ವಿಧಾನಸಭೆ, ಲೋಕಸಭೆಗೂ ವಿಸ್ತರಿಸಬೇಕು ಎಂದು ಆಗ್ರಹಿಸಿದರು.

ಅತಿ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಗೌರವ ಸಲಹೆಗಾರ ಸಿ.ಎಸ್. ದ್ವಾರಕಾನಾಥ್, 'ಎಲ್ಲಾ ರೀತಿಯಲ್ಲೂ ಬಲಿಷ್ಠವಾಗಿರುವ ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2ಎ–ಗೆ ಸೇರಿಸಬಾರದು. ಹಿಂದುಳಿದ ವರ್ಗಗಳ ಆಯೋಗದ ಶಿಫಾರಸು ಇಲ್ಲದೆ ಮತ್ತೊಂದು ಸಮಿತಿಯಿಂದ ವರದಿ ಪಡೆದು ಸೇರಿಸುವುದು ಸರಿಯಲ್ಲ. ಪ್ರಬಲ ಸಮುದಾಯ 2ಎ ಮೀಸಲಾತಿ ವ್ಯಾಪ್ತಿಗೆ ಬಂದರೆ ಅಲ್ಲಿರುವ ಹಿಂದುಳಿದ ವರ್ಗಗಳ ಜನರ ಗತಿ ಏನಾಗಬೇಕು' ಎಂದು ಪ್ರಶ್ನಿಸಿದರು.

ತುಮಕೂರಿನಲ್ಲಿ ನಡೆದ ಹಿಂದುಳಿದ ವರ್ಗಗಳ ಜಾಗೃತಿ ಸಭೆಯನ್ನು ಗಿಡಕ್ಕೆ ನೀರೆಯುವ ಮೂಲಕ ಚಾಲನೆ ನೀಡಲಾಯಿತು. ಶಾಸಕ ಡಾ.ಜಿ.ಪರಮೇಶ್ವರ, ಮುಖಂಡರಾದ ಕಾಂತರಾಜು, ಕೆ.ಎನ್.ರಾಜಣ್ಣ, ಎಂ.ಸಿ.ವೇಣುಗೋಪಾಲ್, ಸಿ.ಎಸ್.ದ್ವಾರಕಾನಾಥ್, ವಿ.ಆರ್.ಸುದರ್ಶನ್, ಮುಖ್ಯಮಂತ್ರಿ ಚಂದ್ರು ಇತರರು ಭಾಗವಹಿಸಿದ್ದರು

ಸದಾಶಿವ ಆಯೋಗದ ವರದಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಒಳಮೀಸಲಾತಿ ನೀಡುವಂತೆ ಶಿಫಾರಸು ಮಾಡಲಾಗಿದೆ. ಅದೇ ಮಾದರಿಯಲ್ಲಿ ಹಿಂದುಳಿದ ವರ್ಗಗಳಲ್ಲಿ ಅತಿ ಹಿಂದುಳಿದವರಿಗೆ ಮೀಸಲಾತಿ ಸಿಗಬೇಕಾದರೆ ಜಾತಿಗಳ ಒಳ ವರ್ಗೀಕರಣ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಕಾಂತರಾಜು, 'ನಾನು ಅಧ್ಯಕ್ಷನಾಗಿದ್ದ ಸಮಯದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷೆ (ಜಾತಿ ಗಣತಿ) ವರದಿಯನ್ನು ಸಿದ್ಧಪಡಿಸಲಾಯಿತು. ಸರ್ಕಾರ ಬದಲಾಗಿ ಅಧಿಕಾರದಲ್ಲಿ ಮುಂದುವರಿಯುವ ಅವಕಾಶ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದ್ದರಿಂದ ವರದಿಯನ್ನು ಆಯೋಗದ ಸದಸ್ಯ ಕಾರ್ಯದರ್ಶಿಗೆ ಸಲ್ಲಿಸಲಾಗಿದೆ. ಅದನ್ನು ಮುಖ್ಯಮಂತ್ರಿ ಪಡೆದುಕೊಂಡು ಜನರ ಮುಂದಿಡಬೇಕು' ಎಂದು ಒತ್ತಾಯಿಸಿದರು.

ಚಿತ್ರ ನಟ 'ಮುಖ್ಯಮಂತ್ರಿ' ಚಂದ್ರು, 'ವೈಜ್ಞಾನಿಕ ಆಧಾರದ ಮೇಲೆ ಹಿಂದುಳಿದ ಜಾತಿಗಳನ್ನು ವರ್ಗೀಕರಿಸಿ ಮೀಸಲಾತಿ ಕಲ್ಪಿಸಿಲ್ಲ. ಪಂಚಮಸಾಲಿ ಸಮುದಾಯದ ಮೇಲೆ ನಮಗೆ ದ್ವೇಷವಿಲ್ಲ. ಅವರು ಕೇಳಿದ ತಕ್ಷಣ 2ಎಗೆ ಸರಿಸುವುದು ಸರಿಯಲ್ಲ. ಜಾತಿ ಗಣತಿ ಬಹಿರಂಗಪಡಿಸಿ, ಯಾರಿಗೆಲ್ಲ ಮೀಸಲಾತಿ ಸಿಕ್ಕಿದೆ ಎಂಬುದನ್ನು ಅಧ್ಯಯನ ನಡೆಸಿ ಮುಂದೆ ನಿರ್ಧಾರ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಎನ್.ರಾಜಣ್ಣ, '2ಎಗೆ ಪ್ರಬಲ ಜಾತಿಯನ್ನು ಸೇರಿಸಿ ಮೀಸಲಾತಿ ಕಿತ್ತುಕೊಳ್ಳುವ ಪ್ರಯತ್ನ ನಡೆದಿದೆ. ಅರ್ಹತೆ ಇಲ್ಲದೆ ಮೀಸಲಾತಿ ಸೌಲಭ್ಯ ಕಲ್ಪಿಸುವುದು ಸರಿಯಲ್ಲ' ಎಂದರು.

ವೇದಿಕೆ ಮುಖಂಡರಾದ ವಿ.ಆರ್. ಸುದರ್ಶನ್, ರಮೇಶ್, ಸುಬ್ಬಣ್ಣ, ಎಲ್.ಎ.ಮಂಜುನಾಥ್, ಯಲ್ಲಪ್ಪ, ವೆಂಕಟೇಶಗೌಡ, ರುದ್ರಪ್ಪ, ಲಕ್ಕಪ್ಪ ಇದ್ದರು.

ದೊಡ್ಡಬೊಮ್ಮಸಂದ್ರ ಕೆರೆ ರಕ್ಷಣೆಗೆ ಬಿಬಿಎಂಪಿ ಕ್ರಮ

ಒತ್ತುವರಿ ಜಾಗದಲ್ಲಿ ಕಾಂಕ್ರೀಟ್ ತಡೆಗೋಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ವಲಯದ ದೊಡ್ಡಬೊಮ್ಮಸಂದ್ರ ಕೆರೆಯು ಒಟ್ಟು 124 ಎಕರೆ 19 ಗುಂಟೆ ವಿಸ್ತೀರ್ಣದಲ್ಲಿದ್ದು, ಕೆರೆ ಅಂಗಳದ ಕೋಡಿಯ ಮುಂಭಾಗ ಒತ್ತುವರಿ ಮಾಡಲು ಯತ್ನಿಸಿದ್ದ 12 ಗುಂಟೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ.

ಸುಮಾರು ₹ 8 ಕೋಟಿ ಮಾರುಕಟ್ಟೆ ಮೌಲ್ಯವಿರುವ ಈ ಜಾಗದ ಸುತ್ತಲೂ ಕಾಂಕ್ರೀಟ್ ತಡೆಗೋಡೆ, ತಂತಿ ಬೇಲಿ ಅಳವಡಿಸುವ ಕಾರ್ಯವನ್ನು ಬಿಬಿಎಂಪಿ ಆರಂಭಿಸಿದೆ.

ತಾಲ್ಲೂಕು ಭೂಮಾಪಕರು ಹಾಗೂ ತಹಶೀಲ್ದಾರರು ಸರ್ವೆ ನಡೆಸಿ ನೀಡಿದ್ದ ಗಡಿ ಗುರುತು ನಕ್ಷೆಯಂತೆ ಕೆರೆಯ ಉತ್ತರ ಪೂರ್ವ ಭಾಗದ ಕೋಡಿಯ ಬಳಿ ಕಾಂಕ್ರೀಟ್ ಕಂಬಗಳನ್ನು ನೆಟ್ಟು ತಂತಿ ಬೇಲಿ ನಿರ್ಮಿಸಲಾಗಿತ್ತು. ಆದರೆ, ಯಲಹಂಕ ಹೋಬಳಿಯ ತಿಂಡ್ಲು ಗ್ರಾಮದ ಸರ್ವೆ ನಂಬರ್ 53, ದೊಡ್ಡಬೊಮ್ಮಸಂದ್ರ ಗ್ರಾಮದ ಸರ್ವೆ ನಂಬರ್ 56 ಹಾಗೂ ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂಬರ್ 175ರಲ್ಲಿ ದೊಡ್ಡಬೊಮ್ಮಸಂದ್ರ ಕೆರೆ ಅಂಗಳದ ತಂತಿಬೇಲಿಯನ್ನು ಸ್ಥಳೀಯರಾದ ಶ್ರೀನಿವಾಸ್ ಎಂಬವರು ಒತ್ತುವರಿ ಮಾಡಿಕೊಂಡಿದ್ದರು. ಈ ಜಾಗದಲ್ಲಿ 2020ರ ಆಗಸ್ಟ್‌ನಲ್ಲಿ ಗಣೇಶ ವಿಗ್ರಹವನ್ನು ತಂದು ಇಟ್ಟಿದ್ದರು. 2020ರ ಡಿಸೆಂಬರ್‌ನಲ್ಲಿ ನೀರಿನ ಟ್ಯಾಂಕ್ ಹಾಗೂ ಕಟ್ಟಡ ನಿರ್ಮಿಸಿ ಕೆರೆ ಅಂಗಳದ ಕೆರೆಯ ಕೋಡಿಯ ಮುಂಭಾಗದ 12 ಗುಂಟೆ ಜಮೀನನ್ನು ಕಬಳಿಸಲು ಮುಂದಾಗಿದ್ದರು ಎಂದು ಬಿಬಿಎಂಪಿ ಕೆರೆ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ದೊಡ್ಡಬೊಮ್ಮಸಂದ್ರ ಕೆರೆಯ ಒತ್ತುವರಿ ತೆರವು ಮಾಡಿದ ಜಾಗದಲ್ಲಿ ಕಾಂಕ್ರೀಟ್ ತಡೆಗೋಡೆನಿರ್ಮಿಸಲಾಗುತ್ತಿದೆ

ಒತ್ತುವರಿ ಜಮೀನನ್ನು, ಸಾರ್ವಜನಿಕ ಹಿತಾಸಕ್ತಿ ದಾವೆಯ ವಿಚಾರಣೆ ಸಂದರ್ಭದಲ್ಲಿ ಹೈಕೋರ್ಟ್ ನೀಡಿದ ಮಧ್ಯಂತರ ಆದೇಶದಂತೆ ಸರ್ಕಾರ ಮತ್ತೆ ಸ್ವಾಧೀನಪಡಿಸಿಕೊಂಡಿದೆ.

ಒತ್ತುವರಿದಾರರಿಗೆ ನೋಟಿಸ್: ಭೂದಾಖಲೆಗಳ ಸಹಾಯಕ ನಿರ್ದೇಶಕರು ಹಾಗೂ ಯಲಹಂಕ ತಾಲ್ಲೂಕು ಕಚೇರಿಯ ತಾಲ್ಲೂಕು ಭೂಮಾಪಕರು ಜೂನ್ 12ರಂದು ತಯಾರಿಸಿರುವ ಸರ್ವೆ ನಕ್ಷೆಯಲ್ಲಿ ತಿಳಿಸಿರುವಂತೆ ಒಟ್ಟು 36 ಗುಂಟೆ ಪ್ರದೇಶ ಒತ್ತುವರಿಯಾಗಿದೆ. ಈ ಬಗ್ಗೆ ವರದಿ ನೀಡಲು ಯಲಹಂಕ ತಾಲ್ಲೂಕು ಭೂಮಾಪಕರನ್ನು ನಿಯೋಜಿಸಲಾಗಿದೆ. ಎಲ್ಲಾ ಒತ್ತುವರಿದಾರರಿಗೆ ನೋಟೀಸ್ ಜಾರಿ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

ಉದ್ಯಾನ ನಿರ್ಮಾಣ: ಕೆರೆಯಲ್ಲಿ ಒತ್ತುವರಿ ಮಾಡಲು ಯತ್ನಿಸಿದ 12 ಗುಂಟೆ ಪ್ರದೇಶದಲ್ಲಿ ವಾಯುವಿಹಾರಿಗಳ ಅನುಕೂಲಕ್ಕೆ ಮರಗಳ ಉದ್ಯಾನ ನಿರ್ಮಿಸಲಾಗುತ್ತದೆ ಎಂದು ಬಿಬಿಎಂಪಿಯ ಸಹಾಯ ಕಾರ್ಯಪಾಲಕ ಎಂಜಿನಿಯರ್ (ಕೆರೆಗಳು) ಪ್ರಕಾಶ್ ತಿಳಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	120.17	7,946	5,545
ಹಾರಂಗಿ	2,859	2,857.58	2,262	3,662
ಕಬಿನಿ	2,284	2,283.14	3,500	1,000
ಹೇಮಾವತಿ	2,922	2,919.44	3,537	4,770
ಲಿಂಗನಮಕ್ಕಿ	1,819	1,812.60	5,031	-
ಸೂಪಾ (ಮೀ)	564	554.65	3,716	3,716
ವಾಣಿ	594.36	585.56	944	-
ತುಂಗಭದ್ರಾ	1,633	1,632.98	14,955	13,319
ಮಲಪ್ರಭಾ	2,079.50	2,077.90	2,056	494
ಘಟಪ್ರಭಾ	2,175	2,175	3,568	3,568
ಭದ್ರಾ	186	185	4,916	4,916
ಆಲಮಟ್ಟಿ (ಮೀ)	519.60	519.59	25,967	21,905
ನಾರಾಯಣಪುರ (ಮೀ)	492.25	491.88	12,000	12,000

* ನೆಲಮಟ್ಟದಿಂದ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಈಗಲ್‌ಟನ್ ರೆಸಾರ್ಟ್‌ಗೆ ₹982 ಕೋಟಿ ದಂಡ

ಬೆಂಗಳೂರು: ಸರ್ಕಾರಿ ಜಾಗ ಒತ್ತುವರಿ ಮಾಡಿ ಬಿಡದಿ ಬಳಿ ಈಗಲ್‌ಟನ್ ಗಾಲ್ಫ್ ರೆಸಾರ್ಟ್ ನಿರ್ಮಾಣ ಮಾಡಿರುವ ಚಾಮುಂಡೇಶ್ವರಿ ಬಿಲ್ಡ್ ಟೆಕ್ ಕಂಪನಿಗೆ ₹982 ಕೋಟಿ ದಂಡ ವಿಧಿಸಿದ್ದ ರಾಜ್ಯ ಸರ್ಕಾರದ ನಿರ್ಧಾರವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

77 ಎಕರೆ 19 ಗುಂಟೆ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿರುವ ಆರೋಪದಲ್ಲಿ ಸರ್ಕಾರ ನೀಡಿದ್ದ ನೋಟಿಸ್ ಪ್ರಶ್ನಿಸಿ ಚಾಮುಂಡೇಶ್ವರಿ ಬಿಲ್ಡ್ ಟೆಕ್ ಕಂಪನಿ ಸಲ್ಲಿಸಿದ್ದ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಜಿ. ನರೇಂದರ್ ಅವರಿದ್ದ ಪೀಠ ವಿಚಾರಣೆ ನಡೆಸಿತು.

ರಾಜ್ಯ ಸಚಿವ ಸಂಪುಟವು ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ದರ ನಿಗದಿ ಮಾಡಿದೆ. ಪ್ರಸ್ತುತ ಮಾರುಕಟ್ಟೆ ದರ ₹12.25 ಕೋಟಿ ಆಗಿದ್ದು, ಅದನ್ನು ಒಪ್ಪುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಅರ್ಜಿದಾರರು ಕೋರಿದ್ದರು.

'ಕಂಪನಿಯು ಎರಡು ದಶಕಗಳಿಂದ ಸರ್ಕಾರದ ಭೂಮಿಯಲ್ಲಿ ಅನಧಿಕೃತವಾಗಿ ಸ್ವಾಧೀನದಲ್ಲಿದೆ. ಜತೆಗೆ ದಶಕಗಳ ಕಾಲ ಭೂ ವ್ಯಾಜ್ಯ ಮುಂದುವರಿಸಿಕೊಂಡು ಬಂದಿದೆ. ಇದು ಸರಿಯಾದ ಕ್ರಮ ಅಲ್ಲ. ಅಕ್ರಮ ಮುಚ್ಚಿಕೊಳ್ಳಲು ಈ ವ್ಯಾಜ್ಯವನ್ನು ಕಂಪನಿ ಅಸ್ತ್ರವಾಗಿ ಬಳಸಿಕೊಂಡಿದೆ' ಎಂದು ಪೀಠ ಅಭಿಪ್ರಾಯಪಟ್ಟಿತು.

'ಸಾರ್ವಜನಿಕ ಆಸ್ತಿಯನ್ನು ಅಕ್ರಮವಾಗಿ ಸ್ವಾಧೀನ ಮಾಡಿಕೊಂಡು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳುವ ದುರುದ್ದೇಶದಿಂದ ಈ ಅರ್ಜಿ ಸಲ್ಲಿಸಲಾಗಿದೆ. ಇದು ಕಾನೂನು ಪ್ರಕ್ರಿಯೆಯ ದುರ್ಬಳಕೆ' ಎಂದು ತಿಳಿಸಿದ ಪೀಠ, ಕಂಪನಿಯ ಅರ್ಜಿಯನ್ನು ವಜಾಗೊಳಿಸಿತು.

ಗಾಲ್ಫ್ ರೆಸಾರ್ಟ್ ನಿರ್ಮಾಣಕ್ಕೆ ಚಾಮುಂಡೇಶ್ವರಿ ಬಿಲ್ಡ್ ಟೆಕ್ ಕಂಪನಿ ರಾಮನಗರ ಜಿಲ್ಲೆಯ ಬಿಡದಿ ಬಳಿ 1996ರಲ್ಲಿ 400 ಎಕರೆ ಜಮೀನನ್ನು ಖರೀದಿಸಿತ್ತು. ಸುತ್ತಮುತ್ತಲಿನ 77 ಎಕರೆ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿತ್ತು. ಒತ್ತುವರಿ ಮಾಡಿಕೊಂಡಿರುವ ಜಮೀನಿಗೆ ₹982 ಕೋಟಿ ನಿಗದಿ ಮಾಡಿ ರಾಮನಗರ ಜಿಲ್ಲಾಧಿಕಾರಿ 2017ರಲ್ಲಿ ನೋಟಿಸ್ ನೀಡಿದ್ದರು. ಇದನ್ನು ಪ್ರಶ್ನಿಸಿ ಕಂಪನಿ ಹೈಕೋರ್ಟ್‌ಗೆ ತಕರಾರು ಅರ್ಜಿ ಸಲ್ಲಿಸಿತ್ತು.

ಕೃಷ್ಣಾ ನದಿ ನೀರಿನ ಹಂಚಿಕೆ : ಸಿ.ಎಂ ಬಸವರಾಜ ಬೊಮ್ಮಾಯಿ

ಮಹಾರಾಷ್ಟ್ರದೊಂದಿಗೆ ಸೇರಿ ಹೋರಾಟ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಕೃಷ್ಣಾ ಜಲವಿವಾದ ನ್ಯಾಯಮಂಡಳಿ ತೀರ್ಪಿನಂತೆ ರಾಜ್ಯದ ಪಾಲಿನ 173 ಟಿಎಂಸಿ ಅಡಿ ನೀರಿನ ಸಂಪೂರ್ಣ ಬಳಕೆಗೆ ಕೇಂದ್ರದ ಅಂತಿಮ ಅಧಿಸೂಚನೆಗಾಗಿ ಮಹಾರಾಷ್ಟ್ರದೊಂದಿಗೆ ಸೇರಿ ಕರ್ನಾಟಕವು ಸುಪ್ರೀಂಕೋರ್ಟ್‌ನಲ್ಲಿ ಕಾನೂನು ಹೋರಾಟ ನಡೆಸಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಆಲಮಟ್ಟಿಯಲ್ಲಿ ಶನಿವಾರ ಕೃಷ್ಣೆಗೆ ಬಾಗಿನ ಅರ್ಪಣೆ ಮಾಡಿ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೀರಿನ ಹಂಚಿಕೆ ವಿವಾದದಲ್ಲಿ ಆಂಧ್ರಪ್ರದೇಶ, ತೆಲಂಗಾಣದ ನಡುವೆ ತಕರಾರು ಇದೆ. ಹೀಗಾಗಿ ನೀರಿನ ಬಳಕೆಗಾಗಿ ಕೇಂದ್ರದ ಅಧಿಸೂಚನೆಗೆ ಆ ಎರಡೂ ರಾಜ್ಯಗಳು ವಿರೋಧ ವ್ಯಕ್ತಪಡಿಸಿವೆ. ಎರಡೂ ಪ್ರತ್ಯೇಕ ರಾಜ್ಯಗಳಾಗಿ ಅಸ್ತಿತ್ವಕ್ಕೆ ಬಂದಿರುವ ಕಾರಣ ನೀರಿನ ಮರು ಹಂಚಿಕೆ ಮಾಡುವಂತೆ ಸುಪ್ರೀಂಕೋರ್ಟ್ ಮೊರೆ ಹೋಗಿವೆ ಎಂದರು.

ಆದರೆ ಅದು ಆ ರಾಜ್ಯಗಳ ಆಂತರಿಕ ಸಮಸ್ಯೆ ಎಂದು ಇತ್ತೀಚೆಗೆ ನ್ಯಾಯಾಲಯ ಕೂಡ ಹೇಳಿದೆ. ನಮ್ಮ ಪಾಲಿನ ನೀರು ಬಳಸಿ ಯುಕೆಪಿ ಮೂರನೇ ಹಂತದ ಅನುಷ್ಠಾನಕ್ಕೆ ಕೇಂದ್ರದಿಂದ ಅಂತಿಮ ಅಧಿಸೂಚನೆ ಪಡೆಯಬೇಕಿದೆ. ಅದಕ್ಕೆ ಸುಪ್ರೀಂಕೋರ್ಟ್ ನಿರ್ದೇಶನ ಬೇಕಿದೆ ಎಂದು ವಿವರಿಸಿದರು.

ಈ ಕಾನೂನು ಹೋರಾಟದಲ್ಲಿ ಮಹಾರಾಷ್ಟ್ರದ ಸಹಭಾಗಿತ್ವಕ್ಕೆ ಆ ರಾಜ್ಯದ ನೀರಾವರಿ ಸಚಿವ ಜಯಂತ್ ಪಾಟೀಲ ಅವರಿಗೆ ಎರಡು ಬಾರಿ ಕರೆ ಮಾಡಿ ಚರ್ಚಿಸಿದ್ದೇನೆ. ಎನ್‌ಸಿಪಿ ನಾಯಕ ಶರದ್ ಪವಾರ್ ಅವರೊಂದಿಗೂ ಮಾತನಾಡಿದ್ದೇನೆ. ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

ಮುಂದಿನ ವಾರ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರೊಂದಿಗೆ ದೆಹಲಿಗೆ ತೆರಳಿ ರಾಜ್ಯದ ಕಾನೂನು ತಂಡದೊಂದಿಗೆ ಚರ್ಚಿಸಿ, ಕರ್ನಾಟಕ- ಮಹಾರಾಷ್ಟ್ರದ ಕಾನೂನು ತಜ್ಞರ ಜಂಟಿ ಸಭೆ ನಡೆಸಿ ಸಹಮತಕ್ಕೆ ಬರಲಾಗುವುದು. ಮುಂದೆ ಕೈಗೊಳ್ಳಬಹುದಾದ ರಾಜಕೀಯ ಹಾಗೂ ಕಾನೂನಾತ್ಮಕ ಕ್ರಮಗಳ ಬಗ್ಗೆ ತೀರ್ಮಾನಿಸಲಾಗುವುದು ಎಂದರು.

ಆಲಮಟ್ಟಿ ಜಲಾಶಯಕ್ಕೆ ಶನಿವಾರ ಬಾಗಿನ ಅರ್ಪಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಂತರ ಕೃಷ್ಣೆಗೆ ಆರತಿ ಬೆಳಗಿದರು. ಈ ವೇಳೆ ವಿಧಾನಪರಿಷತ್ ಸದಸ್ಯ ಅರುಣ್ ಶಹಾಪುರ, ಮಾಜಿ ಶಾಸಕ ಎಸ್.ಕೆ.ಬೆಳ್ಳುಬ್ಬಿ, ಸಚಿವರಾದ ಉಮೇಶ ಕತ್ತಿ, ಗೋವಿಂದ ಕಾರಜೋಳ, ಮುರುಗೇಶ ನಿರಾಣಿ, ಶಶಿಕಲಾ ಜೊಲ್ಲೆ, ಶಾಸಕರಾದ ಎಂ.ಬಿ.ಪಾಟೀಲ, ಸಿದ್ದು ಸವದಿ ಚಿತ್ರದಲ್ಲಿದ್ದಾರೆ.

'ಬ್ಲ್ಯಾಕ್ ಫಂಗಸ್‌ಗೆ ಉಚಿತ ಚಿಕಿತ್ಸೆ'

ಬ್ಲ್ಯಾಕ್ ಫಂಗಸ್‌ಗೆ ತುತ್ತಾದವರು ಗುಣಮುಖರಾಗುವವರೆಗೂ ಸಂಪೂರ್ಣ ಚಿಕಿತ್ಸಾ ವೆಚ್ಚವನ್ನು ಇನ್ನು ಮುಂದೆ ಸರ್ಕಾರವೇ ಭರಿಸಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸೋಂಕಿತರು ಆಸ್ಪತ್ರೆಯಿಂದ ಮನೆಗೆ ಹೋದ ನಂತರವೂ ಮೂರರಿಂದ ನಾಲ್ಕು ವಾರ ಇಂಜೆಕ್ಷನ್ ತೆಗೆದುಕೊಳ್ಳಬೇಕಿದೆ. ಅದಕ್ಕೆ ದುಬಾರಿ ದರ ಇರುವುದರಿಂದ ಸರ್ಕಾರದಿಂದಲೇ ಉಚಿತವಾಗಿ ಇಂಜೆಕ್ಷನ್ ಪೂರೈಸಲಾಗುವುದು ಎಂದರು.

ಮಕ್ಕಳಿಗೆ ಪೌಷ್ಟಿಕ ಆಹಾರದ ಕಿಟ್: ಕೋವಿಡ್ ಮೂರನೇ ಅಲೆ ಹಿನ್ನೆಲೆಯಲ್ಲಿ ತಜ್ಞರ ಅಭಿಪ್ರಾಯದಂತೆ ರಾಜ್ಯದಲ್ಲಿ ಮಕ್ಕಳ ಆರೋಗ್ಯ ಶಿಬಿರ ನಡೆಸಿ ಅಪೌಷ್ಟಿಕ ಮಕ್ಕಳನ್ನು ಗುರುತಿಸಿ ಅವರಿಗೆ ಪೌಷ್ಟಿಕ ಆಹಾರದ ಕಿಟ್ ನೀಡುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸೂಚನೆ ನೀಡಿದ್ದೇನೆ ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

'ತಿಂದಿದ್ದು ಸಾಕು, ಇನ್ನಾದರೂ ಜನರಪರ ಕೆಲಸ ಮಾಡ್ರಪ್ಪ'

ದಾವಣಗೆರೆ: 'ಇಷ್ಟು ದಿನ ತಿಂದಿದ್ದು ಸಾಕ್ರಪ್ಪ.. ಇನ್ನಾದರೂ ಬಡವರ ಪರ ಕೆಲಸ ಮಾಡ್ರಪ್ಪ..' ಎಂದು ವಸತಿ ಸಚಿವ ವಿ. ಸೋಮಣ್ಣ ಅವರು ತಾಲ್ಲೂಕು ಪಂಚಾಯಿತಿ ಇಒ ಹಾಗೂ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಅಧಿಕಾರಿಗಳಿಗೆ ಮನವಿ ಮಾಡಿದರು.

ಶನಿವಾರ ಇಲ್ಲಿ ನಡೆದ ವಸತಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 'ತಾಲ್ಲೂಕು ಪಂಚಾಯಿತಿ ಇಒಗಳು ಜನರಿಗೆ ಮನೆ ನಿರ್ಮಿಸಿಕೊಡುವ ಕಡೆ ಹೆಚ್ಚು ಗಮನ ಹರಿಸಬೇಕು. ಬೇರೆಲ್ಲ ಯೋಜನೆಗಳಂತಲ್ಲ ಸೂರು ಕೊಡುವ ಯೋಜನೆ. ಮಳೆಗಾಲದಲ್ಲಿ ಜನರ ಶಾಪ ತಟ್ಟದಿರಲು ನೀವು ಮನೆ ನಿರ್ಮಿಸಿಕೊಡಬೇಕು' ಎಂದು ಸೂಚಿಸಿದರು.

'ಕೆಲವು ಕಡೆ ಮನೆ ಮಂಜೂರು ಮಾಡಲು ₹ 20 ಸಾವಿರ ತೆಗೆದುಕೊಳ್ಳುತ್ತಿದ್ದಾರೆ ಎಂಬ ಆರೋಪ ಇದೆ' ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದಾಗ, 'ತಿಂದಿದ್ದು ಸಾಕ್ರಪ್ಪ..' ಎಂದು ಸಚಿವರು ಕೇಳಿಕೊಂಡರು.

'ಕೊಳೆಗೇರಿಯಲ್ಲಿ ಮನೆ ನಿರ್ಮಾಣಕ್ಕೆ ಎಕ್ಸಿಕ್ಯುಟಿವ್ ಎಂಜಿನಿಯರ್ ಅವರೇ ತಕರಾರು ತೆಗೆಯುತ್ತಾರೆ' ಎಂದು ಶಾಸಕ ಮಾಡಾಳ್ ವಿರೂಪಾಕ್ಷಪ್ಪ ತಿಳಿಸಿದಾಗ, ಇಇ ಕಬಿನಿ ಗೌಡ ಅವರನ್ನು ಸಚಿವರು ಎದುರಿಗೆ ಕರೆಸಿಕೊಂಡರು. 'ಮೈಸೂರಿಂದ ಇಲ್ಲಿಗೆ ವರ್ಗಾವಣೆ ಮಾಡಿದ್ರೂ ನಿಮ್ಮ ಹೊಟ್ಟೆ ಇಳಿದಿಲ್ಲ. ಇವರು ಮತ್ತು ಪದ್ಮನಾಭ ಎಂಬಿಬ್ಬರು ಅಧಿಕಾರಿಗಳೇ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ದೊಡ್ಡ ತಿಮಿಂಗಿಲಗಳು' ಎಂದು ಸಾರ್ವಜನಿಕವಾಗಿಯೇ ತರಾಟೆಗೆ ತೆಗೆದುಕೊಂಡರು.

'ಪ್ರಮುಖ ಕಚೇರಿಗಳು ಸುವರ್ಣ ವಿಧಾನಸೌಧಕ್ಕೆ ಸ್ಥಳಾಂತರ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬೆಂಗಳೂರಿನಲ್ಲಿರುವ ಮಹತ್ವದ ಇಲಾಖೆಗಳ ಕಚೇರಿಗಳನ್ನು ಇಲ್ಲಿನ ಸುವರ್ಣ ವಿಧಾನಸೌಧಕ್ಕೆ ಸ್ಥಳಾಂತರಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಸಭೆ ಬಳಿಕ ಪತ್ರಕರ್ತರೊಂದಿಗೆ ಶನಿವಾರ ಅವರು ಮಾತನಾಡಿದರು.

'ಸುವರ್ಣ ವಿಧಾನಸೌಧವನ್ನು ಆಡಳಿತದ ಶಕ್ತಿ ಕೇಂದ್ರ ಮಾಡಲಾಗುವುದು. ಡಿಸೆಂಬರ್‌ನಲ್ಲಿ ವಿಧಾನಮಂಡಲ ಚಳಿಗಾಲದ ಅಧಿವೇಶನವನ್ನು ಇಲ್ಲಿ ನಡೆಸಲಾಗುವುದು. ವಿಧಾನಸೌಧದಂತೆ ಇಲ್ಲೂ ಜನಪರವಾದ ಚಟುವಟಿಕೆಗಳು ನಡೆಯುವಂತೆ ನೋಡಿಕೊಳ್ಳಲು ಕ್ರಮ ವಹಿಸಲಾಗುವುದು. ಈಗಾಗಲೇ ಆದೇಶವಾಗಿದ್ದರೂ ಕೆಲವು ಕಚೇರಿಗಳು ಸ್ಥಳಾಂತರವಾಗಿಲ್ಲ. ಮರು ಆದೇಶ ನೀಡಿ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

'ಸಕ್ಕರೆ ಆಯುಕ್ತರ ಕಚೇರಿಯನ್ನು ಬೆಳಗಾವಿಗೆ ಸ್ಥಳಾಂತರಿಸಲಾಗುವುದು. ಬಿಮ್ಸ್ (ಜಿಲ್ಲಾಸ್ಪತ್ರೆ) ಸಮಗ್ರ ಸುಧಾರಣೆಗೆ ಕ್ರಮ ವಹಿಸಲಾಗುವುದು. ಇದಕ್ಕಾಗಿ ತಂಡ ಕಳುಹಿಸಿ ವರದಿ ಪಡೆಯಲಾಗುವುದು. ಉಪಕರಣಗಳು ಸೇರಿದಂತೆ ಅಗತ್ಯ ಮೂಲಸೌಲಭ್ಯಗಳನ್ನು ಒದಗಿಸಲಾಗುವುದು' ಎಂದರು.

ಪೊಲೀಸ್ ಗೌರವ ವಂದನೆಗೆ ಸಿ.ಎಂ ಗರಂ

ವಿಜಯಪುರ: ಪೊಲೀಸ್ ಇಲಾಖೆಯಿಂದ ಗೌರವ ವಂದನೆ ನೀಡಿದ್ದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗರಂ ಆದರು.

ಆಲಮಟ್ಟಿ ಜಲಾಶಯಕ್ಕೆ ಬಾಗಿನ ಅರ್ಪಿಸಲು ಶನಿವಾರ ಆಲಮಟ್ಟಿಗೆ ಬಂದಿದ್ದ ಸಂದರ್ಭದಲ್ಲಿ, ಗೌರವ ವಂದನೆ ಸಲ್ಲಿಸಲು ಮುಂದಾಗಿದ್ದಕ್ಕೆ 'ಬೆಳಗಾವಿ ಉತ್ತರ ವಲಯ ಐಜಿಪಿ ಸತೀಶ್ ಕುಮಾರ್ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್.ಡಿ.ಆನಂದಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡರು.

'ಗೌರವ ವಂದನೆ ಸಲ್ಲಿಸುವುದು ಬೇಡ ಎಂದು ಈ ಮೊದಲೇ ಸೂಚನೆ ನೀಡಿಲ್ಲವೇ? ನಿಮ್ಮ ಕಿರಿಯ ಸಿಬ್ಬಂದಿಗೆ ಮಾಹಿತಿ ನೀಡಿರಲಿಲ್ಲವೇ? ಎಂದು ಪ್ರಶ್ನಿಸಿದರು. ಈ ಸಂಬಂಧ ಮುಖ್ಯಮಂತ್ರಿ ಬಳಿ ಎಸ್‌ಪಿ ಮತ್ತು ಐಜಿಪಿ ಕ್ಷಮೆಯಾಚಿಸಿದರು.

ಗಣಪತಿ ಹಬ್ಬ ನಿರ್ಬಂಧಿಸಲು ಬಿಡುವುದಿಲ್ಲ: ಶಾಸಕ ಯತ್ನಾಳ

ವಿಜಯಪುರ: 'ಕೋವಿಡ್ ನೆಪದಲ್ಲಿ ಗಣಪತಿ ಹಬ್ಬ, ಹಿಂದೂ ಆಚರಣೆಗಳ ಮೇಲೆ ನಿರ್ಬಂಧ ಹೇರಿದರೆ ವಿಜಯಪುರದಲ್ಲಿ ಜಾರಿಗೊಳಿಸಲು ಬಿಡುವುದಿಲ್ಲ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ, ರಾಜ್ಯ ಸರ್ಕಾರಕ್ಕೆ ಎಚ್ಚರಿಸಿದರು.

ವಿಜಯಪುರ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ 50 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು

'ಭಾಳಾದ್ರ, ನನಗೆ ಗುಂಡು ಹೊಡೆಯಬಹುದು. ಹಾಗಾದರೆ, ಇಡೀ ಕರ್ನಾಟಕದ ತುಂಬಾ ಬೆಂಕಿ ಹತ್ತೈತಿ. ಸತ್ತರೂ ಹೆಸರು ತೆಗೆದುಕೊಂಡು ಹೋಗುವೆ' ಎಂದು ಹೇಳಿದರು.

'ಗಣಪತಿ ಹಬ್ಬ, ದೀಪಾವಳಿ, ಸಂಕ್ರಾಂತಿ ಮಾಡಬೇಡಿ ಎಂದು ನೀವೇ ಹೇಳಿದರೆ ಹೇಗೆ? ಉಳಿದವರಿಗೆ ಅನುವು ಮಾಡಿಕೊಟ್ಟು, ನಮಗೆ ಬೇಡ ಎಂದರೆ ನಡೆಯುವುದಿಲ್ಲ ಎಂದು ಬೊಮ್ಮಾಯಿ ಅವರಿಗೆ ಸ್ಪಷ್ಟಪಡಿಸಿದ್ದೇನೆ' ಎಂದರು.

'ಗಣಪತಿ ಹಬ್ಬದ ಆಚರಣೆಗೆ ಯಾರೂ ತೊಂದರೆ ಮಾಡಬಾರದು ಎಂದು ಸಿಎಂ ಆದೇಶಿಸಿದ್ದಾರೆ. ಹಬ್ಬವನ್ನಾಚರಿಸಲು ಯಾರೂ ಹೆದರಬೇಕಾಗಿಲ್ಲ' ಎಂದು ಹೇಳಿದರು.

ವಾರಾಂತ್ಯ ಕರ್ಫ್ಯೂಗೆ ವಿರೋಧ: ವಾರಾಂತ್ಯ ಕರ್ಫ್ಯೂ ಜಾರಿಗೊಳಿಸಿರುವ ರಾಜ್ಯ ಸರ್ಕಾರದ ಕ್ರಮಕ್ಕೆ ಯತ್ನಾಳ ತೀವ್ರ ವಿರೋಧ ವ್ಯಕ್ತಪಡಿಸಿದರು. ಶನಿವಾರ, ಭಾನುವಾರ ಮಾತ್ರ ಕೊರೊನಾ ವಿಜಯಪುರದಲ್ಲಿ ಅಡ್ಡಾಡುತ್ತಾ. ರಾತ್ರಿ ಮಾತ್ರ ಅಡ್ಡಾಡುತ್ತಾ? ಇದರಲ್ಲಿ ವೈಜ್ಞಾನಿಕತೆ ಎಲ್ಲಿದೆ ಎಂದು ಪ್ರಶ್ನಿಸಿದರು.

ಗಂಧದ ಮರಗಳ್ಳ ಗುಂಡಿಗೆ ಬಲಿ

ಕುಣಿಗಲ್: ತಾಲ್ಲೂಕಿನ ಹುಲಿಯೂರು ದುರ್ಗದ ಕಂಪ್ಲಪುರ ಶ್ರೀಗಂಧ ಮೀಸಲು ಅರಣ್ಯ ಪ್ರದೇಶದಲ್ಲಿ ಶ್ರೀಗಂಧದ ಮರಗಳನ್ನು ಕಡಿಯುತ್ತಿದ್ದ ಕಳ್ಳರ ಗುಂಪಿನ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿ ಶನಿವಾರ ನಡೆಸಿದ ಗುಂಡಿನ ದಾಳಿಯಲ್ಲಿ ಮರಗಳ್ಳನೊಬ್ಬ ಮೃತಪಟ್ಟಿದ್ದಾನೆ.

ಮರಗಳ್ಳರ ತಂಡ ಶುಕ್ರವಾರ ರಾತ್ರಿಯಿಂದಲೇ ಗಂಧದ ಮರಗಳನ್ನು ಕಡಿಯುತ್ತಿದ್ದರು. ಅರಣ್ಯ ಇಲಾಖೆಯ ಸಿಬ್ಬಂದಿ ಕೂಂಬಿಂಗ್ ನಡೆಸಿದರೂ ಫಲಕಾರಿಯಾಗಿರಲಿಲ್ಲ. ಶನಿವಾರ ಬೆಳಿಗ್ಗೆ ಮತ್ತೆ ಮರಗಳನ್ನು ಕಡಿಯುತ್ತಿರುವ ಮಾಹಿತಿ ತಿಳಿದು ಉಪ ಅರಣ್ಯಾಧಿಕಾರಿ ಮಹೇಶ ನೇತೃತ್ವದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ತಂಡ ದಾಳಿ ನಡೆಸಿದ್ದರು.

ಮರಗಳ್ಳರನ್ನು ಅರಣ್ಯ ಇಲಾಖೆ ಸಿಬ್ಬಂದಿ ಹಿಡಿಯಲು ಯತ್ನಿಸಿದಾಗ ಕಳ್ಳರು ಪ್ರತಿದಾಳಿ ನಡೆಸಿದ್ದಾರೆ. ಕಳ್ಳನೊಬ್ಬ ಮಚ್ಚಿನಿಂದ ದಾಳಿ ನಡೆಸಿದಾಗ ಸಿಬ್ಬಂದಿ ಶೇಖರ್ ಎಂಬುವವರ ಕೈಗೆ ಗಾಯವಾಗಿದೆ. ಆಗ ಅರಣ್ಯ ಸಿಬ್ಬಂದಿ ಹಾರಿಸಿದ ಗುಂಡಿಗೆ ಮರಗಳ್ಳ ಮೃತಪಟ್ಟಿದ್ದಾನೆ. ಮೃತನ ವಿವರ ಲಭ್ಯವಾಗಿಲ್ಲ.

'ಕಳ್ಳರು ದಾಳಿ ನಡೆಸಿದಾಗ ಸಿಬ್ಬಂದಿಯ ಪ್ರಾಣರಕ್ಷಣೆಗಾಗಿ ಮೊದಲು ಗಾಳಿಯಲ್ಲಿ ಗುಂಡು ಹಾರಿಸಲಾಯಿತು. ನಂತರ ಕಾಲಿಗೆ ಹಾರಿಸಿದ ಗುಂಡು ಆಯತಪ್ಪಿ ಸೊಂಟದ ಮೇಲ್ಭಾಗಕ್ಕೆ ಬಿದ್ದು ಕಳ್ಳ ಮೃತಪಟ್ಟಿದ್ದಾನೆ. ಉಳಿದರು ಪರಾರಿಯಾಗಿದ್ದಾರೆ' ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.

ಸ್ಥಳಕ್ಕೆ ಜಿಲ್ಲಾಧಿಕಾರಿ ವೈ.ಎಸ್. ಪಾಟೀಲ, ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ರಮೇಶ, ಎಸ್‌ಪಿ ಡಾ.ರಾಹುಲ್ ಕುಮಾರ್, ವೈದ್ಯೆ ಡಾ. ಶೀಲಾ, ಡಿವೈಎಸ್‌ಪಿ ರಮೇಶ್, ಸಿಪಿಐ ಗುರುಪ್ರಸಾದ್ ಭೇಟಿ ನೀಡಿದ್ದರು.

SHREE HALASIDHANATH SAHAKARI SAKHAR KARKHANA LTD.,
SHANKARANAND NAGAR, NIPANI-591 237, DISTRICT: BELAGAVI
STATE: KARNATAKA E-MAIL :hala_sugar@rediffmail.com
No: HSSK/DISTILLERY/2021-22/905 Date: 20-08-2021

SHORT TERM TENDER NOTIFICATION

Short term tenders for detailed Engineering Consultancy for 50 KLPD Distillery/Ethanol unit of our Factory.

This Factory intends to establish 50 KLPD Distillery unit. The Factory invites for detailed Engineering consultancy for this project from the persons / firms who have successfully executed 3 such Sugar plant, Distillery / Ethanol plant projects.

Interested and eligible parties/ firms may apply with company profile supported by proper documents on remittance of Rs.5000/- non-refundable fee in the form of Demand Draft infavour of the Managing Director, Shree Halasidhanath Sahakari Sakhar Karkhana Ltd., Nipani. The scope of services along with details of the proposed project can be had from the Factory office during working hours.

Tender forms will be issued from 23-08-2021 to 03-09-2021 and the last date for submission of duly filled tenders is 07-09-2021 up to 5-00 pm. The date of negotiations will be intimated to the eligible tenderers separately.

The management reserves the right to accept or reject any or all tenders without assigning any reasons therefor.

Sd/- (Shiva Kulkarni) Managing Director
Sd/- (C.S.Kothiwale) Chairman

ವಿಜಯಪುರ ಮಹಾನಗರ ಪಾಲಿಕೆ, ವಿಜಯಪುರ
ದೂರವಾಣಿ ಸಂಖ್ಯೆ:08352–278539, ಸಹಾಯವಾಣಿ:08352–222474
ಫ್ಯಾಕ್ಸ್:08352–278532, Website:www.bijapurcity.gov.in
E-mail ID:itstaff_ulb_bijapur@yahoo.co.in
ನಂ:ಮನಪಾವಿ/ಲೋ.ಇ/ಟೆ.ಪ್ರ/2021–22 ದಿನಾಂಕ:19.08.2021

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆಯ ಯಾವತ್ತೂ ಗುತ್ತಿಗೆದಾರರಿಗೆ ಈ ಮೂಲಕ ತಿಳಿಸುವದೇನೆಂದರೆ, ಮಹಾನಗರ ಪಾಲಿಕೆಯ ಉದ್ದಿಮೆ ನಿಧಿಯ ಅನುದಾನದಲ್ಲಿನ ಈ ಕೆಳಗಿನ ನಿರ್ವಹಣೆ **ಕಾಮಗಾರಿಯನ್ನು** ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–3 ರ ನಿಬಂಧನೆಗೆ ಒಳಪಟ್ಟು ಟೆಂಡರನ್ನು ಕರೆಯಲಾಗಿದೆ. ಕಾರಣ ಇಚ್ಛೆಯುಳ್ಳ ಗುತ್ತಿಗೆದಾರರು ತಮ್ಮ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸಲ್ಲಿಸಬಹುದಾಗಿದೆ. ಕಾಮಗಾರಿಗಳ ಹೆಚ್ಚಿನ ಮಾಹಿತಿಗಾಗಿ ಆನ್‌ಲೈನ್ ಮೂಲಕ ವೆಬ್‌ಸೈಟ್ (www.eproc.karnataka. gov.in) ನಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಮಹಾನಗರ ಪಾಲಿಕೆ ಕಾರ್ಯಾಲಯದ ಲೋಕೋಪಯೋಗಿ ವಿಭಾಗದಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಕಾಮಗಾರಿಗಳ ಹೆಸರು: Providing Decortive/Elevation treatment to commercial complex near old city corporation office & painting to old corporation building in vijayapur city (W.I.No: DMA/2021-22/BD/WORK_INDENT118945) ಅಂದಾಜು ಮೊತ್ತ **ರೂ. 99.97 ಲಕ್ಷಗಳು. ಕೆಲಸದ ಅವಧಿ: 06 ತಿಂಗಳು.**

1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:06.09.2021** ರಂದು ಸಾಯಂಕಾಲ 4.00 ಘಂಟೆಗೆ. 2) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 08.09.2021 ರಂದು ಸಾಯಂಕಾಲ 4.30 ಘಂಟೆಗೆ. 3)** ಟೆಂಡರ್ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 13.09.2021** ರಂದು ಸಾಯಂಕಾಲ 5.00 ಘಂಟೆಗೆ.(ಸಾಧ್ಯವಾದಲ್ಲಿ)
ಈ ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ವಿಜಯಪುರ ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/229/ಎಂಸಿಎ/2021–22

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್–3/ಎಫ್–170/2256/2021–22 ದಿನಾಂಕ: 21–08–2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ–ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ **ದಿನಾಂಕ: 21–08–2021**ರ ನಂತರ ವೆಬ್ ಸೈಟ್ ವಿಳಾಸ http://eproc.karnataka.gov.in ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1	KPWD/2021-22/RD/WORK_INDENT140153	500.00
2	KPWD/2021-22/OW/WORK_INDENT138624	300.00
3	KPWD/2021-22/RD/WORK_INDENT140907	268.00
4	KPWD/2021-22/RD/WORK_INDENT140908	282.00
5	KPWD/2021-22/BD/WORK_INDENT138264	215.00
6	KPWD/2021-22/BG/WORK_INDENT140160	140.50

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಗುತ್ತೇದಾರರು ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ	ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ	26–08–2021 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ
ಆ	ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ	30–08–2021 ರಂದು 12.00 ಗಂಟೆಯ ವರೆಗೆ
ಇ	ಇ–ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	06–09–2021 ರಂದು 16.00 ಗಂಟೆಯ ವರೆಗೆ
ಈ	ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.	07–09–2021 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಚಿತ್ರದುರ್ಗ
ಸಂಖ್ಯೆ: ಕಾಇಂ:ಲೋವಿಚಿ:ಎಇ–2:ಟೆಂಡರ್–40:2021–22/1308 ದಿ: 17.08.2021

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ **ಅರ್ಹ ಗುತ್ತಿಗೆದಾರರಿಂದ** ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ **ಏಕ ಲಕೋಟೆ ಪದ್ಧತಿಯಲ್ಲಿ** ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.
ಕಾಮಗಾರಿಗಳ ವಿವರ:– ಇ– ಪ್ರೊಕ್ಯೂರ್‌ಮೆಂಟ್ ಮೂಲಕ– ಏಕ ಲಕೋಟೆ ಪದ್ಧತಿ:– ಸಾಮಾನ್ಯ:– ಲೆಕ್ಕ ಶೀರ್ಷಿಕೆ : 8443 ಠೇವಣಿ ವಂತಿಕೆ:– (1) ಹೊಳಲ್ಕೆರೆ ತಾಲ್ಲೂಕು ಇಡೇಹಳ್ಳಿಯಿಂದ ಹಾವಿನಕಟ್ಟೆ ರಸ್ತೆ ಅಭಿವೃದ್ಧಿ. (ವ.ಇಂ. 140751)
ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):– 49.00
ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. (1) ಟೆಂಡರ್ ಬಗ್ಗೆ ವಿಚಾರಿಸಲು/ ಮಾಹಿತಿ ಪಡೆಯಲು ಕೊನೆಯ ದಿನಾಂಕ 01–09–2021 ಸಮಯ 17–30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 02–09–2021 ಸಮಯ 16–00 (3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 03–09–2021 ಸಮಯ 16–01 ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.
DIPR/CTA/MCA/368/2021-22 ಸಹಿ/– ಕಾರ್ಯಪಾಲಕ ಅಭಿಯಂತರರು

ನಗರಸಭಾ ಕಾರ್ಯಾಲಯ, ಹಿರಿಯೂರು–577598
ಫೋನ್ ನಂ. 08193–263220, ಸಹಾಯವಾಣಿ: 08193–260020,
E-mail:tmchiriyur@yahoo.in Webist: hiriyurtown.gov.in
ನಂ.ನಹಿತಾವಿ(14) ಟೆಂಡರ್ ಸಂಖ್ಯೆ:ಸಿಆರ್–18/2021–22 ದಿ: 18.08.2021

ಇ–ಪ್ರಕ್ಯೂರ್‌ಮೆಂಟ್ ಮರು ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–3ರ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ನಗರಸಭೆ ವ್ಯಾಪ್ತಿಯಲ್ಲಿ 2019–20ನೇ ಸಾಲಿನ 14ನೇ ಹಣಕಾಸು ಜನರಲ್ ಬೇಸಿಕ್ ಗ್ರಾಂಟ್ ಅನುದಾನದಲ್ಲಿ ಹಿರಿಯೂರು ನಗರಸಭೆ ವ್ಯಾಪ್ತಿಯಲ್ಲಿ ವೇದಾವತಿ ನಗರದ ವಾರ್ಡ್ ನಂ. 03ರ ಪಾರ್ಕ್ ಬಳಿ ನಗರೋತ್ಥಾನ–3ರಡಿ ನಿರ್ಮಿಸುತ್ತಿರುವ 10.00 ಲಕ್ಷ ಲೀಟರ್ ಸಾಮರ್ಥ್ಯದ ಓ.ಹೆಚ್.ಟಿ.ಗೆ ರೈಸಿಂಗ್ ಪೈಪ್‌ಲೈನ್ ಮತ್ತು ವಾಲ್ ಛೇಂಬರ್‌ನ ಇತರೆ ಕಾಮಗಾರಿ ಇಂಡೆಂಟ್ ಸಂಖ್ಯೆ:– DMA/2019-20/WS/WORK-INDENT- 101699/Call-3, ಅಂದಾಜು ಮೊತ್ತ:– 85.00 ಲಕ್ಷಗಳು.
ಕಾಮಗಾರಿಯನ್ನು ಐಟಂವಾರು ಇ–ಪ್ರಕ್ಯೂರ್‌ಮೆಂಟ್ ದ್ವಿ–ಲಕೋಟೆ ಪದ್ಧತಿಯಲ್ಲಿ 1ನೇ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಹಾಗೂ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖೆ ವೆಬ್‌ಸೈಟ್ http://eproc.karnataka.gov.in ಇ–ಪ್ರಕ್ಯೂರ್‌ಮೆಂಟ್ ಮೂಲಕ ಇಎಂಡಿ ಘೋಷಣಾ ಪತ್ರದ ನಿಗಧಿತ ನಮೂನೆಯನ್ನು ಭರ್ತಿ ಮಾಡಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 03.09.2021 ಹಾಗೂ ಟೆಂಡರ್ ತೆರೆಯುವ ದಿನಾಂಕ: 06.09.2021, ಟೆಂಡರ್ ಮಾನ್ಯತಾ ಅವಧಿ 90 ದಿನಗಳು. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಅಭಿಯಂತರರನ್ನು ಸಂಪರ್ಕಿಸಬಹುದು ಅಥವಾ ನಗರಸಭೆಯ ಅಂತರ್ಜಾಲ ತಾಣ www.hiriyurtown.mrc.gov.in ನಲ್ಲಿ ಪಡೆಯಬಹುದಾಗಿದೆ.
ಒಂದು ವೇಳೆ ಸೂಚಿಸಲಾಗಿರುವ ದಿನಾಂಕಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕಗಳನ್ನು ಪರಿಗಣಿಸಲಾಗುವುದು.
ಸಹಿ/– ಅಧ್ಯಕ್ಷರು, ನಗರಸಭೆ, ಹಿರಿಯೂರು. DIPR/CTA/MCA/371/2021-22 ಸಹಿ/– ಪೌರಾಯುಕ್ತರು, ನಗರಸಭೆ, ಹಿರಿಯೂರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ
ಸಂ.ಕಾನಿಅ/ಲೋಇ/ಕವಿ/ತಾಶಾ–2/ಟೆಂಡರ್ ಅಧಿಸೂಚನೆ/2021–22/2812 ದಿನಾಂಕ : 21–08–2021

:: ಟೆಂಡರ್ ತಿದ್ದುಪಡಿ ಅಧಿಸೂಚನೆ ::

ವಿಷಯ : ಟೆಂಡರ ದಿನಾಂಕ ತಿದ್ದುಪಡಿ ಪ್ರಕಟಣೆ ಅಧಿಸೂಚನೆ ಬಗ್ಗೆ.
ಉಲ್ಲೇಖ : 1) ಈ ಕಚೇರಿ ಟೆಂಡರ ಪ್ರಕಟಣೆ ಸಂ: ಸಂ.ಕಾನಿಅ/ಲೋಇ/ಕವಿ/ತಾಶಾ–2/ಟೆಂಡರ್ ಅಧಿಸೂಚನೆ/2021–22/2551 ದಿನಾಂಕ : 11–08–2021
ಈ ಕಚೇರಿಯ ಉಲ್ಲೇಖಿತ ಅಧಿಸೂಚನೆಯಲ್ಲಿ ಕರೆಯಲಾದ ಟೆಂಡರ ಇಂಡೆಂಟ ಸಂ. **137144, 136043, 140618 & 140688** ಗಳ ವೇಳಾಪಟ್ಟಿ ಈ ಕೆಳಗಿನಂತೆ ವಿಸ್ತರಿಸಲಾಗಿದೆ.
1) ಪ್ರಿ ಬಿಡ್ ಸಭೆ ದಿನಾಂಕ : **31–08–2021 (11.00.00** ಗಂಟೆ), 2) ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **01–09–2021 (17.30** ಗಂಟೆ), 3) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **02–09–2021 (16.00** ಗಂಟೆ), 4) ತಾಂತ್ರಿಕ ಬಿಡ ತೆರೆಯುವ ದಿನಾಂಕ : **03–09–2021 (16.30 ಗಂಟೆ),** 5) ಆರ್ಥಿಕ ಬಿಡ ತೆರೆಯುವ ದಿನಾಂಕ : **06–09–2021 (11.30** ಗಂಟೆ).
ಉಳಿದಂತೆ ಯಾವುದೇ ಷರತ್ತುಗಳಲ್ಲಿ ಬದಲಾವಣೆ ಇರುವುದಿಲ್ಲ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/554/ಎಂ.ಸಿ&ಎ/2021–22

ಕರ್ನಾಟಕ ಸರಕಾರ,
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ ಪಂಚಾಯತ ರಾಜ ಇಂಜನೀಯರಿಂಗ ವಿಭಾಗ, ರಾಯಚೂರು
ಸಂ.: ಕಾನಿಅ/ಪಂರಾಇವಿ/ರಾ/ಕಿ.ಇಂ–1/ಇ–ಟೆಂಡರ/2021–22/17 ದಿನಾಂಕ: 18.08.2021

ಇ–ಪ್ರೋಕ್ಯೂರಮೆಂಟ ಅಲ್ಪಾವಧಿ ಟೆಂಡರ ಪ್ರಕಟಣೆ – 06

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ ರಾಜ ಇಂಜನೀಯರಿಂಗ ವಿಭಾಗ, ರಾಯಚೂರು ಇವರು KW- 4 (Standard Bid Document) ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ ಇಂಜನೀಯರಿಂಗ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ–ಗುತ್ತಿಗೆ ಕುರಿತು ಇ–ಪ್ರೋಕ್ಯೂರಮೆಂಟ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲಿಂಗಸುಗೂರು ತಾಲೂಕಿನ 2019–20ನೇ ಸಾಲಿನ ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ (ಮೈಕ್ರೊ) ಯೋಜನೆ ಅಡಿಯಲ್ಲಿನ ಕಾಮಗಾರಿಗಳಿಗೆ ಐಟಂವಾರು ಇ–ಟೆಂಡರ ಆಹ್ವಾನಿಸಲಾಗಿದೆ.
1] E-Payment/NEFT ಮುಖಾಂತರ ಅರ್ಜಿ ಸ್ವೀಕರಿಸುವ ದಿನಾಂಕ **19.08.2021** ರಿಂದ, 2] ಶೆಡ್ಯೂಲಗಳನ್ನು Online ನಲ್ಲಿ ಬಿಡುವ ದಿನಾಂಕ **19.08.2021,** 3] ಆಕ್ಷೇಪಣೆ/ವಿವರಣೆಗಳನ್ನು ಸ್ವೀಕರಿಸುವ ದಿನಾಂಕ **30.08.2021** ಸಾಯಂಕಾಲ 4:30 ಗಂಟೆ ವರೆಗೆ, 4] ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ **03.09.2021** ಸಂಜೆ 4:30 ಗಂಟೆವರೆಗೆ, 5] ತಾಂತ್ರಿಕ ಬಿಡ್ ತೆರೆಯುವ ದಿನಾಂಕ **04.09.2021** ಸಾಯಂಕಾಲ 5:00 ಗಂಟೆ ಸಾಧ್ಯವಿದ್ದಲ್ಲಿ, 6] ಆರ್ಥಿಕ ಬಿಡ್ ತೆರೆಯುವ ದಿನಾಂಕ **08.09.2021** ಬೆಳಿಗ್ಗೆ 11:00 ಗಂಟೆ ಸಾಧ್ಯವಿದ್ದಲ್ಲಿ.
Indent Nos.:-Lingasugur Taluka : 84962]
ಕಾಮಗಾರಿಗಳ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ http://eproc.karnataka.gov.in ಸಂಪರ್ಕಿಸಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು., ಪಂ.ರಾ.ಇಂ. ವಿಭಾಗ, ರಾಯಚೂರು.
ವಾ.ಸಾ.ಸಂ.ಇ/ರಾಯಚೂರ/276/ಎಂ.ಸಿ.ಎ/2021–22

ಕರ್ನಾಟಕ ಸರ್ಕಾರ
ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು.
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು – 570 001, ಕರ್ನಾಟಕ
ದೂ.ಸಂ.: 0821-2520512(Off.), 2520803(Fax),
E-Mail - mmcrimysore@yahoo.com Website: www.karnataka.gov.in/mmcri
ಸಂಖ್ಯೆ: ಸರಬ(1)/ ಟೆಂಡರ್/ಎಂಆರ್‌ಯು/25/2021–22 ದಿ: 17.08.2021

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ್ ಮುಖಾಂತರ)

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು. ಈ ವಿದ್ಯಾಲಯದ Multi Displinary Research Unit ವಿಭಾಗಕ್ಕೆ ಬೇಕಾಗಿರುವ ಉಪಕರಣಗಳನ್ನು ಸರಬರಾಜು ಮಾಡಲು ಅಧಿಕೃತ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದೆ. ಟೆಂಡರ್‌ದಾರರು ಸರಬರಾಜು ಮಾಡಬೇಕಾಗಿರುವ ಉಪಕರಣಗಳ ವಿವರ ಹಾಗೂ ಟೆಂಡರ್ ನಿಬಂಧನೆಗಳು ಬಿಡ್ ಡಾಕ್ಯುಮೆಂಟ್‌ನಲ್ಲಿ ನಮೂದಿಸಲಾಗಿದ್ದು, ಈ ದಾಖಲೆಯನ್ನು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ https://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳ ಸಹಿ ಮಾಡಿರುವ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. **ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಪಲೋಡ್ ಮಾಡುವ** ದಿ: 17.08.2021. **ಪ್ರೀ–ಬಿಡ್ ಮೀಟಿಂಗ್**: 03.09.2021ರ ಮಧ್ಯಾಹ್ನ 12.00 ಗಂಟೆಗೆ ನಿರ್ದೇಶಕರು ಮತ್ತು ಡೀನ್‌ರವರ ಕೊಠಡಿ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು. **ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಪಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ**: 16.09.2021ರ ಮಧ್ಯಾಹ್ನ 5:00 ಘಂಟೆವರೆಗೆ. ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 18.09.2021ರ ಮಧ್ಯಾಹ್ನ 11:00 ಗಂಟೆಗೆ. **ಟೆಂಡರ್‌ನ ಅಂದಾಜು ಮೊತ್ತ** ರೂ.1,95,00,000/–. **ಕಛೇರಿ ವಿಳಾಸ:** ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾಸಂಸ್ಥೆ, ಇರ್ವಿನ್ ರಸ್ತೆ ಮೈಸೂರು.
ಕೊನೆಯ ದಿನಾಂಕದ ನಂತರ ಬಂದ ಟೆಂಡರ್ ನಮೂನೆಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ ಮತ್ತು ಪರಿಗಣಿಸಲಾಗುವುದಿಲ್ಲ.
ಸಹಿ/– ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು.
DIPR/DDMYS/MCA/420/2021-22

ದೆಹಲಿಗೆ ಜಮೀರ್: ಮತ್ತೆ ಇ.ಡಿ ನೋಟಿಸ್?

ಬೆಂಗಳೂರು: ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ (ಇ.ಡಿ) ನೋಟಿಸ್ ನೀಡಿದ್ದರಿಂದಾಗಿ ಚಾಮರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಖಾನ್ ಅವರು ಶನಿವಾರ ಮತ್ತೆ ದೆಹಲಿಗೆ ತೆರಳಿದ್ದಾರೆ ಎಂದು ಹೇಳಲಾಗುತ್ತಿದೆ.

ದೆಹಲಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಜೊತೆ ಈ ಬಗ್ಗೆ ಪ್ರತಿಕ್ರಿಯಿಸಿದ ಜಮೀರ್, 'ಇ.ಡಿಯಿಂದ ನೋಟಿಸ್ ಬಂದಿದೆ ಎನ್ನುವುದು ಸುಳ್ಳು. ವೈಯಕ್ತಿಕ ಕೆಲಸಕ್ಕೆ ಬಂದಿದ್ದೇನೆ. ನೋಟಿಸ್ ಬಂದರೆ ಮಾಧ್ಯಮಗಳಿಗೆ ತೋರಿಸಿಯೇ ಬರುತ್ತೇನೆ' ಎಂದಿದ್ದಾರೆ.

ಕಳೆದ ವಾರ ದೆಹಲಿಗೆ ತೆರಳಿ ಇ.ಡಿ ವಿಚಾರಣೆ ಎದುರಿಸಿದ್ದ ಜಮೀರ್, ಬಳಿಕ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದರು. ಶಿವಕುಮಾರ್ ಅವರನ್ನು ಶುಕ್ರವಾರ ರಾತ್ರಿ ಮತ್ತೆ ಭೇಟಿ ಮಾಡಿರುವ ಜಮೀರ್, ಹಲವು ವಿಚಾರಗಳ ಬಗ್ಗೆ ಚರ್ಚಿಸಿದ್ದಾರೆ.

'ನನ್ನ ಆಸ್ತಿಯೆಂದರೆ ನನ್ನ ಜನ. ನಾನು ರಾಜಕೀಯ ಜೀವನದಲ್ಲಿ ಇರುವವರೆಗೆ ನನ್ನ ಜನ ತಲೆತಗ್ಗಿಸುವಂಥ ಯಾವ ಕೆಲಸವನ್ನೂ ಮಾಡುವುದಿಲ್ಲ. ಇ.ಡಿ ದಾಳಿಯಿಂದ ಹಲವರ ಅನುಮಾನಗಳು ಪರಿಹಾರವಾದದ್ದೇ ನನಗೆ ಖುಷಿಯ ವಿಚಾರ' ಎಂದು ತಮ್ಮ ಫೇಸ್ ಬುಕ್ ಖಾತೆಯಲ್ಲಿ ಜಮೀರ್ ಬರೆದುಕೊಂಡಿದ್ದಾರೆ.

'ನಾನು ಮನೆ ಕಟ್ಟಿಸಿದ್ದೇ ದೊಡ್ಡ ಅಪರಾಧವೆಂಬಂತೆ ಬಿಂಬಿಸಲಾಗುತ್ತಿದೆ. ಈ ಕಾರಣಕ್ಕಾಗಿ ನನ್ನ ಮೇಲೆ ಇ.ಡಿ ದಾಳಿಯಾಯಿತು. ಅವರ ಎಲ್ಲ ನಿರೀಕ್ಷೆಗಳು ಹುಸಿಯಾಗಿವೆ. ದೇಶದ ವಿವಿಧ ರಾಜ್ಯಗಳ ಪ್ರಬಲ ಮುಸ್ಲಿಂ ನಾಯಕರ ಪಟ್ಟಿ ಸಿದ್ಧಪಡಿಸಿಕೊಂಡು ಅವರಿಗೆ ಕಿರುಕುಳ ನೀಡುವ ಪ್ರಯತ್ನ ನಡೆಯುತ್ತಿದೆ. ಇಂಥ ಷಡ್ಯಂತ್ರದ ಭಾಗವಾಗಿ ನನ್ನ ಮೇಲೂ ದಾಳಿಗಳಾಗುತ್ತಿವೆ. ಆದರೆ, ಇದ್ಯಾವುದಕ್ಕೂ ನಾನು ಹೆದರುವುದಿಲ್ಲ' ಎಂದೂ ಹೇಳಿಕೊಂಡಿದ್ದಾರೆ.

ಅಶೋಕ– ಬೇಗ್ ಚರ್ಚೆ: ಜಮೀರ್ ದೆಹಲಿಗೆ ತೆರಳುತ್ತಿದ್ದಂತೆ, ಇತ್ತ ಮಾಜಿ ಸಚಿವ ರೋಷನ್ ಅವರು ಕಂದಾಯ ಸಚಿವ ಆರ್. ಅಶೋಕ ಅವರನ್ನು ವಿಧಾನ ಸೌಧದಲ್ಲಿ ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ. ಇದು ಕುತೂಹಲ ಮೂಡಿಸಿದೆ.

ಹಂಪಿ ಇತಿಹಾಸ ಪಠ್ಯಕ್ರಮದ ಭಾಗವಾಗಲಿ–ಉಪರಾಷ್ಟ್ರಪತಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ಹಂಪಿಯ ಸಂಪೂರ್ಣ ಇತಿಹಾಸ ಪಠ್ಯಕ್ರಮದ ಭಾಗವಾಗಬೇಕು' ಎಂದು ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಹೇಳಿದರು.

ಶನಿವಾರ ಕುಟುಂಬ ಸಮೇತ ಇಲ್ಲಿನ ವಿಶ್ವಪ್ರಸಿದ್ಧ ಹಂಪಿಗೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ನಮ್ಮ ಪ್ರಾಚೀನ ಸಂಸ್ಕೃತಿ, ಪರಂಪರೆ ಮುಂದಿನ ಪೀಳಿಗೆಗೆ ಸಂರಕ್ಷಿಸಿ ಇಡಬೇಕು. ಅದರಲ್ಲೂ ವಿಜಯನಗರ ಸಾಮ್ರಾಜ್ಯಕ್ಕೆ ವಿಶೇಷ ಮಹತ್ವವಿದೆ. ಇತಿಹಾಸಕಾರರು ಶ್ರೀಕೃಷ್ಣದೇವರಾಯನ ಸಾಧನೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕು' ಎಂದರು.

'ಶ್ರೀ ಕೃಷ್ಣದೇವರಾಯ ಆತನ ಪ್ರಜೆಗಳನ್ನು ಮಕ್ಕಳಂತೆ ನೋಡುತ್ತಿದ್ದ. ಶಿಕ್ಷಣ, ಸಾಹಿತ್ಯ, ಸಂಗೀತ, ನೃತ್ಯ ಹೀಗೆ ಅವರವರ ಅಭಿರುಚಿಗೆ ತಕ್ಕಂತೆ ಪ್ರೋತ್ಸಾಹ ನೀಡುತ್ತಿದ್ದ. ಇಲ್ಲಿನ ಸ್ಮಾರಕಗಳು, ದೇವಾಲಯಗಳು, ಶ್ರೀಮಂತ ವಾಸ್ತುಶಿಲ್ಪ ನೋಡಿದ ನಂತರ ಬಹಳ ಖುಷಿಯಾಗಿದೆ. ಇಂತಹ ಸುಂದರ ಸ್ಥಳ ಮತ್ತೆಲ್ಲಿಯೂ ನೋಡಿಲ್ಲ' ಎಂದು ಮುಕ್ತ ಕಂಠದಿಂದ ಹೊಗಳಿದರು.

'ಯುವಪೀಳಿಗೆ ವಿದ್ಯಾರ್ಥಿ ಜೀವನದಲ್ಲಿ ಒಮ್ಮೆಯಾದರೂ ಹಂಪಿಗೆ ಭೇಟಿ ಕೊಡಬೇಕು. ವಿಜಯನಗರ ಸಾಮ್ರಾಜ್ಯದ ಇತಿಹಾಸ ತಿಳಿದುಕೊಳ್ಳಬೇಕು. ಇಂತಹ ಸ್ಥಳ ನೋಡುವುದರಿಂದ ಮನೋಬಲ, ಆತ್ಮವಿಶ್ವಾಸ ಹೆಚ್ಚಾಗುತ್ತದೆ. ನಮ್ಮ ಪೂರ್ವಜರ ಬಗ್ಗೆ ಹೆಮ್ಮೆ ಮೂಡುತ್ತದೆ. ಸ್ಮಾರಕ ರಕ್ಷಣೆಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಹಾಗೂ ಸ್ಥಳೀಯರ ಪಾತ್ರ ಮಹತ್ವದ್ದಾಗಿದೆ' ಎಂದು ಹೇಳಿದರು.

ಕೋವಿಡ್ ಹರಡುತ್ತಿರುವುದನ್ನು ತಡೆಯಲು ಜಿಲ್ಲಾಡಳಿತವು ವಾರಾಂತ್ಯದಲ್ಲಿ ಸಾರ್ವಜನಿಕರು ಹಂಪಿ ವೀಕ್ಷಣೆಗೆ ನಿರ್ಬಂಧ ಹೇರಿದೆ. ಆದರೆ, ಉಪರಾಷ್ಟ್ರಪತಿಯವರಿಗೆ ಜಿಲ್ಲಾಡಳಿತ ಶನಿವಾರ ಅವಕಾಶ ಕಲ್ಪಿಸಿತ್ತು.

ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರು ಶನಿವಾರ ಕುಟುಂಬ ಸಮೇತ ವಿಶ್ವಪ್ರಸಿದ್ಧ ಹಂಪಿಯ ಕಲ್ಲಿನ ರಥ ವೀಕ್ಷಿಸಿ ಬಳಿಕ ಅದರ ಎದುರು ಛಾಯಾಚಿತ್ರ ತೆಗೆಸಿಕೊಂಡರು

ಧಾರವಾಡದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ಸಂವಾದ

ಕಾಲಕಾಲಕ್ಕೆ ಶಿಕ್ಷಣ ನೀತಿ ಬದಲಾವಣೆ ಅಗತ್ಯ: ಹಿರಿಯ ಸಾಹಿತಿಗಳ ಸಲಹೆ

ಪ್ರಜಾವಾಣಿ ವಾರ್ತೆ

ಧಾರವಾಡ: 'ಇಡೀ ಜಗತ್ತು ಅತ್ಯಂತ ವೇಗವಾಗಿ ಮುನ್ನುಗ್ಗುತ್ತಿರುವ ಸಂದರ್ಭದಲ್ಲಿ ಶಿಕ್ಷಣ ನೀತಿಗಳು ಪ್ರತಿ ಹತ್ತು ವರ್ಷಗಳಿಗೊಮ್ಮೆ ಬದಲಾಗಬೇಕು. ಜತೆಗೆ ಇಂಥ ನೀತಿಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು' ಎಂಬ ಅಭಿಪ್ರಾಯವನ್ನು ಹಿರಿಯ ಸಾಹಿತಿಗಳು ವ್ಯಕ್ತಪಡಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ಶನಿವಾರ ನಡೆಸಿದ ಸಂವಾದದಲ್ಲಿ ಪಾಲ್ಗೊಂಡ ಹಿರಿಯ ಸಾಹಿತಿಗಳು ಸಭೆಯಲ್ಲಿ ತಮ್ಮ ಕಾಳಜಿಯನ್ನು ವ್ಯಕ್ತಪಡಿಸಿದರು.

'ಬದಲಾಗುತ್ತಿರುವ ಪರಿಸ್ಥಿತಿಗೆ ಶಿಕ್ಷಣ ನೀತಿಯಲ್ಲಿ ಬದಲಾವಣೆ ಅಗತ್ಯ. ಆದರೆ ದೇಶದ ಅಭಿವೃದ್ಧಿಗಾಗಿ ಸಂಶೋಧನಾಧಾರಿತ ಶಿಕ್ಷಣವನ್ನು ಜಾರಿಗೊಳಿಸಬೇಕು' ಎಂದು ಹಿರಿಯ ಸಾಹಿತಿ ಪ್ರೊ. ಮಾಲತಿ ಪಟ್ಟಣಶೆಟ್ಟಿ ತಮ್ಮ ಅಭಿಪ್ರಾಯವನ್ನು ತಿಳಿಸಿ, ಲಿಖಿತದಲ್ಲಿ ದಾಖಲಿಸಿದರು.

ಧಾರವಾಡದ ಕಲ್ಯಾಣನಗರದಲ್ಲಿರುವ ಡಾ. ಚೆನ್ನವೀರ ಕಣವಿ ಅವರ ಮನೆಗೆ ಶನಿವಾರ ಭೇಟಿ ನೀಡಿದ ಡಾ. ಸಿ.ಎನ್.ಅಶ್ವತ್ಥನಾರಾಯಣ ಅವರು ಅವರೊಂದಿಗೆ ಸಮಾಲೋಚನೆ ನಡೆಸಿದರು. ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಬಿ. ಗುಡಸಿ ಇದ್ದಾರೆ.

ಹರ್ಷ ಡಂಬಳ ಅವರು, 'ನರ್ಸರಿಯಿಂದ ಸ್ನಾತಕೋತ್ತರ ಕೋರ್ಸ್‌ವರೆಗೆ ನೂತನ ಶಿಕ್ಷಣ ನೀತಿ ಅನುಷ್ಠಾನಕ್ಕೆ ತರುವ ಬೋಧಕ ಸಿಬ್ಬಂದಿಯ ಕಡ್ಡಾಯ ಮೌಲ್ಯಮಾಪನ ಅಗತ್ಯ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಡಾ. ಅಶ್ವತ್ಥನಾರಾಯಣ ಅವರು, 'ಶಿಕ್ಷಣದಲ್ಲಿ ಸಮಾನತೆ ತರುವ ಉದ್ದೇಶದಿಂದ ಶಿಕ್ಷಣ ನೀತಿ ರೂಪಿತವಾಗಿದೆ. ಕಲಿಕೆಯೊಂದಿಗೆ ಜ್ಞಾನ ಹಾಗೂ ಕೌಶಲ ಎರಡನ್ನೂ ಕಲಿಸುತ್ತ ವಿದ್ಯಾರ್ಹತೆಯೊಂದಿಗೆ ಉದ್ಯೋಗಾರ್ಹತೆಗೂ ಹೆಚ್ಚು ಮಹತ್ವ ನೀಡಲಾಗುತ್ತದೆ. ಶಿಕ್ಷಣ ನೀತಿಯ ಸಮರ್ಪಕ ಜಾರಿಗೆ ಸರ್ಕಾರ ಬದ್ಧವಾಗಿದೆ' ಎಂದರು.

ಶಿಕ್ಷಣ ತಜ್ಞ ಗೋಪಾಲಕೃಷ್ಣ ಜೋಶಿ ಮಾತನಾಡಿ, '21ನೇ ಶತಮಾನಕ್ಕೆ ಯುವಕರನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ನೂತನ ಶಿಕ್ಷಣ ನೀತಿಯ ಪರಿಣಾಮಕಾರಿ ಅನುಷ್ಠಾನ ಅಗತ್ಯವಾಗಿದೆ. ಇದಕ್ಕೆ ನಮ್ಮ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ' ಎಂದರು.

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಬಿ. ಗುಡಸಿ, ಡಾ. ಡಿ.ಎಂ.ಹಿರೇಮಠ, ಡಾ. ಶಾಂತಿನಾಥ ದಿಬ್ಬದ, ಡಾ. ಬಾಳಣ್ಣ ಶೀಗಿಹಳ್ಳಿ, ಡಾ. ವಿಜಯಕುಮಾರ ಗಿಡ್ನವರ, ಡಾ. ಪಜ್ಞಾ ಮತ್ತಿಹಳ್ಳಿ, ಡಾ. ಜಿನದತ್ತ ಹಡಗಲಿ, ಡಾ. ಪ್ರಕಾಶ ಗರುಡ, ಕೆ.ಎಚ್. ನಾಯಕ, ಶಂಕರ ಕುಂಬಿ ಇದ್ದರು.

ನಂತರ ಹಿರಿಯ ಸಾಹಿತಿ ಡಾ. ಚೆನ್ನವೀರ ಕಣವಿ ಅವರ ಮನೆಗೆ ಭೇಟಿ ನೀಡಿ ಶಿಕ್ಷಣ ನೀತಿ ಕುರಿತು ಸಚಿವರು ವಿವರಿಸಿದರು. ಇದಕ್ಕೆ ಪ್ರತಿಕ್ರಿಯಸಿದ ಡಾ. ಕಣವಿ, 'ಕನ್ನಡಕ್ಕೆ ಹಾಗೂ ಮಾತೃಭಾಷೆ ಶಿಕ್ಷಣಕ್ಕೆ ಎಲ್ಲೂ ಧಕ್ಕೆ ಆಗದಂತೆ ಜಾರಿ ಆಗಲಿ' ಎಂದರು.

ಡಾ.ಜಿ.ಎಂ.ಹೆಗಡೆ, ಡಾ. ಜ್ಯೋತಿಗೆ 'ವರ್ಧಮಾನ ಸಾಹಿತ್ಯ ಪ್ರಶಸ್ತಿ'

ಮೂಡುಬಿದಿರೆ: ಇಲ್ಲಿನ ವರ್ಧಮಾನ ಪ್ರಶಸ್ತಿ ಪೀಠವು 2020ರ ಸಾಲಿನ ಪ್ರಶಸ್ತಿ ಪ್ರಕಟಿಸಿದ್ದು, ಧಾರವಾಡದ ಡಾ.ಜಿ.ಎಂ.ಹೆಗಡೆ ಅವರಿಗೆ 'ವರ್ಧಮಾನ ಸಾಹಿತ್ಯ ಪ್ರಶಸ್ತಿ' ಮತ್ತು ಮೈಸೂರಿನ ಡಾ. ಜ್ಯೋತಿ ಶಂಕರ್ ಅವರಿಗೆ 'ವರ್ಧಮಾನ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿ'ಯನ್ನು ಘೋಷಿಸಿದೆ.

ಪ್ರಶಸ್ತಿ ಪೀಠದ ಕಾರ್ಯಾಧ್ಯಕ್ಷ ಎಸ್.ಡಿ.ಸಂಪತ್ ಸಾಮ್ರಾಜ್ಯ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಸಭೆಯಲ್ಲಿ ತೀರ್ಪುಗಾರರು ಈ ಆಯ್ಕೆ ಮಾಡಿದ್ದಾರೆ ಎಂದು ಪೀಠದ ಪ್ರಧಾನ ನಿರ್ದೇಶಕ ಡಾ.ನಾ.ಮೊಗಸಾಲೆ ತಿಳಿಸಿದ್ದಾರೆ.

ಡಾ.ಜಿ.ಎಂ. ಹೆಗಡೆ

ಡಾ. ಜ್ಯೋತಿ ಶಂಕರ್

ವರ್ಧಮಾನ ಸಾಹಿತ್ಯ ಪ್ರಶಸ್ತಿಗೆ ₹25 ಸಾವಿರ ಮತ್ತು ವರ್ಧಮಾನ ಉದಯೋನ್ಮುಖ ಪ್ರಶಸ್ತಿಗೆ ₹15 ಸಾವಿರ ಗೌರವ ಸಂಭಾವನೆ ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭ ದಸರಾ ಉತ್ಸವ ಸಂದರ್ಭದಲ್ಲಿ ಮೂಡುಬಿದಿರೆಯಲ್ಲಿ ನಡೆಯಲಿ ಎಂದು ಹೇಳಿದ್ದಾರೆ.

ಬಂದೂಕಿನಿಂದ ಸಿಡಿಮದ್ದು: ನಳಿನ್‌ಕುಮಾರ್ ಸಮರ್ಥನೆ

ಕಲಬುರ್ಗಿ: 'ಯಾದಗಿರಿ ಜಿಲ್ಲೆಯ ಯರಗೋಳದಲ್ಲಿ ಈಚೆಗೆ ಬಿಜೆಪಿ ಜನಾಶೀರ್ವಾದ ಯಾತ್ರೆಯಲ್ಲಿ ಅಭಿಮಾನಿಗಳು ಬಂದೂಕಿನಿಂದ ಸಿಡಿಮದ್ದು ಸಿಡಿಸಿದ್ದು ಅಪರಾಧವೇನಲ್ಲ. ಸಂಭ್ರಮದ ಸಮಾರಂಭಗಳಲ್ಲಿ ಈ ಪದ್ಧತಿ ಹಿಂದಿನಿಂದಲೂ ಇದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಸಮರ್ಥಿಸಿಕೊಂಡರು.

'ಕೇಂದ್ರ ಸಚಿವ ಭಗವಂತ ಖೂಬಾ ಅವರು ಜನಾಶೀರ್ವಾದ ಯಾತ್ರೆಯಲ್ಲಿ ಅಲ್ಲಿಗೆ ಹೋದಾಗ ಅವರ ಅಭಿಮಾನಿಗಳು ಸಿಡಿಮದ್ದು ಸಿಡಿಸಿದ್ದಾರೆ. ಆದರೆ, ಬಂದೂಕಿನಲ್ಲಿ ಗುಂಡು ಇರಲಿಲ್ಲ. ಶುಭ ಸಮಾರಂಭ ನಡೆದಾಗ ಅಥವಾ ಯಾರಾದರೂ ಮೃತಪಟ್ಟಾಗ ಈ ರೀತಿ ಮದ್ದು ಸಿಡಿಸುವ ಪದ್ಧತಿ ಕೊಡಗು ಜಿಲ್ಲೆಯಲ್ಲೂ ಇದೆ. ಅದೇ ರೀತಿಯ ಖುಷಿಯನ್ನು ಇಲ್ಲಿ ವ್ಯಕ್ತಪಡಿಸಲಾಗಿದೆ' ಎಂದು ಅವರು ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಆದರೂ, ಈ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ವರದಿ ಬರಲಿ' ಎಂದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **'Deccan Herald-Prajavani Relief Trust'** ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - ***0404101200385***
IFSC code - ***CNRB0000404***
MICR Code - ***560015009***

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಶುಲ್ಕ ಪಾವತಿಗೆ ಸಹಾಯ

'ಪ್ರಜಾವಾಣಿ' ನೀಡಿದ ಆರ್ಥಿಕ ಸಹಾಯದಿಂದ ಕಾಲೇಜು ಶುಲ್ಕ ಪಾವತಿಗೆ ಸಹಾಯವಾಯಿತು. ಉತ್ತಮ ಕಾಲೇಜಿನಲ್ಲಿ ಓದಬೇಕು ಎಂಬ ನನ್ನ ಕನಸಿಗೆ ಈ ಹಣ ಸಹಾಯಕ್ಕೆ ಬಂತು. ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಪತ್ರಿಕೆಯು ಮಾಡುತ್ತಿರುವ ನೆರವು ಉತ್ತಮವಾದುದು. ಈ ಕಾರ್ಯ ಮುಂದುವರಿಯಲಿ.

ಎಂ.ಎಸ್.ನಾಗಶ್ರೀ, ಮಂಡ್ಯ

ಸಂಕಷ್ಟದಲ್ಲಿ ಪೋಷಿಸಿತು

ಕೋವಿಡ್‌ನಿಂದ ಹಲವು ಪೋಷಕರು ಕೆಲಸ ಕಳೆದುಕೊಂಡಿದ್ದಾರೆ. ಈ ಪರಿಸ್ಥಿತಿಯಲ್ಲಿ ಮಕ್ಕಳ ಶಿಕ್ಷಣದ ಚಿಂತೆಯಲ್ಲಿದ್ದವರಿಗೆ 'ಪ್ರಜಾವಾಣಿ'ಯ ಶೈಕ್ಷಣಿಕ ನೆರವು ಧೈರ್ಯ ನೀಡಿದೆ. ಈ ಹಣದಿಂದ ವಿಜ್ಞಾನ ವಿಭಾಗಕ್ಕೆ ಪ್ರವೇಶ ಶುಲ್ಕ ಪಾವತಿಸಲು ಅನುಕೂಲವಾಯಿತು. ಎಲ್ಲ ಬಡ ಮಕ್ಕಳ ಶಿಕ್ಷಣಕ್ಕೆ ನೆರವು ಸಿಗಲಿ.

ಬಿ.ಎನ್.ತ್ರಿಶೂಲ್ ಗೌಡ, ನಾಗರಬಾವಿ, ಬೆಂಗಳೂರು

ಪ್ರಜಾವಾಣಿ
EXAM ಪರಿಚಯಿಸುತ್ತಿದ್ದೇವೆ MASTERMIND
DH DECCAN HERALD

ಯು.ಪಿ.ಎಸ್.ಸಿ, ಕೆ.ಪಿ.ಎಸ್.ಸಿ, ಪಿ.ಎಸ್.ಐ, ಎಫ್.ಡಿ.ಎ, ಬ್ಯಾಂಕಿಂಗ್ ಪಿ.ಒ ಇತ್ಯಾದಿ
ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ನಿಮ್ಮ ಇ–ಮಿತ್ರ

ವಿಶೇಷ ಆರಂಭಿಕ ಕೊಡುಗೆ*
~~₹599/-~~
₹399/-
ಒಂದು ವರ್ಷದ ಅವಧಿಗೆ

*ಸೆಪ್ಟೆಂಬರ್, 2021 ರಿಂದ ಪ್ರಾರಂಭ

● ದ್ವಿಭಾಷಿ ಇ–ಪೇಪರ್ (ಇಂಗ್ಲಿಷ್ ಮತ್ತು ಕನ್ನಡದಲ್ಲಿ), ವಾರದ 5 ದಿನ ಲಭ್ಯ ● ಪರೀಕ್ಷಾ ಸಹಾಯಕ ಟಿಪ್ಸ್, ಅಪ್‌ಡೇಟ್ಸ್, ಅಭ್ಯಾಸ ಪ್ರಶ್ನೆ ಪತ್ರಿಕೆಗಳನ್ನು ಪಡೆಯಿರಿ ಹಾಗೂ ಆರ್ಕೈವ್ ಮಾಡಿದ ವಿಷಯಗಳನ್ನು ವೀಕ್ಷಿಸಿ ● ಆಯ್ದ ವಿಷಯಗಳನ್ನು ವೀಡಿಯೊ ಸ್ವರೂಪದಲ್ಲಿ ವೀಕ್ಷಿಸಬಹುದು ● ನಿಮ್ಮ ಆಯ್ಕೆಯ ಆರ್ಟಿಕಲ್ಸ್ ಡೌನ್‌ಲೋಡ್ ಮಾಡಬಹುದು

ನಿಮ್ಮ ಪರೀಕ್ಷಾ ಸಿದ್ಧತೆಗೆ ಸಮಗ್ರ ವಿಷಯಗಳನ್ನು ಒಳಗೊಂಡಿದೆ

ವಸ್ತುನಿಷ್ಠ ವಿಷಯಗಳು
ಪ್ರಚಲಿತ ವಿದ್ಯಮಾನ । ಸ್ಥಿರ ವಿಷಯಗಳು । ಸಾಮಾನ್ಯ ಜ್ಞಾನ । ಮಾನಸಿಕ ಸಾಮರ್ಥ್ಯ

ವಿವರಣಾತ್ಮಕ ವಿಷಯಗಳು
ಭಾಷೆಯ ಅತ್ಯುನ್ನತ ಬಳಕೆ । ವಿಶ್ಲೇಷಣೆ ಮತ್ತು ಅಭಿಪ್ರಾಯ । ಸಂಪಾದಕೀಯಗಳು । ಪ್ರಬಂಧ ಮತ್ತು ಅನುವಾದ

ಸಂದರ್ಶನ
ವ್ಯಕ್ತಿತ್ವ ವಿಕಸನ । ಸಂವಹನ ಕಲೆ । ಉಪಯುಕ್ತ ಸಲಹೆಗಳು

ಚಂದಾದಾರರಾಗಲು bit.ly/PVMastermind ಭೇಟಿ ಕೊಡಿ ಅಥವಾ QR code ಸ್ಕ್ಯಾನ್ ಮಾಡಿ

ಚಂದಾದಾರರಾಗಿ ಆಕರ್ಷಕ ಬಹುಮಾನಗಳನ್ನು ಗೆಲ್ಲಿ*

1 ಎಲೆಕ್ಟ್ರಿಕ್ ಸ್ಕೂಟರ್ | 20 ಸ್ಮಾರ್ಟ್ ವಾಚುಗಳು | 3 ಸ್ಮಾರ್ಟ್ ಫೋನ್‌ಗಳು | 3 ಟ್ಯಾಬ್ಲೆಟ್‌ಗಳು

*ಷರತ್ತುಗಳು ಅನ್ವಯ.

ಚಂದಾದಾರರಾಗಲು ಸಂಪರ್ಕಿಸಿ
ಬೆಂಗಳೂರು ನಗರ: 98454 42703
ಬೆಂಗಳೂರು ಗ್ರಾಮಾಂತರ: 96069 12160
ಮೈಸೂರು: 98450 70167
ಮಂಗಳೂರು: 98808 42842
ದಾವಣಗೆರೆ: 94489 14995
ಉತ್ತರ ಕರ್ನಾಟಕ: 96069 31753
ಹೆಚ್ಚಿನ ಮಾಹಿತಿಗಾಗಿ subscribe.mastermind@printersmysore.co.in ಗೆ ಇ–ಮೇಲ್ ಮಾಡಿ

ಭೂ ಕೊಳ್ಳೆಗೆ ಅರೆ ನ್ಯಾಯಿಕ ವ್ಯವಸ್ಥೆಯೇ 'ಹೆದ್ದಾರಿ'

• ಮಂಜುನಾಥ ಹೆಬ್ಬಾರ್

ಬೆಂಗಳೂರು: ಭೂದಾಖಲೆಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರ್, ಉಪವಿಭಾಗಾಧಿಕಾರಿ, ವಿಶೇಷ ಜಿಲ್ಲಾಧಿಕಾರಿ, ಜಿಲ್ಲಾಧಿಕಾರಿ ಮೊದಲಾದ ಅರೆನ್ಯಾಯಿಕ ಅಧಿಕಾರಿಗಳು ನೀಡುವ ಆದೇಶಗಳು ಭೂ ಅಕ್ರಮಗಳಿಗೆ ದಾರಿ ಮಾಡಿಕೊಡುತ್ತಿವೆ.

ಕೆಲವೊಮ್ಮೆ ನಕಲಿ ದಾಖಲೆ ಪತ್ರ ನಂಬಿ, ಇನ್ನು ಕೆಲವೊಮ್ಮೆ ಉದ್ದೇಶಪೂರ್ವಕವಾಗಿ ಸರ್ಕಾರಿ ಜಮೀನನ್ನು ಖಾಸಗಿಯವರ ಹೆಸರಿಗೆ ಅಧಿಕಾರಿಗಳು ಆದೇಶ ಮಾಡಿರುವ ಅನೇಕ ಪ್ರಕರಣಗಳು ರಾಜ್ಯದಾದ್ಯಂತ ನಡೆದಿವೆ. ಅರೆ ನ್ಯಾಯಿಕ ವ್ಯವಸ್ಥೆಯೊಳಗಿನ ಈ ಅಧಿಕಾರಿಗಳ ಆದೇಶವೇ ಅನೇಕ ಸಂದರ್ಭಗಳಲ್ಲಿ 'ತೀರ್ಪು' ಆಗಿಬಿಡುವ ಸಾಧ್ಯತೆಯೇ ಹೆಚ್ಚು. ಅಕ್ರಮಗಳನ್ನು ಪ್ರಶ್ನಿಸಿ, ಸರ್ಕಾರವೇ ನ್ಯಾಯಾಲಯಕ್ಕೆ ಹೋದರೂ ಖಾಸಗಿಯವರ ಪರವಾಗಿ ತೀರ್ಪು ಬರುವ ಸಂಭವನೀಯತೆಯೇ ಅಧಿಕ.

ಬೆಂಗಳೂರು ಸೇರಿದಂತೆ ಮಹಾನಗರಗಳಲ್ಲಿ ಕಳೆದ ಎರಡು ದಶಕಗಳಲ್ಲಿ ಜಮೀನಿನ ಬೆಲೆ ಗಗನಮುಖಿಯಾಗಿದೆ. ಹೀಗಾಗಿಯೇ ಜಮೀನು ಅಕ್ರಮವು ಭಾರಿ ಪ್ರಮಾಣದಲ್ಲಿ ಹೆಚ್ಚುತ್ತಿದೆ. ಎರಡು ದಶಕಗಳ ಈಚೆವರೆಗೂ ಭೂ ದಾಖಲೆಗಳ ಸಂರಕ್ಷಣೆಗೆ ಅಷ್ಟಾಗಿ ಮಹತ್ವ ನೀಡುತ್ತಿರಲಿಲ್ಲ. 70- 80 ವರ್ಷಗಳಷ್ಟು ಹಳೆಯ ದಾಖಲೆಗಳನ್ನು ಸುರಕ್ಷಿತವಾಗಿ ಕಾಪಾಡುವುದಕ್ಕೂ ಅಗತ್ಯ ವ್ಯವಸ್ಥೆಗಳು ಇರಲಿಲ್ಲ. ಕ್ರಯಪತ್ರದ ಆಧಾರದಲ್ಲಿ ಜಮೀನಿನ ಮಾಲೀಕತ್ವಗಳು ಕೈ ಬದಲಾಗುತ್ತಿದ್ದವು. ಕ್ರಯಪತ್ರದ ಆಧಾರದಲ್ಲೇ ಪಹಣಿಯಲ್ಲೂ (ಆರ್‌ಟಿಸಿ) ಜಮೀನಿನ ಮಾಲೀಕತ್ವ ಬದಲಾಯಿಸಲಾಗುತ್ತಿತ್ತು. ಮೂಲ ಕ್ರಯಪತ್ರವನ್ನು ಅಥವಾ ಜಮೀನು ಹಂಚಿಕೆಯಾದ ಕುರಿತ ದಾಖಲೆಗಳನ್ನು ಹಾಜರುಪಡಿಸುವಂತೆ ಕಂದಾಯ ಅಧಿಕಾರಿಗಳು ಕೇಳುತ್ತಿರಲಿಲ್ಲ. ಈ ಅವಧಿಯಲ್ಲಿ ಅನೇಕ ಅಕ್ರಮಗಳು ನಡೆದಿವೆ.

ನಕಲಿ ದಾಖಲೆಗಳನ್ನು ಸೃಷ್ಟಿಸುವ ವ್ಯವಸ್ಥಿತ ಜಾಲಗಳು ನಗರದಲ್ಲಿವೆ. ಭೂಮಿಯ ಮಾಲೀಕತ್ವಕ್ಕೆ ಸಂಬಂಧಿಸಿ ಯಾವುದೇ ಆದೇಶ ಮಾಡುವುದಾದರೂ ಅಧಿಕಾರಿಗಳು ಅದಕ್ಕೆ ಸರ್ಕಾರದ ಮೂಲ ದಾಖಲೆಗಳನ್ನೇ ಅವಲಂಬಿಸಬೇಕಾಗುತ್ತದೆ. ದಾಖಲೆಗಳನ್ನು ಮೈ ಎಲ್ಲ ಕಣ್ಣಾಗಿ ಪರಿಶೀಲಿಸಬೇಕಾಗುತ್ತದೆ. ಸಂದೇಹ ಬಂದಾಗ ಮೂಲದಾಖಲೆಗಳನ್ನು ಪರಿಶೀಲಿಸಿದರೆ ಅಕ್ರಮಗಳನ್ನು ತಪ್ಪಿಸಬಹುದು. ಆದರೆ, ಅನೇಕ ಅಧಿಕಾರಿಗಳೇ ದಲ್ಲಾಳಿಗಳ ಜೊತೆ ಶಾಮೀಲಾಗಿ ಸರ್ಕಾರಿ ಜಮೀನು ಖಾಸಗಿಯವರ ಪಾಲಾಗಲು ಅವಕಾಶ ಮಾಡಿಕೊಡುತ್ತಿದ್ದಾರೆ. ಇದಕ್ಕಾಗಿ ಮೂಲ ದಾಖಲೆಗಳ ಕಡತವನ್ನೇ ತಿರುಚಿದ ಪ್ರಕರಣಗಳೂ ನಡೆದಿವೆ.

ಭೂಮಿಯ ಮಾಲೀಕತ್ವಕ್ಕೆ ಸಂಬಂಧಿಸಿದ ಸಾಮಾನ್ಯವಾಗಿ ಮೂರು ರೀತಿಯ ಅಕ್ರಮಗಳು ನಡೆಯುತ್ತವೆ. ಉಪನೋಂದಣಾಧಿಕಾರಿ ಕಚೇರಿಯಲ್ಲಿ ಜಮೀನು ವಿಕ್ರಯದ ನೋಂದಣಿಗೆ ಸಂಬಂಧಿಸಿದ ಕಡತದ ಪುಟಗಳನ್ನೇ ಬದಲಾಯಿಸಿದ ಉದಾಹರಣೆಗಳಿವೆ.

ಬೆಂಗಳೂರಿನಲ್ಲಿ ಜಮೀನಿನ ಮೂಲದಾಖಲೆಗಳು ಲಭ್ಯ ಇಲ್ಲದ ಕಡೆ ಭಾರಿ ಪ್ರಮಾಣದಲ್ಲಿ ಭೂಹಗರಣಗಳು ನಡೆಯುತ್ತಿವೆ. ಹೊಸ ಜಿಲ್ಲೆ ಅಥವಾ ತಾಲ್ಲೂಕು ರಚನೆಯಾದಾಗ ಭೂದಾಖಲೆಗಳ ಕಡತಗಳು ಹೊಸ ಕಚೇರಿಗೆ ವರ್ಗಾವಣೆ ಆಗುತ್ತವೆ. ಆದರೆ, ಅನೇಕ ದಾಖಲೆಗಳು ಹಳೆ ಕಚೇರಿಯಲ್ಲೇ ಉಳಿಯುತ್ತವೆ. ಈ ಕಡತ ವರ್ಗಾವಣೆ ಸಮರ್ಪಕವಾಗಿ ನಡೆಯದ ಕಾರಣ ಈಗಿನ ಅಧಿಕಾರಿಗಳು ಭೂದಾಖಲೆಗಳನ್ನು ಸ್ಪಷ್ಟವಾಗಿ ಪರಿಶೀಲಿಸಲು ಸಾಧ್ಯವಾಗುವುದಿಲ್ಲ. ಈ ಲೋಪವನ್ನು ಭೂಗಳ್ಳರು ದುರುಪಯೋಗಪಡಿಸಿಕೊಂಡು ಅಕ್ರಮ ದಾಖಲೆಗಳನ್ನು ಸೃಷ್ಟಿಸುತ್ತಿದ್ದಾರೆ. ಅನೇಕ ಪ್ರಕರಣಗಳಲ್ಲಿ ಕೆಲವು ಅಧಿಕಾರಿಗಳೇ ಭೂಗಳ್ಳರ ಜೊತೆ ಶಾಮೀಲಾಗಿದ್ದು ಗುಟ್ಟಾಗಿ ಉಳಿದಿಲ್ಲ.

'ಬೆಂಗಳೂರಿನಲ್ಲಿ ಜಾಲ ಹೋಬಳಿ, ಬಿದರಹಳ್ಳಿ ಹೋಬಳಿಗಳಲ್ಲಿ ಇಂತಹ ಅಕ್ರಮ ಜಾಸ್ತಿ. ಜಾಲ ಹೋಬಳಿಯು ಹಿಂದೆ ದೇವನಹಳ್ಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿತ್ತು. 1985ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿಗೆ ಸೇರ್ಪಡೆಯಾಯಿತು. ಕೆಲವು ಮೂಲದಾಖಲೆಗಳು ಹೊಸ ಕಚೇರಿಗೆ ಹಸ್ತಾಂತರವಾಗಿಯೇ ಇಲ್ಲ. ಹಳೆಯ ಕಚೇರಿಗಳಲ್ಲೂ ಅವು ಲಭ್ಯವಿಲ್ಲ. ಸಾಗುವಳಿ ಚೀಟಿಗೆ ಸಂಬಂಧಿಸಿ ಅಕ್ರಮ ಸೃಷ್ಟಿಸಲು ಇದರಿಂದಾಗಿ ಅವಕಾಶ ಸಿಕ್ಕಂತಾಗಿದೆ. ಬೆಂಗಳೂರು ಮೆಟ್ರೊ ರೈಲು ಯೋಜನೆಗೆ ಬೇಕಾಗಿದ್ದ ನೂರಾರು ಎಕರೆ ಭೂಮಿಗೆ ಸಂಬಂಧಿಸಿ ಅಕ್ರಮವಾಗಿ ಭೂ ಪರಿಹಾರ ಪಡೆಯಲು ಯತ್ನಿಸಿದ ಪ್ರಕರಣ ನಡೆಯುವುದಕ್ಕೂ ಇದೇ ಕಾರಣ. ಹಿಂದೆ ಹೊಸಕೋಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿದ್ದ ಬಿದರಹಳ್ಳಿ ಹೋಬಳಿಯ ಪ್ರದೇಶಗಳು ಬೆಂಗಳೂರು ದಕ್ಷಿಣ ತಾಲ್ಲೂಕಿಗೆ, ನಂತರ ಪೂರ್ವ ತಾಲ್ಲೂಕಿಗೆ ವರ್ಗಾವಣೆಯಾದವು. ಇಲ್ಲೂ ಮೂಲದಾಖಲೆಗಳ ಕುರಿತ ಗೊಂದಲಗಳಿವೆ. ಇದನ್ನೇ ದುರುಪಯೋಗಪಡಿಸಿಕೊಂಡು ಅಕ್ರಮ ಎಸಗಲಾಗುತ್ತಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಭೂಪರಿವರ್ತನೆ ಮಾಡದೆಯೇ ಬಡಾವಣೆ ನಿರ್ಮಿಸಿ ನಿವೇಶನಗಳನ್ನು ಮಾರಾಟ ಮಾಡುವುದು ಇನ್ನೊಂದು ರೀತಿಯ ಅಕ್ರಮ. ಇಂತಹ ಪ್ರಕರಣದಲ್ಲಿ ಕೃಷಿ ಜಮೀನನ್ನು ಕೃಷಿ ಉದ್ದೇಶಕ್ಕಾಗಿಯೇ ಮಾರಾಟ ಮಾಡಲಾಗುತ್ತಿದೆಯೇ ಎಂಬುದನ್ನು ಅಧಿಕಾರಿಗಳು ಖುದ್ದಾಗಿ ಸ್ಥಳ ಪರಿಶೀಲನೆ ನಡೆಸಿ ಕ್ರಮಕೈಗೊಳ್ಳುವ ವ್ಯವಸ್ಥೆ ಇಲ್ಲ. ಇದು ಬೆಂಗಳೂರು ಆಸುಪಾಸಿನಲ್ಲಿ ಕಂದಾಯ ನಿವೇಶನಗಳ ಹಾವಳಿ ಹೆಚ್ಚುವುದಕ್ಕೆ ಕಾರಣವಾಗಿದೆ.

'ಅದಕ್ಕೆಲ್ಲ ಕಡಿವಾಣ ಹಾಕಲು ಇರುವ ಏಕೈಕ ದಾರಿ ಎಂದರೆ ಎಲ್ಲ ಮೂಲದಾಖಲೆ ಹಾಗೂ ಅವುಗಳ ವಿಕ್ರಯಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಸ್ಕ್ಯಾನ್ ಮಾಡಿಸಿ ಕಂಪ್ಯೂಟರೀಕರಣಗೊಳಿಸುವುದು. ಮುಂದಿನ ದಿನಗಳಲ್ಲಿ ಅಕ್ರಮ ತಡೆಯಲು ಇದು ಸಹಕಾರಿ. ಕೆಲ ವರ್ಷಗಳ ಹಿಂದೆ ದಾಖಲೆ ಡಿಜಿಟಲೀಕರಣ ಮಾಡುವ ಜವಾಬ್ದಾರಿಯನ್ನು ಖಾಸಗಿ ಸಂಸ್ಥೆಗೆ ಗುತ್ತಿಗೆ ನೀಡಲಾಗಿತ್ತು. ಸರ್ಕಾರ ಹಣ ಪಾವತಿಸದ ಕಾರಣ, ಸ್ಕ್ಯಾನ್ ಮಾಡಿದ ದಾಖಲೆಗಳನ್ನು ಆ ಸಂಸ್ಥೆ ಹಸ್ತಾಂತರಿಸಿಲ್ಲ. ಭೂದಾಖಲೆಗಳ ಕಂಪ್ಯೂಟರೀಕರಣ ಮಾಡುವುದೇನೂ ಕಷ್ಟವಲ್ಲ. ಆದರೆ, ಭೂ ಅಕ್ರಮ ತಡೆಯುವ ಇಚ್ಛಾಶಕ್ತಿ ಸರ್ಕಾರಕ್ಕೂ ಇದ್ದಂತಿಲ್ಲ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಎ.ಟಿ. ರಾಮಸ್ವಾಮಿ ಅಧ್ಯಕ್ಷತೆಯ ಜಂಟಿ ಸದನ ಸಮಿತಿ(2007) ಗುರುತಿಸಿದಂತೆ ಬೆಂಗಳೂರು ನಗರ ಮತ್ತು ನಗರ ಜಿಲ್ಲೆಯಲ್ಲಿ ಆಗಿರುವ ಸರ್ಕಾರಿ ಭೂಮಿ ಒತ್ತುವರಿ

ಯಾವ ಇಲಾಖೆಗೆ ಸೇರಿದ ಜಾಗ	ಎಕರೆ	ಒತ್ತುವರಿದಾರರ ಸಂಖ್ಯೆ
ಕಂದಾಯ ಇಲಾಖೆ	21,706	25,713
ಅರಣ್ಯ ಇಲಾಖೆ (ಬೆಂಗಳೂರು ನಗರ ವಿಭಾಗ)	1,099	312
ಅರಣ್ಯ ಇಲಾಖೆ (ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ)	767	813
ಅರಣ್ಯ ಇಲಾಖೆ (ಕೆರೆಗಳು)	313	553
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	2,878	4,595
ವಕ್ಫ್ ಮಂಡಳಿ	263	97
ಸಹಕಾರ ಇಲಾಖೆ	86	2
ಪಶು ಸಂಗೋಪನಾ ಇಲಾಖೆ	48	248
ಮುಜರಾಯಿ ಇಲಾಖೆ	61	199
ಕರ್ನಾಟಕ ಗೃಹ ಮಂಡಳಿ	34	302
ಕೆಐಎಡಿಬಿ	32	601
ಕರ್ನಾಟಕ ಕೊಳಚೆ ಪ್ರದೇಶ ನಿರ್ಮೂಲನಾ ಮಂಡಳಿ	12	202
ಬಿಬಿಎಂಪಿ	13.09	124
ನಿಮ್ಹಾನ್ಸ್	3	01
ಬೆಂಗಳೂರು ವಿಶ್ವವಿದ್ಯಾಲಯ	13	50
ಒಟ್ಟು	27,336.09	33,812

ಕೆ.ಬಿ. ಕೋಳಿವಾಡ ಅಧ್ಯಕ್ಷತೆಯ ಬೆಂಗಳೂರು ಮತ್ತು ಸುತ್ತಮುತ್ತಲಿನ ಕೆರೆ ಒತ್ತುವರಿ ಅಧ್ಯಯನ ಸದನ ಸಮಿತಿ(2017) ಗುರುತಿಸಿದ ಒತ್ತುವರಿ (ಎಕರೆಗಳಲ್ಲಿ)

ಜಿಲ್ಲೆ	ಒಟ್ಟು ಕೆರೆಗಳು	ಕೆರೆಯ ಪ್ರದೇಶ	ಕೆರೆಯ ಒಟ್ಟು ಒತ್ತುವರಿ	ಸರ್ಕಾರಿ ಸಂಸ್ಥೆಗಳಿಂದ ಒತ್ತುವರಿ	ಖಾಸಗಿ ಅವರಿಂದ ಆಗಿರುವ ಒತ್ತುವರಿ
ಬೆಂಗಳೂರು ನಗರ	837	27,899	4,533	2,194	2,340
ಬೆಂಗಳೂರು ಗ್ರಾಮಾಂತರ	710	30,032	6,252	1,062	5,189
ಒಟ್ಟು	1,547	57,932	10,785	3,257	7,530

ಭೂಸ್ವಾಧೀನದ ಬೆನ್ನೇರಿ ಅಕ್ರಮದ ಸವಾರಿ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯದಲ್ಲಿ ಸರ್ಕಾರದ ವಿವಿಧ ಇಲಾಖೆಗಳು ನಡೆಸುವ ಭೂಸ್ವಾಧೀನ ಪ್ರಕ್ರಿಯೆಗಳಿಗೂ ಭೂಹಗರಣಗಳಿಗೂ ನಿಕಟ ನಂಟು.

ಯೋಜನೆಯೊಂದರ ಅನುಷ್ಠಾನದ ಮಾಹಿತಿ ಪಡೆಯುವ ಸರ್ಕಾರದ ಒಳಗಿನವರೇ ಸಂಚು ರೂಪಿಸಿ ರೈತರಿಂದ ಬಿಡಿಗಾಸಿಗೆ ಜಮೀನು ಖರೀದಿಸಿ, ಕೋಟ್ಯಂತರ ರೂಪಾಯಿಗೆ ಮಾರಾಟ ಮಾಡಿ ಪರಿಹಾರದ ಮೊತ್ತ ಲೂಟಿ ಮಾಡುತ್ತಿರುವ ಹಗರಣಗಳು ದಶಕಗಳಿಂದಲೂ ನಡೆಯುತ್ತಿವೆ.

ಕೈಗಾರಿಕೆ, ವಸತಿ, ಲೋಕೋಪಯೋಗಿ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಯ ಜವಾಬ್ದಾರಿ ಹೊಂದಿರುವ ಇಲಾಖೆಗಳು ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಜಮೀನು ಸ್ವಾಧೀನಪಡಿಸಿಕೊಳ್ಳುತ್ತವೆ. ನಗರಗಳ ವ್ಯಾಪ್ತಿನ ಅಥವಾ ಸುತ್ತಮುತ್ತ ಇಂತಹ ಯೋಜನೆಗಳು ಜಾರಿಯಾಗಲಿವೆ ಎಂಬುದು ತಿಳಿಯುತ್ತಿದ್ದಂತೆಯೇ ಅಖಾಡಕ್ಕೆ ಇಳಿಯುವ ವಂಚಕರ ಜಾಲ, ರೈತರಿಂದ ಕಡಿಮೆ ದರಕ್ಕೆ ಜಮೀನು ಖರೀದಿಸುತ್ತದೆ. ಕೆಲವೊಮ್ಮೆ ಮುಂಗಡ ನೀಡಿ 'ಜಿಪಿಎ' (ಕ್ರಯ ಕರಾರು) ಮಾಡಿಕೊಳ್ಳಲಾಗುತ್ತದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ), ಕರ್ನಾಟಕ ಗೃಹ ಮಂಡಳಿ (ಕೆಎಚ್‌ಬಿ) ಸೇರಿದಂತೆ ಸರ್ಕಾರದ ಸಂಸ್ಥೆಗಳು ಅಥವಾ ಇಲಾಖೆಗಳು ಭೂಸ್ವಾಧೀನ ಪ್ರಕ್ರಿಯೆ ಆರಂಭಿಸುತ್ತಿದ್ದಂತೆಯೇ ಖರೀದಿ ದಾಖಲೆಗಳನ್ನು ಹಾಜರುಪಡಿಸಿ ಪರಿಹಾರ ರೈತರಿಗೆ ತಲುಪದಂತೆ ತಡೆಯಲಾಗುತ್ತದೆ. 'ಜಿಪಿಎ'ಗಳನ್ನೂ ಬಳಸಿ ಪರಿಹಾರದ ಮೊತ್ತ ಕೊಳ್ಳೆ ಹೊಡೆದ ಹಲವು ಪ್ರಕರಣಗಳು ನಡೆದಿವೆ.

ಆಯಾ ಇಲಾಖೆಯ ಉಸ್ತುವಾರಿ ಹೊತ್ತ ಸಚಿವರ ಕಚೇರಿಗಳಿಗೂ ಈ ರೀತಿಯ ವಂಚನೆಗೂ ನಿಕಟ ನಂಟು ಇದೆ. ಸಚಿವರ ಕಚೇರಿಯ ಸಿಬ್ಬಂದಿ, ಬೆಂಬಲಿಗರೇ ರೈತರನ್ನು ಸಂಪರ್ಕಿಸಿ ಜಮೀನು ಖರೀದಿಸಿದ ಉದಾಹರಣೆಗಳಿವೆ. ನಂತರದಲ್ಲಿ ಭೂಸ್ವಾಧೀನ ಪ್ರಕ್ರಿಯೆ ನಡೆಸುವ ಅಧಿಕಾರಿಗಳು ಶಾಮೀಲಾಗಿ ರೈತರಿಗೆ ಸೇರಬೇಕಾದ ಪರಿಹಾರವನ್ನು ಸದ್ದಿಲ್ಲದೇ ಕಬಳಿಸಿಬಿಡುತ್ತಾರೆ. ಹಲವು ಬಾರಿ ಸಚಿವರ ಕೃಪಾಕಟಾಕ್ಷದಲ್ಲೇ ಎಲ್ಲವೂ ನಡೆದಿದೆ.

ಇಟಾಸ್ಕಾ ಹಗರಣ: 2006ರಲ್ಲಿ ಸಾಫ್ಟ್‌ವೇರ್ ಪಾರ್ಕ್ ನಿರ್ಮಾಣಕ್ಕಾಗಿ ಬಂಡಿಕೊಡಿಗೆಹಳ್ಳಿ ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಕೆಐಎಡಿಬಿಯಿಂದ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಆಗ ಇಟಾಸ್ಕಾ ಸಾಫ್ಟ್‌ವೇರ್ ಕಂಪನಿ 325 ಎಕರೆ ಜಮೀನು ಮಂಜೂರಾತಿಗೆ ಬೇಡಿಕೆ ಸಲ್ಲಿಸಿತ್ತು. ಆ ಅವಧಿಯಲ್ಲಿ ಕೈಗಾರಿಕಾ ಸಚಿವರಾಗಿದ್ದವರ ಕುಟುಂಬದ ಸದಸ್ಯರು ಮತ್ತು ಇತರ ಆರೋಪಿಗಳು 'ಸಮ್ಮತಿಯ ಭೂಸ್ವಾಧೀನ'ದ ನೆಪದಲ್ಲಿ ರೈತರಿಂದ ಜಮೀನು ಖರೀದಿ ಒಪ್ಪಂದ ಮಾಡಿಕೊಂಡು, ಇಟಾಸ್ಕಾ ಕಂಪನಿಗಾಗಿ ಕೆಐಎಡಿಬಿಗೆ ನೀಡಿದ್ದರು. ರೈತರಿಗೆ ನೀಡಬೇಕಿದ್ದ ₹ 87 ಕೋಟಿ ಪರಿಹಾರದ ಮೊತ್ತವನ್ನು ತಮ್ಮದೇ ಖಾತೆಗಳಿಗೆ ವರ್ಗಾಯಿಸಿಕೊಂಡು, ವಂಚಿಸಲಾಗಿತ್ತು. ನಂತರ ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ನಡೆಸಿದ್ದರು. ಆಗ ಕೈಗಾರಿಕಾ ಸಚಿವರಾಗಿದ್ದ ರಾಜಕಾರಣಿ, ಅವರ ಮಗ ಸೇರಿದಂತೆ ಹಲವರನ್ನು ವರ್ಷಗಳ ಕಾಲ ನ್ಯಾಯಾಂಗ ಬಂಧನದಲ್ಲಿ ಇಡಲಾಗಿತ್ತು. ಈಗ ಪ್ರಕರಣ ನ್ಯಾಯಾಲಯದ ವಿಚಾರಣೆಯ ವಿವಿಧ ಹಂತಗಳಲ್ಲಿ ಬಾಕಿ ಇದೆ.

ಇಲವಾಲ ಕೆಎಚ್‌ಬಿ ಹಗರಣ: ಮೈಸೂರಿನ ಇಲವಾಲದಲ್ಲಿ ವಸತಿ ಬಡಾವಣೆ ನಿರ್ಮಿಸಲು ಜಮೀನು ಖರೀದಿಗೆ ಕೆಎಚ್‌ಬಿ 2008-09ರಲ್ಲಿ ಪ್ರಕ್ರಿಯೆ ಆರಂಭಿಸಿತ್ತು. ಪ್ರತಿ ಎಕರೆ ಜಮೀನನ್ನು ₹ 36.50 ಲಕ್ಷ ಪರಿಹಾರ ನೀಡಿ ಖರೀದಿಸಲು ತೀರ್ಮಾನಿಸಲಾಗಿತ್ತು.

ಈ ಸುಳಿವು ಪಡೆದ ವಂಚಕರ ಜಾಲ ಗುಂಗ್ರಾಲ್ ಛತ್ರ, ಕಲ್ಲೂರು ನಾಗನಹಳ್ಳಿ, ಯಲಚನಹಳ್ಳಿ ಗ್ರಾಮಗಳಲ್ಲಿ 81 ಎಕರೆ ಜಮೀನನ್ನು ರೈತರಿಂದ ಖರೀದಿಸಿತ್ತು. ಆಗ ಜಮೀನು ಮಾಲೀಕರಿಗೆ ಪ್ರತಿ ಎಕರೆಗೆ ಕೇವಲ ₹ 8 ಲಕ್ಷದಿಂದ ₹ 18 ಲಕ್ಷದವರೆಗೆ ಮಾತ್ರ ನೀಡಲಾಗಿತ್ತು. ಆದರೆ, ಕೆಎಚ್‌ಬಿಯಿಂದ ₹ 36.50 ಲಕ್ಷ ಪರಿಹಾರ ಪಡೆಯಲಾಗಿತ್ತು.

ಈ ಪ್ರಕರಣದ ಕುರಿತು ವಿಚಾರಣೆ ನಡೆಸಿದ್ದ ಲೋಕಾಯುಕ್ತ, ಹೆಚ್ಚಿನ ತನಿಖೆಗೆ ಶಿಫಾರಸು ಮಾಡಿ 2015ರಲ್ಲಿ ವರದಿ ನೀಡಿತ್ತು. 2017ರಲ್ಲಿ ಭ್ರಷ್ಟಾಚಾರ ನಿಗ್ರಹ ದಳ ಪ್ರಕರಣ ದಾಖಲಿಸಿ, ತನಿಖೆ ನಡೆಸಿತ್ತು. 2008-09ರಲ್ಲಿ ಸಚಿವರಾಗಿದ್ದ ಪ್ರಭಾವಿಯೊಬ್ಬರ ಬೆಂಬಲಿಗರು, ಆಗ ಗೃಹ ಮಂಡಳಿ ಅಧ್ಯಕ್ಷರಾಗಿದ್ದ ರಾಜಕಾರಣಿಯ ಕುಟುಂಬವೂ ಈ ಹಗರಣದಲ್ಲಿ ಭಾಗಿಯಾಗಿರುವುದು ತನಿಖೆಯಲ್ಲಿ ತಿಳಿದು ಬಂದಿತ್ತು.

ಬೇನಾಮಿ ಹೆಸರಲ್ಲಿ ಖರೀದಿ: 'ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್' ಸ್ಥಾಪನೆಗಾಗಿ ನೆಲಮಂಗಲ ಸಮೀಪದ ತ್ಯಾಮಗೊಂಡ್ಲು ಬಳಿ 854 ಎಕರೆ 31 ಗುಂಟೆ ಜಮೀನು ಸ್ವಾಧೀನಪಡಿಸಿಕೊಳ್ಳಲು ಕೈಗಾರಿಕಾ ಇಲಾಖೆ 2020ರಲ್ಲಿ ಪ್ರಕ್ರಿಯೆ ಆರಂಭಿಸಿತ್ತು. ಅದರಲ್ಲಿ 610 ಎಕರೆ 34 ಗುಂಟೆ ರೈತರಿಗೆ ಸೇರಿದ್ದರೆ, 243 ಎಕರೆ 36 ಗುಂಟೆ ಸರ್ಕಾರಿ ಜಮೀನು ಇತ್ತು.

ಪ್ರತಿ ಎಕರೆಗೆ ₹ 1 ಕೋಟಿಯಷ್ಟು ಪರಿಹಾರ ನೀಡಲು ಪ್ರಸ್ತಾವ ಸಿದ್ಧವಾಗಿತ್ತು. ಈ ಯೋಜನೆಯ ಸುಳಿವು ಪಡೆದ ಪ್ರಭಾವಿ ವ್ಯಕ್ತಿಗಳು, ಅಧಿಕಾರಿಗಳು ಬೇನಾಮಿ ಹೆಸರಿನಲ್ಲಿ 350 ಎಕರೆ ಜಮೀನು ಖರೀದಿಸಿದ್ದರು. ಕೆಲವೇ ಲಕ್ಷಗಳಷ್ಟು ದರ ನೀಡಿ ರೈತರಿಂದ ಜಮೀನು ಖರೀದಿಸಿದ್ದ ಈ ಜಾಲ, ₹ 300 ಕೋಟಿ ಪರಿಹಾರ ಲೂಟಿಗೆ ಸಂಚು ನಡೆಸಿರುವ ಆರೋಪ ಕೇಳಿಬಂದಿತ್ತು. ಸರ್ಕಾರದ ಉನ್ನತ ಮಟ್ಟದಲ್ಲಿರುವವವರ ಕಡೆಗೂ ಸಂಶಯ ವ್ಯಕ್ತವಾಗಿತ್ತು.

ಟಿಡಿಆರ್: ಅಕ್ರಮಗಳಿಗೆ ಕಳ್ಳ ದಾರಿ

• ಪ್ರವೀಣಕುಮಾರ ಪಿ. ವಿ

ಬೆಂಗಳೂರು: ಸಾರ್ವಜನಿಕ ಉದ್ದೇಶಕ್ಕೆ ಕೈಗೊಳ್ಳುವ ಯೋಜನೆಗಳಿಗೆ ಭೂಸ್ವಾಧೀನ ಪ್ರಕ್ರಿಯೆ ಸುಗಮಗೊಳಿಸಲು ಹಾಗೂ ಜಾಗ ಬಿಟ್ಟುಕೊಡುವವರಿಗೆ ಉತ್ತೇಜನ ನೀಡಲು, 'ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು' (ಟಿಡಿಆರ್) ಪ್ರಮಾಣಪತ್ರಗಳನ್ನು ಸರ್ಕಾರ ನೀಡುತ್ತಿದೆ. ಟಿಡಿಆರ್ ನೀಡುವ ವ್ಯವಸ್ಥೆಯು ಭೂಸ್ವಾಧೀನ ಬಿಕ್ಕಟ್ಟು ಬಗೆಹರಿಸುವಲ್ಲಿ ಎಷ್ಟು ಪ್ರಯೋಜನವಾಗಿದೆಯೋ ತಿಳಿಯದು. ಜಾಗ ಬಿಟ್ಟುಕೊಟ್ಟ ಭೂಮಾಲೀಕರಿಗೆ ನಿಜಕ್ಕೂ ಇದು ವರದಾನವಾಗಿದೆಯೋ ಗೊತ್ತಿಲ್ಲ. ಆದರೆ ಕೆಲವು ಅಧಿಕಾರಿಗಳಂತೂ ಈ ವ್ಯವಸ್ಥೆಯ ಲೋಪಗಳನ್ನು ಬಳಸಿಕೊಂಡು ಅಕ್ರಮ ಹಣಗಳಿಕೆಗೆ ದಾರಿ ಮಾಡಿಕೊಂಡಿರುವುದಂತೂ ದಿಟ.

ಟಿಡಿಆರ್ ಅಕ್ರಮಗಳಿಗೆ ಸಂಬಂಧಿಸಿ ಬಿಬಿಎಂಪಿಯ 15 ಅಧಿಕಾರಿಗಳ ಮತ್ತು 59 ಖಾಸಗಿ ವ್ಯಕ್ತಿಗಳ ವಿರುದ್ಧ ಎಸಿಬಿ ಮೊಕದ್ದಮೆ ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ. ಮೂರು ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಆರೋಪಪಟ್ಟಿಯನ್ನೂ ಸಲ್ಲಿಸಿದೆ. ಏಳು ಪ್ರಕರಣಗಳ ತನಿಖೆ ಪ್ರಗತಿಯಲ್ಲಿದೆ. ಒಟ್ಟು ₹ 150 ಕೋಟಿ ಮೌಲ್ಯದ 16 ಲಕ್ಷ ಚದರ ಅಡಿ ವಿಸ್ತೀರ್ಣದ ಟಿಡಿಆರ್ ನೀಡಿಕೆಯಲ್ಲಿ ಅಕ್ರಮ ನಡೆದಿರುವುದನ್ನು ಎಸಿಬಿ ಪತ್ತೆ ಮಾಡಿದೆ.

ಅಭಿವೃದ್ಧಿ ಕಾಮಗಾರಿಗಳಿಗಾಗಿ ಭೂಮಾಲೀಕರು ಬಿಟ್ಟುಕೊಟ್ಟ ಜಾಗಕ್ಕೆ ನಗದು ಪರಿಹಾರದ ಬದಲು ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರವನ್ನು (ಟಿಡಿಆರ್‌ಸಿ) ಸರ್ಕಾರ ವಿತರಿಸುತ್ತದೆ. ಜಾಗ ಬಿಟ್ಟುಕೊಟ್ಟ ಭೂಮಾಲೀಕರು ಟಿಡಿಆರ್‌ಸಿಗಳನ್ನು ಇತರರಿಗೆ ಮಾರಾಟ ಮಾಡಬಹುದು. ಬಹುಮಹಡಿ ಕಟ್ಟಡ ನಿರ್ಮಿಸುವವರು ಈ ಪ್ರಮಾಣಪತ್ರ ಲಗತ್ತಿಸಿ, ನೆಲ ಪ್ರದೇಶದ ಅನುಪಾತ (ಎಫ್‌ಎಆರ್) ಹೆಚ್ಚಿಸಲು ಬಳಸಬಹುದು.

ಈ ವ್ಯವಸ್ಥೆಯನ್ನೂ ದುರ್ಬಳಕೆ ಮಾಡಿಕೊಳ್ಳುತ್ತಿರುವ ಅಧಿಕಾರಿಗಳು ದಲ್ಲಾಳಿಗಳ ಜೊತೆ ಕೋಟ್ಯಂತರ ರೂಪಾಯಿ ಅಕ್ರಮ ನಡೆಸಿದ ಹಲವು ಪ್ರಕರಣಗಳು ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆದಿವೆ. ಟಿಡಿಆರ್ ಕೊಡಿಸುವುದನ್ನೇ ದಂಧೆಯನ್ನಾಗಿಸಿಕೊಂಡ ಏಜೆನ್ಸಿಗಳೂ ನಗರದಲ್ಲಿ ಹುಟ್ಟಿಕೊಂಡಿವೆ.

ಅಸ್ತಿತ್ವದಲ್ಲೇ ಇಲ್ಲದ ಕಟ್ಟಡಗಳಿಗೂ ಟಿಡಿಆರ್ ಕೊಡಿಸುವುದು, ಕಟ್ಟಡದ ನೈಜ ವಿಸ್ತೀರ್ಣಕ್ಕಿಂತ ಪಟ್ಟು ಹೆಚ್ಚು ವಿಸ್ತೀರ್ಣಕ್ಕೆ ಟಿಡಿಆರ್ ನೀಡುವುದು. ಯಾರದೋ ಆಸ್ತಿಗೆ ಇನ್ಯಾರಿಗೋ ಟಿಡಿಆರ್‌ಸಿ ನೀಡುವುದು, ಆಸ್ತಿ ಮಾರಾಟವಾಗಿದ್ದರೂ ಅದನ್ನು ಖರೀದಿಸಿದವರ ಬದಲು ಮೂಲ ಮಾಲೀಕರಿಗೆ ಟಿಡಿಆರ್‌ಸಿ ಕೊಡಿಸುವುದು... ಇಂತಹ ಹತ್ತಾರು ಅಕ್ರಮಗಳಿಗೆ ರಾಜಧಾನಿ ಸಾಕ್ಷಿಯಾಗಿದೆ. ಸರ್ಕಾರದ ಆಸ್ತಿಗೂ ಟಿಡಿಆರ್ ನೀಡಿ, ಅದನ್ನು ಮಾರಿದ ಉದಾಹರಣೆಗಳೂ ನಗರದಲ್ಲಿವೆ.

ಎಸಿಬಿ ತನಿಖೆಯ ಕೆಲ ಪ್ರಕರಣಗಳು

- ಕೆ.ಆರ್. ಪುರ ಹೋಬಳಿ ಕೌದೇನಹಳ್ಳಿ ಸರ್ವೆ ನಂಬರ್ 132 ಅನ್ನು ರಸ್ತೆ ವಿಸ್ತರಣೆಗಾಗಿ ಬಿಬಿಎಂಪಿ ಸ್ವಾಧೀನಪಡಿಸಿಕೊಂಡಿತ್ತು. ಈ ಜಮೀನಿನ ಮಾಲೀಕರು ಕಂದಾಯ ನಿವೇಶನಗಳನ್ನು ರಚಿಸಿ ಬೇರೆಯವರಿಗೆ ಮಾರಿದ್ದರು. ಈ ಜಮೀನಿನ ಈಗಿನ ಮಾಲೀಕರ ಬದಲು ಮೂಲ ಮಾಲೀಕರ ಹೆಸರಿಗೆ ಟಿಡಿಆರ್ ನೀಡಲಾಗಿದೆ! ರಿಯಲ್ ಎಸ್ಟೇಟ್ ಸಂಸ್ಥೆಯೊಂದು ಮಧ್ಯವರ್ತಿಗಳ ಮೂಲಕ ಈ ಟಿಡಿಆರ್‌ಸಿಗಳನ್ನು ₹ 2.7 ಕೋಟಿಗೆ ಖರೀದಿಸಿ ಎಂಟು ಕಂಪನಿಗಳಿಗೆ ₹ 27 ಕೋಟಿಗೆ ಮಾರಿದೆ!
- ಕೌದೇನಹಳ್ಳಿ ಪ್ರಕರಣದಲ್ಲಿ ಒಂದು ಮಹಡಿ ಕಟ್ಟಡವನ್ನು ಮೂರು ಮಹಡಿ ಕಟ್ಟಡವೆಂದು ತೋರಿಸಿ ಕೆಲವು ರಿಯಲ್ ಎಸ್ಟೇಟ್ ಮಾಫಿಯಾಗಳಿಗೆ 5.65 ಲಕ್ಷ ಚದರಡಿಯಷ್ಟು ವಿಸ್ತೀರ್ಣಕ್ಕೆ ಟಿಡಿಆರ್‌ಸಿ ನೀಡಲಾಗಿದೆ.
- ಹೊರಮಾವು- ಟಿ.ಸಿ ಪಾಳ್ಯ ರಸ್ತೆ ವಿಸ್ತರಣೆ ಯೋಜನೆಗೆ ಗುರುತಿಸಿರುವ ಕಟ್ಟಡ ಮತ್ತು ನಿವೇಶನಗಳನ್ನು ಸ್ವಾಧೀನಪಡಿಸಿಕೊಳ್ಳದೆಯೇ ಬಿಬಿಎಂಪಿ ಅಧಿಕಾರಿಗಳು ಟಿಡಿಆರ್‌ಸಿ ವಿತರಿಸಿದ್ದಾರೆ. ಸ್ವತ್ತನ್ನು ಸ್ವಾಧೀನಕ್ಕೆ ಪಡೆದ ಬಳಿಕವಷ್ಟೇ ಟಿಡಿಆರ್‌ಸಿ ವಿತರಿಸಬೇಕೆಂಬ ನಿಯಮವನ್ನು ಗಾಳಿಗೆ ತೂರಿದ್ದಾರೆ.
- ಟಿಡಿಆರ್ ಅಕ್ರಮಕ್ಕೆ ಸಂಬಂಧಿಸಿದ 47 ಕಡತಗಳು ಬಿಬಿಎಂಪಿ ಕಚೇರಿಯಿಂದ ನಾಪತ್ತೆಯಾಗಿವೆ! ಈ ಬಗ್ಗೆ ದೂರೂ ದಾಖಲಾಗಿದೆ.
- ಚನ್ನಸಂದ್ರದಿಂದ ಹೆಣ್ಣೂರು ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸ್ವಾಧೀನಪಡಿಸಿಕೊಂಡ ಜಾಗಕ್ಕೆ ಸಂಬಂಧವೇ ಇಲ್ಲದ ವ್ಯಕ್ತಿಯ ಹೆಸರಿನಲ್ಲಿ ಟಿಡಿಆರ್ ನೀಡಲಾಗಿದೆ.
- ಮಲ್ಲೇಶ್ವರದಲ್ಲಿ ರಸ್ತೆ ವಿಸ್ತರಣೆಗೆ ಬಳಸಿಕೊಂಡಿರುವ ಸರ್ಕಾರದ ಜಮೀನಿಗೆ ಪ್ರತಿಯಾಗಿ ರಿಯಲ್ ಎಸ್ಟೇಟ್ ಕಂಪನಿಗೆ ಬಿಬಿಎಂಪಿ ಟಿಡಿಆರ್‌ಸಿ ವಿತರಿಸಿತ್ತು.

- ರಾಮನಗರ ಜಿಲ್ಲೆಯ ಕೊಡಿಯಾಲ ಕರೇನಹಳ್ಳಿಯಲ್ಲಿ ಕಸ ಸುರಿಯಲು ವಶಪಡಿಸಿಕೊಂಡ 45 ಎಕರೆ ಜಾಗಕ್ಕೆ ಪ್ರತಿಯಾಗಿ ನೀಡಿದ ಟಿಡಿಆರ್‌ಸಿ-ಯನ್ನು ಬೆಂಗಳೂರು ನಗರದೊಳಗೆ ಬಳಸಲು ಅವಕಾಶ ಕಲ್ಪಿಸಿದ್ದ ಪ್ರಕರಣ ಚರ್ಚೆಗೆ ಗ್ರಾಸವಾಗಿತ್ತು. ಈ ಟಿಡಿಆರ್‌ಸಿಯನ್ನು ಕರೇನಹಳ್ಳಿ ಆಸುಪಾಸಿನಲ್ಲಿ ಬಳಸಿದರೆ ಅಲ್ಲಿ ಎಕರೆಗೆ ಅಂದಾಜು ₹20 ಲಕ್ಷ ಮೌಲ್ಯ ಸಿಗುತ್ತದೆ. ಅದನ್ನೇ ಸದಾಶಿವನಗರ, ಎಂ.ಜಿ.ರಸ್ತೆ, ಜಯನಗರದಂತಹ ಪ್ರದೇಶದಲ್ಲಿ ಬಳಸಿದರೆ ಅದರ ಒಟ್ಟು ಮೊತ್ತ ₹700 ಕೋಟಿಯಿಂದ ₹800 ಕೋಟಿಯಷ್ಟು ಆಗುತ್ತದೆ.

ನಕಲಿ ವ್ಯಾಜ್ಯದ ತಾಯಿ ಬೇರು 'ಫ್ರಾಂಕಿಂಗ್'



ಫ್ರಾಂಕಿಂಗ್ ಅಕ್ರಮದ ಕುರಿತು ಗಾಂಧಿನಗರ ಉಪನೋಂದಣಾಧಿಕಾರಿ ನೀಡಿದ ದೂರಿನಲ್ಲಿ 'ಪ್ರಜಾವಾಣಿ' ವರದಿಯ ಉಲ್ಲೇಖ

ಬೆಂಗಳೂರು: ಉಪಯೋಗಿಸದೇ ಇರುವ ಖಾಸಗಿ ಜಮೀನಿನ ಮೇಲೆ 'ನಕಲಿ ವ್ಯಾಜ್ಯ' ಸೃಷ್ಟಿಸಿ ಭೂಮಿ ಕಬಳಿಸಲು ನಕಲಿ ಛಾಪಾಕಾಗದ, ಅದನ್ನು ಸಿಂಧುಗೊಳಿಸಲು ಬಳಸುವ ಉಬ್ಬಚ್ಚುಯಂತ್ರ ಹಾಗೂ ಉಪನೋಂದಣಾಧಿಕಾರಿಗಳ ಮುದ್ರೆಗಳನ್ನೇ ಅಕ್ರಮದ ಭಾಗಿದಾರರು ಬಳಸುತ್ತಿದ್ದಾರೆ.

'ಪ್ರಜಾವಾಣಿ' ವರದಿ ಆಧರಿಸಿ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕ ಆಯುಕ್ತರು (ಐಜಿಆರ್) ಸಲ್ಲಿಸಿದ ದೂರು ಆಧರಿಸಿಯೇ, ಇದರ ಜಾಲ ಬೆನ್ನು ಹತ್ತಿದ ಸಿಐಡಿ ಈಗ ಅಕ್ರಮದ ಕೂಟವನ್ನೇ ಬಯಲಿಗೆ ಎಳೆದಿದೆ.

ಯಾವುದೇ ಜಮೀನು ತನ್ನದು ಎಂದು ಪ್ರತಿಪಾದಿಸಲು ಮೂಲ ದಾಖಲೆ ಅಗತ್ಯ. ಕಳೆದ 20 ವರ್ಷದಿಂದೀಚೆಗೆ ನೋಂದಣಿ ಮತ್ತು ಜಮೀನು ಸಂಬಂಧಿತ ಕ್ರಯ-ವಿಕ್ರಯ, ಅಡಮಾನದ ವಿವರಗಳು ಭೂಮಿ ತಂತ್ರಾಂಶದ ಮೂಲಕವೇ ನಡೆಯುತ್ತವೆ. ನಕಲಿ ವ್ಯಾಜ್ಯ ಸೃಷ್ಟಿಸುವವರು 40-50 ವರ್ಷಗಳ ಹಿಂದೆ ಕ್ರಯ, ದಾನ ಪತ್ರ ಮಾಡಿದಂತೆ ದಾಖಲೆ ಸೃಷ್ಟಿಸಿ, ಭೂಕಬಳಿಕೆ ಮಾಡುತ್ತಿದ್ದಾರೆ. ಇದಕ್ಕೆ ಪ್ರಮುಖವಾಗಿ ಬಳಕೆಯಾಗುತ್ತಿರುವುದು ಉಬ್ಬಚ್ಚು ಯಂತ್ರ (ಫ್ರಾಂಕಿಂಗ್).

ಉದಾಹರಣೆಗೆ, 1965ರಲ್ಲಿನ ಜಮೀನು ವ್ಯವಹಾರದ ದಾಖಲೆ ಸೃಷ್ಟಿಸಲು ಆಗ ಚಾಲ್ತಿಯಲ್ಲಿದ್ದ ಛಾಪಾ ಕಾಗದದ (ಅತ್ಯಂತ ಹಳೆಯದಂತೆ ಕಾಣಿಸುವ) ದಾಖಲೆ ಸೃಷ್ಟಿಮಾಡಲಾಗುತ್ತದೆ. ಇ-ಸ್ಟಾಂಪಿಂಗ್‌ಗೆ ಸರಿಸಮಾನವಾದ ಮಾನ್ಯತೆ ಹೊಂದಿರುವ ಫ್ರಾಂಕಿಂಗ್ ಯಂತ್ರದಿಂದ ಮುದ್ರಿತವಾಗಿರುವ ಪತ್ರಗಳನ್ನು ಸಿದ್ಧಪಡಿಸಲಾಗುತ್ತದೆ. ಬೆಂಗಳೂರು ಸೇರಿದಂತೆ ಹಲವು ಕಡೆಗಳ ಉಪನೋಂದಣಾಧಿಕಾರಿ ಕಚೇರಿಗಳಿಗೆ ಉಬ್ಬಚ್ಚು ಯಂತ್ರಕ್ಕಾಗಿಯೇ ನಿರ್ದಿಷ್ಟ ಸಂಖ್ಯೆಯನ್ನು (ಗಾಂಧಿನಗರ-ಪಿಬಿ 6924, ಯಲಹಂಕ -ಪಿಬಿ 6944) ನೀಡಲಾಗಿದೆ. ಹೀಗೆ ಸೃಷ್ಟಿಸಲಾದ ಉಬ್ಬಚ್ಚುಯಂತ್ರದ ದಾಖಲೆಯನ್ನು ಆಯಾ ದಿನ ಉಬ್ಬಚ್ಚು(ಫ್ರಾಂಕಿಂಗ್) ಮಾಡಿರುವ ಬಗ್ಗೆ ಕ್ರಮ ಸಂಖ್ಯೆ ನಮೂದಿಸಿ, ಇದಕ್ಕಾಗಿಯೇ ಮೀಸಲಾದ ಪುಸ್ತಕದಲ್ಲಿ ಉಬ್ಬಚ್ಚು ಪತ್ರದ ಸಂಖ್ಯೆ, ಮೊತ್ತ ಹಾಗೂ ದಿನಾಂಕವನ್ನು ದಾಖಲು ಮಾಡಲಾಗುತ್ತದೆ.

ಇದೇ ರೀತಿ ಯಲಹಂಕ, ಕೆಂಗೇರಿ, ಶಿವಾಜಿನಗರ, ಗಾಂಧಿನಗರಗಳ (ಬೆಂಗಳೂರಿನಲ್ಲಿ ಪ್ರಮುಖವಾಗಿ ಆಸ್ತಿ ನೋಂದಣಿಯಾಗುವ ಕಚೇರಿಗಳು) ಫ್ರಾಂಕಿಂಗ್ ಯಂತ್ರ ಬಳಸಿ ಕ್ರಯಪತ್ರ, ಕರಾರು ಪತ್ರ, ತಕರಾರು ದಾವೆಗೆ ದಾಖಲು ಪತ್ರ, ಉಯಿಲು, ಜಿಪಿಎ, ಆಸ್ತಿ ಪರಭಾರೆ ಒಪ್ಪಂದ ಪತ್ರಗಳನ್ನು ನಕಲಿಯಾಗಿ ಸೃಷ್ಟಿಸಲಾಗುತ್ತಿದೆ. ಇದನ್ನು ಬಳಸಿಕೊಂಡು, ತಮ್ಮ ಆಸ್ತಿ ದಾಖಲೆಯ ಗೊಡವೆಗೇ ಹೋಗದ ಬಡವರು, ಮಧ್ಯಮವರ್ಗದವರು, ವಿದೇಶಗಳಲ್ಲಿರುವವರ ಆಸ್ತಿ ಕಬಳಿಸಲಾಗುತ್ತಿದೆ. ಆಸ್ತಿಯನ್ನು ತಮ್ಮ ಹೆಸರಿಗೆ ಮಾಡಿಕೊಟ್ಟಿದ್ದಾರೆ ಎಂದು 10-20 ವರ್ಷಗಳ ಹಿಂದಿನ ದಾಖಲೆ ಸೃಷ್ಟಿಸಲಾಗುತ್ತಿದೆ. ಇದನ್ನೇ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುತ್ತದೆ. ಮೂಲ ಆಸ್ತಿದಾರರಿಗೆ ಗೊತ್ತಿಲ್ಲದಂತೆಯೇ ಲಪಟಾಯಿಸಲಾಗುತ್ತಿದೆ.

ಇಂಥ ಅಕ್ರಮ ನಡೆಯುತ್ತಿರುವ ಬಗ್ಗೆ ವೈಟ್‌ಫೀಲ್ಡ್‌ನ ಎಂ. ಮಂಜುಳಾ ದೂರು ನೀಡಿದ್ದರು. ಇದನ್ನು ಪರಿಶೀಲಿಸಿದಾಗ ಯಲಹಂಕ, ಕೆಂಗೇರಿ, ಶಿವಾಜಿನಗರದ ಮೊಹರು ಹಾಗೂ ಉಪನೋಂದಣಾಧಿಕಾರಿ ಸಹಿ ಇರುವ ನಕಲಿ ದಾಖಲೆಗಳು ಪತ್ತೆಯಾಗಿದ್ದವು. ಈ ಬಗ್ಗೆ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ಆಗಿತ್ತು. ಯಾವುದೋ ಜಾಗದಲ್ಲಿ ಸೃಷ್ಟಿಸುವ ಉಬ್ಬಚ್ಚುಯಂತ್ರದ ದಾಖಲೆಗಳನ್ನು ನೋಂದಣಾಧಿಕಾರಿ ಕಚೇರಿಯ ಮೊಹರು ಮತ್ತು ಸಹಿಯನ್ನು ನಕಲು ಮಾಡಿ ಅಧಿಕೃತ ದಾಖಲೆಯಾಗಿಸಿ ಕೋರ್ಟ್‌ಗೆ ಸಲ್ಲಿಸಲಾಗುತ್ತದೆ. ಅಕ್ರಮದ ಭಾಗಿದಾರರು, ಕಂದಾಯ ಇಲಾಖೆ ಅಧಿಕಾರಿಗಳು, ಸಬ್ ರಿಜಿಸ್ಟ್ರಾರ್ ಕಚೇರಿ ಸಿಬ್ಬಂದಿ ಹಾಗೂ ವಕೀಲರು ಹೀಗೆ ಒಂದು ಕೂಟ ಇದರಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಾಣಿಸುತ್ತದೆ ಎನ್ನುತ್ತಾರೆ ಕಂದಾಯ ಇಲಾಖೆ ಅಧಿಕಾರಿಗಳು.

ಭೂಕಬಳಿಕೆಗೆ 'ರಾಜಿ ಡಿಕ್ರಿ' ಕೈಚಳಕ

ಒಂದನೇ ಪುಟದಿಂದ

ಈ ಜಾಲದ ಪ್ರಮುಖ ಸೂತ್ರಧಾರಿಯೊಬ್ಬ ಬೆಂಗಳೂರಿನ ಆಯಕಟ್ಟಿನ ಸ್ಥಳಗಳಲ್ಲಿ ಬಳಕೆಯಾಗದ ಜಾಗಗಳು, ಮಾಲೀಕರು ದೂರದಲ್ಲಿರುವಂತಹ ಆಸ್ತಿಗಳ ಕುರಿತು ಮಾಹಿತಿ ಸಂಗ್ರಹಿಸುತ್ತಿದ್ದ. ಬಳಿಕ ಮಾಹಿತಿಯನ್ನು ವಕೀಲರ ಗುಂಪಿನೊಂದಿಗೆ ಹಂಚಿಕೊಳ್ಳುತ್ತಿದ್ದ. ವಕೀಲರೇ ವಾದಿ, ಪ್ರತಿವಾದಿಗಳನ್ನು ಸೃಷ್ಟಿಸುತ್ತಿದ್ದರು. ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡುವುದಕ್ಕೆ ಪೂರಕವಾಗಿ ನಕಲಿ ದಾಖಲೆಗಳನ್ನೂ ತಯಾರು ಮಾಡುತ್ತಿದ್ದರು ಎಂಬುದನ್ನು ಸಿಐಡಿ ಬಯಲಿಗೆಳೆದಿದೆ.

ಕೆಲವು ಪ್ರಕರಣಗಳಲ್ಲಿ ನೈಜ ಮಾಲೀಕರನ್ನು ಪ್ರತಿವಾದಿ ಎಂದು ಹೆಸರಿಸಲಾಗಿದೆ. ಆದರೆ, ಅದನ್ನು ರಹಸ್ಯವಾಗಿರಿಸಿ ಅವರು ವಿಚಾರಣೆಗೆ ಹಾಜರಾಗದಂತೆ ಮಾಡಲಾಗಿದೆ. ಆಸ್ತಿಯ ಮೂಲ ಮಾಲೀಕರ ಪರವಾಗಿ ಹಾಜರಾದ ವಕೀಲರೇ ನಕಲಿ ರಾಜಿ ಅರ್ಜಿ ಸಲ್ಲಿಸಿ ಡಿಕ್ರಿ ಪಡೆಯಲು ನೆರವಾಗಿದ್ದಾರೆ ಎಂದು ತನಿಖೆಯ ಕುರಿತು ಮಾಹಿತಿ ಇರುವ ಅಧಿಕಾರಿಯೊಬ್ಬರು ತಿಳಿಸಿದರು.

ಈಗ ಪತ್ತೆಯಾಗಿರುವ, ಹರಿಲಾಲ್ ಭಿಕಾಬಾಯ್ ಅಂಡ್ ಕಂಪನಿ ಪ್ರಕರಣದಲ್ಲಿ ವಕೀಲರು ಸೇರಿದಂತೆ ನಾಲ್ವರನ್ನು ಸಿಐಡಿ ಪೊಲೀಸರು ಬಂಧಿಸಿದ್ದಾರೆ. ನ್ಯಾಯಾಲಯದ ದಾಖಲೆಗಳನ್ನು ಫೋರ್ಜರಿ ಮಾಡಿ, ಉಪ ನೋಂದಣಾಧಿಕಾರಿಗಳು ಮತ್ತು ಇತರ ಅಧಿಕಾರಿಗಳ ಮೊಹರುಗಳನ್ನೂ ನಕಲು ಮಾಡಿ ವಂಚನೆ ಕೃತ್ಯಕ್ಕೆ ಬಳಸಿರುವುದು ತನಿಖೆಯಲ್ಲಿ ಪತ್ತೆಯಾಗಿದೆ.

ಐಪಿಎಸ್ ಅಧಿಕಾರಿಗಳ ಪ್ರಭಾವ: ನ್ಯಾಯಾಲಯದ ಆದೇಶವನ್ನು ಕಂದಾಯ ಇಲಾಖೆ ಅಧಿಕಾರಿಗಳ ಮುಂದಿಟ್ಟು, ಖಾತೆ ಬದಲಾವಣೆ ಮಾಡಿಸಿಕೊಳ್ಳುತ್ತಿದ್ದರು. ನಂತರ ಆಸ್ತಿಯನ್ನು ಮಾರಾಟ ಮಾಡುತ್ತಿದ್ದರು. ಕಂದಾಯ ಇಲಾಖೆ, ನೋಂದಣಿ ಕಚೇರಿಗಳ ಅಧಿಕಾರಿಗಳು ಇಂತಹ ಪ್ರಕರಣಗಳಲ್ಲಿ ಖಾತೆ ಬದಲಾವಣೆ, ಕ್ರಯಪತ್ರ ನೋಂದಣಿಗೆ 'ಸಹಕಾರ' ನೀಡುತ್ತಿದ್ದಾರೆ. ನೋಂದಣಿ ಕಚೇರಿಗಳಲ್ಲಿರುವ ಫ್ರಾಂಕಿಂಗ್ ಯಂತ್ರಗಳನ್ನು ದುರ್ಬಳಕೆ ಮಾಡಿಕೊಂಡು ನಕಲಿ ದಾಖಲೆ ಸೃಷ್ಟಿಸುವ ಮೂಲಕವೇ ಅಕ್ರಮದ ಸರಣಿ ಆರಂಭವಾಗುತ್ತಿತ್ತು ಎಂಬುದು ಬಯಲಿಗೆ ಬಂದಿದೆ.

'ಐ ಮಾನಿಟರಿ ಅಡ್ವೈಸರಿ (ಐಎಂಎ) ವಂಚನೆ ಪ್ರಕರಣದಲ್ಲಿ ಆರೋಪಿಯಾಗಿರುವ ಒಬ್ಬರು ಸೇರಿದಂತೆ ಇಬ್ಬರು ಹಿರಿಯ ಐಪಿಎಸ್ ಅಧಿಕಾರಿಗಳು ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ. ರಾಜಿ ಡಿಕ್ರಿಯ ಆಧಾರದಲ್ಲಿ ಸ್ಥಿರಾಸ್ತಿಗಳನ್ನು ಸ್ವಾಧೀನಕ್ಕೆ ಪಡೆಯಲು ಪೊಲೀಸರ ನೆರವು ಒದಗಿಸುವ ವ್ಯವಸ್ಥೆಯನ್ನು ಈ ಇಬ್ಬರೂ ಅಧಿಕಾರಿಗಳು ಮಾಡುತ್ತಿದ್ದರು' ಎಂದು ಮೂಲಗಳು ಹೇಳಿವೆ.

'ನಕಲಿ ವ್ಯಾಜ್ಯ' ಹೂಡಿ ಕಬಳಿಸಿದ ಜಮೀನನ್ನು ಖರೀದಿಸುವವರೂ ಪ್ರಭಾವಿಗಳೇ ಆಗಿರುತ್ತಾರೆ. ಹೆಚ್ಚಿನವರು ವಂಚನೆಯ ಬಗ್ಗೆ ಅರಿವಿದ್ದೇ ಖರೀದಿಸಿದ್ದಾರೆ. ಹಾಲಿ ಶಾಸಕರಾಗಿರುವ ಒಬ್ಬರು ಸೇರಿದಂತೆ ಇಬ್ಬರು ಮಾಜಿ ಸಚಿವರು, ಭೂಗಳ್ಳರು ಲಪಟಾಯಿಸಿದ್ದ ಜಮೀನುಗಳನ್ನು ಖರೀದಿಸಿದ್ದಾರೆ' ಎಂಬ ಮಾಹಿತಿ ಸಿಐಡಿ ತನಿಖೆ ವೇಳೆ ಹೊರಬಂದಿದೆ.

ಸಂತ್ರಸ್ತರ ಪೈಕಿ ಕ್ರೈಸ್ತರೇ ಹೆಚ್ಚು

ನಕಲಿ ವ್ಯಾಜ್ಯ ಹೂಡಿ ಆಸ್ತಿ ಲಪಟಾಯಿಸುವ ಜಾಲ ಬೆಂಗಳೂರಿನ ಹಳೆಯ ಪ್ರದೇಶಗಳಲ್ಲಿ ನೂರಾರು ವರ್ಷಗಳಿಂದಲೂ ಕ್ರೈಸ್ತ ಧರ್ಮೀಯ ಕುಟುಂಬಗಳ ಸ್ವಾಧೀನದಲ್ಲಿರುವ ಆಸ್ತಿಗಳನ್ನೇ ಗುರಿಯಾಗಿಸಿಕೊಂಡು ಕಾರ್ಯಾಚರಣೆ ನಡೆಸಿದೆ. ಈ ಜಾಲದಿಂದ ವಂಚನೆಗೊಳಗಾದವರಲ್ಲಿ ಶೇಕಡ 60ಕ್ಕೂ ಹೆಚ್ಚು ಮಂದಿ ಕ್ರೈಸ್ತ ಧರ್ಮೀಯರು ಎಂಬ ಮಾಹಿತಿ ಲಭಿಸಿದೆ.

ಭ್ರಷ್ಟಾಚಾರದ ಮೂಲವೇ ಭೂಕಬಳಿಕೆ

ಸದನ ಸಮಿತಿಯ ವರದಿಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ. ಏಕೆಂದರೆ ಭ್ರಷ್ಟಾಚಾರದ ತಾಣ ಈಗ ಲೋಕೋಪಯೋಗಿ ಇಲಾಖೆ ಅಥವಾ ನೀರಾವರಿ ಇಲಾಖೆಯ ಗುತ್ತಿಗೆಯಲ್ಲ. ಅದು ರಿಯಲ್ ಎಸ್ಟೇಟ್ ಉದ್ಯಮಕ್ಕೆ ಸ್ಥಳಾಂತರ ಆಗಿದೆ. ಹಿಂದೆಲ್ಲಾ ಕೆಲವು ಕಂಪನಿಗಳಷ್ಟೇ ರಿಯಲ್ ಎಸ್ಟೇಟ್ ನಡೆಸುತ್ತಿದ್ದವು. ಈಗ ಬಹುತೇಕ ರಾಜಕಾರಣಿಗಳು, ಅದರಲ್ಲೂ ಸಚಿವರುಗಳೇ ರಿಯಲ್ ಎಸ್ಟೇಟ್‌ನಲ್ಲಿ ತೊಡಗಿಕೊಂಡಿರುತ್ತಾರೆ. ಅದು ಯಾವುದೇ ಒಂದು ಪಕ್ಷಕ್ಕೆ ಸೀಮಿತವಲ್ಲ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಎಂಬುದು ಹೆಸರಿಗಷ್ಟೇ. ಅಲ್ಲಿನ ಜಮೀನಿಗೂ ಎಕರೆಗೆ ₹25 ಕೋಟಿ ತನಕ ಬೆಲೆ ಇದೆ. ಕೆರೆಗಳು, ಗೋಮಾಳಗಳು ಈ ಭೂಕಬಳಿಕೆದಾರರ ಪಾಲಾಗುತ್ತಿವೆ. ಒತ್ತುವರಿ ತೆರವಿಗೆ ಯಾವುದೇ ಸರ್ಕಾರವೂ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಈ ವ್ಯವಸ್ಥೆಯಡಿ ಪರಿಹಾರ ಸದ್ಯಕ್ಕೆ ಕಾಣುತ್ತಿಲ್ಲ.

-ವಿ.ಬಾಲಸುಬ್ರಮಣಿಯನ್, ನಿವೃತ್ತ ಐಎಎಸ್ ಅಧಿಕಾರಿ

ಕಂದಾಯ ಇಲಾಖೆಯ ಭ್ರಷ್ಟಾಚಾರವೇ ಕಾರಣ

ಕಂದಾಯ ಇಲಾಖೆಯ ಭ್ರಷ್ಟಾಚಾರವೇ ಭೂಕಬಳಿಕ ಮಿತಿಮೀರಿ ಬೆಳೆಯಲು ಕಾರಣ. ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ನ್ಯಾಯಾಲಯಗಳು ಅಕ್ರಮವನ್ನು ಸಕ್ರಮ ಮಾಡಿಕೊಡುವ ತಾಣವಾಗಿವೆ. ಈ ನ್ಯಾಯಾಲಯಗಳ ಆದೇಶಗಳನ್ನು ಬರೆದುಕೊಡುವ ಸಂಸ್ಥೆಗಳೇ ಹುಟ್ಟಿಕೊಂಡಿವೆ. ಇದರ ಹಿಂದೆ ದೊಡ್ಡ ಜಾಲವೇ ಕೆಲಸ ಮಾಡುತ್ತಿದೆ. ಭೂಸುಧಾರಣೆಯಲ್ಲಿ ಆಮೂಲಾಗ್ರ ಬದಲಾವಣೆ ಆಗಬೇಕು. ಭೂವ್ಯಾಜ್ಯಗಳ ಪರಿಹಾರಕ್ಕೆ ಇರುವ ಅಧಿಕಾರವನ್ನು ಕಂದಾಯ ಇಲಾಖೆ, ಅದರಲ್ಲೂ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ನ್ಯಾಯಾಲಯಗಳಿಂದ ಹೊರಕ್ಕೆ ತರಬೇಕು. ಭೂಕಬಳಿಕ ವಿಶೇಷ ನ್ಯಾಯಾಲಯದ ಮಾದರಿಯಲ್ಲೇ ಭೂವ್ಯಾಜ್ಯಗಳ ಪರಿಹಾರಕ್ಕೆ ವಿಶೇಷ ನ್ಯಾಯಾಲಯ ತೆರೆಯಬೇಕು.

-ರವಿಕೃಷ್ಣಾ ರೆಡ್ಡಿ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯಾಧ್ಯಕ್ಷ

'ಹೈಕೋರ್ಟ್‌ನಲ್ಲಿ ನ್ಯಾಯ; ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಅಗತ್ಯ'

ಯಶವಂತಪುರ ಠಾಣೆ ವ್ಯಾಪ್ತಿಯ ಗೋಕುಲ 1ನೇ ಹಂತದಲ್ಲಿರುವ ಆಂಜನೇಯ ದೇವಸ್ಥಾನ ರಸ್ತೆಯಲ್ಲಿ ನನ್ನ ಮಾಲೀಕತ್ವದ ಜಾಗವಿದೆ. ಜಯಚಂದ್ರ ಎಂಬಾತ 2013ರ ಸೆಪ್ಟೆಂಬರ್ 18ರಂದು ಅತಿಕ್ರಮ ಪ್ರವೇಶ ಮಾಡಿದ್ದ. ನಂತರ, ಆತ ಹಾಗೂ ಇತರೆ ಆರೋಪಿಗಳು, ನಕಲಿ ದಾಖಲೆಗಳನ್ನು ಸೃಷ್ಟಿಸಿ ನಕಲಿ ಕಕ್ಷಿದಾರ ಹಾಗೂ ಪ್ರತಿವಾದಿ ಹುಟ್ಟುಹಾಕಿದ್ದರು. ನ್ಯಾಯಾಲಯದಲ್ಲೂ ನಕಲಿ ಮೊಕದ್ದಮೆ ಹೂಡಿದ್ದರು. ನ್ಯಾಯಾಲಯದ ದಿಕ್ಕು ತಪ್ಪಿಸಿ ತನ್ನ ಪರ ಆದೇಶ ಪಡೆದಿದ್ದರು. ನಂತರ, ಜಾಗಕ್ಕೆ ಬಂದು ನನ್ನನ್ನೇ ಸ್ಥಳದಿಂದ ಖಾಲಿ ಮಾಡಿಸಿದ್ದರು. ಅದನ್ನು ಪ್ರಶ್ನಿಸಿ ಕಾನೂನು ಹೋರಾಟ ಮಾಡಿದಾಗಲೇ, ಆರೋಪಿಗಳ ನಕಲಿ ಮೊಕದ್ದಮೆ ಜಾಲ ಹೊರಬಿತ್ತು. ಈ ಬಗ್ಗೆ ಆರಂಭದಲ್ಲಿ ಯಶವಂತಪುರ ಠಾಣೆಗೆ ದೂರು ನೀಡಿದ್ದೆ.

ಹೈಕೋರ್ಟ್‌ನಲ್ಲಿ ನಮಗೆ ನ್ಯಾಯ ಸಿಕ್ಕಿತು. ಸಿಐಡಿ ತನಿಖೆ ನಡೆಯುತ್ತಿದೆ. ಖಾಲಿ ಜಾಗಗಳನ್ನು ಗುರುತಿಸಿ ಕಬಳಿಸುವ ಜಾಲ ದೊಡ್ಡದಾಗಿದೆ. ಇಂಥ ಜಾಲದ ಬಗ್ಗೆ ಜನರು ಜಾಗೃತರಾಗಬೇಕು.

– ಜಯೇಷ ಸಿ. ಷಾ, ಜಾಗದ ಮಾಲೀಕ

ಹಿರಿಯ ನಿರ್ದೇಶಕ ಗಿರೀಶ್ ಕಾಸರವಳ್ಳಿ ಬೇಸರ

‘ಸಿನಿಮಾಗಳಲ್ಲಿ ಕನ್ನಡ ನೆಲದ ಅಸ್ಮಿತೆ ಇಲ್ಲ’



ಗಿರೀಶ್ ಕಾಸರವಳ್ಳಿ

ಪ್ರಜಾವಾಣಿ ಸೆಲೆಬ್ರಿಟಿ LIVE

ಬೆಂಗಳೂರು: ‘ಕನ್ನಡದಲ್ಲಿ ಪ್ರಸ್ತುತ ಬರುತ್ತಿರುವ ಹೊಸ ರೀತಿಯ ಸಿನಿಮಾಗಳಲ್ಲೂ ಆರಿಸಿಕೊಳ್ಳುತ್ತಿರುವ ವಸ್ತು ಕನ್ನಡ ನೆಲದಿಂದ ಹುಟ್ಟುತ್ತಿಲ್ಲ. ಕನ್ನಡ ನೆಲದ ಅಸ್ಮಿತೆಯನ್ನು ನಿರ್ದೇಶಕರು ಕೈಗೆತ್ತಿಕೊಳ್ಳುತ್ತಿಲ್ಲ. ಇದು ಕನ್ನಡ ಚಿತ್ರೋದ್ಯಮಕ್ಕೆ ತಟ್ಟಿರುವ ದೊಡ್ಡ ಶಾಪ’.

– ಹೀಗೆಂದು ‘ಪ್ರಜಾವಾಣಿ ಸೆಲೆಬ್ರಿಟಿ ಲೈವ್’ ಸಂದರ್ಶನದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದು ಹಿರಿಯ ನಿರ್ದೇಶಕ ಗಿರೀಶ್ ಕಾಸರವಳ್ಳಿ. ರಾಜ್ಯದಲ್ಲಿ ದಲಿತ ಹಾಗೂ ರೈತ ಚಳವಳಿ, ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಹೋರಾಟ ಹೀಗೆ ಸಮಾಜದಲ್ಲಿ ಹಲವು ಘಟನೆಗಳು ನಡೆದರೂ ಈ ಕುರಿತು ಪ್ರಬಲವಾದ ಸಿನಿಮಾಗಳು ಏಕೆ ಬರಲಿಲ್ಲ ಎನ್ನುವ ಪ್ರಶ್ನೆಗೆ ಅವರು ಪ್ರತಿಕ್ರಿಯೆ ನೀಡಿದರು.

‘ಯಾವಾಗ ನಮ್ಮ ಕನ್ನಡ ಚಿತ್ರರಂಗ ರಿಮೇಕ್, ಡಬ್ಬಿಂಗ್‌ಗೆ ಒಗ್ಗುತ್ತಾ ಹೋಯಿತೋ ಆವಾಗಿನಿಂದ ಈ ರೀತಿಯ ಹುಡುಕಾಟ ಬಿಟ್ಟುಬಿಟ್ಟಿದ್ದಾರೆ. ರಿಮೇಕ್ ಮಾಡುವವರು ಯಾವುದು ಹೆಚ್ಚು ಹಣವನ್ನು ತರಬಲ್ಲದು ಎಂದು ನೋಡುತ್ತಾರೆಯೇ ಹೊರತು ನಮ್ಮ ನೆಲದ ಕಥೆ ಏನಿದೆ, ನಮ್ಮ ಪರಿಸರದಲ್ಲಿ ಏನಾಗುತ್ತಿದೆ ಎಂದು ಹುಡುಕಲು ಹೋಗುವುದಿಲ್ಲ. ತಮಿಳು, ತೆಲುಗಿನಲ್ಲಿ ಏನಾಗುತ್ತಿದೆ ಎಂದು ನೋಡಿಕೊಂಡು ಅದನ್ನು ಅನುಸರಿಸುತ್ತಿದ್ದೇವೆಯೇ ಹೊರತು ನಮ್ಮ ನೆಲದಲ್ಲಿ, ಸಮಾಜದಲ್ಲಿ ಏನಾಗುತ್ತಿದೆ ಎಂದು ನೋಡಿಕೊಂಡು ಸಿನಿಮಾ ಮಾಡುತ್ತಿಲ್ಲ’ ಎಂದರು.

‘ಕನ್ನಡ ಚಿತ್ರಗಳಲ್ಲಿ ಕನ್ನಡ ಅಸ್ಮಿತೆ ಎತ್ತಿಕೊಂಡು ಸಿನಿಮಾ ಮಾಡಿದ್ದರೆ ಅದು ಕನ್ನಡಕ್ಕೆ ಮನ್ನಣೆ ತರುವ ನಡೆ ಆಗುತ್ತಿತ್ತು. ಮರಾಠಿ, ತಮಿಳಿನಲ್ಲಿನ ಬೇರೆ ಬೇರೆ ರೀತಿಯ ಪ್ರಯತ್ನಗಳು ನಮಗೆ ಉತ್ತೇಜನವಾಗಬೇಕು’ ಎಂದು ಆಶಿಸಿದರು.

‘ಸಿನಿಮಾ ನೇರವಾಗಿ ರಾಜಕೀಯವನ್ನು ಎತ್ತಿಹಿಡಿದರಷ್ಟೇ ರಾಜಕೀಯ ಸಿನಿಮಾ ಎನ್ನುವ ತಪ್ಪುಕಲ್ಪನೆ ಇದೆ. ಇದು ಅಲ್ಲವೇ ಅಲ್ಲ. ರಾಜಕೀಯ ಎನ್ನುವುದು ಸೈದ್ಧಾಂತಿಕ ನಿಲುವು ಆಗಿರಬಹುದು, ರಾಜಕೀಯ ವ್ಯವಸ್ಥೆ ಆಗಿರಬಹುದು ಅಥವಾ ನಮ್ಮ ದೈನಂದಿನ ವ್ಯವಹಾರದಲ್ಲೂ ರಾಜಕೀಯವಿದೆ. ಇದು ಗಮನಕೊಡಬೇಕಾದ ಅಂಶಗಳು. ಸತ್ಯಜಿತ್ ರೇ ಅವರ ಸಿನಿಮಾಗಳಲ್ಲಿ ಘೋಷಿತ ಯಾವುದೇ ರಾಜಕೀಯ ಹೇಳಿಕೆ ನೀಡದೇ ಇದ್ದರೂ ಅಂತರಾತ್ಮದಲ್ಲಿ ಹೆಚ್ಚು ರಾಜಕೀಯವಾಗಿರುತ್ತದೆ. ಇದು ನನಗೆ ಸ್ಫೂರ್ತಿ ಹಾಗೂ ಮಾದರಿ. ನನಗೆ ಈ ರೀತಿ ಕಥೆ ಕಟ್ಟುವುದನ್ನು ಕಲಿಸಿಕೊಟ್ಟಿರುವುದೇ ನಾನು ಕಲಿತ ಪುಣೆಯ ಫಿಲ್ಮ್ ಇನ್‌ಸ್ಟಿಟ್ಯೂಟ್, ನೋಡಿದ ಜಾಗತಿಕ ಸಿನಿಮಾಗಳು ಹಾಗೂ ಅನೇಕ ಸಾಹಿತ್ಯ ಕೃತಿಗಳು’ ಎಂದರು ಕಾಸರವಳ್ಳಿ.

ಮೊದಲ ಸಿನಿಮಾ ನೆನಪು: ‘ಘಟಶ್ರಾದ್ಧ’ ಸಿನಿಮಾ ಮಾಡುವಾಗ ಇದೊಂದು ಮುಖ್ಯವಾದ ಸಿನಿಮಾ ಆಗುತ್ತದೆ ಎನ್ನುವ ಕಲ್ಪನೆ ಇರಲಿಲ್ಲ. ಇದು ಭಾಗ್ಯದ ಬಾಗಿಲು ತೆರೆದ ಸಿನಿಮಾ ಎನ್ನಬಹುದು. ಅತಿ ಕಡಿಮೆ ಬಜೆಟ್‌ನಲ್ಲಿ ಮಾಡಿದ ಸಿನಿಮಾ ರಾಜ್ಯದ ಐದು ಕೇಂದ್ರಗಳಲ್ಲಿ 50 ದಿನ ಓಡಿತ್ತು. ಬೆಂಗಳೂರಿನಲ್ಲೇ 75 ದಿನ ಚಿತ್ರ ಓಡಿತ್ತು. ಈಗ ಚಿತ್ರ ಎಷ್ಟು ಕೋಟಿ ಹಣ ಮಾಡಿತು ಎನ್ನುವುದು ಚಿತ್ರದ ಯಶಸ್ಸಿನ ಮಾನದಂಡವಾಗಿದ್ದರೆ, ಆ ಕಾಲದಲ್ಲಿ ಎಷ್ಟು ಜನರನ್ನು ಚಿತ್ರ ತಲುಪಿತು ಎನ್ನುವುದು ಚಿತ್ರದ ಯಶಸ್ಸಿನ ಮಾನದಂಡವಾಗಿತ್ತು. ನಾನು ಧೈರ್ಯವಾಗಿ ಹೇಳುತ್ತೇನೆ. ನನ್ನೆಲ್ಲ ಚಿತ್ರಗಳಲ್ಲಿ ನಿರ್ಮಾಪಕರು ಹಾಕಿದ ದುಡ್ಡು ಅವರಿಗೆ ವಾಪಸ್ ಬಂದಿದೆ ಎಂದು ನೆನಪಿಸಿಕೊಂಡರು ಗಿರೀಶ್ ಕಾಸರವಳ್ಳಿ.

‘ಸದ್ಯಕ್ಕೆ ಎರಡು ಮೂರು ಕಥೆ ಇಟ್ಟುಕೊಂಡಿದ್ದೇನೆ. ಕೋವಿಡ್‌ನ ಈ ಸ್ಥಿತಿಯಲ್ಲಿ ಚಿತ್ರ ಮಾಡಿದರೂ ಮುಂದೆ ಏನು ಮಾಡಬೇಕು ಎಂದು ತಿಳಿಯುತ್ತಿಲ್ಲ. ಆತ್ಮಕತೆ ಬರೆಯುವ ಯೋಚನೆ ಇಲ್ಲ. ಪ್ರತಿಯೊಂದು ಸಿನಿಮಾದ ಹಿಂದಿನ ಶ್ರಮ, ಆಲೋಚನಾ ಪ್ರಕ್ರಿಯೆಗಳನ್ನು ಸಿನಿಮಾಗ್ರಫಿ ಬರೆಯಬೇಕು ಎಂದುಕೊಂಡಿದ್ದೇನೆ’ ಎಂದರು. ಸಂದರ್ಶನದ ವೇಳೆ ನಿರ್ಮಾಪಕ ಸದಾನಂದ ಸುವರ್ಣ, ಛಾಯಾಗ್ರಾಹಕ ಎಸ್.ರಾಮಚಂದ್ರ ಹಾಗೂ ನಿರ್ದೇಶಕ ಬಿ.ವಿ.ಕಾರಂತರ ಜೊತೆಗಿನ ಒಡನಾಟವನ್ನೂ ಕಾಸರವಳ್ಳಿಯವರು ಸ್ಮರಿಸಿದರು.

ಪೂರ್ಣ ಸಂದರ್ಶನ: https://bit.ly/2UAoeaq
https://bit.ly/3sCa715

ಗಂಟಲುಬ್ಬಿಸಿದ ವೈಶಾಲಿ ನೆನಪು

‘ಘಟಶ್ರಾದ್ಧ’ ಸಿನಿಮಾ ಆಗುವಾಗ ನಾನಿನ್ನೂ ಮದುವೆ ಆಗಿರಲಿಲ್ಲ. ನಂತರದ ಎಲ್ಲ ಸಿನಿಮಾಗಳಲ್ಲೂ ವೈಶಾಲಿ ಒಂದಲ್ಲ ಒಂದು ರೀತಿಯಲ್ಲಿ ಭಾಗವಾಗಿದ್ದಳು. ಒಂದು ಚಿತ್ರಕಥೆ ಬರೆದ ಮೇಲೆ ಅದನ್ನು ಮೊದಲು ಓದುತ್ತಿದ್ದುದು ವೈಶಾಲಿಯೇ. ಆಕೆಯ ಪ್ರತಿಕ್ರಿಯೆಗೆ ಮಾನ್ಯತೆ ಕೊಡುತ್ತಿದ್ದೆ. ಏಕೆಂದರೆ ಅವಳಿಗೆ ಆ ಸಿನಿಮಾ ಕೃತಿಯಾಗಿ ರುಚಿಸುತ್ತದೆಯೇ ಇಲ್ಲವೇ ಎನ್ನುವುದು ಅರ್ಥವಾಗುತ್ತಿತ್ತು. ಜೊತೆಗೆ ಸಿನಿಮಾದ ರಾಜಕೀಯ ಅವಳಿಗೆ ತಿಳಿಯುತ್ತಿತ್ತು. ಈ ಕಾರಣಕ್ಕೆ ಚಿತ್ರಕಥೆಯ ಹಂತದಲ್ಲಿ ಮುಖ್ಯ ಪಾತ್ರವನ್ನು ಆಕೆ ವಹಿಸುತ್ತಿದ್ದಳು. ನನ್ನ ಬಹುತೇಕ ಸಿನಿಮಾದ ವಸ್ತ್ರವಿನ್ಯಾಸಕಿಯಾಗಿದ್ದಳು. ಒಂದೆರಡು ಸಿನಿಮಾಗಳಲ್ಲಿ ಸಹ ನಿರ್ದೇಶಕಿಯಾಗಿಯೂ ಆಗಿ ಕಾರ್ಯನಿರ್ವಹಿಸಿದ್ದಳು. ‘ಕೂರ್ಮಾವತಾರ’ ಮಾಡುವಷ್ಟರ ಹೊತ್ತಿಗೆ ಆಕೆ ಇರಲಿಲ್ಲ ಎಂದು ಗದ್ಗದಿತರಾದರು ಗಿರೀಶ್ ಕಾಸರವಳ್ಳಿ.

ಅತ್ಯಾಧುನಿಕ ಹೊರರೋಗಿ ವಿಭಾಗ ಸೇರಿದಂತೆ ವಿವಿಧ ಘಟಕಗಳು ನಿರ್ಮಾಣ

ವಿಶ್ವ ದರ್ಜೆ ಸೇವೆಗೆ ಕಿದ್ವಾಯಿ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಸಾಲಿನಲ್ಲಿ ‘ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ’ ಯೋಜನೆಯಡಿ ಅತೀ ಹೆಚ್ಚು ಮಂದಿಗೆ ಸೇವೆ ಒದಗಿಸಿದ್ದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ವಿಶ್ವ ದರ್ಜೆಯ ವೈದ್ಯಕೀಯ ಸೌಲಭ್ಯಕ್ಕೆ ಅಣಿಗೊಂಡಿದೆ.

ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯ (ಸಿಎಸ್‌ಆರ್) ನೆರವಿನಿಂದ ನೂತನ ಹೊರರೋಗಿ ಘಟಕ (ಒಪಿಡಿ) ಹಾಗೂ ವಿವಿಧ ಚಿಕಿತ್ಸಾ ಘಟಕಗಳು ಮತ್ತು ವೈದ್ಯಕೀಯ ಸೌಲಭ್ಯಗಳು ಉದ್ಘಾಟನೆಗೆ ಸಜ್ಜಾಗಿವೆ.

ಇನ್ಫೊಸಿಸ್ ಪ್ರತಿಷ್ಠಾನದ ನೆರವಿನಿಂದ ₹ 50 ಕೋಟಿ ವೆಚ್ಚದಲ್ಲಿ ಒಪಿಡಿ ಘಟಕ ನಿರ್ಮಿಸಲಾಗಿದೆ. ಇದರಿಂದಾಗಿ ಹಳೆಯ ಕಟ್ಟಡದಲ್ಲಿರುವ ಒಪಿಡಿ ಘಟಕವು ಹೊಸ ಕಟ್ಟಡಕ್ಕೆ ಸ್ಥಳಾಂತರವಾಗಲಿದೆ. ಮಕ್ಕಳಿಗಾಗಿ 14 ಹಾಸಿಗೆಗಳ ಪ್ರತ್ಯೇಕ ತೀವ್ರ ನಿಗಾ ಘಟಕವನ್ನೂ ನಿರ್ಮಿಸಲಾಗಿದೆ.

ಸಂಸ್ಥೆಯಲ್ಲಿ ಪ್ರತಿವರ್ಷ 3 ಲಕ್ಷಕ್ಕೂ ಅಧಿಕ ಮಂದಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಕೆಲ ತಿಂಗಳ ಹಿಂದಷ್ಟೇ ಧರ್ಮಸ್ಥಳ ಮಂಜುನಾಥೇಶ್ವರ ಬ್ಲಾಕ್ ಹಾಗೂ ಆಸ್ಪತ್ರೆಯ ಪ್ರವೇಶ ದ್ವಾರದ ವಿನ್ಯಾಸವನ್ನು ಬದಲಾಯಿಸಲಾಗಿತ್ತು. ಕಟ್ಟಡದ ಒಳಾಂಗಣ ವಿನ್ಯಾಸದಲ್ಲೂ ಮಾರ್ಪಾಡು ಮಾಡಲಾಗಿತ್ತು.

ಅಸ್ಥಿಮಜ್ಜೆ ಘಟಕ: ಕ್ಯಾನ್ಸರ್ ರೋಗಿಗಳಿಗೆ ಅಸ್ಥಿಮಜ್ಜೆ (ಬೋನ್ ಮ್ಯಾರೊ) ಕಸಿ ಚಿಕಿತ್ಸೆಗಾಗಿ ಸಂಸ್ಥೆಯ ಆವರಣದಲ್ಲಿ ಅಸ್ಥಿಮಜ್ಜೆ ಘಟಕ ನಿರ್ಮಿಸಲಾಗಿದೆ. ರಾಜ್ಯದ ಮೊದಲ ಸರ್ಕಾರಿ ಅಸ್ಥಿಮಜ್ಜೆ ಘಟಕ ಎಂಬ ಗೌರವಕ್ಕೆ ಕೂಡ ಇದು ಭಾಜನವಾಗಲಿದೆ. ₹ 10 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿದ್ದು, 13 ಸಾವಿರ ಚದರ ಅಡಿ ವಿಸ್ತೀರ್ಣವನ್ನು ಹೊಂದಿದೆ. ಈ ಘಟಕವು 17 ಹಾಸಿಗೆಗಳನ್ನು ಒಳಗೊಂಡಿದೆ. ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿರುವವರಿಗೆ ಇಲ್ಲಿ ಅಸ್ಥಿಮಜ್ಜೆ ಕಸಿ ಮಾಡಲಾಗುತ್ತದೆ.

ರಾಜ್ಯ ಸರ್ಕಾರವು 2018ರಲ್ಲಿ ಬಿಪಿಎಲ್ ಕುಟುಂಬಗಳಿಗಾಗಿ ‘ರಾಜ್ಯ ಅಂಗಾಂಗ ಕಸಿ ಯೋಜನೆ’ ಆರಂಭಿಸಿದೆ. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಈ ಯೋಜನೆಯನ್ನು ನಿರ್ವಹಣೆ ಮಾಡುತ್ತಿದೆ.

ಯೋಜನೆಯಡಿ 2019ರಲ್ಲಿ ಅಸ್ಥಿಮಜ್ಜೆ ಕಸಿಯನ್ನೂ ಸೇರ್ಪಡೆ ಮಾಡಲಾಗಿದ್ದು, ₹ 21 ಲಕ್ಷದವರೆಗೂ ಉಚಿತವಾಗಿ ಚಿಕಿತ್ಸೆ ಈ ಘಟಕದಲ್ಲಿ ದೊರೆಯಲಿದೆ.

ಇನ್ಫೊಸಿಸ್ ಪ್ರತಿಷ್ಠಾನದ ನೆರವಿನಿಂದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ನಿರ್ಮಿಸಲಾದ ಹೊರರೋಗಿ ವಿಭಾಗ ಘಟಕ

ವಿವಿಧ ಮಾದರಿಯ ಕ್ಯಾನ್ಸರ್‌ಗಳ ಚಿಕಿತ್ಸೆಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಸರ್ಕಾರ ಹಾಗೂ ದಾನಿಗಳ ನೆರವಿನಿಂದ ಅತ್ಯಾಧುನಿಕ ಸೌಲಭ್ಯಗಳನ್ನು ಸಂಸ್ಥೆಯಲ್ಲಿ ಅಳವಡಿಸಲಾಗಿದೆ

ಡಾ.ಸಿ. ರಾಮಚಂದ್ರ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಉದ್ಘಾಟನೆ ನಾಳೆ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಇನ್ಫೊಸಿಸ್ ಪ್ರತಿಷ್ಠಾನದ ನಿರ್ಮಿಸಿರುವ ಹೊರರೋಗಿ ವಿಭಾಗ ಘಟಕ (ಒಪಿಡಿ ಬ್ಲಾಕ್) ಸೇರಿದಂತೆ ವಿವಿಧ ವೈದ್ಯಕೀಯ ಸೌಲಭ್ಯಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಮವಾರ ಮಧ್ಯಾಹ್ನ 1 ಗಂಟೆಗೆ ಉದ್ಘಾಟಿಸಲಿದ್ದಾರೆ. ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾ ಮೂರ್ತಿ, ಸಂಸದ ತೇಜಸ್ವಿ ಸೂರ್ಯ, ಶಾಸಕ ಉದಯ್ ಗರುಡಾಚಾರ್ ಮತ್ತಿತರರು ಉಪಸ್ಥಿತರಿರಲಿದ್ದಾರೆ.

ನೂತನ ಸೌಲಭ್ಯಗಳು

- ಇನ್ಫೊಸಿಸ್ ಪ್ರತಿಷ್ಠಾನದ ಹೊರರೋಗಿ ವಿಭಾಗ ಘಟಕ
- ಅಸ್ಥಿಮಜ್ಜೆ ಕಸಿ ಘಟಕ
- ನ್ಯೂಕ್ಲಿಯರ್ ಮೆಡಿಸಿನ್ ಮತ್ತು ಪೆಟ್‌ಸ್ಕ್ಯಾನ್ ಬಂಕರ್
- ಮಾಲಿಕ್ಯುಲರ್ ಆಂಕಾಲಜಿ ಪ್ರಯೋಗಾಲಯ
- ಮಕ್ಕಳ ಐಸಿಯು ಘಟಕ
- ಬ್ರಾಕಿಥೆರಪಿ
- ಸಿಟಿ ಸಿಮ್ಯುಲೇಟರ್
- ಸೆಂಟ್ರಲ್ ಮೆಡಿಕಲ್ ಸ್ಟೋರ್ಸ್ ಮತ್ತು ನವೀಕೃತ ಶಸ್ತ್ರಚಿಕಿತ್ಸಾ ಘಟಕ
- ನವೀಕೃತ ಡೇ ಕೇರ್ ವಾರ್ಡ್
- ನವೀಕೃತ ಸ್ಟೆಪ್ ಒನ್ ಐಸಿಯು
- ಸೆಂಟ್ರಲ್ ಸ್ಟೆರಿಲೈಸೇಷನ್ ಘಟಕ
- ಇ-ಆಸ್ಪತ್ರೆ ಸೇವೆ

ಸರ್ಕಾರಕ್ಕೆ ಕಣ್ಣಿಲ್ಲದಿರುವುದು ಮತ್ತೆ ಸಾಬೀತು: ಡಿಕೆಶಿ

ಬೆಂಗಳೂರು: ‘ಬದುಕಿರುವ ಯೋಧನ ಮನೆಗೆ ಹೋಗಿ ಕೇಂದ್ರ ಸಚಿವರು ಸಾಂತ್ವನ ಹೇಳಿರುವುದು ಬಿಜೆಪಿ ಸರ್ಕಾರಕ್ಕೆ ಕಣ್ಣು, ಕಿವಿ, ಹೃದಯ ಇಲ್ಲ ಎಂಬುದಕ್ಕೆ ಮತ್ತೊಂದು ಸಾಕ್ಷಿ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಟೀಕಿಸಿದರು. ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಕೇಂದ್ರ ಸಚಿವರು ರಾಜ್ಯಕ್ಕೆ ಭೇಟಿ ನೀಡಿದರೆ ಅವರು ಅತಿಥಿ ಇದ್ದಂತೆ. ಅವರು ಎಲ್ಲೇ ಹೋದರೂ, ಅವರ ಜತೆ ಪೊಲೀಸರು, ಅಧಿಕಾರಿಗಳು ಇರುತ್ತಾರೆ. ಆದರೂ ಈ ರೀತಿ ಯಡವಟ್ಟು ಆಗಿರುವುದು ಈ ಸರ್ಕಾರಕ್ಕೆ ಕಣ್ಣು, ಕಿವಿ, ಹೃದಯ ಇಲ್ಲ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದೆ’ ಎಂದರು.

ಕೇಂದ್ರದ ಜವಾಬ್ದಾರಿ: ‘ಅಫ್ಗಾನಿಸ್ತಾನದಲ್ಲಿ ಸಿಲುಕಿರುವ ಕನ್ನಡಿಗರನ್ನು ವಾಪಸು ಕರೆತರುವುದು ಕೇಂದ್ರ ಸರ್ಕಾರದ ಜವಾಬ್ದಾರಿ’ ಎಂದರು.

ಜೈಲಿನಿಂದ ಬಿಡುಗಡೆ: ವಿನಯಗೆ ಸನ್ಮಾನ

ಬೆಳಗಾವಿಯ ಹಿಂಡಲಗಾ ಕಾರಾಗೃಹದಿಂದ ಜಾಮೀನಿನ ಮೇಲೆ ಬಿಡುಗಡೆಯಾದ ಮಾಜಿ ಸಚಿವ ವಿನಯ ಕುಲಕರ್ಣಿ ಮೆರವಣಿಗೆ ವೇಳೆ ಮೀಸೆ ತಿರುವಿದರು

ಪ್ರಜಾವಾಣಿ ಚಿತ್ರ

ಒಂದನೇ ಪುಟದಿಂದ

ಶಿವಬಸವ ನಗರದಲ್ಲಿರುವ ನಾಗನೂರು ರುದ್ರಾಕ್ಷಿಮಠಕ್ಕೆ ಬೆಂಬಲಿಗರೊಂದಿಗೆ ಬಂದು ಅಲ್ಲಿನ ಪೀಠಾಧಿಪತಿ ಡಾ.ಅಲ್ಲಮಪ್ರಭು ಸ್ವಾಮೀಜಿ ಮತ್ತು ಧಾರವಾಡದ ಮುರುಘಾ ಮಠದ ಮಲ್ಲಿಕಾರ್ಜುನ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಬಳಿಕ ಹಲಗಾ ಗ್ರಾಮದಲ್ಲಿರುವ ಸಿದ್ಧಸೇನಾ ಮುನಿ ಅವರಿಂದಲೂ ವಿನಯ ಆಶೀರ್ವಾದ ಪಡೆದುಕೊಂಡರು.

ಕಾರಾಗೃಹದಿಂದ ಹಿಂಡಲಗಾ ಗಣಪತಿ ದೇಗುಲದವರೆಗೆ ಭಾರಿ ಸಂಖ್ಯೆಯ ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಬಂದು, ವಿಶೇಷ ಪೂಜೆ ಸಲ್ಲಿಸಿದರು. ರಾಣಿ ಚನ್ನಮ್ಮ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಈ ವೇಳೆ ವಿನಯ ಕುಲಕರ್ಣಿ ಮೀಸೆ ತಿರುವಿದಾಗ ಬೆಂಬಲಿಗರಿಂದ ಜೈಕಾರ ಮೊಳಗಿತು.

‘ಜಾಮೀನು ನೀಡಿದ ನ್ಯಾಯಾಲಯಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ನ್ಯಾಯಾಂಗದ ಮೇಲೆ ಭರವಸೆ ಇದೆ. ಪ್ರಕರಣದಿಂದ ದೋಷಮುಕ್ತನಾಗಿ ಹೊರಬರುತ್ತೇನೆ’ ಎಂದು ವಿನಯ ಮಾಧ್ಯಮದವರ ಮುಂದೆ ವಿಶ್ವಾಸ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ, ವಿನಯ ಅವರನ್ನು ಶಾಸಕಿ ಲಕ್ಷ್ಮಿ ಹೆಬ್ಬಾಳಕರ ರಾಖಿ ಕಟ್ಟಿ, ತಿಲಕವಿಟ್ಟು ಬರಮಾಡಿಕೊಂಡರು.

ದೂರು ದಾಖಲು: ನೂರಾರು ಮಂದಿ ಬೆಂಬಲಿಗರು ಜಮಾಯಿಸಿ ಪುಷ್ಪವೃಷ್ಟಿ ಮಾಡಿ, ಹೂ ಸೇಬುಗಳ ಹಾರಹಾಕಿ ಸ್ವಾಗತಿಸಿದರು. ಪಟಾಕಿಗಳನ್ನು ಸಿಡಿಸಿ, ಫೇಡೆ ಹಂಚಿ ಸಂಭ್ರಮಿಸಿದರು. ಬಹುತೇಕರು ಮಾಸ್ಕ್ ಧರಿಸಿರಲಿಲ್ಲ ಮತ್ತು ಅಂತರ ಕಾಯ್ದುಕೊಂಡಿರಲಿಲ್ಲ.

ವಾರಾಂತ್ಯ ಕರ್ಫ್ಯೂ ಮತ್ತು ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿದ ಹಿನ್ನೆಲೆಯಲ್ಲಿ ವಿನಯ ಹಾಗೂ 300 ಮಂದಿ ವಿರುದ್ಧ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ 2 ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

2020ರ ನ.9ರಿಂದ ಕಾರಾಗೃಹದಲ್ಲಿದ್ದ ಅವರಿಗೆ ಆ.11ರಂದು ಸುಪ್ರೀಂ ಕೋರ್ಟ್ ಹಾಗೂ ಆ.19ರಂದು ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು.

ಗಾಳಿಯಲ್ಲಿ ಗುಂಡು ಹಾರಿಸಿ ಜನಾಶೀರ್ವಾದ ಯಾತ್ರೆ ಮಾಡಬಹುದು, ಆದರೆ, ವಿನಯ ಕುಲಕರ್ಣಿ ಅವರನ್ನು ಬರಮಾಡಿಕೊಳ್ಳುವಂತಿಲ್ಲ. ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಎಂಬ ನೀತಿ ಬಿಜೆಪಿಯದ್ದಾಗಿದೆ

ಲಕ್ಷ್ಮಿ ಹೆಬ್ಬಾಳಕರ, ಶಾಸಕಿ

ಗುಂಡಣ್ಣ



ದಿನ ಭವಿಷ್ಯ

ಭಾನುವಾರ ಆಗಸ್ಟ್ 22, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮಖಾ ಪೂರ್ಣಿಮಾ ಗಂ. 27-9 (ಸಾ. 5-06) ಭಾನುವಾರ ನಿತ್ಯ ನಕ್ಷತ್ರ ಧನಿಷ್ಠ ಗಂ. 35-20 (ರಾ. 8-23) ಶೋಭನ ನಾಮ ಯೋಗ ಗಂ. 14-36 ಬವ ಕರಣ ಗಂ. 27-9 ವಿಷ ಗಂ. 53-14 ಅಮೃತ ಗಂ. 10-12 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00 ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-11 ಸೂರ್ಯಾಸ್ತ: 6-34 ಅದೃಷ್ಟ ಸಂಖ್ಯೆ 16

ಮೇಷ: ಆಸ್ತಿ ನೋಂದಣಿ ಮುಂತಾದ ಕೆಲಸಗಳು ಸುಗಮವಾಗಿ ನಡೆಯಲಿದೆ. ವ್ಯಾಪಾರ ವ್ಯವಹಾರದಲ್ಲಿ ಮುನ್ನಡೆಯನ್ನು ಸಾಧಿಸಲಿದ್ದೀರಿ. ವ್ಯವಸಾಯ ಕ್ಷೇತ್ರದಲ್ಲಿ ದುಡಿಯುತ್ತಿರುವವರಿಗೆ ಉತ್ತಮ ದಿನ.

ವೃಷಭ: ಸ್ತ್ರೀಯರಿಗೆ ಅತಿಯಾದ ಕೆಲಸದಿಂದಾಗಿ ದೇಹಾಲಾಸ್ಯ ಉಂಟಾಗಲಿದೆ. ಆಸ್ತಿ ಹಸ್ತಾಂತರ ಮಾಡುವ ಸಾಧ್ಯತೆ. ಸಾಲ ಮುಂಗಡ ಇತ್ಯಾದಿ ವ್ಯವಹಾರದಿಂದ ದಿನದ ಮಟ್ಟಿಗೆ ದೂರವಿರುವುದು ಒಳ್ಳೆಯದು.

ಮಿಥುನ: ಜಲ ಸಂಬಂಧಿ ಕೆಲಸಗಳಲ್ಲಿ ತೊಡಗಿರುವವರಿಗೆ ಉತ್ತಮ ಭವಿಷ್ಯ. ಕ್ರೀಡಾಪಟುಗಳಿಗೆ ಸ್ಪರ್ಧೆಯಲ್ಲಿ ಉತ್ತಮ ಸಾಧನೆಯ ಲಕ್ಷಣ ಕಂಡುಬರುತ್ತಿದೆ.
ಕರ್ಕಾಟಕ: ವಯಸ್ಕ ಹೆಣ್ಣುಮಕ್ಕಳಿಗೆ ಕಂಕಣ ಭಾಗ್ಯ ದೊರೆಯಲಿದೆ. ನೌಕರಿಯಲ್ಲಿರುವವರಿಗೆ ಕಿರಿಕಿರಿ ಉಂಟಾಗುವ ಸಾಧ್ಯತೆ. ಬಂಧುಗಳಿಂದ ಆರ್ಥಿಕ ಸಹಾಯದ ಭರವಸೆ ಪಡೆಯಲಿದ್ದೀರಿ.

ಸಿಂಹ: ಸಂಶೋಧನಾ ಕೆಲಸದಲ್ಲಿರುವವರಿಗೆ ಹೊಸ ಸಂಶೋಧನೆಯ ಗರಿ ಮುಡಿಗೇರಲಿದೆ. ಆಸ್ತಿ ಖರೀದಿ ಸಾಧ್ಯತೆಗಳು ಕಂಡುಬರುತ್ತಿದೆ. ಆರೋಗ್ಯದಲ್ಲಿ ಗಮನ ಅವಶ್ಯ.

ಕನ್ಯಾ: ಕೈಗಾರಿಕೋದ್ಯಮಿಗಳಿಗೆ ಅತ್ಯಂತ ಪ್ರಶಸ್ತವಾದ ದಿನ. ರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಉದ್ಯೋಗದಲ್ಲಿ ಬಡ್ತಿ. ಸಾರ್ವಜನಿಕ ಸಭೆ ಸಮಾರಂಭದಲ್ಲಿ ಭಾಗವಹಿಸಿ ಗೌರವ ಹೊಂದಲಿದ್ದೀರಿ.

ತುಲಾ: ಗಣಕ ಯಂತ್ರ ಮುಂತಾದ ತಾಂತ್ರಿಕ ಉಪಕರಣಗಳ ಮಾರಾಟಗಾರರಿಗೆ ಉತ್ತಮ ಲಾಭ. ಬಂಧುಗಳ ಸಹಕಾರದಿಂದ ಆಸ್ತಿ ಖರೀದಿ ಸಾಧ್ಯತೆ. ಸಂಗಾತಿಯ ಆಸೆಯಂತೆ ದೂರದ ಪ್ರಯಾಣ ಮಾಡಲಿದ್ದೀರಿ.

ವೃಶ್ಚಿಕ: ಹಣಕಾಸು ವ್ಯವಹಾರ ನಡೆಸುವವರಿಗೆ ಹೆಚ್ಚಿನ ಆದಾಯದ ದಿನ. ಮಹಿಳಾ ರಾಜಕಾರಣಿಗಳಿಂದ ಕಿರುಕುಳ ಉಂಟಾಗುವ ಸಾಧ್ಯತೆ. ವೈದ್ಯಕೀಯ ಕ್ಷೇತ್ರದಲ್ಲಿರುವವರಿಗೆ ಉತ್ತಮ ಆದಾಯ.

ಧನು: ಉದ್ಯಮವೊಂದರ ಮಂಜೂರಾತಿ ದೊರಕಿಸಿಕೊಳ್ಳಲಿದ್ದೀರಿ. ದಕ್ಷತೆಯ ಕಾರ್ಯನಿರ್ವಹಣೆಯಿಂದ ಉದ್ಯಮದಲ್ಲಿ ಯಶಸ್ಸು. ಆರೋಗ್ಯದಲ್ಲಿ ಏರುಪೇರುಗಳನ್ನು ನಿರೀಕ್ಷಿಸಬಹುದು.

ಮಕರ: ಕೋರ್ಟು ಕಚೇರಿ ಕೆಲಸಗಳಲ್ಲಿ ಯಶಸ್ಸನ್ನು ಕಾಣಲಿದ್ದೀರಿ. ಸ್ವಯಂ ಉದ್ಯೋಗಿಗಳಿಗೆ ಹೆಚ್ಚಿನ ಆದಾಯವನ್ನು ನಿರೀಕ್ಷಿಸಬಹುದು. ಸಗಟು ವ್ಯಾಪಾರಿಗಳಿಗೆ ಉತ್ತಮ ವ್ಯವಹಾರವನ್ನು ನಿರೀಕ್ಷಿಸಬಹುದು.

ಕುಂಭ: ಹೊಸ ವ್ಯಕ್ತಿಯೊಬ್ಬರ ಪರಿಚಯದಿಂದಾಗಿ ಆಸ್ತಿ ವ್ಯವಹಾರದಲ್ಲಿ ಕೈಹಾಕುವ ಸಾಧ್ಯತೆ. ದಲ್ಲಾಳಿ ವ್ಯವಹಾರದಿಂದ ಉತ್ತಮ ಆದಾಯ. ಆಧುನಿಕ ಯಂತ್ರಗಳ ವ್ಯವಹಾರದಿಂದ ಉತ್ತಮ ಆದಾಯ.

ಮೀನ: ಸರ್ಕಾರಿ ಉದ್ಯೋಗದಲ್ಲಿರುವವರಿಗೆ ಸ್ಥಾನ ಬದಲಾವಣೆಯ ಸಾಧ್ಯತೆ. ಕೆಲವು ಕಹಿ ಘಟನೆಗಳಿಗೆ ಇಂದು ಉತ್ತರ ದೊರಕಿಸಿಕೊಳ್ಳಲಿದ್ದೀರಿ. ಮನೆಯಲ್ಲಿ ಸಹೋದರರ ವಿರೋಧವನ್ನು ಎದುರಿಸಬೇಕಾದ ಲಕ್ಷಣ.

ನಿಮ್ಮ ಜನ್ಮದಿನ 22-ಆಗಸ್ಟ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಆರ್ಥಿಕ ಸಬಲರೂ ಆಗಿರುವ ನಿಮಗೆ, ಆರೋಗ್ಯ ಭಾಗ್ಯವೂ ದೊರಕಲಿದೆ. ದ್ರವ ವಸ್ತುಗಳ ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ ಅನುಭವಿಸುವ ಸಾಧ್ಯತೆ ಕಂಡುಬರುತ್ತಿದೆ. ಸ್ವಂತ ಉದ್ಯೋಗದಲ್ಲಿಯೂ ಯಶಸ್ಸನ್ನು ಕಾಣುವಿರಿ. ಅನ್ಯೋನ್ಯ ದಾಂಪತ್ಯಜೀವನದಿಂದಾಗಿ ಸಂತೋಷವನ್ನನುಭವಿಸುವಿರಿ.

ರಾಯರ ಆರಾಧನಾ ಮಹೋತ್ಸವ ಆರಂಭ

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯದಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳ 350ನೇ ಆರಾಧನಾ ಮಹೋತ್ಸವದ ನಿಮಿತ್ತ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು, ಮಠದ ಮುಂಭಾಗ ಶನಿವಾರ ಧ್ವಜಾರೋಹಣ ನೆರವೇರಿಸಿ ಒಂದು ವಾರ ನಡೆಯುವ ಸಪ್ತರಾತ್ರೋತ್ಸವ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು.

ಮಠದಲ್ಲಿ ಪೂರ್ಣಕುಂಭ, ವಾದ್ಯಮೇಳಗಳು, ಮಂತ್ರಘೋಷಗಳು ಮೊಳಗಿದವು. ಶ್ರೀಕಾರಹಾಕಿದ ನಂತರ ಶ್ರೀಮಠದ ಆವರಣದಲ್ಲಿ ಧ್ವಜಾರೋಹಣ, ಗೋವು, ಅಶ್ವ,ಗಜ, ಲಕ್ಷ್ಮೀ ಹಾಗೂ ಧಾನ್ಯ ಪೂಜೆಗಳನ್ನು ಸ್ವಾಮೀಜಿ ನೆರವೇರಿಸಿದರು.

ನಿತ್ಯ ಬೆಳಗಿನ ಜಾವ ರಾಯರ ಮೂಲ ವೃಂದಾವನದ ನೈರ್ಮಲ್ಯ ವಿಸರ್ಜನೆ, ವಿಶೇಷ ಪೂಜೆಗಳು, ಮಹಾಸಂಸ್ಥಾನ ಪ್ರತಿಮೆಗಳ ಪೂಜೆ, ಪಂಚಾಭಿಷೇಕ, ಪ್ರಾಕಾರ ರಥೋತ್ಸವ ನಡೆಯಲಿವೆ.

ಆಗಸ್ಟ್ 23 ರಂದು ಪೂರ್ವರಾಧನೆ, ಆ.24 ರಂದು ಮಧ್ಯಾರಾಧನೆ ಹಾಗೂ ಆ.25 ರಂದು ಉತ್ತಾರಾಧನೆ ನಡೆಯುವುದು.

ಕೋವಿಡ್ ನಿಯಮ ಅನುಸರಿಸಿಕೊಂಡು ಭಕ್ತರು ಆರಾಧನಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿದೆ.

ಮಂತ್ರಾಲಯದಲ್ಲಿ ರಾಯರ ಆರಾಧನಾ ಮಹೋತ್ಸವದ ಮೊದಲ ದಿನ ಶನಿವಾರ, ಮಠದ ಪೀಠಾಧಿಪತಿ ಶ್ರೀಸುಬುಧೇಂದ್ರ ತೀರ್ಥರು ಗೋಪೂಜೆ ನೆರವೇರಿಸಿದರು

ವೇತನ ತಾರತಮ್ಯ ನಿವಾರಣೆ

ಬಳ್ಳಾರಿ: ಸಾರಿಗೆ ನೌಕರರ ವೇತನ ತಾರತಮ್ಯ ನಿವಾರಿಸುವುದರ ಜತೆಗೆ ಹಬ್ಬದ ಸಮಯದಲ್ಲಿ ತೊಂದರೆ ಆಗದಂತೆ ಎರಡು ತಿಂಗಳ ವೇತನ ನೀಡಲಾಗುವುದು ಎಂದು ಸಾರಿಗೆ ಸಚಿವ ಬಿ. ಶ್ರೀರಾಮುಲು ಶನಿವಾರ ಭರವಸೆ ನೀಡಿದರು.

ಸಾರಿಗೆ ಸಂಸ್ಥೆ ನಷ್ಟದಲ್ಲಿದೆ. ಲಾಭವೂ ಇಲ್ಲದೆ, ನಷ್ಟವೂ ಇಲ್ಲದೆ ಸಂಸ್ಥೆ ನಡೆಸಬೇಕಿದೆ. ಸದ್ಯ ಬಸ್ಸುಗಳು ಭರ್ತಿಯಾಗುತ್ತಿಲ್ಲ. ಕೇರಳ, ತಮಿಳುನಾಡು ಮತ್ತು ಮಹಾರಾಷ್ಟ್ರಕ್ಕೆ ಬಸ್ ಸಂಪರ್ಕ ಸ್ಥಗಿತಗೊಳಿಸಲಾಗಿದೆ ಎಂದು ಮಾಧ್ಯಮ ಪ್ರತಿನಿಧಿಗಳಿಗೆ ಶನಿವಾರ ತಿಳಿಸಿದರು.

25 ವರ್ಷಗಳ ಹಿಂದೆ

ಗುರುವಾರ, 22-8-1996

● **ಪ್ರಧಾನಿ ಭೇಟಿಗೆ ಮುನ್ನವೇ ಭುಗಿಲೆದ್ದ ಆಕ್ರೋಶ: ಹುಬ್ಬಳಿ ಉದ್ರಿಕ್ತ**

ಬೆಂಗಳೂರು, ಆಗಸ್ಟ್ 14– ಪ್ರಧಾನಿ ದೇವೇಗೌಡರು ಆಗಮಿಸುವ ಮುನ್ನಾ ದಿನವಾದ ಇಂದು ನಗರದಲ್ಲಿ ಹಿಂಸಾಚಾರ ಭುಗಿಲೆದ್ದಿದ್ದು ಎರಡು ಬಸ್‌ಗಳಿಗೆ ಬೆಂಕಿ ಹಚ್ಚಲಾಗಿದೆ. ಹಿಂಸಾಚಾರದಲ್ಲಿ ತೊಡಗಿದ್ದವರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿ ಅಶ್ರುವಾಯು ಪ್ರಯೋಗಿಸಿದರು.

ನೈರುತ್ಯ ರೈಲ್ವೆ ವಲಯವನ್ನು ಹುಬ್ಬಳ್ಳಿಯಲ್ಲಿಯೇ ಸ್ಥಾಪಿಸಲು ಆಗ್ರಹಿಸಿ ಉತ್ತರ ಕರ್ನಾಟಕ ಅಭಿವೃದ್ಧಿ ಪರ ಹೋರಾಟ ಸಮಿತಿ ನಾಳೆ ಹುಬ್ಬಳ್ಳಿ ಬಂದ್‌ಗೆ ಕರೆ ನಡಿದ್ದು, ಬಂದ್ ಪರ ಮತ್ತು ವಿರೋಧಿ ಗುಂಪುಗಳ ಮೆರವಣಿಗೆ, ಘೋಷಣೆ, ಸಮಿತಿಯ ಸದಸ್ಯರ ನಿರಶನ ಮುಂತಾದ ಘಟನೆಗಳಿಂದ ಉದ್ರಿಕ್ತ ವಾತಾವರಣ ನಿರ್ಮಾಣವಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ಶಾಸಕ ಅಶೋಕ ಕಾಟವೆ, ಜಗದೀಶ ಶೆಟ್ಟರ, ಸಂಸತ್ ಸದಸ್ಯ ವಿಜಯ ಸಂಕೇಶ್ವರ ಸೇರಿದಂತೆ 136 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಕಮಿಶನರ್ ಡಿ.ವಿ.ಗುರುಪ್ರಸಾದ್ ತಿಳಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 22-8-1971

● **ರಾಜ್ಯದ ಅಭಾವ ಪೀಡಿತ ಪ್ರದೇಶಗಳಿಗೆ ಆಹಾರ ಧಾನ್ಯ ಸರಬರಾಜು ಆರಂಭ**

ಬೆಂಗಳೂರು, ಆ.21– ರಾಜ್ಯದ ಅಭಾವ ಪೀಡಿತ ಪ್ರದೇಶಗಳಿಗೆ 2500 ಟನ್ ಗೋಧಿ ಹಾಗೂ 1000 ಟನ್ ಕೆಂಪು ಜೋಳವನ್ನು ಸರಬರಾಜು ಮಾಡುವ ಕಾರ್ಯವನ್ನು ಭಾರತದ ಆಹಾರ ಕಾರ್ಪೋರೇಷನ್ ಆರಂಭಿಸಿದೆ.

ಈ ಸರಬರಾಜಿಗಾಗಿ ರಾಜ್ಯ ಸರಕಾರ ಕೋರಿತ್ತು. ಸರಕಾರದ ಪ್ರಾರ್ಥನೆ ಮೇರೆಗೆ ರಾಜಾಸ್ತಾನದಿಂದ 5000 ಟನ್, ರಾಜ್ಯ ಹಾಗೂ ಕಡೆಗಳಿಂದ 400 ಟನ್ ಜೋಳವನ್ನು ಅಭಾವ ಪೀಡಿತ ಪ್ರದೇಶಗಳಿಗೆ ಒದಗಿಸಲು ಕಾರ್ಪೋರೇಷನ್ ಕ್ರಮ ಕೈಗೊಂಡಿದೆ. ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಳೆದ ಹಿಂಗಾರು ಬೆಳೆಯ ಹಾಗೂ ಶಿವಮೊಗ್ಗ, ಭದ್ರಾವತಿ, ಹರಿಹರ ಹಾಗೂ ದಾವಣಗೆರೆ ತಾಲ್ಲೂಕುಗಳಲ್ಲಿ ಮುಂಗಾರು ಬೆಳೆಯ ಲೆವಿ ವಸೂಲಿ ಕಾರ್ಯ ಕಾರ್ಪೋರೇಷನ್‌ಗೆ ವಹಿಸಲಾಗಿತ್ತೆಂದು ಕಾರ್ಪೋರೇಷನ್ನಿನ ಬೆಂಗಳೂರು ಪ್ರಾದೇಶಿಕ ಕಚೇರಿಯ ವಿಶೇಷ ಅಧಿಕಾರಿ ತಿಳಿಸಿದ್ದಾರೆ.

ಪದಬಂಧ 4696

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1. ಕನ್ನಡಿಗ ಹಿಡಿದಿರುವ ಲೆನ್ಸು (3)
3. ಒಪ್ಪವಾಗಿ ಮಾನವನ್ನಿಟ್ಟುಕೊಂಡವನಿಗೆ ಬಂದ ಶಂಕೆ (4)
5. ಮನದೊಳಗೆ ಮೂಡಿರುವ ಕಾಮ (3)
7. ದೇವಾಲಯದ ಸಭಾಮಂಟಪ (4)
9. ಎಳ್ಳು ನೀರು ಬಿಡುವಿಕೆ (4)
11. ಹರನಿಗೆ ಸಲ್ಲಿಸಿದ ಮುಡಿಪು (3)
14. ಅಕ್ಷರಗಳನ್ನು ಬರೆಯುವವನು (4)
15. ವಿರಸದ ವಿರುದ್ಧ ಪದ (3)

ಮೇಲಿಂದ ಕೆಳಕ್ಕೆ

1. ಇದು ನಡುವಿನದು (3)
2. ಆನೆಯ ದಾಡೆ (3)
3. ಇಂದ್ರಿಯಗಳ ಮೂಲಕ ಬರುವ ಜ್ಞಾನ (4)
4. ಮೈಮೇಲೆ ಬಟ್ಟೆ ಹೊದಿಕೆ ಇಲ್ಲದವನು (2)
6. ನಳನ ಪತ್ನಿ (4)
7. ಇದಂತೂ ಅಸಲಿ ಅಲ್ಲವೇ ಅಲ್ಲ! (3)
8. ಕಾಲಸೂಚಕ ಯಂತ್ರ (4)
10. ವಾರದ ಕೊನೆಗೆ ಧರಿಸಿದ ಯಜ್ಞೋಪವೀತ (4)
11. ಚಟವನ್ನು ಹೀಗೂ ಹೇಳುವರು (3)
12. ಕೆಲವರು ಮಾಡುವ ಕಾರ್ಯ (3)
13. ಚಕ್ರ ಇಲ್ಲಿದೆ (2)

4695ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ರಣಭೇರಿ 3.ಖಂಡನೀಯ 5.ಪುನೀತ 6.ತಪ್ಪಲು 8.ಪ್ರತೀತಿ 9.ಜನಕ 10.ತಿಲಕ 12.ಸನ್ಮಾನ 14.ಭಯಂಕರ 15.ನಳಪಾಕ

ಮೇಲಿಂದ ಕೆಳಕ್ಕೆ: 1.ರವಿಸುತ 2.ರಿಕಾಪು 3.ಖಂಡಿತ 4.ಯಥಾಸ್ಥಿತಿ 7.ಲುಬ್ಧಕ 8.ಪ್ರಗತಿ 9.ಜಯಸ್ತಂಭ 11.ಕರ್ನಾಟಕ 12.ಸದರ 13.ನರ್ತನ

ಸುಡೊಕು 5082

7				1			8	2
	3	6	8		9	5		7
4			7				9	
	7							8
		4	9	3	8		7	1
8		1						
	8						4	
1		2		8		7		3
	4		1		7		2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5081 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ರಾಜಕೀಯ ನಾಯಕರ ಜೊತೆ ತಾಲಿಬಾನ್ ಸಹ ಸಂಸ್ಥಾಪಕ ಮಾತುಕತೆ • ಅಫ್ಗನ್‌ನಲ್ಲೇ ಸೇನೆ ಮುಂದುವರಿಸುವ ನಿರ್ಧಾರ ಪ್ರಕಟಿಸದ ಬೈಡನ್

ಹೊಸ ಸರ್ಕಾರ ರಚನೆ ಸಾಧ್ಯತೆ: ಬರದರ್ ಚರ್ಚೆ

ಕಾಬೂಲ್ (ಎಎಫ್‌ಪಿ/ಎಪಿ): ಅಫ್ಘಾನಿಸ್ತಾನದಲ್ಲಿ ಎಲ್ಲರನ್ನೂ ಒಳಗೊಂಡ ಹೊಸ ಸರ್ಕಾರ ರಚಿಸುವ ಸಂಬಂಧ ಚರ್ಚಿಸಲು ತಾಲಿಬಾನಿ ಸಂಘಟನೆಯ ಸಹ ಸಂಸ್ಥಾಪಕ ಮುಲ್ಲಾ ಅಬ್ದುಲ್ ಘನಿ ಬರದರ್ ಶನಿವಾರ ಕಾಬೂಲ್‌ಗೆ ಬಂದಿದ್ದಾನೆ.

ಕಾಬೂಲ್‌ಗೆ ಭೇಟಿ ನೀಡಿರುವ ಬರದರ್, ಹೊಸ ಸರ್ಕಾರ ರಚನೆ ಸಂಬಂಧ ಜಿಹಾದಿ ನಾಯಕರು ಮತ್ತು ರಾಜಕಾರಣಿಗಳನ್ನು ಭೇಟಿ ಮಾಡಲಿರುವುದಾಗಿ ಹಿರಿಯ ತಾಲಿಬಾನ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕತಾರ್‌ನಿಂದ ಮಂಗಳವಾರವೇ ಅಫ್ಘಾನಿಸ್ತಾನಕ್ಕೆ ಬಂದಿರುವ ಬರದರ್, ಕಂದಹಾರ್ ಮೂಲಕ ದೇಶ ಪ್ರವೇಶಿಸಿದ್ದಾನೆ.

ಅಮೆರಿಕದ ಕುಖ್ಯಾತ ಉಗ್ರರ ಪಟ್ಟಿಯಲ್ಲಿರುವ ಖಲೀಲ್ ಹಕ್ಕಾನಿ ಜೊತೆ ಬರದರ್ ಇತ್ತೀಚಿನ ದಿನಗಳಲ್ಲಿ ಕಾಬೂಲ್‌ನಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದಾನೆ. ಅಮೆರಿಕ, ಖಲೀಲ್ ತಲೆಗೆ 50 ಲಕ್ಷ ಡಾಲರ್ ಬಹುಮಾನ ಘೋಷಿಸಿತ್ತು.

ಹಕ್ಕಾನಿ ಗುಲ್ಬುದ್ದೀನ್ ಹೆಕ್ಮತ್ಯಾರ್ ಅವರನ್ನು ಬರದರ್ ಭೇಟಿಯಾಗುತ್ತಿರುವುದನ್ನು ತಾಲಿಬಾನ್ ಪರ ಸಾಮಾಜಿಕ ಮಾಧ್ಯಮಗಳು ತೋರಿಸಿವೆ. 1990ರ ದಶಕದ ಅಂತರ್ಯುದ್ಧದ ಸಮಯದಲ್ಲಿ ಪ್ರತಿಸ್ಪರ್ಧಿಯಾಗಿದ್ದ ಈತ, ಅಫ್ಘಾನಿಸ್ತಾನದ ರಾಜಕೀಯದಲ್ಲಿ ಇನ್ನೂ ಪ್ರಭಾವಶಾಲಿ ಎನಿಸಿದ್ದಾನೆ.

ಅಮೆರಿಕದ ಒತ್ತಡದಿಂದ 2010ರಲ್ಲಿ ಪಾಕಿಸ್ತಾನದ ಕರಾಚಿಯಲ್ಲಿ ಬಂಧನಕ್ಕೊಳಗಾಗಿದ್ದ ಬರದರ್, 2018ರಲ್ಲಿ ಬಿಡುಗಡೆಯಾಗಿದ್ದ. ಕತಾರ್‌ನಲ್ಲಿ ಉಳಿದುಕೊಂಡಿದ್ದ ಈತನನ್ನು ದೋಹಾದಲ್ಲಿರುವ ತಾಲಿಬಾನ್‌ನ ರಾಜಕೀಯ ಕಚೇರಿಯ ಮುಖ್ಯಸ್ಥನನ್ನಾಗಿ ನೇಮಿಸಲಾಗಿತ್ತು.

ಅಮೆರಿಕದಿಂದ ತೆರವು ನಿರೀಕ್ಷೆಯಲ್ಲಿ ಅಫ್ಗನ್ನರು: ಅಫ್ಘಾನಿಸ್ತಾನದಲ್ಲಿ ಯುದ್ಧದ ವೇಳೆ ಸಹಕಾರ ನೀಡಿದ ಅಮೆರಿಕನ್ನರು ಮತ್ತು ಅಫ್ಘಾನಿಸ್ತಾನದ ಪ್ರಜೆಗಳನ್ನು ಅಮೆರಿಕ ತೆರವು ಮಾಡುತ್ತದೆ ಎಂದು ಸಾವಿರಾರು ಜನರು ನಿರೀಕ್ಷೆಯಿಂದ ಕಾಯುತ್ತಿದ್ದಾರೆ. ಈ ಬಗ್ಗೆ ಅಮೆರಿಕ ಅಧ್ಯಕ್ಷ ಜೊ ಬೈಡನ್ ದೃಢ ನಿಲುವು ಪ್ರಕಟಿಸಲಿದ್ದಾರೆ ಎಂದು ನಿರೀಕ್ಷಿಸಿದ್ದಾರೆ.

ತಾಲಿಬಾನ್ ಪ್ರಾಬಲ್ಯ ಸಾಧಿಸಿದ ಬಳಿಕ, ಅಫ್ಗನ್ ಭಾಷಾಂತರಕಾರರೂ ಸೇರಿದಂತೆ ಇತರರು ಮತ್ತು ಅವರ ಕುಟುಂಬ ಸದಸ್ಯರು ಸ್ಥಳಾಂತರದ ನಿರೀಕ್ಷೆಯಲ್ಲಿದ್ದಾರೆ. ಉಳಿದಿರುವ ಅಮೆರಿಕದ ಸೈನ್ಯವನ್ನು ಹಿಂತೆಗೆದುಕೊಳ್ಳಲು ಆಗಸ್ಟ್ 31ರ ಗಡುವು ಹತ್ತಿರವಾಗುತ್ತಿದೆ. ಆದರೆ ಸೇನೆಯನ್ನು ಅಫ್ಗನ್‌ನಲ್ಲೇ ಮುಂದುವರಿಸುವ ಬಗ್ಗೆ ಬೈಡನ್ ಯಾವುದೇ ನಿರ್ಧಾರ ಪ್ರಕಟಿಸಿಲ್ಲ. ತಾಲಿಬಾನ್ ಬಂಡುಕೋರರಿಂದ ಪ್ರತೀಕಾರದ ಭೀತಿಯಲ್ಲಿರುವ ಜನರು ತೆರವು ಮಾಡುವಂತೆ ಮಾಡುತ್ತಿರುವ ಮನವಿ ವಿಡಿಯೊಗಳು ಪರಿಸ್ಥಿತಿಯ ಚಿತ್ರಣ ಕಟ್ಟುಕೊಡುತ್ತಿದ್ದು, ಬೈಡನ್ ಟೀಕೆಗಳನ್ನು ಎದುರಿಸುತ್ತಿದ್ದಾರೆ.

ಸರ್ಕಾರಿ ನೌಕರರಿಗೆ ತಡೆ: ಕಾಬೂಲ್‌ನಲ್ಲಿರುವ ಸರ್ಕಾರಿ ನೌಕರರು ಕೆಲಸಕ್ಕೆ ಹೋಗದಂತೆ ತಾಲಿಬಾನ್ ಉಗ್ರರು ತಡೆದಿದ್ದಾರೆ. ಕೆಲಸದ ವಾರ ಆರಂಭದ ಮೊದಲ ದಿನವಾದ ಶನಿವಾರ ಕಚೇರಿಯತ್ತ ಹೊರಟಿದ್ದ ಉದ್ಯೋಗಿಗಳಿಗೆ ತಡೆ ಒಡ್ಡಲಾಗಿದೆ.

ಆರು ದಿನಗಳ ಹಿಂದೆ ಅಫ್ಘಾನಿಸ್ತಾನವನ್ನು ತನ್ನ ತೆಕ್ಕೆಗೆ ತೆಗೆದುಕೊಂಡ ಬಳಿಕ ಸರ್ಕಾರಿ ಕಟ್ಟಡಗಳು, ಬ್ಯಾಂಕುಗಳು, ಪಾಸ್‌ಪೋರ್ಟ್ ಕಚೇರಿಗಳು, ಶಾಲೆಗಳು ಮತ್ತು ವಿಶ್ವವಿದ್ಯಾಲಯಗಳು ಬಹುತೇಕ ಬಾಗಿಲು ಮುಚ್ಚಿದ್ದವು. ಕೆಲವು ಖಾಸಗಿ ದೂರಸಂಪರ್ಕ ಕಚೇರಿಗಳು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದವು.

'ನಾನು ಇಂದು ಬೆಳಿಗ್ಗೆ ಕಚೇರಿಗೆ ಹೋಗಿದ್ದೆ. ಆದರೆ ಬಾಗಿಲಿನ ಬಳಿ ಇದ್ದ ತಾಲಿಬಾನಿಗಳು ಸರ್ಕಾರಿ ಕಚೇರಿಗಳನ್ನು ತೆರೆಯಲು ಯಾವುದೇ ಆದೇಶ ಬಂದಿಲ್ಲ ಎಂದು ಮಾಹಿತಿ ನೀಡಿದರು' ಎಂಬುದಾಗಿ ಸರ್ಕಾರಿ ನೌಕರ ಹಮ್ದುಲ್ಲಾ ಹೇಳಿದ್ದಾರೆ. ಯಾವಾಗ ಕೆಲಸಕ್ಕೆ ಮರಳಬೇಕು ಎಂಬ ಮಾಹಿತಿಗಾಗಿ ಟಿ.ವಿ ಅಥವಾ ರೇಡಿಯೊ ಸುದ್ದಿಗಳನ್ನು ಗಮನಿಸುತ್ತಿರುವಂತೆ ಸಲಹೆ ನೀಡಿದ್ದಾರೆ.

ಅಫ್ಘಾನಿಸ್ತಾನ–ಪಾಕಿಸ್ತಾನ ನಡುವಿನ ಚಮನ್ ಗಡಿಯಲ್ಲಿ ಪಾಕಿಸ್ತಾನದತ್ತ ವಲಸೆ ಹೋಗಲು ಸರದಿಯಲ್ಲಿ ನಿಂತ ಅಫ್ಗನ್ ಪ್ರಜೆಗಳನ್ನು ಪಾಕ್ ಸೈನಿಕರು ಶನಿವಾರ ಪಹರೆ ಕಾಯ್ದರು –ಎಎಫ್‌ಪಿ ಚಿತ್ರ

ಅಫ್ಘಾನಿಸ್ತಾನದ ಪ್ರಜೆಗಳಿಗೆ ಧೈರ್ಯ ನೀಡುವ ಸಂಕೇತವಾಗಿ ಲಂಡನ್‌ನಲ್ಲಿ ಶನಿವಾರ ಸಾರ್ವಜನಿಕರು ಅಫ್ಗನ್‌ನ ತ್ರಿವರ್ಣ ಧ್ವಜವನ್ನು ಸಂಕೇತಿಸುವ ಬಣ್ಣದ ಓಕುಳಿಯನ್ನು ಗಾಳಿಯಲ್ಲಿ ಚಿಮ್ಮಿಸಿದರು – ರಾಯಿಟರ್ಸ್ ಚಿತ್ರ

ಅಸ್ಸಾಂ: ತಾಲಿಬಾನ್ ಬೆಂಬಲಿಸಿ ಪೋಸ್ಟ್– ಬಂಧನ

ಗುವಾಹಟಿ (ಪಿಟಿಐ): ತಾಲಿಬಾನ್ ಬೆಂಬಲಿಸಿ, ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹಾಕಿದ ಹದಿನಾಲ್ಕು ಜನರನ್ನು ಅಸ್ಸಾಂ ಪೊಲೀಸರು ಬಂಧಿಸಿದ್ದಾರೆ.

ಇಂಥ ಸಂದೇಶ ಹಾಕಿರುವವರನ್ನು ಪತ್ತೆ ಮಾಡಿ, ಶುಕ್ರವಾರ ರಾತ್ರಿಯಿಂದಲೇ ಬಂಧಿಸಲಾಗುತ್ತಿದೆ. ಬಂಧಿತರು ರಾಜ್ಯದ ವಿವಿಧ ಜಿಲ್ಲೆಗಳಿಗೆ ಸೇರಿದವರು. ಕಾನೂನು ಬಾಹಿರ ಚಟುವಟಿಕೆ (ನಿಯಂತ್ರಣ) ಕಾಯ್ದೆ, ಮಾಹಿತಿ–ತಂತ್ರಜ್ಞಾನ ಕಾಯ್ದೆ ಹಾಗೂ ಅಪರಾಧ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಅವರನ್ನು ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಸಾಮಾಜಿಕ ಮಾಧ್ಯಮಗಳ ಮೇಲೆ ನಿಗಾ ಇಟ್ಟಿದ್ದು, ಪ್ರಚೋದನಾಕಾರಿ ಸಂದೇಶಗಳನ್ನು ಗಮನಿಸುತ್ತಿರುವುದಾಗಿ ಅವರು ಹೇಳಿದ್ದಾರೆ.

'ಸಾಮಾಜಿಕ ಜಾಲತಾಣಗಳಲ್ಲಿ ತಾಲಿಬಾನ್ ಪರ ಪೋಸ್ಟ್ ಹಾಕುವ ಹಾಗೂ ದೇಶದ ಭದ್ರತೆಗೆ ಧಕ್ಕೆ ಉಂಟಾಗುವಂತಹ ಮಾಹಿತಿ ಹಂಚಿಕೊಳ್ಳುವವರ ವಿರುದ್ಧ ಅಸ್ಸಾಂ ಪೊಲೀಸರು ಕಠಿಣ ಕ್ರಮ ಕೈಗೊಳ್ಳುತ್ತಿದ್ದಾರೆ' ಎಂದು ಡಿಐಜಿ ವಯೊಲೆಟ್ ಬರೂಹ ಟ್ವೀಟ್ ಟ್ವೀಟ್ ಮಾಡಿದ್ದಾರೆ. ದೇಶದ ಭದ್ರತೆಗೆ ಧಕ್ಕೆ ತರುವವರು ಕಂಡುಬಂದಲ್ಲಿ ಪೊಲೀಸರ ಗಮನಕ್ಕೆ ತರುವಂತೆ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

150 ಭಾರತೀಯರ ಬಿಡುಗಡೆ

ಒಂದನೇ ಪುಟದಿಂದ...

80 ಭಾರತೀಯರ ತೆರವು: ಕಾಬೂಲ್‌ನಿಂದ ಸುಮಾರು 80 ಭಾರತೀಯರನ್ನು ಶನಿವಾರ ತೆರವು ಮಾಡಲಾಗಿದೆ. ಭಾರತೀಯ ಪ್ರಜೆಗಳನ್ನು ಹೊತ್ತ ವಾಯುಪಡೆ ವಿಮಾನವು ತಜಕಿಸ್ತಾನದ ದುಶಾಂಬೆಯಲ್ಲಿ ಇಳಿಯಿತು. ಇದು ಸಂಜೆ ವೇಳೆಗೆ ದೆಹಲಿ ಸಮೀಪದ ಹಿಂಡನ್ ವಾಯುನೆಲೆಗೆ ಬರುವ ನಿರೀಕ್ಷೆಯಿದೆ. ರಾಜತಾಂತ್ರಿಕರೂ ಸೇರಿದಂತೆ 200 ಜನರನ್ನು ಭಾರತ ಈಗಾಗಲೇ ಸ್ಥಳಾಂತರಿಸಿದೆ.

ಭಾವುಕ ಪತ್ರ ಹಂಚಿಕೊಂಡ ಜೋಲಿ

ಹಾಲಿವುಡ್‌ನ ಖ್ಯಾತ ನಟಿ ಏಂಜೆಲಿನಾ ಜೋಲಿ ಅವರು ತಮ್ಮ ಇನ್‌ಸ್ಟಾಗ್ರಾಮ್ ಖಾತೆ ತೆರೆದಿದ್ದಾರೆ. ಅಫ್ಘಾನಿಸ್ತಾನದ ಯುವತಿಯೊಬ್ಬಳು ತಮಗೆ ಬರೆದ ಭಾವುಕ ಪತ್ರವನ್ನು ಅವರು ಹಂಚಿಕೊಂಡಿದ್ದಾರೆ. ಯುವತಿಯು ತನ್ನ ಬದುಕಿನ ಭೀತಿಯ ಹಾಗೂ ಅಸಹಾಯಕ ಪರಿಸ್ಥಿತಿಯನ್ನು ಜೋಲಿಗೆ ಬರೆದ ಪತ್ರದಲ್ಲಿ ವಿವರಿಸಿದ್ದಾಳೆ.

'ಮಾನವ ಹಕ್ಕುಗಳಿಗಾಗಿ ಜಗತ್ತಿನಾದ್ಯಂತ ಹೋರಾಡುತ್ತಿರುವವರ ಕಥೆಗಳನ್ನು ಈ ವೇದಿಕೆಯ ಮೂಲಕ ಹಂಚಿಕೊಳ್ಳುವ ಉದ್ದೇಶ ಹೊಂದಿದ್ದೇನೆ' ಎಂದು ಜೋಲಿ ಹೇಳಿಕೊಂಡಿದ್ದಾರೆ.

'20 ವರ್ಷಗಳ ನಂತರ ಮತ್ತೆ ನಮ್ಮ ಹಕ್ಕುಗಳು ಮೊಟಕುಗೊಂಡಿವೆ. ನಾವೆಲ್ಲರೂ ಸ್ವಾತಂತ್ರ್ಯ ಕಳೆದುಕೊಂಡು, ಮತ್ತೆ ಸೆರೆಮನೆ ಸೇರಿದ್ದೇವೆ. ನಮ್ಮೆಲ್ಲರ ಜೀವನವು ಕತ್ತಲಾಗಿದೆ' ಎಂದು ಯುವತಿ ಸಂಕಟ ತೋಡಿಕೊಂಡಿದ್ದಾಳೆ.

ಅಫ್ಘಾನಿಸ್ತಾನದ ನಿರಾಶ್ರಿತರಿಗೆ ದನಿಯಾಗುವುದಾಗಿ ಹೇಳಿರುವ ನಟಿ ಜೋಲಿ, ಇದರಿಂದ ವಿಮುಖಳಾಗುವುದಿಲ್ಲ ಎಂದು ದೃಢವಾಗಿ ಹೇಳಿಕೊಂಡಿದ್ದಾರೆ.

ಫ್ರಾನ್ಸ್: ಅಫ್ಗನ್‌ನಿಂದ 570 ಮಂದಿ ತೆರವು

ಪ್ಯಾರಿಸ್ (ಎಪಿ): ಸೋಮವಾರದಿಂದ ಇಲ್ಲಿಯವರೆಗೆ ಕಾಬೂಲ್‌ನಿಂದ ತನ್ನ ಸೇನಾ ವಿಮಾನದಲ್ಲಿ ಕನಿಷ್ಠ 407 ಅಫ್ಗನ್ ನಾಗರಿಕರು ಸೇರಿದಂತೆ 570ಕ್ಕೂ ಹೆಚ್ಚು ಜನರನ್ನು ತೆರವುಗೊಳಿಸಲಾಗಿದೆ ಎಂದು ಫ್ರಾನ್ಸ್ ಹೇಳಿದೆ.

ನಾಲ್ಕನೇ ತೆರವು ವಿಮಾನವು ಶುಕ್ರವಾರ ಸಂಜೆ ಪ್ಯಾರಿಸ್‌ಗೆ ಬಂದಿಳಿಯಿತು. ಇದರಲ್ಲಿ 4 ಫ್ರೆಂಚ್ ಮತ್ತು 99 ಅಫ್ಗನ್ ನಾಗರಿಕರಿದ್ದಾರೆ ಎಂದು ರಕ್ಷಣಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಉಳಿದವರನ್ನೂ ಸಾಧ್ಯವಿದ್ದಷ್ಟು ಬೇಗ ಕರೆಸಿಕೊಳ್ಳಲು ವಿಮಾನಗಳನ್ನು ಸಜ್ಜುಗೊಳಿಸಲಾಗುತ್ತಿದೆ ಎಂದು ಸಚಿವಾಲಯ ತಿಳಿಸಿದೆ.

ದೇಶಕ್ಕಾಗಿ ಕೆಲಸ ಮಾಡಿದ ಅಫ್ಗನ್‌ರನ್ನು ಫ್ರಾನ್ಸ್ ಕೈಬಿಡುವುದಿಲ್ಲ. ಅಪಾಯದಲ್ಲಿರುವ ಪತ್ರಕರ್ತರು, ಕಲಾವಿದರು, ಕಾರ್ಯಕರ್ತರು ಮತ್ತು ಇತರರನ್ನು ರಕ್ಷಿಸಲು ಪ್ರಯತ್ನಿಸುವುದಾಗಿ ಫ್ರೆಂಚ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಸೋಮವಾರ ಭರವಸೆ ನೀಡಿದ್ದರು.

ಸಂಭಾವ್ಯ ಬೆದರಿಕೆ: ಎಚ್ಚರಿಕೆ

ವಾಷಿಂಗ್ಟನ್: ಸಾವಿರಾರು ಜನರು ದೇಶವನ್ನು ತೊರೆಯಲು ಪ್ರಯತ್ನಿಸುತ್ತಿದ್ದು, ಕಾಬೂಲ್ ವಿಮಾನ ನಿಲ್ದಾಣಕ್ಕೆ ತೆರಳುವುದನ್ನು ತಪ್ಪಿಸಿ ಎಂದು ಅಫ್ಘಾನಿಸ್ತಾನದಲ್ಲಿರುವ ಅಮೆರಿಕನ್ನರಿಗೆ ಅಲ್ಲಿನ ರಾಯಭಾರ ಕಚೇರಿ ಸಲಹೆ ನೀಡಿದೆ.

'ಕಾಬೂಲ್ ವಿಮಾನ ನಿಲ್ದಾಣದ ಹೊರಗಿನ ಪ್ರವೇಶದ್ವಾರದಲ್ಲಿ ಅಪಾರ ಜನರು ಸೇರಿದ್ದು, ಭದ್ರತೆಯ ಕೊರತೆ ಇದೆ. ವಿಮಾನ ನಿಲ್ದಾಣಕ್ಕೆ ಬರುವಂತೆ ಅಮೆರಿಕದ ಅಧಿಕಾರಿಗಳಿಂದ ಅಧಿಕೃತ ಸಂದೇಶ ಬಾರದ ಹೊರತು, ನೀವು ವಿಮಾನ ನಿಲ್ದಾಣ ಅಥವಾ ಅದರ ಹೊರಗಿದ ಪ್ರವೇಶದ್ವಾರದ ಬಳಿಗೆ ಹೋಗಬೇಡಿ' ಎಂದು ಸಲಹೆ ನೀಡಿದೆ.

ನಿರಾಶ್ರಿತರಿಗೆ ನೆರವು

- ಐರೋಪ್ಯ ಒಕ್ಕೂಟದಿಂದ ಹೊರನಡೆದಿರುವ ಬ್ರಿಟನ್, ಈ ವರ್ಷ 5,000 ಅಫ್ಗನ್ ನಿರಾಶ್ರಿತರಿಗೆ ಆಶ್ರಯ ನೀಡುವುದಾಗಿ ಭರವಸೆ ನೀಡಿದೆ. ಮುಂಬರುವ ವರ್ಷಗಳಲ್ಲಿ ಒಟ್ಟು 20,000 ಜನರಿಗೆ ಪುನರ್ವಸತಿ ಕಲ್ಪಿಸುವ ವಾಗ್ದಾನ ನೀಡಿದೆ.
- ಅಫ್ಘಾನಿಸ್ತಾನದ ಸುಮಾರು 400 ನಿರಾಶ್ರಿತರನ್ನು ಉಜ್ಬೇಕಿಸ್ತಾನ್ ಸ್ವಾಗತಿಸಿ, ಅವರನ್ನು ಗಡಿಯ ಬಳಿ ತಾತ್ಕಾಲಿಕ ವಸತಿಗೃಹದಲ್ಲಿ ಇರಿಸಿಕೊಂಡಿದೆ ಎಂದು ರಷ್ಯಾದ ರಾಜ್ಯ ಸುದ್ದಿ ಸಂಸ್ಥೆ ಟಾಸ್ ಶನಿವಾರ ವರದಿ ಮಾಡಿದೆ.
- ಅಮೆರಿಕ ಅಥವಾ ಇತರ ಮಿತ್ರರಾಷ್ಟ್ರಗಳು ಬಯಸಿದಲ್ಲಿ, ಹೆಚ್ಚುವರಿ ಅಫ್ಗನ್ ನಿರಾಶ್ರಿತರಿಗೆ ಪ್ರವೇಶ ನೀಡುವುದನ್ನು ಕೆನಡಾ ಪರಿಗಣಿಸುತ್ತದೆ ಎಂದು ವಲಸೆ ಸಚಿವ ಮಾರ್ಕೊ ಮೆಂಡಿಸಿನೊ ತಿಳಿಸಿದ್ದಾರೆ.
- ತಮ್ಮ ದೇಶದ ಒಳಗೆ ಮತ್ತು ಇರಾನ್ ಮತ್ತು ಪಾಕಿಸ್ತಾನದಂತಹ ನೆರೆಯ ರಾಷ್ಟ್ರಗಳಲ್ಲಿ ಅಫ್ಗನ್ ನಿರಾಶ್ರಿತರಿಗೆ ಸಹಾಯ ಮಾಡುವತ್ತ ಗಮನ ಹರಿಸುತ್ತಿದ್ದೇವೆ ಎಂದು ಕೆಲವು ಐರೋಪ್ಯ ದೇಶಗಳು ತಿಳಿಸಿವೆ.

ಪಯಣದ ನಿರೀಕ್ಷೆ

ದೇಶ ತೊರೆಯಲು ಅಮೆರಿಕದ ಸೇನಾ ವಿಮಾನಕ್ಕಾಗಿ ಕರ್ಜೈ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಕಾಯುತ್ತಿರುವ ಯುವತಿಯರ ಮೊಗದಲ್ಲಿ ಆತಂಕದ ನಡುವೆಯೂ ಕಂಡ ಮಂದಹಾಸ – ಎಎಫ್‌ಪಿ ಚಿತ್ರ

ಕಠಿಣ, ಅಪಾಯಕಾರಿ ಕಾರ್ಯಾಚರಣೆ: ಬೈಡನ್

ವಾಷಿಂಗ್ಟನ್ (ಪಿಟಿಐ): ಕಾಬೂಲ್‌ನಿಂದ ಜನರನ್ನು ತೆರವುಗೊಳಿಸುವ ಕಾರ್ಯವು, ರಕ್ಷಣಾ ಕಾರ್ಯಾಚರಣೆಯ ಇತಿಹಾಸದಲ್ಲಿಯೇ ಅತಿ ಕಠಿಣವಾದ ಹಾಗೂ ದೊಡ್ಡದಾದ ಕಾರ್ಯಾಚರಣೆಯಾಗಿದ್ದು, ಇದನ್ನು ಜೀವಹಾನಿ ಆಗದಂತೆ ನಡೆಸುವುದು ಕಷ್ಟ ಎಂದು ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಆದರೆ, ಅಲ್ಲಿರುವ ಅಮೆರಿಕದ ಪ್ರತಿಯೊಬ್ಬರನ್ನೂ ಕರೆತರುವುದಾಗಿ ಅವರು ಭರವಸೆ ನೀಡಿದ್ದಾರೆ.

'ಅಫ್ಗನ್ ಸೇನೆಯ ಐವತ್ತರಿಂದ ಅರವತ್ತು ಸಾವಿರ ಸಿಬ್ಬಂದಿಯೂ ದೇಶ ತೊರೆಯಲು ಸಜ್ಜಾಗಿದೆ. ಆದರೆ, ಅಲ್ಲಿಂದ ಅಮೆರಿಕದ ಜನರನ್ನು ತೆರವುಗೊಳಿಸುವುದೇ ನಮ್ಮ ಮೊದಲ ಆದ್ಯತೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಇದು ನಮ್ಮ ಸೈನಿಕರ ಪ್ರಾಣವನ್ನು ಪಣಕ್ಕಿಟ್ಟು ನಡೆಸುತ್ತಿರುವ ಅಪಾಯಕಾರಿ ಕಾರ್ಯಾಚರಣೆಯಾಗಿದ್ದು, ಫಲಿತಾಂಶ ಏನಾಗಬಹುದು ಎಂಬುದರ ಬಗ್ಗೆ ಹೇಳಲಾರೆ.

'ಸೈನಿಕರ ಪ್ರಾಣವನ್ನು ಪಣಕ್ಕಿಟ್ಟು ಈ ಅಪಾಯಕಾರಿ ಕಾರ್ಯಾಚರಣೆಗೆ ಕೈ ಹಾಕಿದ್ದೇವೆ. ಫಲಿತಾಂಶ ಏನಾಗಬಹುದು ಎಂಬುದರ ಭರವಸೆ ನೀಡಲಾರೆ' ಎಂದು ಅವರು ಹೇಳಿದ್ದಾರೆ.

ಅಫ್ಘಾನಿಸ್ತಾನದಲ್ಲಿ ಸಿಲುಕಿರುವ ಇಬ್ಬರಿಗೆ ನೆರವು–ಆರಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಫ್ಘಾನಿಸ್ತಾನದಲ್ಲಿ ಸಿಲುಕಿರುವ ಇಬ್ಬರು ಕನ್ನಡಿಗ ಪಾದ್ರಿಗಳು ರಾಜ್ಯ ಸರ್ಕಾರ ಆರಂಭಿಸಿರುವ ಸಮನ್ವಯ ಕೇಂದ್ರವನ್ನು ಸಂಪರ್ಕಿಸಿ ಭಾರತಕ್ಕೆ ಮರಳಲು ನೆರವು ನೀಡುವಂತೆ ಮನವಿ ಮಾಡಿದ್ದಾರೆ.

ಅಫ್ಘಾನಿಸ್ತಾನದಲ್ಲಿರುವ ಮಂಗಳೂರಿನ ಜೆರೆವೊ ಸಿಕ್ವೇರಾ ಮತ್ತು ತೀರ್ಥಹಳ್ಳಿಯ ರಾಬರ್ಟ್ ಕ್ಲೈವ್ ಅವರು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಉಮೇಶ್ ಕುಮಾರ್ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಆರಂಭಿಸಿರುವ ಸಮನ್ವಯ ಕೇಂದ್ರವನ್ನು ಸಂಪರ್ಕಿಸಿದ್ದಾರೆ. ಈ ಇಬ್ಬರೂ ಅಲ್ಲಿನ ಚರ್ಚ್‌ಗಳಲ್ಲಿ ಧರ್ಮ ಸಂದೇಶ ನೀಡಲು ತೆರಳಿದ್ದರು.

'ವಿದೇಶಾಂಗ ಸಚಿವಾಲಯದ ಮೂಲಕ ರಾಯಭಾರಿ ಕಚೇರಿಯನ್ನು ಸಂಪರ್ಕಿಸಿ, ಅಫ್ಘಾನಿಸ್ತಾನದಲ್ಲಿ ಸಿಲುಕಿರುವ ಇಬ್ಬರು ಪಾದ್ರಿಗಳನ್ನು ಭಾರತಕ್ಕೆ ಕರೆದುಕೊಂಡು ಬರಲು ವ್ಯವಸ್ಥೆ ಮಾಡಲಾಗಿದೆ. ಸದ್ಯ ಕಾಬೂಲ್ ವಿಮಾನ ನಿಲ್ದಾಣದಲ್ಲಿರುವ ಅವರಿಬ್ಬರೂ ಶನಿವಾರ ರಾತ್ರಿ ಅಥವಾ ಭಾನುವಾರ ಬೆಳಿಗ್ಗೆ ಭಾರತ ತಲುಪಲಿದ್ದಾರೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

'ಈವರೆಗೆ ಇವರಿಬ್ಬರು ಮಾತ್ರ ಸಮನ್ವಯ ಕೇಂದ್ರವನ್ನು ಸಂಪರ್ಕಿಸಿ ನೆರವು ಕೇಳಿದ್ದಾರೆ. ರಾಜ್ಯ ಸರ್ಕಾರ ವಿದೇಶಾಂಗ ಸಚಿವಲಾಯದ ಜೊತೆ ನಿರಂತರ ಸಂಪರ್ಕದಲ್ಲಿದೆ. ನೆರವು ಕೇಳಿದವರಿಗೆ ಈ ಕೇಂದ್ರದ ಮೂಲಕ ಸಹಾಯ ಮಾಡಲಾಗುವುದು' ಎಂದೂ ಅವರು ತಿಳಿಸಿದ್ದಾರೆ.

ತಾಲಿಬಾನ್ ಬೆಂಬಲಿಸಿ ಪೋಸ್ಟ್: ಬಂಧನ

ಜಮಖಂಡಿ: ಸಾಮಾಜಿಕ ಜಾಲತಾಣದಲ್ಲಿ ತಾಲಿಬಾನ್ ಬೆಂಬಲಿಸುವ ಸಂದೇಶಗಳನ್ನು ಹಂಚಿಕೊಂಡಿದ್ದ ಆರೋಪದ ಮೇಲೆ ಇಲ್ಲಿನ ಆಸಿಫ್ ಗಲಗಲಿಯನ್ನು ಶುಕ್ರವಾರ ರಾತ್ರಿ ಜಮಖಂಡಿ ಪೊಲೀಸರು ಬಂಧಿಸಿದ್ದಾರೆ.

ತನ್ನ ಫೇಸ್‌ಬುಕ್ ಖಾತೆಯಲ್ಲಿ 'ಐ ಲವ್ ತಾಲಿಬಾನಿ' ಎಂದು ಈತ ಪೋಸ್ಟ್ ಮಾಡಿದ್ದ, ಅದು ಇತರ ಜಾಲತಾಣದಲ್ಲಿ ಹರಿದಾಡುತ್ತಿದೆ. ದೇಶದ ಪ್ರಜೆಗಳ ಭಾವನೆಗೆ ಧಕ್ಕೆ ಉಂಟುಮಾಡುವುದು, ಕಾನೂನು ಬಾಹಿರ ಚಟುವಟಿಕೆಗಳ(ನಿಯಂತ್ರಣ) ಕಾಯ್ದೆ, ಮಾಹಿತ ತಂತ್ರಜ್ಞಾನ ಕಾಯ್ದೆಯ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

'ಆಸಿಫ್ ಗಲಗಲಿಯನ್ನು ಬಂಧಿಸಲಾಗಿದೆ. ಪ್ರಕರಣ ಸೈಬರ್ ಕ್ರೈಂಗೆ ಒಪ್ಪಿಸಲಾಗುವುದು. ದೇಶದ್ರೋಹದ ವರ್ತನೆಯ ವಿರುದ್ಧ ಕಠಿಣ ಕ್ರಮ ಕೈಕೊಳ್ಳಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲೋಕೇಶ ಜಗಲಾಸರ್ ತಿಳಿಸಿದ್ದಾರೆ.

ಹೆರಾತ್: ಸಹಶಿಕ್ಷಣಕ್ಕೆ ನಿಷೇಧ

ಕಾಬೂಲ್ (ಪಿಟಿಐ): ಅಫ್ಘಾನಿಸ್ತಾನದಲ್ಲಿ ಮಹಿಳೆಯರಿಗೆ ಗೌರವ ನೀಡುವ ವಾಗ್ದಾನ ನೀಡಿದ್ದ ತಾಲಿಬಾನ್, ಒಂದು ವಾರ ಕಳೆಯುವಷ್ಟರಲ್ಲಿ ನಿಲುವು ಬದಲಿಸಿದೆ. ಹೆರಾತ್ ಪ್ರಾಂತ್ಯದ ಸರ್ಕಾರಿ ಹಾಗೂ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಸಹಶಿಕ್ಷಣಕ್ಕೆ ನಿಷೇಧ ಹೇರಿದೆ. 'ಸಮಾಜದಲ್ಲಿನ ಎಲ್ಲ ಅನಿಷ್ಟಗಳ ಮೂಲ ಈ ಸಹಶಿಕ್ಷಣ' ಎಂದು ತನ್ನ ನಡೆ ಸಮರ್ಥಿಸಿಕೊಂಡಿದೆ.

ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಖಾಸಗಿ ಸಂಸ್ಥೆಗಳ ಸಂಸ್ಥಾಪಕರು ಮತ್ತು ತಾಲಿಬಾನ್ ಅಧಿಕಾರಿಗಳ ನಡುವಿನ ಸಭೆಯ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಖಾಮಾ ಸುದ್ದಿ ಸಂಸ್ಥೆ ಶನಿವಾರ ವರದಿ ಮಾಡಿದೆ. ಮಹಿಳಾ ಉಪನ್ಯಾಸಕರು ಕೇವಲ ವಿದ್ಯಾರ್ಥಿನಿಯರಿಗೆ ಮಾತ್ರ ಕಲಿಸಲು ಅವಕಾಶವಿದೆ.

ಕಳೆದ ವಾರ ಅಫ್ಘಾನಿಸ್ತಾನವನ್ನು ಸ್ವಾಧೀನಪಡಿಸಿಕೊಂಡ ನಂತರ ತಾಲಿಬಾನ್ ಹೊರಡಿಸಿದ ಮೊದಲ 'ಫತ್ವಾ' ಇದು. ಆದರೆ ಮಂಗಳವಾರವಷ್ಟೇ ಮೊದಲ ಸುದ್ದಿಗೋಷ್ಠಿ ನಡೆಸಿದ್ದ ತಾಲಿಬಾನ್ ವಕ್ತಾರ ಝಬೀಹುಲ್ಲಾ ಮುಜಾಹಿದ್, ಇಸ್ಲಾಮಿಕ್ ಚೌಕಟ್ಟಿನಲ್ಲಿ ಮಹಿಳೆಯರ ಹಕ್ಕುಗಳನ್ನು ನೀಡುವುದಾಗಿ ಘೋಷಿಸಿದ್ದ.

ವಿ.ವಿ. ಪ್ರಾಧ್ಯಾಪಕರು, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ಜೊತೆಗೆ ತಾಲಿಬಾನ್ ಪ್ರತಿನಿಧಿಯೂ ಆಗಿರುವ ಉನ್ನತ ಶಿಕ್ಷಣದ ಮುಖ್ಯಸ್ಥ ಮುಲ್ಲಾ ಫರೀದ್ 3 ಗಂಟೆ ಸಭೆ ನಡೆಸಿ, ಈ ನಿರ್ಧಾರ ಪ್ರಕಟಿಸಿದರು. 'ಯಾವುದೇ ಪರ್ಯಾಯವಿಲ್ಲ. ಸಹ-ಶಿಕ್ಷವನ್ನು ಕೊನೆಗೊಳಿಸುವುದೊಂದೇ ದಾರಿ' ಎಂದಿದ್ದಾರೆ.

ಈ ನಿರ್ಧಾರದಿಂದ ಸರ್ಕಾರಿ ವಿಶ್ವವಿದ್ಯಾಲಯಗಳ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ತಜ್ಞರು ಹೇಳಿದ್ದಾರೆ.

ರಾವ್‌ಸಾಹೇಬ್ ದಾನವೆ ಟೀಕೆ

ರಾವ್‌ಸಾಹೇಬ್ ಎಲ್ಲಾ ಮಿತಿಯನ್ನು ಮೀರಿದ್ದಾರೆ. ಅವರ ಹೇಳಿಕೆ ಆಘಾತಕಾರಿಯಾಗಿದೆ ಎಂದು ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ನಾನಾ ಪಟೋಲೆ ಹೇಳಿದ್ದಾರೆ.

'ರಾಹುಲ್ ದಾರಿ ತಪ್ಪಿದ ಗೂಳಿ'

ಮುಂಬೈ (ಪಿಟಿಐ): 'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬಿಡಾಡಿ ಗೂಳಿ ಇದ್ದಂತೆ. ಅವರು ಯಾರಿಗೂ ಉಪಯೋಗಕ್ಕೆ ಬಾರದವರು' ಎಂದು ಕೇಂದ್ರ ಸಚಿವ ರಾವ್‌ಸಾಹೇಬ್ ದಾನವೆ ಅವರು ಟೀಕಿಸಿದ್ದಾರೆ.

ಈ ಹೇಳಿಕೆಗೆ ಕಾಂಗ್ರೆಸ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ರಾವ್‌ಸಾಹೇಬ್ ಅವರನ್ನು ತಕ್ಷಣವೇ ಸಚಿವ ಸಂಪುಟದಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿದೆ.



ಮಹಾರಾಷ್ಟ್ರದ ಜಲ್ನಾ ಜಿಲ್ಲೆಯಲ್ಲಿ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಡಾ.ಭಗವತ್ ಕರಡ್ ಅವರು ಆಯೋಜಿಸಿದ್ದ 'ಜನ ಆಶೀರ್ವಾದ ಯಾತ್ರೆ'ಯಲ್ಲಿ ಮಾತನಾಡಿದ ರಾವ್‌ಸಾಹೇಬ್ ಅವರು, 'ನಾನು 20 ವರ್ಷದಿಂದ ಲೋಕಸಭಾ ಸದಸ್ಯನಾಗಿದ್ದೇನೆ. ರಾಹುಲ್ ಗಾಂಧಿ ಅವರ ಕೆಲಸಗಳನ್ನು ನೋಡಿದ್ದೇನೆ. ರಾಹುಲ್ ದೇವರಿಗೆ ಸಮರ್ಪಿಸಿದ ಗೂಳಿಯಂತೆ' ಎಂದಿದ್ದಾರೆ.

'ಮಹಾರಾಷ್ಟ್ರದ ಗ್ರಾಮೀಣ ಪ್ರದೇಶ ಮತ್ತು ದೇಶದ ಹಲವು ಭಾಗಗಳಲ್ಲಿ ಹೊಸದಾಗಿ ಜನಿಸಿದ ಗಂಡು ಕರುಗಳನ್ನು ಸ್ಥಳೀಯ ದೇವರಿಗೆ ಸಮರ್ಪಿಸುವ ಸಂಪ್ರದಾಯವಿದೆ. ಅಂತಹ ಗೂಳಿಯನ್ನು ಕೃಷಿ ಚಟುವಟಿಕೆಗೆ ಅಥವಾ ಬೇರೆ ಯಾವುದೇ ಕಾರ್ಯಕ್ಕೂ ಬಳಸುವುದಿಲ್ಲ. ಆ ಗೂಳಿ ಹೊಲಕ್ಕೆ ನುಗ್ಗಿ, ಬೆಳೆ ತಿಂದರೂ, ಅದನ್ನು ರೈತರನ್ನು ಕ್ಷಮಿಸುತ್ತಾರೆ' ಎಂದಿದ್ದಾರೆ.

ಧಾರಾಕಾರ ಮಳೆಯಿಂದಾಗಿ ದೆಹಲಿಯ ಜಹಾಂಗೀರ್ ಪುರಿ ಪ್ರದೇಶ ಜಲಾವೃತ್ತಗೊಂಡಿದ್ದು, ಸಾರ್ವಜನಿಕರು ಪರದಾಡುವಂತಾಯಿತು –ಪಿಟಿಐ ಚಿತ್ರ

ದೆಹಲಿಯಲ್ಲಿ ಧಾರಾಕಾರ ಮಳೆ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಶನಿವಾರ ಬೆಳಿಗ್ಗೆ ಭಾರಿ ಮಳೆಯಾಗಿದ್ದು, ನಗರದ ಮಿಂಟೋ ಸೇತುವೆ, ಮೂಲ್‌ಚಂದ್ ಅಂಡರ್‌ಪಾಸ್ ಮತ್ತು ಐಟಿಒ ಸೇರಿದಂತೆ ನಗರದ ಹಲವು ಭಾಗಗಳಲ್ಲಿ ನೀರು ನಿಂತಿದೆ.

ದೆಹಲಿಯ ಹಲವು ಭಾಗ ಜಲಾವೃತವಾಗಿರುವ ಹಿನ್ನೆಲೆಯಲ್ಲಿ ಸಂಚಾರ ಪೊಲೀಸರು ನಿರ್ಣಾಯಕ ಅಂಡರ್‌ಪಾಸ್‌ಗಳಲ್ಲಿ ಸಂಚಾರ ನಿರ್ಬಂಧಿಸಿದ್ದಾರೆ. ಸಾಮಾಜಿಕ ಮಾಧ್ಯಮಗಳ ಮೂಲಕ ನಾಗರಿಕರಿಗೆ ಮಾಹಿತಿ ನೀಡಿದ್ದಾರೆ.

ಭಾರಿ ಮಳೆಯಿಂದಾಗಿ ಪುಲ್ ಪ್ರಹ್ಲಾದಪುರ ಅಂಡರ್‌ಪಾಸ್, ಲಜಪತ್ ನಗರ, ಜಂಗಪುರ, ಐಟಿಒ, ಪ್ರಗತಿ ಮೈದಾನದ ಸುತ್ತಲಿನ ರಸ್ತೆಗಳು, ಸಂಗಮ್ ವಿಹಾರ್, ರೋಹ್ಟಕ್ ರಸ್ತೆ, ಮಂಗೋಲ್‌ಪುರಿ, ಕಿರರಿ ಮತ್ತು ಮಾಳವೀಯ ನಗರಗಳಲ್ಲಿ ನೀರು ನಿಂತಿದೆ. ದಕ್ಷಿಣ ದೆಹಲಿಯ ಮೆಹ್ರೌಲಿ-ಬದರಪುರ ರಸ್ತೆಯಲ್ಲಿ ನೀರು ನಿಂತಿರುವುದರಿಂದ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

'ಝೈಕೋವ್-ಡಿ ಕೋವಿಡ್ ಲಸಿಕೆ: ಶೀಘ್ರ ಪೂರೈಕೆ'

ನವದೆಹಲಿ (ಪಿಟಿಐ): ಝೈಕೋವ್-ಡಿ ಕೋವಿಡ್ ಲಸಿಕೆಯನ್ನು ಸೆಪ್ಟೆಂಬರ್ ಅಂತ್ಯದೊಳಗೆ ಪೂರೈಕೆ ಮಾಡುವ ಸಾಧ್ಯತೆಯಿದ್ದು, ಮುಂದಿನ ಒಂದು ಅಥವಾ ಎರಡು ವಾರಗಳಲ್ಲಿ ಲಸಿಕೆಯ ಬೆಲೆಯನ್ನು ಘೋಷಿಸಲಾಗುವುದು ಎಂದು ಭಾರತದ ಝೈಡಸ್ ಕ್ಯಾಡಿಲಾ ಕಂಪನಿ ಶನಿವಾರ ತಿಳಿಸಿದೆ.

'ಲಸಿಕೆಯ ಬೆಲೆ ಮತ್ತು ವಿತರಣಾ ವಿಧಾನದ ಸಂಬಂಧ ನಿಯಂತ್ರಕ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗುತ್ತಿದೆ' ಎಂದು ಝೈಡಸ್ ಕ್ಯಾಡಿಲಾ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಶರ್ವಿಲ್ ಪಟೇಲ್ ತಿಳಿಸಿದ್ದಾರೆ.

ಅಕ್ಟೋಬರ್ ವೇಳೆಗೆ ಒಂದು ಕೋಟಿ ಡೋಸ್ ಲಸಿಕೆ ಉತ್ಪಾದಿಸುವ ನಂಬಿಕೆಯಿದೆ. ಹಾಗಾದಲ್ಲಿ, ಜನವರಿ ಅಂತ್ಯದ ವೇಳೆಗೆ 4 ರಿಂದ 5 ಕೋಟಿ ಡೋಸ್‌ಗಳನ್ನು ಹೊಂದಬಹುದು ಎಂಬ ಭರವಸೆಯಿದೆ ಎಂದಿದ್ದಾರೆ.

ಚೀನಾದಲ್ಲಿ 3ನೇ ಮಗುವಿಗೆ ಅನುಮತಿ

ಬೀಜಿಂಗ್ (ಎಪಿ): ದೇಶದಲ್ಲಿ ಜನಸಂಖ್ಯೆಯ ಬಿಕ್ಕಟ್ಟನ್ನು ನಿವಾರಿಸಲು ಚೀನಾ ಈಗ ದಂಪತಿಗೆ ಮೂರನೇ ಮಗುವನ್ನು ಪಡೆಯಲು ಕಾನೂನುಬದ್ಧವಾಗಿ ಅವಕಾಶ ಕಲ್ಪಿಸಿದೆ.

ಈ ಹಿಂದೆ ಇದ್ದ ಜನಸಂಖ್ಯೆ ಮತ್ತು ಕುಟುಂಬ ಕಲ್ಯಾಣ ಯೋಜನೆ ಕಾನೂನಿಗೆ ಕಮ್ಯುನಿಸ್ಟ್ ಪಕ್ಷದ ದಶಕಗಳ ಪ್ರಯತ್ನದ ಭಾಗವಾಗಿ ಶುಕ್ರವಾರ ತಿದ್ದುಪಡಿ ತಂದಿರುವ ಚೀನಾ ಸರ್ಕಾರ, ಮೂರನೆ ಮಗುವಿಗೆ ಜನ್ಮ ನೀಡಲು ಇದ್ದ ಕಾನೂನು ತೊಡಕುಗಳನ್ನು ನಿವಾರಿಸಿದೆ.

1980ರ ದಶಕದಿಂದ ಚೀನಾ ಹೆಚ್ಚಿನ ದಂಪತಿಗಳನ್ನು ಒಂದು ಮಗುವಿಗೆ ಕಟ್ಟುನಿಟ್ಟಾಗಿ ಸೀಮಿತಗೊಳಿಸಿತು. ದಂಡ ತೆರುವ ಅಥವಾ ಉದ್ಯೋಗ ಕಳೆದುಕೊಳ್ಳುವ ಬೆದರಿಕೆಯೊಂದಿಗೆ ಜಾರಿಗೊಳಿಸಿದ ಈ ನೀತಿಯು, ಬಲವಂತದ ಗರ್ಭಪಾತ ಸೇರಿ ಹಲವು ದುರುಪಯೋಗಕ್ಕೆ ಕಾರಣವಾಗಿತ್ತು.

ಪಾಕ್: ಚೀನಾ ಪ್ರಜೆಗಳಿದ್ದ ಬಸ್ ಸ್ಫೋಟ: 2 ಸಾವು

ಕರಾಚಿ/ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ನೈರುತ್ಯ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಶುಕ್ರವಾರ ಚೀನಾ ಪ್ರಜೆಗಳನ್ನು ಸಾಗಿಸುತ್ತಿದ್ದ ವಾಹನದ ಸಮೀಪ ಆತ್ಮಾಹುತಿ ಬಾಂಬರ್ ಸ್ಫೋಟಿಸಿಕೊಂಡಿದ್ದು, ಎರಡು ಮಕ್ಕಳ ಹತ್ಯೆಯಾಗಿದ್ದು, ಚೀನಿ ಪ್ರಜೆ ಸೇರಿ ಮೂವರು ಗಾಯಗೊಂಡಿದ್ದಾರೆ.

ಬಂದರು ನಗರವಾದ ಗ್ವಾದರ್‌ನ ಬಲೂಚ್ ವಾರ್ಡ್ ಪ್ರದೇಶದಲ್ಲಿ ಈ ದಾಳಿ ನಡೆದಿದೆ. ಚೀನಾದ ಹೂಡಿಕೆ ಮತ್ತು ಕಾರ್ಮಿಕರ ಉಪಸ್ಥಿತಿ ಇರುವ ಕಾರಣದಿಂದ ಇದು ಆಯಕಟ್ಟಿನ ಮಹತ್ವದ ಪ್ರದೇಶ ಎನಿಸಿಕೊಂಡಿದೆ ಎಂದು ಹಿರಿಯ ಸರ್ಕಾರಿ ಅಧಿಕಾರಿ ಮತ್ತು ಪೊಲೀಸರು ತಿಳಿಸಿದ್ದಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಲ್ಯಾಣ್ ಸಿಂಗ್ ನಿಧನ

ಲಖನೌ (ಪಿಟಿಐ): ಮಾಜಿ ಮುಖ್ಯ ಮಂತ್ರಿ ಕಲ್ಯಾಣ್ ಸಿಂಗ್ (89) ಅನಾರೋಗ್ಯದಿಂದ ಶನಿವಾರ ನಿಧನರಾದರು.

ಇಲ್ಲಿನ ಸಂಜಯಗಾಂಧಿ ಸ್ನಾತಕೋತ್ತರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರನ್ನು ಜುಲೈ 4ರಿಂದ ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿತ್ತು.

ಬಹು ಅಂಗಾಂಗ ವೈಫಲ್ಯದಿಂದ ಅವರು ಕೊನೆಯುಸಿರೆಳೆದರು ಎಂದು ಆಸ್ಪತ್ರೆಯು ಹೇಳಿಕೆಯಲ್ಲಿ ತಿಳಿಸಿದೆ.

1992ರ ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನು ಧ್ವಂಸಗೊಳಿಸಿದಾಗ ಇವರು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದರು. ನಂತರ ರಾಜಸ್ಥಾನದ ರಾಜ್ಯಪಾಲರಾಗಿಯೂ ಸೇವೆ ಸಲ್ಲಿಸಿದರು.

‘ಬಿಜೆಪಿ ಜನಪ್ರಿಯತೆಯಿಂದ ಉಗ್ರರಿಗೆ ಹತಾಶೆ’

ಜಮ್ಮು (ಪಿಟಿಐ): ಬಿಜೆಪಿಯ ಜನಪ್ರಿಯತೆಯಿಂದ ಹತಾಶರಾಗಿರುವ ಪಾಕಿಸ್ತಾನ ಮೂಲದ ಉಗ್ರರು ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಂತಿ ಕದಡಲು ಪಿತೂರಿ ನಡೆಸುತ್ತಿದ್ದಾರೆ ಎಂದು ಪಕ್ಷದ ಜಮ್ಮು ಮತ್ತು ಕಾಶ್ಮೀರ ಘಟಕದ ಅಧ್ಯಕ್ಷ ರವೀಂದರ್ ರೈನಾ ಶನಿವಾರ ಆರೋಪಿಸಿದ್ದಾರೆ.

ಭಯೋತ್ಪಾದಕ ಸಂಘಟನೆಯಿಂದ ತಮಗೆ ಬೆದರಿಕೆ ಇರುವುದಾಗಿ ಹೇಳಿರುವ ಅವರು, ‘ದಿ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ಉಗ್ರ ಸಂಘಟನೆಯು ನನ್ನ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿ ಬೆದರಿಕೆಯೊಡ್ಡಿರುವುದಾಗಿ ಗುಪ್ತಚರ ಸಂಸ್ಥೆಗಳು ತಿಳಿಸಿವೆ’ ಎಂದೂ ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪಂಜಾಬ್‌ನಲ್ಲಿ ಎರಡನೇ ದಿನವೂ ಪ್ರತಿಭಟನೆ: ರೈಲು, ರಸ್ತೆ ಸಂಚಾರಕ್ಕೆ ಅಡ್ಡಿ

ಕಬ್ಬಿನ ದರ ಹೆಚ್ಚಿಸಲು ಆಗ್ರಹ

ಕಬ್ಬಿನ ದರ ಹೆಚ್ಚಳ ಮತ್ತು ಬಾಕಿ ಪಾವತಿಗೆ ಒತ್ತಾಯಿಸಿ ರೈತರು ಜಲಂಧರ್‌ನಲ್ಲಿ ಶನಿವಾರ ರೈಲು ಹಳಿಗಳ ಮೇಲೆ ಮಲಗಿ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಚಂಡೀಗಡ (ಪಿಟಿಐ): ಕಬ್ಬಿನ ದರ ಹೆಚ್ಚಳ ಮತ್ತು ಕಬ್ಬಿನ ಬಾಕಿ ಮೊತ್ತ ಪಾವತಿಸುವಂತೆ ಆಗ್ರಹಿಸಿ ರೈತರು ಜಲಂಧರ್‌ನಲ್ಲಿ ರೈಲು ಹಳಿಗಳು ಮತ್ತು ರಾಷ್ಟ್ರೀಯ ಹೆದ್ದಾರಿಗಳ ಮೇಲೆ ಪ್ರತಿಭಟನೆ ನಡೆಸುತ್ತಿದ್ದಾರೆ. ಇದರ ಪರಿಣಾಮ ಶನಿವಾರ ರೈಲು ಸಂಚಾರ ಮತ್ತು ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು.

‘ಸುಮಾರು 50 ರೈಲುಗಳ ಸಂಚಾರವನ್ನು ರದ್ದುಗೊಳಿಸಲಾಯಿತು. ಅಲ್ಲದೆ 54 ರೈಲುಗಳನ್ನು ಇತರ ಮಾರ್ಗಗಳತ್ತ ಕಳುಹಿಸಲಾಯಿತು ಅಥವಾ ಅಲ್ಪಾವಧಿಗೆ ನಿಲ್ಲಿಸಲಾಯಿತು’ ಎಂದು ಫಿರೋಜಪುರ ವಿಭಾಗದ ರೈಲ್ವೆ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕಬ್ಬಿನ ಬಾಕಿ ಮೊತ್ತ ಪಾವತಿ ಹಾಗೂ ಕಬ್ಬಿನ ಬೆಲೆ ಏರಿಕೆಗೆ ಸಂಬಂಧಿಸಿದ ಬೇಡಿಕೆಗಳನ್ನು ಈಡೇರಿಸುವಂತೆ ಪಂಜಾಬ್ ಸರ್ಕಾರವನ್ನು ಒತ್ತಾಯಿಸಿ ಅನೇಕ ರೈತರು ಶುಕ್ರವಾರದಿಂದ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದಾರೆ.

ಜಲಂಧರ್ ಜಿಲ್ಲೆಯ ಧನೋವಲಿ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ತಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೂ ಸ್ಥಳದಿಂದ ಕದಲುವುದಿಲ್ಲ ಎಂದು ಪ್ರತಿಭಟನಕಾರರು ಹೇಳಿದ್ದಾರೆ. ತುರ್ತು ವಾಹನಗಳ ಸಂಚಾರಕ್ಕೆ ಮಾತ್ರ ಅನುವು ಮಾಡಿಕೊಟ್ಟಿದ್ದಾರೆ.

ರೈತರ ಪ್ರತಿಭಟನೆಯಿಂದ ಜಲಂಧರ್, ಅಮೃತಸರ, ಪಠಾಣ್‌ಕೋಟ್ ಮತ್ತು ಇತರ ಪ್ರದೇಶಗಳ ಸಂಚಾರದ ಮೇಲೆ ಪರಿಣಾಮ ಬೀರಿದೆ. ಸ್ಥಳೀಯ ಆಡಳಿತವು ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಸೂಚಿಸಿದೆ.ಪಂಜಾಬ್ ಸರ್ಕಾರ ಉಳಿಸಿಕೊಂಡಿರುವ ₹200ರಿಂದ 250 ಕೋಟಿ ಕಬ್ಬಿನ ಬಾಕಿಯನ್ನು ರೈತರಿಗೆ ಪಾವತಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದ್ದಾರೆ.

ಅಮೃತಸರ: 40 ಕೆ.ಜಿ ಹೆರಾಯಿನ್ ವಶ

ಚಂಡೀಗಡ (ಪಿಟಿಐ): ‘ಅಮೃತಸರದ ಭಾರತ–ಪಾಕಿಸ್ತಾನ ಗಡಿ ಪ್ರದೇಶದಲ್ಲಿ ₹200 ಕೋಟಿ ಮೌಲ್ಯದ 40.810 ಕೆ.ಜಿ. ಹೆರಾಯಿನ್ ಅನ್ನು ಶನಿವಾರ ಮುಂಜಾನೆ ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಅಮೃತಸರದ ಘರಿಂದಾ ಪ್ರದೇಶದ ನಿವಾಸಿ ನಿರ್ಮಲ್ ಸಿಂಗ್ ಎಂಬಾತ ಪಾಕಿಸ್ತಾನದಿಂದ ಕಳುಹಿಸಲಾಗಿರುವ ಹೆರಾಯಿನ್ ಅನ್ನು ಭಾರತದೊಳಗೆ ತೆಗೆದುಕೊಂಡು ಬರುವ ಮಾಹಿತಿ ಆಧಾರಿಸಿ ಈ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಆತ ಪರಾರಿ ಆಗಿದ್ದು, ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ವೈಕುಂಠ ಸಮಾರಾಧನೆ



ಶ್ರೀ ಟಿ. ರಾಮಯ್ಯ ರೆಡ್ಡಿ
ಜನನ: 06-01-1940 ನಿಧನ: 13-08-2021
ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ||23-08-2021 ರಂದು ವೈಕುಂಠ ಸಮಾರಾಧನೆಯನ್ನು ಕೋರಮಂಗಲ, ಬೆಂಗಳೂರು, ತಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ಇಂತಿ ದುಃಖತಪ್ತರು:
ಶ್ರೀಮತಿ ಅಶ್ವತಮ್ಮ ಮತ್ತು ಕುಟುಂಬವರ್ಗದವರು.

24ನೇ ವರ್ಷದ ಚಿರಸ್ಮರಣೆ



ಶ್ರೀ. ಎಂ.ವೆಂಕಟಸ್ವಾಮಿ
ನಿಧನ: 22.08.1997
ನಿಮ್ಮ ನೆನಪು ನಮ್ಮ ಹೃದಯಗಳಲ್ಲಿ ಸದಾಹಚ್ಚಹಸಿರಾಗುಳಿದಿದೆ, ಅನುದಿನವೂ, ಅನುಕ್ಷಣವೂ ನಿಮ್ಮ ಸ್ಮರಣೆಯೇ ನಮಗೆ ದಿವ್ಯಚೇತನವಾಗಿದೆ. ಸದಾ ನಿಮ್ಮನ್ನು ಸ್ಮರಿಸುವ ಧರ್ಮಪತ್ನಿ ಶ್ರೀಮತಿ ಸಾವಿತ್ರಮ್ಮ, ಮಗ ವಿ.ಶ್ರೀಕಾಂತ ಮತ್ತು ಕುಟುಂಬವರ್ಗ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರೆಂಟಲ್ ಪ್ರಾಪರ್ಟೀಸ್
Accommodation Available
Commercial
ಬಾಡಿಗೆಗೆ: ತುರುವೇಕೆರೆ 2 ಅಂಗಡಿಗಳು, 10x10,ಕರ್ನಾಟಕ ಬ್ಯಾಂಕ್ ಮೇಲೆ, ಬೆಸ್ಕಾಂ, ಬಸ್ ನಿಲ್ದಾಣ ಎದುರಿಗೆ ದಬ್ಬೇಗಟ್ಟ ರಸ್ತೆ. ಡಾ|| ಮೂರ್ತಿ9655591855.
ರಿಯಲ್ ಎಸ್ಟೇಟ್ ಸೆಲ್ಲಿಂಗ್
Commercial Building
Vijayanagar
BUILDING FOR-SALE A-Khatha 3437/sqft Land 100 chadara construction RENTAL INCOME Rs.1,40,000/- 3-Floors, 7-Flats. Price:3.20 Crore. No.30, 13th Cross, Pipeline road, Vijayanagar- 9110432149.
For Online Classified Booking
Name Change / Education / Property / Job / Services
and many more contact
9880856233 | 9886213331
dhclassifieds.com

Sites
General
AT KRISHNAPURA, 5th block, Hanuman Nagar, Nandanavan layout, Katipalla village, MUDA approved well planned layout of more than 200 plots, remaining few 5.20, 8.00 and 10.00 cents. At Kulai, 1.25 KM from Honnakatte junction, Pragathi Nagar, Hosabettu village close to MRPL/ Khan road, MUDA approved 3 sites admeasuring 7.5 cents and 6.15 cents for sale. Contact Prabhakar Nidhi Homes- 9821067819, 7760974900
ಉದ್ಯೋಗಾವಕಾಶ
Engg/ Production Technical
WANTED FRESHER/EXP in Dip/BE candidates for Garment CAD / CAM Machine Service. Email CV to designtech@live.in
General
ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010
ಆಫೀಸನಲ್ಲಿ ಕೆಲಸ ಮಾಡಲು Peon ಬೇಕಾಗಿದ್ದಾರೆ 2ಗಂಟೆಯ ನಂತರ ಸಂಪರ್ಕಿಸಿ: ಮಧುಸ್ಟೀಲ್ ಕಾರ್ಪೋರೇಶನ್ ಮಿನಿಯಾ ಬಿಲ್ಡಿಂಗ್, ಅಮಾನತ್ ಕೋ ಆಪರೇಟೀವ್ ಬ್ಯಾಂಕ್ ಕೆಳಗೆ,N.R.ರಸ್ತೆ, 2ನೇ ಕ್ರಾಸ್, ಬೆಂಗಳೂರು2

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856
Wanted
ಒಂದೇ ಕುಟುಂಬದ ಡ್ರೈವರ್ ಮತ್ತು ಮನೆ ಕೆಲಸದವರು ಬೇಕಾಗಿದ್ದಾರೆ ಕನಿಷ್ಠ 4 ವರ್ಷದ ಅನುಭವ ವಯೋಮಿತಿ 30 ವರ್ಷ ಒಳಗೆ ಆಕರ್ಷಕ ವೇತನ, ವಸತಿ ಸೌಲಭ್ಯವಿರುತ್ತದೆ. ನಾಗರಭಾವಿ 2ನೇ ಸ್ಟೇಜ್ ಎನ್. ಜಿ. ಎಫ್ ಲೇಔಟ್ ----: ಸಂಪರ್ಕಿಸಿ :---- 98450 41912 97425 43188
ನೇರನೇಮಕಾತಿ ಎಲ್ಲಾಜಿಲ್ಲೆಗಳಲ್ಲಿ ಪ್ರಾರಂಭವಾಗಿರುವ ಕಂಪನಿಗಳಿಗೆ, ಆಫೀಸ್‌ಗಳಿಗೆ 7th,ಎಸ್ಎಸ್ಎಲ್‌ಸಿ, ಪಿಯುಸಿ, ಡಿಗ್ರಿ B.Com (ವಿದ್ಯಾರ್ಹತೆಯಿಲದಲ್ಲದವರಿಗೂ) ವಸತಿಯೂಟದೊಂದಿಗೆ 16,700/-56,000/- 8884412622, 9986083666
ವ್ಯಾಪಾರ
Business to Business
Finance
ಸಾಲ ಸೌಲಭ್ಯ. ಕೃಷಿ ಸಾಲ ವ್ಯವಹಾರ ಸಾಲ ವೈಯಕ್ತಿಕ ಸಾಲ ಸ್ಥಿರಾಸ್ತಿ ಸಾಲ ವಿದ್ಯಾ ಸಾಲ ಮಾರ್ಟ್ ಗೇಜ್ ಸಾಲ ವಾರ್ಷಿಕ ಬಡ್ಡಿ ದರ 4% ಸಬ್ಸಿಡಿ 10 ರಿಂದ 30%. ಸಂಪರ್ಕಿಸಿರಿ 8421876983/ 7219699215
Business Offers
Finance
FDI LOANS Loan consolidation get funds from 8Crore & ABOVE Interest @3.5%P.A International collaboration, All types of funding done, LAP, Feasible projects, Business Amendable tenure, Transparent process, Solicit enquiry 7200418844, marcusgroups@yahoo.com

ADMISSION CORNER
ವೈ.ಎಂ.ಸಿ.ಎ. ದೈಹಿಕ ಶಿಕ್ಷಣ ಕಾಲೇಜು ನೃಪತುಂಗ ರಸ್ತೆ, ಬೆಂಗಳೂರು 560 001.
(ಎನ್ ಸಿ ಟಿ ಇ. ಕರ್ನಾಟಕ ಸರ್ಕಾರ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯದಿಂದ ಅಂಗೀಕರಿಸಲ್ಪಟ್ಟಿದೆ.
ಬಿ.ಪಿ. ಇಡಿ ಹಾಗೂ ಡಿ.ಪಿ. ಇಡಿ ಕೋರ್ಸಿಗೆ ದಾಖಲಾತಿಯನ್ನು ಪ್ರಾರಂಭಿಸಲಾಗಿದೆ.
ಬಿ.ಪಿ. ಇಡಿ ಕೋರ್ಸಿಗೆ : ವಿದ್ಯಾರ್ಹತೆ: ಯಾವುದೇ ಪದವಿಯಲ್ಲಿ ಶೇ 50% ಅಂಕಗಳನ್ನುಪಡೆದು ತೇರ್ಗಡೆ ಹೊಂದಿರಬೇಕು ಹಾಗೂ ಕ್ರೀಡೆಯಲ್ಲಿ ಪರಿಣಿತಿ ಹೊಂದಿರಬೇಕು.
ಡಿ.ಪಿ. ಇಡಿ ಕೋರ್ಸಿಗೆ : ವಿದ್ಯಾರ್ಹತೆ: ಪಿಯುಸಿಯಲ್ಲಿ ಶೇ 50% ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು ಅಥವಾ ಶೇ 45% ಅಂಕಗಳನ್ನು ಪಡೆದು ಕ್ರೀಡೆಯಲ್ಲಿ ಪರಿಣಿತಿ ಹೊಂದಿರಬೇಕು.
ಕೂಡಲೆ ಸಂಪರ್ಕಿಸಿ: 080–22211848, 93428 17807
ಡಾ|| ಎಂ. ಅಂಟೋನಿ ಐಸಾಕ್, ಪ್ರಧಾನ ಕಾರ್ಯದರ್ಶಿ/ಕರೆಸ್ಪಾಂಡಂಟ್
E-mail: ymcabangalore19@gmail.com | Website: www.ymccablr.com

ಭವಿಷ್ಯ
Astrology
★ಉಚಿತ ಭವಿಷ್ಯ★ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ_ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100%ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106
ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಉಚಿತವಾಗಿ ಕೊಡಲಾಗುತ್ತದೆ ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007
ಸಾಯಿಅಂಜನ್ ಜ್ಯೋತಿಷ್ಯರು ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳು ಏನೇಇರಲಿ 11 ಗಂಟೆಯಲ್ಲಿ ಪರಿಹಾರ ಶತಸಿದ್ಧ.ಪರಿಹಾರ ಆಗದಿದ್ದಲ್ಲಿ ನಿಮ್ಮ ಹಣ ವಾಪಸ್. 9535852216
ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.
ವೈವಾಹಿಕ
Brides Wanted
Hindu
ನಾಯಕ ಜಾತಿಯ ವಧು ಬೇಕಾಗಿದೆ. ಪದವಿ ಅಥವಾ ಪಿ.ಜಿ. ಆಗಿರಬೇಕು. ವರ M.Tech/28/ ಮೈಸೂರು. ಸಂಪರ್ಕಿಸಿ : 9480887390
Bride Required Others
ವಯಸ್ಸು 51, ಬೆಂಗಳೂರಿನಲ್ಲಿ ಕೆಲಸ, 2ನೇ ಮದುವೆಯಾದರೂ ಪರವಾಗಿಲ್ಲ, ವಿಶ್ವಕರ್ಮ ಸಮುದಾಯದ ವಧು ಬೇಕಾಗಿದೆ. ಸಂಪರ್ಕಿಸಿ : 9008405139

ವೈಯಕ್ತಿಕ
Change of Name
ನಾನು, ನಮ್ರತಾ, W/O ವಿಶಾಲ್ ಕುಮಾರ್, R/O Trifecta Esplanade M-271, ಬೆಳ್ಳೂರು ಮುಖ್ಯ ರಸ್ತೆ, ಕಾಡುಗೋಡಿ, ಬೆಂಗಳೂರು ಎಲ್ಲಾ ಭವಿಷ್ಯದ ಉದ್ದೇಶಗಳಿಗಾಗಿ ನನ್ನ ಹೆಸರನ್ನು ನಮ್ರತಾ ಬರನ್ವಾಲ್ ಎಂದು ಬದಲಾಯಿಸಿದ್ದೇನೆ.
I, Ikram Perveez Gaffar S/o Abdul Gaffar residing near Noorani Masjid, Chikamagalur 577101, have changed my name to Ikram Perveez vide affidavit dated 16th Aug 2021 Chikamagalur
ಸಮಾಜಸೇವೆ
Old Age Home
ವೃದ್ಧಾಶ್ರಮಕ್ಕೆ ಆಹ್ವಾನ (ಸಸ್ಯಹಾರಿಗಳು) ಎಲ್ಲಾ ವಯೋಮಾನದ ವೃದ್ಧರನ್ನು, ಹಾಸಿಗೆ ಹಿಡಿದವರನ್ನು ನೋಡಿಕೊಳ್ಳುವ ಹಾಗೂ ಡಾ. ಸಲಹೆ ಮತ್ತು ಚಿಕಿತ್ಸೆಯೊಂದಿಗೆ ಆರೈಕೆ ಮಾಡುವ ಮತ್ತು ಎಲ್ಲರನ್ನು ಮನೆಯಂತೆ ನೋಡಿಕೊಳ್ಳುವ ಸಂಸ್ಥೆ ಶ್ರೀ ವಾತ್ಸಲ್ಯ ಸೇವಾ ಫೌಂಡೇಷನ್. ಹಿನಕಲ್, ಮೈಸೂರು ಸಂಪರ್ಕಿಸಿ: 9110455297, 9591557126
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

ಸಂಕ್ಷಿಪ್ತ ಸುದ್ದಿ

ಅದಾನಿ ವಿಲ್ಮರ್ ಐಪಿಒಗೆ ‘ಸೆಬಿ’ ತಡೆ

ನವದೆಹಲಿ (ಪಿಟಿಐ): ಖಾದ್ಯತೈಲ ತಯಾರಿಸುವ ಪ್ರಮುಖ ಕಂಪನಿ ಅದಾನಿ ವಿಲ್ಮರ್ ಲಿಮಿಟೆಡ್‌ನ (ಎಡಬ್ಲ್ಯುಎಲ್) ₹ 4,500 ಕೋಟಿ ಮೊತ್ತದ ಐಪಿಒ ಪ್ರಸ್ತಾವನೆಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ತಡೆ ನೀಡಿದೆ.

ಆದರೆ, ಈ ನಿರ್ಧಾರಕ್ಕೆ ಕಾರಣ ಏನು ಎನ್ನುವುದನ್ನು ‘ಸೆಬಿ’ ಸ್ಪಷ್ಟಪಡಿಸಿಲ್ಲ. ಐಪಿಒಗೆ ತಡೆ ನೀಡಿರುವುದಾಗಿ ಸೆಬಿಯ ಜಾಲತಾಣದಲ್ಲಿ ಮಾಹಿತಿ ಇದೆ.

ಕಂಪನಿಯು ಐಪಿಒ ಕುರಿತಾಗಿ ಆಗಸ್ಟ್ 3ರಂದು ಸೆಬಿಗೆ ದಾಖಲೆಪತ್ರಗಳನ್ನು ಸಲ್ಲಿಸಿತ್ತು.

‘ಐಪಿಒ ಪ್ರಕ್ರಿಯೆಗೆ ತಡೆ ನೀಡಿರುವುದಕ್ಕೆ ಸಂಬಂಧಿಸಿದಂತೆ ಸೆಬಿಯಿಂದ ಯಾವುದೇ ಔಪಚಾರಿಕ ಸಂವಹನವನ್ನು ಸ್ವೀಕರಿಸಿಲ್ಲ’ ಎಂದು ಅದಾನಿ ಸಮೂಹದ ವಕ್ತಾರರೊಬ್ಬರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ನಾವು ಯಾವಾಗಲೂ ಸೆಬಿಯ ನಿಯಮಾವಳಿಗಳನ್ನು ಸಂಪೂರ್ಣವಾಗಿ ಅನುಸರಿಸುತ್ತಾ ಬಂದಿದ್ದೇವೆ. ಈ ಹಿಂದೆಯೂ ಸೆಬಿ ಕೇಳಿರುವ ಮಾಹಿತಿಗಳೆಲ್ಲವನ್ನೂ ಸೆಬಿಗೆ ನೀಡಿದ್ದೇವೆ. ಭವಿಷ್ಯದಲ್ಲಿಯೂ ಅದರ ಜೊತೆಗೆ ಸಹಕರಿಸುತ್ತೇವೆ’ ಎಂದು ಅವರು ಹೇಳಿದ್ದಾರೆ.

ಕಂಪನಿಯು ₹ 4,500 ಕೋಟಿ ಮೊತ್ತದ ಹೊಸ ಷೇರುಗಳನ್ನು ಸಾರ್ವಜನಿಕ ವಿತರಣೆಗೆ ಇಡಲು ಮುಂದಾಗಿದೆ.

₹ 439 ಕೋಟಿ ಸಂಗ್ರಹಿಸಿದ ಅರವಿಂದ್ ಫ್ಯಾಷನ್ಸ್

ನವದೆಹಲಿ (ಪಿಟಿಐ): ಷೇರುಗಳನ್ನು ಮಾರಾಟ ಮಾಡುವ ಮೂಲಕ ಪ್ರವರ್ತಕರು ಮತ್ತು ವಿವಿಧ ಹೂಡಿಕೆದಾರರಿಂದ ಒಟ್ಟಾರೆ ₹ 439 ಕೋಟಿ ಬಂಡವಾಳ ಸಂಗ್ರಹಿಸಿರುವುದಾಗಿ ಅರವಿಂದ್ ಫ್ಯಾಷನ್ಸ್ ಲಿಮಿಟೆಡ್ (ಎಎಫ್‌ಎಲ್) ಶನಿವಾರ ತಿಳಿಸಿದೆ.

ಈ ಬಂಡವಾಳದಿಂದ ಕಂಪನಿಯ ಆರ್ಥಿಕ ಸ್ಥಿತಿ ಇನ್ನಷ್ಟು ಬಲಗೊಳ್ಳಲಿದ್ದು, ಕೋವಿಡ್ ಸಾಂಕ್ರಾಮಿಕವು ಸೃಷ್ಟಿಸಿರುವ ಅನಿಶ್ಚಿತ ಪರಿಸ್ಥಿತಿಯಲ್ಲಿಯೂ ಬೆಳವಣಿಗೆಯ ಕಾರ್ಯತಂತ್ರ ರೂಪಿಸಲು ಅನುಕೂಲ ಆಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಆಕಾಶ್ ಭನ್ಸಾಲಿ, ಐಸಿಐಸಿಐ ಪ್ರುಡೆನ್ಶಿಯಲ್ ಮ್ಯೂಚುವಲ್ ಫಂಡ್, ಯುನಿವರ್ಸಿಟಿ ಆಫ್ ನೊಟ್ರೆ ಡೇಮ್ ಡು ಲ್ಯಾಕ್, ಜಿಪಿ ಎಮರ್ಜಿಂಗ್ ಮಾರ್ಕೆಟ್ಸ್ ಸ್ಟ್ರ್ಯಾಟೆಜೀಸ್ ಎಲ್‌ಪಿ, ದಿ ರಾಮ್ ಫಂಡ್ ಎಲ್‌ಪಿ ಸೇರಿದಂತೆ ಇನ್ನೂ ಹಲವು ಹೂಡಿಕೆದಾರರು ಬಂಡವಾಳ ಸಂಗ್ರಹದಲ್ಲಿ ಭಾಗವಹಿಸಿದ್ದರು.

ವಹಿವಾಟನ್ನು ಪೂರ್ಣಗೊಳಿಸುವುದು ಷೇರುದಾರರು ಮತ್ತು ಸೆಬಿ ಅನುಮೋದನೆಗಳಿಗೆ ಒಳಪಟ್ಟಿರುತ್ತದೆ ಎಂದು ಕಂಪನಿ ಹೇಳಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪ್ರಜಾವಾಣಿ ಆಲದಮರ 10.30 ರಿಂದ 12.30
ಕನ್ನಡ ಸಿನಿಮಾ ಮತ್ತು ಕಾದಂಬರಿ ಲೋಕ: ಒಂದು ಆಪ್ತ ಅವಲೋಕನ..
ಭಾಗವಹಿಸುವವರು : ಕೆ. ಶಿವರುದ್ರಯ್ಯ, ನಿರ್ದೇಶಕ., ಮಾಳವಿಕಾ ಅವಿನಾಶ್, ನಟಿ,. ಬಿ.ಎಲ್.ವೇಣು, ಕಾದಂಬರಿಕಾರ,. ಎನ್.ಎಸ್. ಶ್ರೀಧರಮೂರ್ತಿ, ಪತ್ರಕರ್ತ,. ವತ್ಸಲಾ ಮೋಹನ್, ಪ್ರಾಧ್ಯಾಪಕಿ. ಮತ್ತು ನೀವು..
ಕ್ಲಬ್ ಹೌಸ್
ಪಾಡ್‌ಕಾಸ್ಟ್: ಇಂದಿನ ವಿಶೇಷ: ಹರಟೆಕಟ್ಟೆ
ಪ್ರತೀ ದಿನ: ವಚನವಾಣಿ, ದಿನದ ಸೂಕ್ತಿ, ಪ್ರಜಾವಾಣಿ ವಾರ್ತೆ, ಸಂಪಾದಕೀಯ, ಪ್ರಚಲಿತ
ಪ್ರಜಾವಾಣಿ ಕನ್ನಡ ಧ್ವನಿ
ನಾಳೆ
ಸಂವಾದ ಬೆಳಿಗ್ಗೆ 11ರಿಂದ 12
ಕೊರೊನಾ ಕಾಲದಲ್ಲಿ ರಾಜಕಾರಣಿಗಳ ಯಾತ್ರೆ
ಭಾಗವಹಿಸುವವರು: ಭವ್ಯ ನರಸಿಂಹಮೂರ್ತಿ, ಕಾಂಗ್ರೆಸ್ ವಕ್ತಾರೆ., ಅಶ್ವತ್ಥನಾರಾಯಣ ಗೌಡ ಪ್ರಧಾನ ಕಾರ್ಯದರ್ಶಿ, ಬಿಜೆಪಿ. ಎ.ನಾರಾಯಣ, ರಾಜಕೀಯ ವಿಶ್ಲೇಷಕ,. ಬಿ.ಆರ್. ಮಂಜುನಾಥ್, ಸಾಮಾಜಿಕ ಕಾರ್ಯಕರ್ತ.

‘ಸುಳ್ಳು ಪ್ರಕರಣ ದಾಖಲಿಸಲು ಮೋದಿಯಿಂದ ಸೂಚನೆ’



ಮನೀಶ್ ಸಿಸೋಡಿಯಾ

ನವದೆಹಲಿ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿಯವರು ದೆಹಲಿ ಪೊಲೀಸ್, ಸಿಬಿಐ ಮತ್ತು ಜಾರಿ ನಿರ್ದೇಶನಾಲಯಕ್ಕೆ 15 ಮಂದಿಯ ಹೆಸರುಗಳ ಪಟ್ಟಿ ಕಳುಹಿಸಿದ್ದಾರೆ. ಈ ಪಟ್ಟಿಯಲ್ಲಿರುವವರ ಮೇಲೆ ದಾಳಿ ನಡೆಸಿ ಮತ್ತು ನಕಲಿ ಎಫ್‌ಐಆರ್ ದಾಖಲಿಸುವಂತೆ ಸೂಚಿಸಿದ್ದಾರೆ’ ಎಂದು ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಶನಿವಾರ ಆರೋಪಿಸಿದ್ದಾರೆ.

ಆನ್‌ಲೈನ್ ಮೂಲಕ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಆ ಪಟ್ಟಿಯಲ್ಲಿ ಆಮ್ ಆದ್ಮಿ ಪಾರ್ಟಿಗೆ ಸೇರಿದ ಹಲವರ ಹೆಸರುಗಳಿರುವುದು ಗೊತ್ತಾಗಿದೆ. ನಮ್ಮ ವಿಶ್ವಾಸಾರ್ಹ ಮೂಲಗಳಿಂದ ಈ ವಿಷಯ ತಿಳಿದುಬಂದಿದೆ’ ಎಂದು ಅವರು ಹೇಳಿದ್ದಾರೆ.

ದೆಹಲಿ ಪೊಲೀಸ್ ಆಯುಕ್ತ ರಾಕೇಶ್ ಅಸ್ತಾನಾ ಅವರು ‘ಈ ಕೆಲಸ ಮಾಡುವುದಾಗಿ’ ಪ್ರಧಾನಿಯವರಿಗೆ ಭರವಸೆ ನೀಡಿದ್ದಾರೆಂದು ಗೊತ್ತಾಗಿದೆ. ರಾಕೇಶ್ ಅಸ್ತಾನಾ, ಮೋದಿಯವರ ಬ್ರಹ್ಮಾಸ್ತ್ರ. ಅವರು ಭರವಸೆ ನೀಡಿದ ಮೇಲೆ, ಕೆಲಸವನ್ನೂ ಪೂರ್ಣಗೊಳಿಸುತ್ತಾರೆ’ ಎಂದರು.

‘ಎಎಪಿ ಸತ್ಯ ಮತ್ತು ಪ್ರಾಮಾಣಿಕವಾಗಿ ರಾಜಕೀಯ ಮಾಡುತ್ತದೆ’ ಎಂದ ಸಿಸೋಡಿಯಾ, ‘ನೀವು ಸಿಬಿಐ ಮತ್ತು ಇಡಿಯನ್ನು ಕಳುಹಿಸಬಹುದು. ನಾವು ಅವರನ್ನು ಸ್ವಾಗತಿಸುತ್ತೇವೆ’ ಎಂದರು.

ಕಣಿವೆಯಲ್ಲಿ ಉಗ್ರರಿಗೆ ಜಾಗವಿಲ್ಲ: ಮೇಜರ್ ಜನರಲ್

ಶ್ರೀನಗರ: ಜಮ್ಮುಮತ್ತು ಕಾಶ್ಮೀರದ ಆವಂತಿಪುರ ಬಳಿಯ ನಾಗಬೀರನ್ ಟ್ರಾಲ್ ಪ್ರದೇಶದಲ್ಲಿ ಶನಿವಾರ ಬೆಳಿಗ್ಗೆ ನಡೆದ ಎನ್‌ಕೌಂಟರ್‌ನಲ್ಲಿ ಮೂವರು ಜೈಷ್–ಎ–ಮೊಹಮ್ಮದ್ ಉಗ್ರರನ್ನು ಭದ್ರತಾ ಪಡೆಗಳು ಹತ್ಯೆ ಮಾಡಿದ್ದು, ಭಯೋತ್ಪಾದಕರಿಗೆ ಕಾಶ್ಮೀರ ಕಣಿವೆಯಲ್ಲಿ ಜಾಗವಿಲ್ಲ ಎಂದು ಮೇಜರ್ ಜನರಲ್ ರಶೀಂ ಬಾಲಿ ಹೇಳಿದ್ದಾರೆ.

ಈ ಉಗ್ರರು ಬಿಜೆಪಿ ನಾಯಕ ರಾಕೇಶ್ ಪಂಡಿತ ಹತ್ಯೆಯಲ್ಲಿ ಶಾಮೀಲಾಗಿದ್ದವರು ಎಂದು ಹೇಳಲಾಗಿದೆ.

ಎನ್‌ಕೌಂಟರ್ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಶೀಂ ಬಾಲಿ, ‘ಟ್ರಾಲ್ ಪ್ರದೇಶದಲ್ಲಿ ದೀರ್ಘ ಅವಧಿಯಿಂದ ಉಗ್ರರು ಕಾರ್ಯಾಚರಿಸುತ್ತಿರುವುದು ಗಮನಕ್ಕೆ ಬಂದಿತ್ತು ಅವರ ಹತ್ಯೆಯೊಂದಿಗೆ ಕಾಶ್ಮೀರ ಕಣಿವೆಯಲ್ಲಿ ಉಗ್ರರಿಗೆ ಜಾಗವಿಲ್ಲ ಎಂಬ ಕಠಿಣ ಸಂದೇಶ ನೀಡಲಾಗಿದೆ’ ಎಂದು ಹೇಳಿದ್ದಾರೆ.

ಕೇಂದ್ರದ 30 ಅಧಿಕಾರಿಗಳ ವಿರುದ್ಧ ಲೋಕಪಾಲಕ್ಕೆ ದೂರು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳ ವಿರುದ್ಧ ಈ ವರ್ಷದ ಏಪ್ರಿಲ್ ಮತ್ತು ಜುಲೈ ನಡುವೆ 30 ದೂರುಗಳನ್ನು ಲೋಕಪಾಲ ಕಚೇರಿ ಸ್ವೀಕರಿಸಿದೆ.

ಒಟ್ಟು 30 ದೂರುಗಳ ಪೈಕಿ 18 ದೂರುಗಳು ‘ಎ’ ಅಥವಾ ‘ಬಿ’ ಗ್ರೂಪ್ ಅಧಿಕಾರಿಗಳಿಗೆ ಸಂಬಂಧಿಸಿದ್ದಾಗಿವೆ.

ಕೇಂದ್ರ ಸರ್ಕಾರದ ಪೂರ್ಣ ಅಥವಾ ಭಾಗಶಃ ನಿಯಂತ್ರಣದಲ್ಲಿರುವ ಸಂಸ್ಥೆ, ಮಂಡಳಿ, ಪ್ರಾಧಿಕಾರ, ಕಂಪನಿ, ಟ್ರಸ್ಟ್‌ನ ಅಧ್ಯಕ್ಷ/ ಸದಸ್ಯ/ಅಧಿಕಾರಿ/ ಸಿಬ್ಬಂದಿ ವಿರುದ್ಧ 12 ದೂರುಗಳು ಸ್ವೀಕಾರವಾಗಿವೆ ಎಂದು ಅಂಕಿ ಅಂಶಗಳು ತಿಳಿಸುತ್ತವೆ.

ಹಾಲ್‌ಮಾರ್ಕ್: ಪ್ರತಿಭಟನೆ ನಿರ್ಧಾರ ಮರುಪರಿಶೀಲನೆಗೆ ಸರ್ಕಾರ ಮನವಿ

ನವದೆಹಲಿ (ಪಿಟಿಐ): ಚಿನ್ನಾಭರಣಗಳಿಗೆ ಹಾಲ್‌ಮಾರ್ಕ್ ಕಡ್ಡಾಯಗೊಳಿಸಿರುವುದನ್ನು ವಿರೋಧಿಸಿ ಸೋಮವಾರ ನಡೆಸಲು ಉದ್ದೇಶಿಸಿರುವ ಸಾಂಕೇತಿಕ ಪ್ರತಿಭಟನೆಯ ನಿರ್ಧಾರದ ಕುರಿತು ಮರುಪರಿಶೀಲಿಸುವಂತೆ ಕೇಂದ್ರ ಸರ್ಕಾರವು ಹರಳು ಮತ್ತು ಚಿನ್ನಾಭರಣ ಮಂಡಳಿಗೆ (ಜಿಜೆಸಿ) ಮನವಿ ಮಾಡಿದೆ.

ಮಂಡಳಿಯು ಪ್ರತಿಭಟನೆ ನಡೆಸುವ ನಿರ್ಧಾರವನ್ನು ಶುಕ್ರವಾರ ಪ್ರಕಟಿಸಿತ್ತು. ದೇಶದ ನಾಲ್ಕೂ ವಲಯಗಳ ಮುತ್ತು ಮತ್ತು ಆಭರಣ ಉದ್ಯಮದ 350ಕ್ಕೂ ಹೆಚ್ಚಿನ ಸಂಘಟನೆಗಳು ಈ ಪ್ರತಿಭಟನೆಗೆ ಬೆಂಬಲ ನೀಡಲಿವೆ ಎಂದು ಹೇಳಿತ್ತು.

ಹಾಲ್‌ಮಾರ್ಕ್ ಕಡ್ಡಾಯ ಎಂಬ ನಿಯಮವು ಜೂನ್ 16ರಿಂದ ಹಂತ ಹಂತವಾಗಿ ಜಾರಿಗೆ ಬಂದಿದೆ. ಮೊದಲ ಹಂತದಲ್ಲಿ ಕೇಂದ್ರ ಸರ್ಕಾರವು 28 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 256 ಜಿಲ್ಲೆಗಳಲ್ಲಿ ಇದನ್ನು ಜಾರಿಗೊಳಿಸಲಾಗಿದೆ.

‘ಕೆಲವು ಸಂಘಗಳು ಮುಷ್ಕರಕ್ಕೆ ಕರೆ ನೀಡಿವೆ ಎಂದು ಕೇಳಿದ್ದೇನೆ. ಉದ್ಯಮದ ಪ್ರತಿಯೊಂದು ಸಮಸ್ಯೆಗಳನ್ನೂ ಸರ್ಕಾರವು ಆಲಿಸುತ್ತಿದೆ. ಹೀಗಿರುವಾಗ ಯಾವುದಕ್ಕಾಗಿ ಮುಷ್ಕರ?’ ಎಂದು ಭಾರತದ ಮಾನದಂಡ ಮಂಡಳಿಯ (ಬಿಐಎಸ್) ಪ್ರಧಾನ ನಿರ್ದೇಶಕ ಪ್ರಮೋದ್ ಕುಮಾರ್ ತಿವಾರಿ ಅವರು ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

‘ಆಗಸ್ಟ್ 19ರಂದು ನಡೆದ ಸಭೆಯಲ್ಲಿ ಚಿನ್ನಾಭರಣಗಳ ಹಲವು ಸಂಘಗಳು ಪ್ರತಿಭಟನೆಗೆ ವಿರೋಧ ವ್ಯಕ್ತಪಡಿಸಿದ್ದವು. ಅಲ್ಲದೆ, ಸರ್ಕಾರದ ನಿರ್ಧಾರವನ್ನು ಬೆಂಬಲಿಸುವುದಾಗಿಯೂ ಹೇಳಿದ್ದರು’ ಎಂದು ತಿವಾರಿ ಅವರು ಶನಿವಾರ ತಿಳಿಸಿದ್ದಾರೆ.

‘ಕೆಲವು ಚಿನ್ನಾಭರಣ ವ್ಯಾಪಾರಿಗಳಿಗೆ ಸಮಸ್ಯೆಗಳಿದ್ದರೆ, ಅದಕ್ಕೆ ಯಾವುದೇ ಆಧಾರವಿಲ್ಲ. ದೇಶ ಮತ್ತು ಗ್ರಾಹಕರ ಹಿತದೃಷ್ಟಿಯಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇದು ಅತಿದೊಡ್ಡ ಹೆಜ್ಜೆಯಾಗಿದೆ. ಚಿನ್ನಾಭರಣ ವರ್ತಕರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರವು ಯಾವಾಗಲೂ ಸಿದ್ಧವಿರುತ್ತದೆ ಎಂದು ಅವರು ತಿಳಿಸಿದ್ದಾರೆ.

ದೊಡ್ಡ ಯಶಸ್ಸು: ಚಿನ್ನಾಭರಣಗಳಿಗೆ ಹಾಲ್‌ಮಾರ್ಕ್ ಕಡ್ಡಾಯದ ಮೊದಲ ಹಂತವು ಜಾರಿಗೆ ಬಂದು 50 ದಿನಗಳು ಕಳೆದಿದ್ದು, ಅಭೂತಪೂರ್ವ ಯಶಸ್ಸನ್ನು ಕಂಡಿದೆ. 1 ಕೋಟಿಗೂ ಅಧಿಕ ಚಿನ್ನಾಭರಣಗಳನ್ನು ಹಾಲ್‌ಮಾರ್ಕ್ ಮಾಡಲಾಗಿದೆ. ಎಂದು ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

21-8-2021

ಜಾವಾ 70/80(ಹೊಸ)	10100-10150
ಜಾವಾ 80/90(ಹೊಸ)	9200-9250
ದಪ್ಪ ಮಧ್ಯಪ್ರದೇಶ(ಹೊಸ)	9700-9750
ದಪ್ಪ ಗುಜರಾತ್(ಹೊಸ)	9450-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	1365 (1370)
ಪಾಮ್ ವಾರದ ಡೆಲಿವರಿ	1253 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1430)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,050 (47,100)
ಬೆಳ್ಳಿ ಕೆ.ಜಿ 62,000 (62,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹435
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹1390 (1390)
ಸೂರ್ಯಕಾಂತಿ (ರಿಫೈನ್ಡ್)	₹1480(1480)
ಪಾಮೋಲಿನ್	₹1255 (1265)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	400

ರಾಮನಗರ ರೇಷ್ಮೆ

ಮಿಶ್ರತಳಿ	248-478
ದ್ವಿತಳಿ	299-533

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ ಹಾಸನ

	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	12500	12425	178.25 ಸೆಂಟ್ಸ್
ಎಸಿ	---	4800	4950	
ಆರ್‌ಪಿ	---	5900	6050	ಲಂಡನ್
ಆರ್‌ಸಿ	---	3300	3475	1862 ಡಾಲರ್ಸ್

ನಿಧನ ವಾರ್ತೆ

ನಟಿ ಚಿತ್ರಾ

ಚೆನ್ನೈ (ಪಿಟಿಐ):ಬಹು ಭಾಷಾ ನಟಿ ಚಿತ್ರಾ (56) ಹೃದಯಾಘಾತದಿಂದ ಚೆನ್ನೈನಲ್ಲಿ ಶನಿವಾರ ಬೆಳಿಗ್ಗೆ ನಿಧನರಾಗಿದ್ದಾರೆ. ಮಲಯಾಳಂ, ಕನ್ನಡ, ತೆಲುಗು, ತಮಿಳಿನಲ್ಲಿ ನೂರಕ್ಕೂ ಹೆಚ್ಚು ಸಿನೆಮಾಗಳಲ್ಲಿ ನಟಿಸಿದ್ದಾರೆ. ಕೊಚ್ಚಿಯಲ್ಲಿ ಜನಿಸಿದ ಚಿತ್ರಾ ಬಾಲನಟಿಯಾಗಿ ಸಿನಿಮಾ ರಂಗಕ್ಕೆ ಪ್ರವೇಶಿಸಿದರು. ಕೆ. ಬಾಲಚಂದರ್ ನಿರ್ದೇಶನದ ‘ಅಪೂರ್ವ ರಾಗಂಗಳ್’ ಸಿನಿಮಾದಲ್ಲಿ ಬಾಲ ನಟಿಯಾಗಿ ನಟಿಸಿದ್ದರು. ಈ ಚಿತ್ರ 1975ರಲ್ಲಿ ತೆರೆಕಂಡಿತ್ತು. ಕನ್ನಡದಲ್ಲಿ ಸುಂದರ ಸ್ವಪ್ನಗಳು, ಅಜೇಯ್ - ವಿಜಯ್, ಕೃಷ್ಣ ಮೆಚ್ಚಿದ ರಾಧೆ ಚಿತ್ರಗಳಲ್ಲಿ ಬಣ್ಣ ಹಚ್ಚಿದ್ದಾರೆ.

ಆಧ್ಯಾತ್ಮಿಕ ಅನುಭೂತಿಯ ಭೂತಾನ

13

1. ಸಿಡಿದ ಗುಂಡುಗಳಿಂದ ಛಿದ್ರಗೊಂಡ ಗೋಡೆಯ ಮುಂದೆ ಭಯಗ್ರಸ್ತ ಆಫ್ಗನ್ ಮಗು. ದೇಶವೇ ಕಾಯಿಲೆಬಿದ್ದು ಮಲಗಿರುವಾಗ ವಿರಳ ಕಾಯಿಲೆಯಿಂದ ಬಳಲುತ್ತಿರುವ ಅವಳ ಚಿಕಿತ್ಸೆಗೆ ದಾರಿ ಎಲ್ಲಿ?
2. ಇರಾನ್ ಗಡಿವರೆಗೆ ಓಡೋಡಿ ಬಂದರೂ ಗಲಭೆಗ್ರಸ್ತ ದೇಶದಿಂದ ಹೊರಹೋಗಲಾಗದೆ ರೋದಿಸುತ್ತಿರುವ ಆಫ್ಗನ್ ಪ್ರಜೆ.
3. ಅಫ್ಘಾನಿಸ್ತಾನದ ಹಾದಿಬೀದಿಯಲ್ಲಿ ಬಂದೂಕು-ಗನ್‌ಗಳದ್ದೇ ರಾಜ್ಯಭಾರ.

10

ದೇವರೂ ಅಳುವ ನೆಲ!

ಜಯಂತ್ ಜಾಕೋಬ್

ಅಫ್ಘಾನಿಸ್ತಾನದಲ್ಲಿ ಮತ್ತೆ ತಾಲಿಬಾನ್‌ನ ಪಟ್ಟಾಭಿಷೇಕವಾಗಿದೆ. ಹಲವು ರಾಷ್ಟ್ರಗಳ ಪಾಲಿಗೆ ಯುದ್ಧತಂತ್ರಗಳ ಆಡಂಬೊಲವಾದ ಆಫ್ಘನ್‌ನಲ್ಲಿ ಅಸಂಖ್ಯ ಹಸಿದ ಹೊಟ್ಟೆಗಳನ್ನು ತುಂಬಿಸುವುದು ಹೇಗೆ? ಮೇಷ್ಟ್ರೇ ಇಲ್ಲದ ಶಾಲೆಗಳಲ್ಲಿ ಮಕ್ಕಳು ಕಲಿಯುವುದು ಎಂತು? ಯುವಕರ ಕೈಯಲ್ಲಿನ ಗನ್ ಕಸಿದು ಅವರಿಗೆ ಕೆಲಸ ಕೊಡುವವರು ಯಾರು? ಉತ್ತರ ಗೊತ್ತಿಲ್ಲದೆ 'ದೇವರು' ಸಹ ಇಲ್ಲಿ ಅಳುತ್ತಿದ್ದಾನೆ!

ಚಾವಣಿಯಿಲ್ಲದ ಗೋಡೆಯೊಂದಕ್ಕೆ ಆತುಕೊಂಡು ಕುಳಿತ ಆ ಮಕ್ಕಳು ಪಾಠವನ್ನೇನೋ ಕಲಿಯಬೇಕಿದೆ. ಆದರೆ, ಅಲ್ಲಿ ಕಲಿಸಲು ಮೇಷ್ಟ್ರೇ ಇಲ್ಲ. ಅದೇ ಮಕ್ಕಳ ಗುಂಪಿನಲ್ಲಿದ್ದ ಹುಡುಗನೊಬ್ಬ ಕೈಯಲ್ಲಿ ಪುಸ್ತಕ ಹಿಡಿದು ನಿಂತ ಚಿತ್ರವೊಂದು ಮನ ಕಲಕುವಂತೆ ಮಾಡುತ್ತದೆ. ಅದಕ್ಕಿಂತ ಹೆಚ್ಚಾಗಿ ಕಾಡುವ, ಹೃದಯವನ್ನೇ ಹಿಂಡಿಬಿಡುವ, ಕಣ್ಣೀರಿನ ಧಾರೆ ಹರಿಸುವ ನೋಟವೆಂದರೆ, ರೆಡ್‌ಕ್ರಾಸ್‌ನ ಕಾಬೂಲ್ ಆರೈಕೆ ಕೇಂದ್ರದಲ್ಲಿ ಬಿಡಾರ ಹೂಡಿರುವ ಮಕ್ಕಳು ಅನುಭವಿಸುತ್ತಿರುವ ಕೊನೆಯಿಲ್ಲದ ಸಂಕಟದ್ದು. ದೀಪಾವಳಿಯಲ್ಲಿ ನಾವು ಪಟಾಕಿ ಸಿಡಿಸುವಂತೆ ಎಲ್ಲೆಂದರಲ್ಲಿ ಬಾಂಬ್ ಸ್ಫೋಟಿಸುವ ಈ ಭೂಮಿಯಲ್ಲಿ ಕೈ ಕಳೆದುಕೊಂಡ, ಕಾಲು ಮುರಿದುಕೊಂಡ ಪುಟಾಣಿಗಳು ಬಾಲ್ಯವನ್ನೂ ಕಳೆದುಕೊಂಡು ಹಾಸಿಗೆಯಲ್ಲಿ ಮುದುರಿ ಮಲಗಿದ ದೃಶ್ಯ ದುಃಖವನ್ನು ಉಮ್ಮಳಿಸುವಂತೆ ಮಾಡುತ್ತದೆ. ಈ ನೆಲದ ಸೂರುಗಳಲ್ಲಿ ಸೂರ್ಯನ ಕಿರಣಗಳ ಸುಳಿವಿಲ್ಲದೆ ಹಗಲಿನಲ್ಲೂ ಕತ್ತಲು ಆವರಿಸಿದೆ. ಯಾರಾದರೂ ಒಳನುಗ್ಗಿ ತಪಾಸಣೆ ಮಾಡಿಯಾರು ಎಂಬ ಭಯದಿಂದ ಮನೆಯಲ್ಲಿನ ಮಹಿಳೆಯರೂ ಬುರ್ಖಾ ಧರಿಸಿ ಕುಳಿತಿದ್ದಾರೆ.

ಹೌದು, ಇದು ಅಫ್ಘಾನಿಸ್ತಾನ. ರೆಡ್‌ಕ್ರಾಸ್‌ನ ಆರೈಕೆ ಕೇಂದ್ರಗಳಲ್ಲಿ ಕೈ–ಕಾಲು ಮುರಿದುಕೊಂಡು ಬಿದ್ದ ಮಕ್ಕಳಂತೆಯೇ ಮಾನವೀಯ ಅಂತಃಕರಣವೂ ಊನಗೊಂಡು ಅಂಗಾತ ಮಲಗಲು ಕಾರಣವಾದ ಭೂಮಿ.

ಅಮೆರಿಕನ್ನರೇನೋ ಇಲ್ಲಿನ ತಮ್ಮ ಸುದೀರ್ಘ ಸಾಗರೋತ್ತರ ಸಮರವನ್ನು ಈಗ ಕೊನೆಗೊಳಿಸಿದ್ದಾರೆ. ಬ್ರೌನ್ ವಿಶ್ವವಿದ್ಯಾಲಯದ ಲೆಕ್ಕಾಚಾರದ ಪ್ರಕಾರ, 2001ರಿಂದ ಇಲ್ಲಿಯವರೆಗೆ ಅಮೆರಿಕ, ಅಫ್ಘಾನಿಸ್ತಾನದಲ್ಲಿ ಸಾರಿದ ಯುದ್ಧಕ್ಕಾಗಿ ಮಾಡಿದ ವೆಚ್ಚ 2.26 ಸಾವಿರ ಕೋಟಿ ಅಮೆರಿಕನ್ ಡಾಲರ್ (ಸುಮಾರು 170 ಲಕ್ಷ ಕೋಟಿ ರೂಪಾಯಿ). ಇನ್ನು ಅಫ್ಘಾನಿಸ್ತಾನದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ತನ್ನ ಸೇನೆಗಾಗಿ ಅಮೆರಿಕದ ರಕ್ಷಣಾ ಇಲಾಖೆ ವ್ಯಯಿಸಿದ್ದು ಬರೋಬ್ಬರಿ ಸಾವಿರ ಕೋಟಿ ಅಮೆರಿಕನ್ ಡಾಲರ್ (71.45 ಲಕ್ಷ ಕೋಟಿ ರೂಪಾಯಿ). ಈ ಅವಧಿಯಲ್ಲಿ ಆಫ್ಗನ್ ನದಿಗಳಲ್ಲಿ ಎಷ್ಟು ನೀರು ಹರಿದಿದೆಯೋ ಗೊತ್ತಿಲ್ಲ. ಆದರೆ, ಅಮೆರಿಕದ ಹಣವಂತೂ ನೀರಿನಂತೆ ಹರಿದಿದೆ.

ಸೇನೆಯ ಸಾಹಸದಲ್ಲಿ, ಮದ್ದು ಗುಂಡಿನ ಸದ್ದಿನಲ್ಲಿ ಎರಡು ದಶಕಗಳೇ ಉರುಳಿ ಹೋಗಿವೆ, ಅಮೆರಿಕ ತನ್ನ 4,500 ಸೈನಿಕರನ್ನೂ ಕಳೆದುಕೊಂಡಿದೆ. 'ಸಾಮ್ರಾಟರ ಸ್ಮಶಾನ ಭೂಮಿ' ಎಂಬ ಚಾರಿತ್ರಿಕ ಹಣೆಪಟ್ಟಿಯನ್ನು ಅಂಟಿಸಿಕೊಂಡ ಈ ನೆಲದಲ್ಲಿ ಬೂದಿಯಿಂದ ಎದ್ದುಬಂದ ತಾಲಿಬಾನ್ ಮತ್ತೆ ಪಟ್ಟಾಭಿಷೇಕ ಮಾಡಿಕೊಂಡಿದೆ. ಅಫ್ಘಾನಿಸ್ತಾನದಲ್ಲಿ ನಡೆಸಿದ ಯುದ್ಧದ ಉಸ್ತುವಾರಿ ನೋಡಿಕೊಂಡ ಅಮೆರಿಕದ ಐದನೇ ಅಧ್ಯಕ್ಷರು ಈ ಘಟನೆಗೆ ಈಗ ಮೌನ ಪ್ರೇಕ್ಷಕರಾಗಿ ಕೈಕಟ್ಟಿ ಕುಳಿತಿದ್ದಾರೆ.

ಆಫ್ಗನ್ ರಾಷ್ಟ್ರೀಯ ಸೇನೆಯು ಮೂರು ಲಕ್ಷ ಸೈನಿಕರ ಬಲಾಢ್ಯ ದಂಡು. ಜಗತ್ತಿನ ಅತ್ಯಂತ ಶಕ್ತಿಶಾಲಿ ಸೈನ್ಯದಿಂದ ತರಬೇತಿಯನ್ನೂ ಪಡೆದಿದ್ದ ಪಡೆ ಅದು. ಜತೆಗಿದ್ದ ವಿದೇಶಿ ದಂಡುಗಳು ಅಫ್ಘಾನಿಸ್ತಾನದಿಂದ ಕಾಲು ಕೀಳುತ್ತಿದ್ದಂತೆಯೇ 80 ಸಾವಿರ ಉಗ್ರರ ಬಲದ ತಾಲಿಬಾನ್‌ನ ಮುಂದೆ ರಾಷ್ಟ್ರೀಯ ಸೇನೆ ಮಂಡಿಯೂರಿದೆ. ಒಂದಿನಿತೂ ಪ್ರತಿರೋಧ ತೋರದೆ ಶರಣಾಗಿದೆ. ಅಧ್ಯಕ್ಷರಾಗಿದ್ದ ಅಶ್ರಫ್ ಘನಿ ಅವರಂತೂ ದೇಶದಿಂದಲೇ ಪಲಾಯನ ಮಾಡಿದ್ದಾರೆ. ಅಧ್ಯಕ್ಷರಂತೆಯೇ ದೇಶದಿಂದ ಹೊರಹೋಗಲು ಸಾವಿರಾರು ಜನ ಮಾಡಿದ ದುಸ್ಸಾಹಸ ಹೇಗಿತ್ತೆಂದರೆ, ಕಾಬೂಲ್ ವಿಮಾನ ನಿಲ್ದಾಣದ ಬಹು ಎತ್ತರದ ಆವರಣ ಗೋಡೆಯನ್ನೂ ಅವರು ಏರಿಬಿಟ್ಟಿದ್ದರು. ಹಾರಲು ಸಜ್ಜಾದ ಅಮೆರಿಕದ ವಿಮಾನದ ರೆಕ್ಕೆಗಳನ್ನೂ ಬಿಡದಂತೆ ಏರಿ ಜಾರಿಬಿದ್ದು ಪ್ರಾಣ ತೆತ್ತರು.

ಜಗತ್ತಿನ ಕಡು ಬಡತನದ ರಾಷ್ಟ್ರಗಳಲ್ಲಿ ಒಂದೆನಿಸಿದೆ ಅಫ್ಘಾನಿಸ್ತಾನ. ಈ ದೇಶದ ಶೇ 90ರಷ್ಟು ಜನರ ದೈನಂದಿನ ಆದಾಯ 150 ರೂಪಾಯಿಗಿಂತ ಕಡಿಮೆ. ಅದರ ಮೇಲೆ ಸದಾ ಯುದ್ಧದ ಕರಿನೆರಳು ಬೇರೆ. ಉಗ್ರರ ಬಂಡಾಯದ ಅಗ್ನಿಕುಂಡದಲ್ಲಿ ಅವರ ಬದುಕು ಬೆಂದುಹೋಗಿದೆ. ಈ ಮಧ್ಯೆ, ಅಲ್ಲಿನ ರಾಷ್ಟ್ರೀಯ ರಕ್ಷಣಾ ವ್ಯವಸ್ಥೆಯ ಎಲ್ಲ ಪದರುಗಳು ಇಸ್ಪೀಟ್ ಎಲೆಗಳಂತೆ ಉದುರಿಹೋಗಿವೆ. ರಾಜಧಾನಿ ಕಾಬೂಲ್‌ಅನ್ನು ಒಂದೇ ಒಂದು ಗುಂಡು ಹಾರಿಸದೆ ತಾಲಿಬಾನ್ ತನ್ನ ವಶಕ್ಕೆ ತೆಗೆದುಕೊಂಡಿದೆ. ತಾಲಿಬಾನ್ ಕೈ ಮೇಲಾಗುತ್ತಿದ್ದಂತೆಯೇ ಕೆಲಸ ಮಾಡುವ, ಮುಕ್ತವಾಗಿ ಓಡಾಡುವ ಸ್ವಾತಂತ್ರ್ಯವನ್ನೇ ಕಳೆದುಕೊಳ್ಳುವ ಭೀತಿ ದೇಶದ ಮಹಿಳೆಯರನ್ನು ಆವರಿಸಿದೆ.

ಏನಿದು ತಾಲಿಬಾನ್?

ತಾಲಿಬಾನ್ ಎಂದರೆ ಪ್ಯಾಸ್ತೊ ಭಾಷೆಯಲ್ಲಿ 'ವಿದ್ಯಾರ್ಥಿಗಳು' ಎಂದರ್ಥ. ಅಫ್ಘಾನಿಸ್ತಾನದ ದಕ್ಷಿಣ ಭಾಗದ ಪ್ರಮುಖ ನಗರ ಕಂದಹಾರದಲ್ಲಿ ಈ ಗುಂಪು ಮೊದಲ ಬಾರಿಗೆ ಬೆಳಕಿಗೆ ಬಂದಿದ್ದು 1994ರಲ್ಲಿ. 1980ರ ದಶಕದಲ್ಲಿ ಸೋವಿಯತ್ ಒಕ್ಕೂಟದ ಸೈನ್ಯವನ್ನು ಎದುರು ಹಾಕಿಕೊಂಡಿದ್ದ ಮುಜಾಹಿದೀನ್ ಸಂಘಟನೆಯ ಸದಸ್ಯರೇ ಮುಂದೆ ತಾಲಿಬಾನ್‌ನೊಂದಿಗೆ ಗುರುತಿಸಿಕೊಂಡರು. ಪಾಕಿಸ್ತಾನದಿಂದ ಈ ಸಂಘಟನೆಗೆ ಮದ್ದು ಗುಂಡುಗಳು ಸರಬರಾಜು ಆಗಿದ್ದು, ಅಗತ್ಯ ನೆರವೂ ಸಿಕ್ಕಿದ್ದು ಈಗ ಗುಟ್ಟಿನ ಸಂಗತಿಯಾಗಿ ಏನೂ ಉಳಿದಿಲ್ಲ.

ಅಧಿಕಾರಕ್ಕೆ ಬಂದರೆ ಇಸ್ಲಾಮಿಕ್ ಕಾನೂನು ಜಾರಿಗೆ ತರುವುದಾಗಿ ಘೋಷಿಸಿದ್ದ ತಾಲಿಬಾನ್ ಸಂಘಟನೆ 1996ರಲ್ಲಿ ತಾನೇ ಸರ್ಕಾರವನ್ನು ರಚಿಸಿತ್ತು. ಮಹಿಳೆಯರು ಅಡಿಯಿಂದ ಮುಡಿಯವರೆಗೆ ಬಟ್ಟೆ ಧರಿಸುವುದನ್ನು ಕಡ್ಡಾಯಗೊಳಿಸಿದ್ದ ತಾಲಿಬಾನ್ ಸರ್ಕಾರ, ಯಾವುದೇ ಮಹಿಳೆ ಒಬ್ಬಂಟಿಯಾಗಿ ಪ್ರಯಾಣ ಮಾಡದಂತೆಯೂ ನಿರ್ಬಂಧ ವಿಧಿಸಿತ್ತು. ಟಿ.ವಿ ವೀಕ್ಷಿಸದಂತೆ, ಸಂಗೀತ ಆಲಿಸದಂತೆ ಪ್ರತಿಬಂಧಕಾಜ್ಞೆ ಹೊರಡಿಸಿತ್ತು. ಇಸ್ಲಾಮೇತರ ಎಲ್ಲ ರಜಾ ದಿನಗಳನ್ನು ರದ್ದುಗೊಳಿಸಿತ್ತು.

ತಾಲಿಬಾನ್ ನಿಯಂತ್ರಿತ ಅಫ್ಘಾನಿಸ್ತಾನದಲ್ಲಿ ನೆಲೆ ಪಡೆದಿದ್ದ ಅಲ್ ಕೈದಾ ಮುಖ್ಯಸ್ಥ ಒಸಾಮಾ ಬಿಲ್ ಲಾಡೆನ್ ಇಶಾರೆಯಲ್ಲಿ ಅಮೆರಿಕದ ಮೇಲೆ ನಡೆದ 9/11 ದಾಳಿ ದೇಶದ ಚಿತ್ರಣವನ್ನೇ ಬದಲಾಯಿಸಿಬಿಟ್ಟಿತು. 9/11 ದಾಳಿ ನಡೆದ ಒಂದು ತಿಂಗಳ ಬಳಿಕ ಅಫ್ಘಾನಿಸ್ತಾನಕ್ಕೆ ಬಂದಿಳಿದು ಠಿಕಾಣಿ ಹೂಡಿದ ಅಮೆರಿಕದ ಸೈನ್ಯ, ಅಲ್ ಕೈದಾ ಸಂಘಟನೆಯ 'ಸುರಕ್ಷಿತ ಸ್ವರ್ಗ'ವನ್ನು ಧ್ವಂಸ ಮಾಡುವ ಕಾರ್ಯಾಚರಣೆಯನ್ನೂ ಆರಂಭಿಸಿತು. ತಾಲಿಬಾನ್ ಉಗ್ರರನ್ನು ಅಮೆರಿಕ ಹಾಗೂ ಅದರ ಸಹವರ್ತಿ ರಾಷ್ಟ್ರಗಳ ಸೇನೆ ಸಂಪೂರ್ಣವಾಗಿ ಹತ್ತಿಕ್ಕಿತು. ತಾಲಿಬಾನ್ ಅಧಿಕಾರವನ್ನೂ ಕಳೆದುಕೊಂಡಿತು. ಅಧಿಕಾರ ಕಳೆದುಕೊಂಡ ಮೇಲೂ ಆ ಸಂಘಟನೆಯ ಉಗ್ರರು ದಂಗೆ ಎದ್ದು, ಅಮೆರಿಕದ ಸೈನ್ಯದ ಮೇಲೆ ಮುಗಿಬಿದ್ದು ಸೆಣಸುತ್ತಲೇ ಇದ್ದರು. ಆಫ್ಗನ್ ಸರ್ಕಾರದ ಬೆಂಬಲಕ್ಕೆ ನಿಂತಿದ್ದ ಅಮೆರಿಕ, ತಾಲಿಬಾನ್ ಬಲವನ್ನು ಹಿಮ್ಮೆಟ್ಟಿಸುತ್ತಲೇ ಇತ್ತು. ಕೆಲವೊಮ್ಮೆ ಕೈ ಮೇಲಾದರೂ ಹಲವು ಸಲ ಪೆಟ್ಟು ತಿಂದ ತಾಲಿಬಾನ್ ಮಾತ್ರ ಕಳೆದ ಎರಡು ದಶಕಗಳಲ್ಲಿ ಹೋರಾಟವನ್ನು ಬಿಟ್ಟುಕೊಟ್ಟಿರಲಿಲ್ಲ.

ಡ್ರಗ್ಸ್ ಕಾಳದಂಧೆಯಲ್ಲಿ ತೊಡಗಿಸಿಕೊಂಡ ತಾಲಿಬಾನ್, ಅದರಿಂದಲೇ ದೊಡ್ಡ ವರಮಾನವನ್ನು ಗಳಿಸುತ್ತಿದೆ. ಅದೇ ಈ ಸಂಘಟನೆಯ ಹಣಕಾಸಿನ ಮುಖ್ಯ ಮೂಲವಾಗಿದೆ ಎಂಬುದು ಆಫ್ಗನ್ ವ್ಯವಹಾರಗಳ ತಜ್ಞರು ನೀಡುವ ಮಾಹಿತಿ. ಕಳೆದ ವರ್ಷ ನ್ಯಾಟೊ, ತಾಲಿಬಾನ್ ಕುರಿತು ಗುಪ್ತ ವರದಿಯೊಂದನ್ನು ಸಿದ್ಧಪಡಿಸಿತ್ತು. ಆ ವರದಿಯಲ್ಲಿನ ವಿವರಗಳು ರೇಡಿಯೊ ಫ್ರೀ ಯುರೋಪ್, ರೇಡಿಯೊ ಲಿಬರ್ಟಿಗೆ ಸೋರಿಕೆಯಾಗಿದ್ದವು. ಗಣಿ ಮತ್ತು ರಿಯಲ್ ಎಸ್ಟೇಟ್ ಉದ್ಯಮಿಗಳಿಂದಲೂ ತಾಲಿಬಾನ್‌ಗೆ ಅಪಾರ ಪ್ರಮಾಣದ ಹಣ ಹರಿದು ಬರುತ್ತಿರುವ ಸಂಗತಿ ಆಗ ಬಯಲಾಗಿತ್ತು.

ಈ ಮಧ್ಯೆ, ತಾಲಿಬಾನ್ ವಿರುದ್ಧದ ಸುದೀರ್ಘ ಸೆಣಸಾಟದಿಂದ ಹೈರಾಣಾದ ಅಮೆರಿಕ ತನ್ನ ಲಕ್ಷ್ಯವನ್ನು ಇರಾಕ್ ಕಡೆಗೆ ಕೇಂದ್ರೀಕರಿಸತೊಡಗಿತು. ಯುದ್ಧದ ದೊಣ್ಣೆನಾಯಕರ ಉದಾಸೀನ ಮನೋಭಾವ, ಪಾಕಿಸ್ತಾನದ ಕುಮ್ಮಕ್ಕು ಹಾಗೂ ಭ್ರಷ್ಟಾಚಾರದಲ್ಲಿ ಮುಳುಗೇಳುತ್ತಿದ್ದ ಆಫ್ಗನ್ ಸರ್ಕಾರದ ಕುರಿತು ಜನರಲ್ಲಿ ಮೂಡಿದ್ದ ಅನಾದರ ಎಲ್ಲವೂ ತಾಲಿಬಾನ್ ಮತ್ತೆ ಸಶಕ್ತವಾಗಿ ಹೊರಹೊಮ್ಮಲು ನೀರೆರೆದವು. ಅಧಿಕಾರ ಪಡೆಯಲೂ ಆಸರೆಯಾದವು.

ಅಫ್ಘಾನಿಸ್ತಾನದಲ್ಲಿ ಯುದ್ಧ ಎಂದಿಗೂ ಕೊನೆಗೊಳ್ಳುವುದಿಲ್ಲ ಎಂದು ಅಮೆರಿಕಕ್ಕೆ ಮನವರಿಕೆ ಆದಬಳಿಕ ಅದು ಅಲ್ಲಿಂದ ಹೊರಹೋಗಲು ಯೋಜನೆಯೊಂದನ್ನು ರೂಪಿಸಿತು. 2021ರ ಸೆಪ್ಟೆಂಬರ್ 11ರೊಳಗೆ ತನ್ನೆಲ್ಲ ಸೈನ್ಯವನ್ನು ವಾಪಸ್ ಕರೆಸಿಕೊಳ್ಳುವುದಾಗಿ 2020ರ ಫೆಬ್ರುವರಿ 29ರಂದು ದೋಹಾದಲ್ಲಿ ಘೋಷಿಸಿತು. ಅಫ್ಘಾನಿಸ್ತಾನದ ಯುದ್ಧ ತಂತ್ರಗಾರಿಕೆಯಲ್ಲಿ ಅಮೆರಿಕ ಹೆಚ್ಚಾಗಿ ಅವಲಂಬಿಸಿದ್ದು ಪಾಕಿಸ್ತಾನವನ್ನು. ಸೈನಿಕರಿಗೆ ಆಹಾರ ಸಾಮಗ್ರಿ ಪೂರೈಕೆ ಸೇರಿದಂತೆ ಬಹುತೇಕ ಅಗತ್ಯಗಳಿಗೆ ಅಮೆರಿಕಕ್ಕೆ ಪಾಕಿಸ್ತಾನದ ನೆರವು ಅನಿವಾರ್ಯವಾಗಿತ್ತು. ಇತ್ತ ಅಮೆರಿಕಕ್ಕೆ ಬೆಂಬಲ ನೀಡುತ್ತಲೇ ಅತ್ತ ತಾಲಿಬಾನ್ ಜತೆಗೂ ಪಾಕಿಸ್ತಾನ ಕೈಜೋಡಿಸಿತು. ಅಫ್ಘಾನಿಸ್ತಾನ, ಹಲವು ದೇಶಗಳ ಯುದ್ಧ ತಂತ್ರಗಳ ಆಟದ ಅಂಗಳವಾಯಿತು.

ಆಫ್ಗನ್‌ನ ಜನಸಾಮಾನ್ಯರ ಬದುಕು ಹಸನಾಗುವಂತೆ ಯಾರೊಬ್ಬರೂ ನೆರವು ನೀಡಲಿಲ್ಲ. ಯುದ್ಧದ ಉನ್ಮಾದದಲ್ಲಿ ಇದ್ದವರಿಗೆ ಅದು ಮುಖ್ಯವಾಗಿರಲೂ ಇಲ್ಲ. ಕೃಷಿ ಮತ್ತು ಹೈನುಗಾರಿಕೆ ಈ ದೇಶದ ಜನರ ಪ್ರಮುಖ ಜೀವನಾಧಾರವಾಗಿವೆ. ದೇಶದ ಒಟ್ಟು ಭೂಪ್ರದೇಶದ ಎಂಟನೇ ಒಂದು ಭಾಗ ಮಾತ್ರ ಕೃಷಿಯೋಗ್ಯವಾಗಿದ್ದು, ಅದರ ಅರ್ಧದಷ್ಟು ಭೂಮಿಯಲ್ಲೂ ಕೃಷಿ ಚಟುವಟಿಕೆ ನಡೆಸುವುದು ಅಲ್ಲಿನ ಜನರ ಪಾಲಿಗೆ ಸಾಧ್ಯವಾಗಿಲ್ಲ. ಕಳೆದ ಎರಡು ದಶಕಗಳ 'ಪ್ರಜಾ ಸರ್ಕಾರ'ದ ಅವಧಿಯಲ್ಲೂ ಅವರ ಜೀವನದಲ್ಲಿ ಅಂತಹ ಗಮನಾರ್ಹ ಬದಲಾವಣೆ ಏನೂ ಆಗಿಲ್ಲ.

12ನೇ ಪುಟಕ್ಕೆ...

ನಿಮ್ಮ ಪುಸ್ತಕ, ನೀವೇ ಪ್ರಕಾಶಕ...

ಬರಹಗಾರನಿಗೆ ತನ್ನ ಬರಹವನ್ನು ಯಾರ ಮಧ್ಯಸ್ಥಿಕೆಯ ಅಗತ್ಯವೂ ಇಲ್ಲದೆ ಓದುಗರ ಮುಂದೆ ಇರಿಸುವ ಅವಕಾಶವನ್ನು ಬ್ಲಾಗುಗಳು ದಶಕದ ಹಿಂದೆಯೇ ನೀಡಿವೆ. ಈಗ ಬರಹಗಾರಿಗೆ ಇ–ಪುಸ್ತಕ ಪ್ರಕಟಿಸುವ ಅವಕಾಶ ಕಲ್ಪಿಸಲು ಕೆಲವು ಡಿಜಿಟಲ್ ವೇದಿಕೆಗಳು ಮುಂದಾಗಿವೆ. ಹೊಸ ಬರಹಗಾರ ಹಾಗೂ ಓದುಗನ ನಡುವೆ ಇವು ಸೇತುವೆ ಆಗಬಲ್ಲವೇ?

ವಿಜಯ್ ಜೋಷಿ



ಕುಂಟಾಡಿ ನಿತೇಶ್

ವಸಂತ ಶೆಟ್ಟಿ

ಲೇಖಕ ಗುರುರಾಜ ಕುಲಕರ್ಣಿ ಅವರು ಅಂತರ್ಜಾಲ ಮಾಧ್ಯಮದಲ್ಲಿ, ಕೆಲವು ಪತ್ರಿಕೆಗಳಲ್ಲಿ ಒಂದಿಷ್ಟು ಬರಹಗಳನ್ನು ಪ್ರಕಟಿಸಿದ್ದರು. ಆ ಬರಹಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಬೇಕು ಎಂದಾದರೆ ಸಂಪರ್ಕಿಸಬೇಕಿರುವುದು ಯಾರನ್ನು ಎಂಬುದು ಅವರಿಗೆ ಗೊತ್ತಿರಲಿಲ್ಲ. ಅಷ್ಟೇ ಅಲ್ಲ, ಬಿಡಿ ಬರಹಗಳನ್ನು ಪುಸ್ತಕ ರೂಪದಲ್ಲಿ ತರಲು ಅವರಿಗೆ ಹೇಳಿಕೊಳ್ಳುವ ಉತ್ಸಾಹವೂ ಇರಲಿಲ್ಲ. ಆದರೆ, ಕನ್ನಡದಲ್ಲಿ ಇ–ಪುಸ್ತಕಗಳನ್ನು ಪ್ರಕಟಿಸುತ್ತಿರುವ ಮೈಲ್ಯಾಂಗ್ ಬುಕ್ಸ್ ಸಂಸ್ಥೆಯವರು ಲೇಖಕರಿಗೆ ಪುಸ್ತಕಗಳನ್ನು ತಾವೇ ಪ್ರಕಟಿಸಲು ವೇದಿಕೆ ಕಲ್ಪಿಸುತ್ತಿರುವ ವಿಚಾರ ಆ ಹೊತ್ತಿನಲ್ಲಿ ಕುಲಕರ್ಣಿ ಅವರಿಗೆ ಗೊತ್ತಾಯಿತು.

'ನಾನು ಮೈಲ್ಯಾಂಗ್ ಸಂಸ್ಥೆಯವರ ಜೊತೆ ಮಾತುಕತೆ ನಡೆಸಿದೆ. ಪುಸ್ತಕದ ಪುಟಗಳ ವಿನ್ಯಾಸ ಮಾಡಲು ಅವರು ನನಗೆ ಸಹಾಯ ಮಾಡಿದರು. ಈಗ ನನ್ನ 'ನಾನು, ನನ್ನ ರೂಂಮೇಟುಗಳು - ಬ್ರಹ್ಮಚಾರಿ ಬದುಕಿನ ಕತೆಗಳು' ಇ–ಪುಸ್ತಕವು ಒಂದಿಷ್ಟು ಜನರನ್ನು ತಲುಪಿದೆ. ಇದರಲ್ಲಿ ಹಣಕಾಸಿನ ರಿಸ್ಕ್ ಇಲ್ಲ. ನಮ್ಮಂತಹ ಹೊಸ ಬರಹಗಾರರಿಗೆ ಇದು ಬಹಳ ಒಳ್ಳೆಯ ಅವಕಾಶ ಕಲ್ಪಿಸುತ್ತಿದೆ. ನಾನು ಬರೆದಿರುವ ಇ–ಪುಸ್ತಕಕ್ಕೆ ಬಹಳ ಒಳ್ಳೆಯ ಪ್ರತಿಕ್ರಿಯೆ ದೊರೆತರೆ ಮುಂದೆ ಅದನ್ನು ಬೇಡಿಕೆಗೆ ಅನುಗುಣವಾಗಿ ಮುದ್ರಿತ ರೂಪದಲ್ಲಿಯೂ ತರಬಹುದು' ಎಂದು ತಮ್ಮ ಮೊದಲ ಪುಸ್ತಕವು ಪ್ರಕಟವಾದ ಬಗ್ಗೆ ಹೇಳಿದರು ಕುಲಕರ್ಣಿ.

ಇದು ಕನ್ನಡದ ಡಿಜಿಟಲ್ ಜಗತ್ತಿನಲ್ಲಿ ಈಗ ತೆರೆದುಕೊಳ್ಳುತ್ತಿರುವ, ತಮ್ಮ ಪುಸ್ತಕಗಳನ್ನು ತಾವೇ ಪ್ರಕಟಿಸಿಕೊಳ್ಳುವ ಅವಕಾಶವನ್ನು ಬಳಸಿಕೊಂಡಿರುವ ಒಂದು ಕಥೆ. ಅಂದಹಾಗೆ, ತಮ್ಮ ಪುಸ್ತಕವನ್ನು ತಾವೇ ಪ್ರಕಟಿಸಿಕೊಳ್ಳುವುದು ಹೊಸದೇನೂ ಅಲ್ಲ. ಡಿಜಿಟಲ್ ಜಗತ್ತಿನಲ್ಲಿ ಪುಸ್ತಕಗಳು ಪ್ರವೇಶ ಪಡೆಯುವ ಮೊದಲು, ಮುದ್ರಿತ ಪುಸ್ತಕಗಳು ಮಾತ್ರವೇ ಇದ್ದ ಸಂದರ್ಭದಲ್ಲಿಯೂ ತಮ್ಮ ಪುಸ್ತಕವನ್ನು ತಾವೇ ಪ್ರಕಟಿಸಿಕೊಳ್ಳುವವರು ಇದ್ದರು, ಅಂಥವರು ಈಗಲೂ ಇದ್ದಾರೆ. ಹೊಸಬರೂ ಹಳಬರೂ ಒಂದಿಷ್ಟು ಉತ್ಸಾಹ ತೋರಿ, ತಮ್ಮ ಪುಸ್ತಕವನ್ನು ತಾವೇ ಪ್ರಕಟಿಸಿದ ಉದಾಹರಣೆಗಳು ಇವೆ. ಪುಸ್ತಕ ಪ್ರಕಾಶನಕ್ಕೆ ಕೈಹಾಕಿದ ಕೆಲವರು ಹಣ ಕಳೆದುಕೊಂಡರು, ಇನ್ನು ಕೆಲವರಿಗೆ ಹಾಕಿದ ಹಣ ಒಂದಿಷ್ಟಾದರೂ ಮರಳಿತು.

ಆದರೆ, ಡಿಜಿಟಲ್ ಜಗತ್ತಿನಲ್ಲಿ ತಮ್ಮ ಪುಸ್ತಕವನ್ನು ತಾವೇ ಪ್ರಕಟಿಸುವ ಮಾದರಿಯು ಹಣದ ವಿಚಾರವಾಗಿ ಇರುವ ರಿಸ್ಕ್ ಅನ್ನು ಬಹುಪಾಲು ನಿವಾರಿಸಿದೆ. ನಗಣ್ಯ ಎನ್ನಬಹುದಾದ ಖರ್ಚಿನಲ್ಲಿ ಲೇಖಕರು ತಮ್ಮ ಪುಸ್ತಕಗಳನ್ನು ತಾವೇ ಪ್ರಕಟಿಸಬಹುದು. ಈ ಮಾದರಿಯಲ್ಲಿ ಪುಸ್ತಕ ಪ್ರಕಟಿಸಲು ಅವಕಾಶ ನೀಡುವ ಡಿಜಿಟಲ್ ವೇದಿಕೆಗಳು ಗೂಗಲ್ ಪ್ಲೇಬುಕ್ ಆದಿಯಾಗಿ ಹಲವು ಇವೆ. ಆದರೆ, ಕನ್ನಡದ್ದೇ ಆದ ವೇದಿಕೆಯನ್ನು ಸೃಷ್ಟಿಸುವ ಪ್ರಯತ್ನವನ್ನು ಈಗ 'ಮೈಲ್ಯಾಂಗ್ ಬುಕ್ಸ್', 'ಋತುಮಾನ'ದಂತಹ ಸಂಸ್ಥೆಗಳು ಆರಂಭಿಸಿವೆ.

ಕನ್ನಡದ ಪುಸ್ತಕಗಳನ್ನು ಡಿಜಿಟಲ್ ಜಗತ್ತಿಗೆ ಒಯ್ಯುವ ಪ್ರಯತ್ನಗಳು ಈಗಾಗಲೇ ಶುರುವಾಗಿವೆ. ಹಲವು ಪ್ರಕಾಶನ ಸಂಸ್ಥೆಗಳು ಈ ಕೆಲಸದಲ್ಲಿ ತೊಡಗಿವೆ. ಹಳೆಯ ಪುಸ್ತಕಗಳು, ಹೊಸ ಹೊತ್ತಗೆಗಳು ಇ–ಪುಸ್ತಕಗಳ ರೂಪ ಪಡೆದು ಬೇರೆ ಬೇರೆ ಡಿಜಿಟಲ್ ವೇದಿಕೆಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಕನ್ನಡ ಪುಸ್ತಕಗಳ ಇ–ಆವೃತ್ತಿಯು ಮುಂದೆ ಪ್ರಕಾಶನ ಸಂಸ್ಥೆಗಳಿಗೆ ಹಾಗೂ ಬರಹಗಾರರಿಗೆ ಹೊಸ ಆದಾಯ ಮೂಲವೊಂದನ್ನು ಸೃಷ್ಟಿಸಿಕೊಡುತ್ತದೆ ಎಂಬ ನಂಬಿಕೆ ಇದೆ. ಈಗ ಕನ್ನಡದ ಹೊಸ ಬರಹಗಾರರಿಗೆ ಡಿಜಿಟಲ್ ಜಗತ್ತಿನಲ್ಲಿ ತಮ್ಮ ಪುಸ್ತಕಗಳನ್ನು ಪ್ರಕಟಿಸಿ, ಓದುಗರ ಮುಂದೆ ಇರಿಸಲು ವೇದಿಕೆ ಕಲ್ಪಿಸಿಕೊಟ್ಟರೆ ಬರಹಗಾರರ ಪಡೆಯೊಂದು ಬೆಳೆದೀತು ಎಂಬ ನಿರೀಕ್ಷೆ ಕೆಲವು ಪ್ರಕಾಶಕರಲ್ಲಿ ಇದೆ.

'ನಾವು ಮೈಲ್ಯಾಂಗ್ ಸಂಸ್ಥೆಯನ್ನು ಆರಂಭಿಸಿದ ನಂತರದಲ್ಲಿ ನಮಗೆ ನಿರ್ದಿಷ್ಟವಾದ ಒಂದು ಪ್ರಶ್ನೆ ನೂರಾರು ಸಂಖ್ಯೆಯಲ್ಲಿ ಬರಲಾರಂಭಿಸಿತು. ನಾವು ಸಣ್ಣ ಊರುಗಳಲ್ಲಿ ಇದ್ದೇವೆ, ನಮ್ಮ ಪುಸ್ತಕ ಪ್ರಕಟಿಸುವವರು ಇಲ್ಲಿ ಯಾರೂ ಇಲ್ಲ, ನಾವೇ ಪ್ರಕಟಿಸಿದರೆ ಅದನ್ನು ಮಾರಾಟ ಮಾಡುವುದು ಹೇಗೆ ಎಂಬುದು ಗೊತ್ತಾಗುವುದಿಲ್ಲ, ಪುಸ್ತಕದ ಅಂಗಡಿಗಳಲ್ಲಿ ಹೊಸಬರ ಪುಸ್ತಕಗಳನ್ನು ಎದ್ದುಕಾಣುವಂತೆ ಇರಿಸುವುದಿಲ್ಲ, ನಾವು ಬರವಣಿಗೆಯಲ್ಲಿ ತೊಡಗಬೇಕು ಎಂಬ ಬಯಕೆ ಇದ್ದರೂ ಅದಕ್ಕೆ ಪೂರಕ ವಾತಾವರಣ ಇಲ್ಲ, ಹೀಗಿರುವಾಗ ನಾವೇನು ಮಾಡಬೇಕು ಎಂಬುದು ಆ ಪ್ರಶ್ನೆಗಳಲ್ಲಿ ಇರುತ್ತಿದ್ದ ಸಾಮಾನ್ಯ ಎಳೆ' ಎಂದು ಮೈಲ್ಯಾಂಗ್ ಸಂಸ್ಥೆಯ ಸಹಸಂಸ್ಥಾಪಕ ವಸಂತ ಶೆಟ್ಟಿ ನೆನಪಿಸಿಕೊಂಡರು. ಅವರು ತಮ್ಮ ಸಂಸ್ಥೆಯ ಮೂಲಕ, ಬರಹಗಾರರಿಗೆ ತಾವೇ ತಮ್ಮ ಪುಸ್ತಕ ಪ್ರಕಟಿಸಿಕೊಳ್ಳುವ ಅವಕಾಶ ಕಲ್ಪಿಸಿದ್ದರ ಹಿಂದೆ ಕೆಲಸ ಮಾಡಿದ್ದು ಈ ಬಗೆಯ ಪ್ರಶ್ನೆಗಳು.

12ನೇ ಪುಟಕ್ಕೆ...

ಜಾಹೀರಾತು

ನೋವಿಗೆ ಇದೆ ಮದ್ದು

ಡಾ|| ಶ್ರೀಕಾಂತ್ ಮೋರ್ಲಾವರ್
ಸಿಎಂಡಿ, ಹೋಮಿಯೋಕೇರ್ ಇಂಟರ್‌ನ್ಯಾಷನಲ್

ಅಸಮರ್ಪಕ ಜೀವನಶೈಲಿಯಿಂದ ಕಾಡುವ ಸಮಸ್ಯೆಗಳಲ್ಲಿ ಬೆನ್ನುನೋವು ಸಹ ಒಂದು. ಇದರಿಂದಾಗಿ ಶೇ.80 ರಷ್ಟು ಜನರು ಬೆನ್ನು ನೋವಿನಿಂದ ಬಳಲುತ್ತಿದ್ದಾರೆ . ಸಾಧಾರಣವಾಗಿ 20 ರಿಂದ 40 ವರ್ಷದವರಲ್ಲಿ ಈ ನೋವು ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಬೆನ್ನು ನೋವಿನ ಲಕ್ಷಣಗಳಿಗೆ ಅನುಸಾರವಾಗಿ ಅವುಗಳಲ್ಲಿ ಅನ್ನ್ಯುಲರ್ ಟಿಯರ್ , ಹರ್ನಿಯೇಟೆಡ್ ಡಿಸ್ಕ್, ಆಂಕೈಲೋಸಿಂಗ್ ಸ್ಪಾಂಡಿಲೈಟಿಸ್, ಸ್ಪೈನಲ್ ಸ್ಟೆನೋಸಿಸ್,ಸ್ಪಾಂಡಿಲೈಟಿಸ್ ಎಂಬ ವಿಧಗಳನ್ನು ಗುರುತಿಸಲಾಗಿದೆ.

ಲಕ್ಷಣಗಳು:

- ಸಾಧಾರಣದಿಂದ ತೀವ್ರವಾದ ಸೊಂಟನೋವು,ಸೊಂಟ ಹಿಡಿದುಕೊಳ್ಳುವುದು.
- ಬೆನ್ನು ಮೂಳೆಗಳ ಜೊತೆಗೆ ನರಗಳು ಕೂಡ ವ್ಯಾಧಿಗೆ ಗುರಿಯಾಗುವುದು, ನೋವು ಸೊಂಟದಿಂದ ಪ್ರಾರಂಭವಾಗಿ ಪೃಷ್ಠದೊಳಗೆ ಅಲ್ಲಿಂದ ತೊಡೆಗೆ ಕಾಲುಗಳಿಗೆ ಪಾದಗಳವರೆಗೆ ವ್ಯಾಪಿಸುತ್ತದೆ.
- ಕಾಲುಗಳಲ್ಲಿ ಸೆಳೆತ, ಮರಗಟ್ಟುವಿಕೆ ಪಾದಗಳಲ್ಲಿ ಉರಿ ಉಂಟಾಗುವುದು.
- ಸೊಂಟನೋವು ದೀರ್ಘಕಾಲದವರೆಗೆ ಇದ್ದು ಜ್ವರ ಹಸಿವು ಕಡಿಮೆಯಾಗುವುದು ಇಂತಹ ಲಕ್ಷಣಗಳು ಕಾಣಿಸಿಕೊಂಡಾಗ ನಿರ್ಲಕ್ಷ್ಯ ಮಾಡಬಾರದು. ಇದು ಕ್ಷಯ,ಕ್ಯಾನ್ಸರ್ ಲಕ್ಷಣಗಳಾಗಿಯೂ ಇರಬಹುದು.

ಹೋಮಿಯೋಕೇರ್ ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ರೋಗ ಪತ್ತೆ ಹಚ್ಚುವ ಪರೀಕ್ಷೆಗಳು:–

ಸಿಬಿಸಿ, ಆರ್‌ಎ ಫ್ಯಾಕ್ಟರ್, ಎಕ್ಸರೇ, ಸಿಟಿ ಸ್ಕ್ಯಾನ್ ಎಮ್.ಆರ್.ಐ ಇತ್ಯಾದಿ.

ಪಾಲಿಸಬೇಕಾದ ಅಂಶಗಳು:–

ಸಾಮಾನ್ಯವಾಗಿ ನೋವು ಬಂದಾಗ ಹಿತವೆನಿಸಿದ ಬಂಗಿಯಲ್ಲಿ ನಿಲ್ಲುವುದು,ಕೂರುವುದು ಇಲ್ಲವೇ ಮಲಗುವುದು, ಸರಿಯಾಗಿ ವಿಶ್ರಾಂತಿ ತೆಗೆದುಕೊಳ್ಳುವುದು. ದಿನ ನಿತ್ಯ ವ್ಯಾಯಾಮ ಮಾಡುವುದು, ಒತ್ತಡದಿಂದ ದೂರವಿರುವುದು, ಧೂಮಪಾನ, ಮದ್ಯಪಾನದಿಂದ ದೂರವಿರುವುದು, ಪೋಷಕಾಂಶಯುಕ್ತ ಆಹಾರ ಸೇವನೆ, ಬೆಲ್ಟ್ ಗಳನ್ನ್ನು ಧರಿಸುವುದು, ದೂರದ ಪ್ರಯಾಣವನ್ನು ಮಾಡದೆ ಇರುವುದು,ಕುಳಿತುಕೊಳ್ಳುವ ಬಂಗಿಯಲ್ಲಿನ ಬದಲಾವಣೆ ಇತ್ಯಾದಿ.

ಹೋಮಿಯೋಕೇರ್ ಚಿಕಿತ್ಸೆ:

ಹೋಮಿಯೋಕೇರ್ ಇಂಟರ್ ನ್ಯಾಷನಲ್ ಕ್ಲಿನಿಕ್ನಲ್ಲಿ ಜೆನೆಟಿಕ್ ಕಾನ್ಸ್ಟಿಟ್ಯೂಷನಲ್ ವೈದ್ಯಕೀಯ ಚಿಕಿತ್ಸಾ ವಿಧಾನದಿಂದ ಬೆನ್ನು ನೋವು, ಸಯಾಟಿಕಾ, ಕಾಲು ಮರಗಟ್ಟುವಿಕೆ,ಪಾದಗಳ ಉರಿತ ಮೊದಲಾದ ಸಮಸ್ಯೆಗಳ ಮೂಲ ಕಾರಣವನ್ನು ಗುರುತಿಸಿ ಚಿಕಿತ್ಸೆ ಮಾಡುವುದರಿಂದ ಯಾವುದೇ ಶಸ್ತ್ರಚಿಕಿತ್ಸೆ ಇಲ್ಲದೆ ಬೆನ್ನೆಲುಬನ್ನು ದೃಢಪಡಿಸಿ ಮತ್ತೆ ತಿರುಗಿ ಬೆನ್ನು ನೋವಿನ ಸಮಸ್ಯೆಗಳು ಬಾರದಂತೆ ಗುಣಪಡಿಸುವ ಅವಕಾಶವಿದೆ ಎಂದು ಹೋಮಿಯೋಕೇರ್ ಸಂಸ್ಥೆ ಹೇಳಿದೆ.

ಇದು ಅಡ್ಡಪರಿಣಾಮವಿಲ್ಲದ ಚಿಕಿತ್ಸೆಯಾಗಿದ್ದು ವ್ಯಕ್ತಿಯ ಶಾರೀರಿಕ ಹಾಗೂ ಮಾನಸಿಕ ಆರೋಗ್ಯವನ್ನು ವೃದ್ಧಿಪಡಿಸುವಲ್ಲಿ ಸಹಕಾರಿ ಎಂದಿದ್ದಾರೆ.

ವಿವರಗಳಿಗೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್
ಉಚಿತ ಸಮಾಲೋಚನೆಗಾಗಿ 9550001133
Toll Free Num: 18001081212

ಶಾಖೆಗಳು: ಕರ್ನಾಟಕ: ಬೆಂಗಳೂರು (ಜಯನಗರ, ಮಲ್ಲೇಶ್ವರಂ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಗುಲ್ಬರ್ಗ, ಶಿವಮೊಗ್ಗ, ತುಮಕೂರು, ಹಾಸನ.
ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ

ನಾರಾಯಣ ಗುರುಗಳು ತುಳಿದ ವಿಶಿಷ್ಟ ಹಾದಿ...

ಸಮಾಜ ಸುಧಾರಣೆಯ ವಿಷಯ ಪ್ರಸ್ತಾಪವಾದಾಗಲೆಲ್ಲ ಮೊದಲು ನೆನಪಾಗುವುದು ನಾರಾಯಣ ಗುರುಗಳ ಹೆಸರು. ಅವರ ಜನ್ಮದಿನದ ನೆಪದಲ್ಲಿ ಆ ಮೇರು ಸಮಾಜ ಸುಧಾರಕನ ಸಾಧನೆಯ ಒಂದು ಮೆಲುಕು...

ರಹಮತ್ ತರೀಕೆರೆ

ಸ್ಮರಣೆ



ನಾರಾಯಣ ಗುರು
ಕಲೆ: ಗುರು ನಾವಳ್ಳಿ

ಗುರುಪಂಥಗಳ ಮೇಲೆ ಸಂಶೋಧನೆ ಮಾಡುತ್ತಿರುವಾಗ ಈ ಲೋಕಕ್ಕೆ ಸೇರಿದ ಅನೇಕರ ಸಂಗ ನನಗೆ ಲಭಿಸಿತು. ಅವರಲ್ಲಿ ನಾರಾಯಣ ಗುರುಗಳ ಶಿಷ್ಯರಲ್ಲೊಬ್ಬರಾದ ನಟರಾಜ ಗುರುಗಳ ಶಿಷ್ಯರೂ ಒಬ್ಬರು. ಇವರ ಹೆಸರು ವಿನಯ ಚೈತನ್ಯ. ಇವರು ಗುರುಗಳು ಮಲೆಯಾಳ, ತಮಿಳು, ಸಂಸ್ಕೃತದಲ್ಲಿ ರಚಿಸಿರುವ ಪದ್ಯಸಾಹಿತ್ಯವನ್ನು ಕನ್ನಡಕ್ಕೆ ತಂದವರು. ಸಾಹಿತ್ಯ ವಿದ್ಯಾರ್ಥಿಯಾದ ನನಗೆ ಗುರುಗಳ ಕವಿತ್ವ ಮತ್ತು ಅವರು ಪ್ರಯೋಗಿಸಿರುವ ಛಂದಸ್ಸುಗಳನ್ನು ಕಂಡು ಅಚ್ಚರಿಯಾಯಿತು. ಸಾಮಾನ್ಯ ಜನರಿಗಾಗಿ ಬರೆದ ಭಕ್ತಿಗೀತೆಗಳು, ಯೋಗಿಗಳಿಗೆ ಬೇಕಾದ ತತ್ವ ಜಿಜ್ಞಾಸೆಯೂ ಇರುವ ಈ ಕೃತಿಗಳು, ನಮ್ಮ ವಚನಗಳಿಗೂ ತತ್ವಪದಗಳಿಗೂ ಕುವೆಂಪು ಮತ್ತು ಟ್ಯಾಗೋರರ ಅಧ್ಯಾತ್ಮಗೀತೆಗಳಿಗೂ ಸಮೀಪವಾಗಿವೆ.

ಕೆಳಜಾತಿಗಳ ವಿಮೋಚನೆಗಾಗಿ ಜೀವನವಿಡೀ ಸೆಣಸಾಡಿದ ನಾರಾಯಣ ಗುರು, ಉಪನಿಷತ್ತುಗಳಿಂದಲೂ ಅದ್ವೈತದರ್ಶನದಿಂದಲೂ ಪ್ರೇರಣೆ ಪಡೆದರು ಮತ್ತು ಸಂಸ್ಕೃತದಲ್ಲಿ ಕೃತಿ ರಚನೆ ಮಾಡಿದವರು. ಇದಕ್ಕೆ ಎರಡು ಕಾರಣಗಳಿವೆ. ಒಂದು: ಅವರಿಗೆ ಬಾಲ್ಯದಲ್ಲೇ ಸಿಕ್ಕ ಸಂಸ್ಕೃತ ಶಿಕ್ಷಣ. ಎರಡು: 19ನೇ ಶತಮಾನದ ಕೊನೆಯಲ್ಲಿ ಆಧ್ಯಾತ್ಮಿಕ ಹಿನ್ನೆಲೆಯಿಂದ ರೂಪುಗೊಂಡ ಸಮಾಜಸುಧಾರಕ ಚಳವಳಿಗಳ ಚಾರಿತ್ರಿಕ ವೈಶಿಷ್ಟ್ಯ. ಈ ಚಳವಳಿಗಳಲ್ಲಿ ಗುರುಗಳ ಜತೆ ವಿವೇಕಾನಂದರು, ಸಿದ್ಧಾರೂಢರು ಸೇರುತ್ತಾರೆ. ಗುರುಗಳ ಶಿಷ್ಯರಾದ ಮಹಾಕವಿ ಕುಮಾರನ್ ಆಶಾನರೂ, ಕನ್ನಡದ ಕುವೆಂಪು ಅವರೂ ಬರುತ್ತಾರೆ. ದರ್ಶನ ಕಾವ್ಯ ಹಾಗೂ ಸಾಮಾಜಿಕ ಪ್ರಜ್ಞೆಗಳು ಏಕೀಭವಿಸಿದ ವಿಶಿಷ್ಟ ಚಳವಳಿಗಳಿವು.

ಕೇರಳದ ಹಿಂದುಳಿದ ತೀಯನ್ ಸಮುದಾಯದ ಸಾಮಾನ್ಯ ಕುಟುಂಬವೊಂದರಲ್ಲಿ ಹುಟ್ಟಿದ ನಾಣು, ನಾರಾಯಣ ಗುರುವಾಗಿ ರೂಪಾಂತರಗೊಂಡ ಕಥೆ ಅಪೂರ್ವವಾಗಿದೆ. ಆರೂಢ ಪರಿಭಾಷೆಯಲ್ಲಿ ಹೇಳುವುದಾದರೆ, ಇದು ಥಟ್ಟನೆ ಸಾಧ್ಯವಾದ ವಿಹಗಮಾರ್ಗದ ಫಲವಲ್ಲ. ನೆಲದ ಮೇಲಣ ಇರುವೆ ಮರದಲ್ಲಿರುವ ಹಣ್ಣಿಗೆ ಕಷ್ಟಪಟ್ಟು ಮಾಡುವ ಯಾನದ ಪಿಪೀಲಿಕಾ ಮಾರ್ಗದ ಪರಿಣಾಮ. 'ಆಶಾನ್' ಎಂದರೆ ಮಲೆಯಾಳದಲ್ಲಿ ಉಪಾಧ್ಯಾಯ ಎಂದರ್ಥ. ಗುರುಗಳು ತರುಣರಾಗಿದ್ದಾಗ ಶಾಲೆಯೊಂದರಲ್ಲಿ ಶಿಕ್ಷಕರಾಗಿದ್ದುಂಟು. ಮುಂದೆ ಅವರು ಹಲವರಿಗೆ ಸನ್ಯಾಸ ದೀಕ್ಷೆ ಕೊಡುವ ಆಧ್ಯಾತ್ಮಿಕ ಗುರುವಾದರು. ಬೌದ್ಧರ ಸಂಘವನ್ನು ಹೋಲುವ ಸನ್ಯಾಸಿ ಪರಂಪರೆಯ ಶ್ರೀನಾರಾಯಣ ಧರ್ಮಸಂಘವನ್ನು ಸ್ಥಾಪಿಸಿದರು. ಅವರ ಗುರುತನಕ್ಕೆ ನಿಜವಾಗಿ ಮಹತ್ವ ಸಂದಿದ್ದು ದಮನಿತ ಸಮಾಜದ ಬಿಡುಗಡೆಗಾಗಿ ಅವರು ಮಾಡಿದ ಚಿಂತನೆ ಮತ್ತು ಹಮ್ಮಿಕೊಂಡ ಮುಂಗಾಣ್ಕೆಯ ಕಾರ್ಯಕ್ರಮಗಳಿಂದ.

ಭಾರತದ ಸಮಾಜ ಸುಧಾರಣಾ ಚಳವಳಿಗಳಲ್ಲಿ ಎರಡು ಪ್ರಮುಖ ಮಾದರಿಗಳಿವೆ. ಒಂದು- ದಮನಿತ ಸಮುದಾಯಗಳ ಸಂಕಟಗಳಿಗೆ ಕಾರಣವಾದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಸಂಗತಿಗಳನ್ನು ಗುರುತಿಸಿ, ಆ ಸಮುದಾಯಗಳ ಜನರಲ್ಲಿ ಪ್ರಜ್ಞೆ ಮತ್ತು ಪ್ರತಿರೋಧ ಶಕ್ತಿಯನ್ನು ತುಂಬುವ ಮಾದರಿ. ಆಧುನಿಕ ಕಾಲದ ಬಹುತೇಕ ವಿಮೋಚನಾ ಸಿದ್ಧಾಂತ ಮತ್ತು ಚಳವಳಿಗಳ ಮೂಲವು ಪಾಶ್ಚಿಮಾತ್ಯ ವಿಚಾರವಾದದಲ್ಲಿ ಇರುವುದಕ್ಕೆ ಇದುವೇ ಕಾರಣ. ಎರಡು- ದೀಕ್ಷೆ, ಧ್ಯಾನ, ಅಧ್ಯಯನ, ಸಾಧನೆಗಳ ಮೂಲಕವೇ ಪರ್ಯಾಯ ಸಮಾಜದ ಕಲ್ಪನೆಯನ್ನು ಮುಂದಿಡುವ ಅಧ್ಯಾತ್ಮವಾದಿ ಮಾದರಿ. ಈ ಎರಡನೇ ಮಾದರಿಯು ಪಶ್ಚಿಮದ ಆಧುನಿಕತೆ, ವೈಚಾರಿಕತೆಗಳನ್ನು ನಿರಾಕರಿಸುವುದಿಲ್ಲ. ಅವುಗಳ ಜತೆಗೆ ದೇಶೀ ಪರಂಪರೆಯಲ್ಲಿರುವ ಜೀವಪರ ಧಾರೆಗಳನ್ನೂ ಕೂಡಿಸಿ, ಆ ಮೂಲಕ ಸಂಪ್ರದಾಯವಾದವನ್ನು ಎದುರುಗೊಳ್ಳುತ್ತದೆ. ಇಲ್ಲಿ ಅಲೌಕಿಕವಾದುದು ಸಾರ್ಥಕಗೊಳ್ಳುವುದು ಲೌಕಿಕ ಆಶೋತ್ತರಗಳಲ್ಲಿ; ಸಾಮಾಜಿಕ ಚಿಂತನೆಗೆ ಕಸುವು ಒದಗುವುದು ಕ್ರಾಂತಿಕಾರಕ ಭಕ್ತಿ ಮತ್ತು ಆಧ್ಯಾತ್ಮಿಕ ಪರಂಪರೆಯಲ್ಲಿ ತಳೆದ ಬೇರಿನಿಂದ. ಇಂತಹ ಮಾದರಿಗಳಿಗೆ ಹೆಚ್ಚು ನೆರವಾಗಿದ್ದು ಬೌದ್ಧ ಮತ್ತು ಅದ್ವೈತ ದರ್ಶನಗಳು.

ಅದ್ವೈತವಾದಿಗಳಲ್ಲಿ ಆತ್ಮದ ವಿಷಯದಲ್ಲಿ ಸಮಾನತೆಯನ್ನು ಘೋಷಿಸಿ, ಸಾಮಾಜಿಕ ವಿಷಯದಲ್ಲಿ ತರತಮವನ್ನು ಒಪ್ಪುವವರುಂಟು. ಆಧ್ಯಾತ್ಮಿಕ ಸಮಾನತೆಯ ಸ್ತರವನ್ನು ಹಿಡಿದು ಸಾಮಾಜಿಕ ಸಮಾನತೆಯ ಚಿಂತನೆ ಮತ್ತು ಕ್ರಿಯಾಶೀಲತೆಯನ್ನು ವಿಸ್ತರಿಸಿದವರೂ ಉಂಟು. ಈ ಎರಡನೇ ಹಾದಿ ಹಿಡಿದವರಿಗೆ ಜಾತಿ ಮತ್ತು ವರ್ಣಾಶ್ರಮಗಳು ಮುಖ್ಯ ಹಗೆಗಳು. ಶರಣರು, ವಿವೇಕಾನಂದ, ನಾರಾಯಣ ಗುರು, ಕುವೆಂಪು, ಕುಮಾರನ್ ಆಶಾನ್ ಇವರೆಲ್ಲ ಜಾತಿಮತಗಳ ವಿಷಯ ಬಂದೊಡನೆ ವ್ಯಗ್ರಗೊಳ್ಳುವುದನ್ನು ಗಮನಿಸಬೇಕು. ಈ ಹಾದಿಯು ವ್ಯಷ್ಟಿ-ಸಮಷ್ಟಿಯ ನೆಲೆಗಳನ್ನು ಏಕೀಕರಿಸುತ್ತದೆ. ವ್ಯಕ್ತಿಗಳು ಸಾಧಕರಾಗಿ ಧ್ಯಾನಯೋಗಗಳ ಮೂಲಕ ತಮ್ಮ ತಾವರಿತು ಪ್ರಜ್ಞೆ, ಮೈತ್ರಿ, ಕರುಣೆಗಳನ್ನು ಬೆಳೆಸಿಕೊಳ್ಳುವುದು ಒಂದು ನೆಲೆ; ಈ ಸಾಧನೆ ಅಥವಾ ಬಿಡುಗಡೆಯು ವ್ಯಕ್ತಿಗತ ಹಂತದಲ್ಲೇ ವಿರಮಿಸದೆ, ಪರಿಸರದಲ್ಲಿರುವ ಕೇಡುಗಳನ್ನು ನಿವಾರಿಸಲು ತೊಡಗುವುದಕ್ಕೆ ಪ್ರೇರಿಸುವುದು ಇನ್ನೊಂದು ನೆಲೆ. ತತ್ವಪದಕಾರರಲ್ಲೂ ವಿವೇಕಾನಂದರಲ್ಲೂ ಕುವೆಂಪು ಅವರ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಉಪನ್ಯಾಸದಲ್ಲೂ ಸ್ವಾಮಿ ಅಗ್ನಿವೇಶರ ಆಕ್ಟಿವಿಸಂನಲ್ಲೂ ಈ ಗುಣವನ್ನು ಗಮನಿಸಬಹುದು.

ಗುರುಗಳು ಸಾಮಾಜಿಕ ಪ್ರಜ್ಞೆಯ ಅದ್ವೈತಿ ಸಂತರಂತೆ, ಸರ್ವಜೀವಗಳಲ್ಲಿ ಸಮಾನತೆಯನ್ನೂ ವಿಶ್ವಮಾನವತೆಯನ್ನೂ ಪ್ರತಿಪಾದಿಸಿದವರು. ಮನುಷ್ಯರೆಲ್ಲರೂ ಒಂದೇ ಜಾತಿ. ಎಲ್ಲರೂ ದೈವದ ಸೃಷ್ಟಿಗಳು ಎಂದು ಅವರು ಮತ್ತೆಮತ್ತೆ ಹೇಳಿದರು. ಈ ಹಿನ್ನೆಲೆಯಲ್ಲಿ ಇದೇ ನಿಲುವುಳ್ಳ ಟ್ಯಾಗೋರರ (1922) ಹಾಗೂ ಗಾಂಧಿಯವರ (1925) ಜತೆ ಅವರು ಗೈದ ಸಂವಾದಗಳನ್ನು ಗಮನಿಸಬೇಕು. ಇವು ಗಾಂಧಿ-ಟ್ಯಾಗೋರ್, ಗಾಂಧಿ-ಅಂಬೇಡ್ಕರ್ ಮುಖಾಮುಖಿಗಳಷ್ಟೇ ಚಾರಿತ್ರಿಕ ಮಹತ್ವದವಾಗಿವೆ. ಗಾಂಧೀಜಿ ವೈಕಂನ ಅಸ್ಪೃಶ್ಯತಾ ನಿವಾರಣಾ ಚಳವಳಿಗೆಂದು ಕೇರಳಕ್ಕೆ ಬಂದಾಗ, ಗುರುಗಳ ಜತೆ ಮಾವಿನಮರದಡಿ ಕೂತು ಚರ್ಚಿಸುವ ಸನ್ನಿವೇಶವೊಂದಿದೆ. ಗಾಂಧಿ ಕೇಳುತ್ತಾರೆ: 'ನಿಮಗೆ ಇಂಗ್ಲಿಷ್ ತಿಳಿಯುತ್ತದೆಯೇ?' ಗುರುಗಳು ಹೇಳುತ್ತಾರೆ: 'ನಿಮಗೆ ಸಂಸ್ಕೃತದಲ್ಲಿ ಮಾತಾಡಿದರೆ ತಿಳಿಯುವುದೇ?'. ಗಾಂಧಿ ಹೇಳುತ್ತಾರೆ: 'ಈ ಮರದ ಎಲೆಗಳು ಆಕಾರದಲ್ಲಿ ಒಂದಕ್ಕಿಂತ ಒಂದು ವಿಭಿನ್ನವಾಗಿವೆ'. ಅದಕ್ಕೆ ಗುರುಗಳ ಉತ್ತರ: 'ನಿಜ. ಅವುಗಳಲ್ಲಿರುವ ಆಂತರಿಕ ಸತ್ವ ಮಾತ್ರ ಒಂದೇ ಮರದಿಂದ ಬಂದಿದೆ'. ವೈವಿಧ್ಯ ಮತ್ತು ಏಕತೆಗಳ ನಡುವಣ ವಿಶಿಷ್ಟ ಅಂತರ್‌ಸಂಬಂಧವನ್ನು ಈ ಪ್ರಶ್ನೋತ್ತರವು ಮಾರ್ಮಿಕವಾಗಿ ಕಾಣಿಸುತ್ತಿದೆ.

19ನೇ ಶತಮಾನದ ಕೊನೆಯಲ್ಲಿ ಮತ್ತು 20ನೇ ಶತಮಾನದ ಆದಿಯಲ್ಲಿ ಭಾರತದ ಶೂದ್ರಸಂತರು ರೂಪಿಸಿದ ಸಮಾಜ ಸುಧಾರಣಾ ಚಳವಳಿಗಳು, ಬ್ರಿಟಿಷರ ರಾಜಕೀಯ ವಸಾಹತುಶಾಹಿಗಿಂತ ದೇಶೀಯ ಸಾಮಾಜಿಕ ಯಜಮಾನಿಕೆಯನ್ನೇ ಪ್ರಧಾನ ಹಗೆಯೆಂದು ಪರಿಭಾವಿಸಿದವು. ಹೀಗೆಂತಲೇ ಅವು ಪಾಶ್ಚಿಮಾತ್ಯ ಆಧುನಿಕತೆ, ವಿಜ್ಞಾನ, ತಂತ್ರಜ್ಞಾನ ಮತ್ತು ವೈಚಾರಿಕತೆಗಳನ್ನು ಸಾಮಾಜಿಕ ಬೇನೆಗೆ ತಕ್ಕ ಮದ್ದಿನಂತೆ ಸ್ವೀಕರಿಸಿದವು. ಈ ಹಿನ್ನೆಲೆಯಲ್ಲಿ ಗುರುಗಳು ಆಂಗ್ಲಶಾಲೆ ಆರಂಭಿಸುವುದನ್ನು ಹಾಗೂ ಯುರೋಪಿಗೆ ಶಿಷ್ಯರನ್ನು ಉನ್ನತ ವಿದ್ಯಾಭ್ಯಾಸಕ್ಕಾಗಿ ಕಳಿಸಿಕೊಡುವುದನ್ನು ಗಮನಿಸಬೇಕು. ಪಾಶ್ಚಿಮಾತ್ಯ ವೈಚಾರಿಕತೆ ಮತ್ತು ಭಾರತೀಯ ಅದ್ವೈತ ದರ್ಶನ ಕೂಡಿದ ಈ ಆಧ್ಯಾತ್ಮಿಕ ವೈಚಾರಿಕತೆಯ ಇನ್ನೊಂದು ಗುಣವೆಂದರೆ, ಜನಪದ ದೈವ ಮತ್ತು ಆಚರಣೆಗಳನ್ನು ಮೌಢ್ಯವೆಂದು ನಿರಾಕರಿಸುವುದು; ಅಲ್ಲಿರಬಹುದಾದ ಜೀವಪರ ಆಶಯಗಳನ್ನು ಶೋಧಿಸುವ ತಾಳ್ಮೆ ತೋರದಿರುವುದು.

ಭಾರತದ ಸಮಾಜ ಸುಧಾರಕ ಸಂತರು, ದೇವರು ಮತ್ತು ಗುಡಿಗಳ ವಿಷಯದಲ್ಲಿ ತಳೆದ ವಿಭಿನ್ನ ನಿಲುವು ಕೂಡ, ಅವರ ಪಥಗಳ ವೈಶಿಷ್ಟ್ಯವನ್ನು ಕಾಣಿಸುತ್ತದೆ. ಈ ಪಥಗಳು ಅವರ ದಾರ್ಶನಿಕ-ಸೈದ್ಧಾಂತಿಕ ಹಿನ್ನೆಲೆಗಳಿಂದ ಮಾತ್ರವಲ್ಲದೆ, ಅವರು ಬದುಕಿದ್ದ ಕಾಲದೇಶಗಳ ಚಾರಿತ್ರಿಕ ಒತ್ತಡಗಳಿಂದ ರೂಪುಗೊಂಡವು. ಉದಾಹರಣೆಗೆ, ಶರಣರು ದೇಹವೇ ದೇಗುಲದ ಪರಿಕಲ್ಪನೆ ಮುಂದಿಟ್ಟರು. ಪೆರಿಯಾರ್ ದೇವರನ್ನೇ ನಿರಾಕರಿಸಿದರು. ಅಂಬೇಡ್ಕರ್ ನಾಸಿಕದ ಕಾಲಾರಾಂ ಗುಡಿಯ ಪ್ರವೇಶಕ್ಕೆ ಯತ್ನಿಸಿದರೂ ಅದು ದಲಿತರ ನಾಗರಿಕ ಹಕ್ಕು ಪ್ರತಿಪಾದನೆಯ ಸಾಂಕೇತಿಕ ಕ್ರಿಯೆಯಾಗಿತ್ತು. ಅಂತಿಮವಾಗಿ ಅವರು ಧಮ್ಮವನ್ನು ಆರಿಸಿಕೊಂಡರು. ಕುವೆಂಪು ದೇವರ ಅಸ್ತಿತ್ವವನ್ನು ಸ್ಥಾವರಗಳಲ್ಲಿ ಹುಡುಕದೆ ನಿಸರ್ಗದಲ್ಲಿ ಮತ್ತು 'ಜಲಗಾರ'ನ ದುಡಿಮೆಯಲ್ಲಿ, ನೇಗಿಲಯೋಗಿಯಲ್ಲಿ ಗುರುತಿಸಿದರು. ಅಸ್ಪೃಶ್ಯರಿಗೆ ಪ್ರವೇಶವಿರದ ಎಡೆಯಲ್ಲಿ ನಾನು ಹೋಗಲಾರೆ ಎಂದರು ಗಾಂಧಿ. ಇವರೆಲ್ಲರಿಗಿಂತ ಬೇರೆಯಾಗಿ ನಾರಾಯಣ ಗುರುಗಳು ಶೂದ್ರರಿಗೆ ಪ್ರತ್ಯೇಕ ಗುಡಿ ಸ್ಥಾಪಿಸುವ ಚಳವಳಿ ಎತ್ತಿಕೊಂಡರು. ಧಾರ್ಮಿಕ ಪ್ರವೃತ್ತಿಯುಳ್ಳ ಹಿಂದುಳಿದ ಸಮುದಾಯಗಳ ಬಿಡುಗಡೆಯ ದೀರ್ಘ ಯಾನದಲ್ಲಿ, ಇದು ಅನಿವಾರ್ಯವಾದ ಆರಂಭಿಕ ಹೆಜ್ಜೆ ಎಂದು ಅವರಿಗೆ ಅನಿಸಿರಬೇಕು. ಆದರೆ ಅವರ ಗುಡಿಯ ಕಲ್ಪನೆ ವಿಶಿಷ್ಟವಾಗಿತ್ತು. ಅರುವಿಪ್ಪುರದಲ್ಲಿ (1888) ಅವರು ಸ್ಥಾಪಿಸಿದ ಶಿವಾಲಯದ ಗೋಡೆಯಲ್ಲಿ 'ಜಾತಿಭೇದಂ ಮತದ್ವೇಷಂ ಏತುಮಿಲ್ಲಾತೆ ಸರ್ವರುಂ ಸೋದರತ್ವೇನ ವಾಳುನ್ನ ಮಾತೃಕಾ ಸ್ಥಾನಮಣ್ಣಿತು' ಎಂಬ ಏಕತಾ ಸಂದೇಶ ಬರೆಸಿದರು. ಅವರು ಮುರುಕಂಪುಳ್ಳ ಗುಡಿಯ ಪ್ರತಿಷ್ಠಾಪನೆಯಲ್ಲಿ ಕೊಟ್ಟ ಸಂದೇಶ: 'ಸತ್ಯ, ಕರ್ತವ್ಯ, ಮಾನವೀಯತೆ, ಪ್ರೀತಿ'. ಕವಲಂಗೋಡಿನ ಗುಡಿ ಪ್ರತಿಷ್ಠಾಪನೆಯಂತೂ (1928) ಮತ್ತೂ ಅನನ್ಯ. ಅವರು 'ಓಂ ಸತ್‌ತತ್' ಬರೆಯಿಸಿದ ಕನ್ನಡಿಯೊಂದನ್ನು ಪ್ರತಿಷ್ಠಾಪಿಸಿದರು. ಸಾಧಕರು ತಮ್ಮ ಸಾಧನೆಯಲ್ಲಿ ಯಾವ ಅಲೌಕಿಕ ಸತ್ಯವನ್ನು ಹುಡುಕುತ್ತಾರೋ ಅದು ಅವರೊಳಗೇ ಇದೆ ಎಂದು ಸೂಚಿಸುವ ಆತ್ಮಸಾಕ್ಷಾತ್ಕಾರದ ಅರ್ಥವಿದು.

ಕರ್ನಾಟಕದಲ್ಲೂ ಅನೇಕ ಸಂತರ ಸಮಾಧಿಗಳಲ್ಲಿ ಕನ್ನಡಿಯೇರಿಸುವ ಆಚರಣೆಯಿದೆ. ಕನ್ನಡಿ ಆತ್ಮಶೋಧಕ್ಕೆ ಮಾತ್ರವಲ್ಲ, ಆತ್ಮವಿಮರ್ಶೆಗೂ ಪ್ರತೀಕ. ನಮ್ಮೊಳಗಿನ ಕೇಡನ್ನು ಗುರುತಿಸಿ ಕಳೆದುಕೊಳ್ಳುವ, ನಮ್ಮ ಕಸುವನ್ನು ಕಂಡುಕೊಂಡು ಪ್ರಜ್ಞೆ ಪಡೆವ ಸಂಕೇತ. ಗುರುಗಳು ತಮ್ಮ ಜೀವಿತದ ಕೊನೆಯ ದಿನಗಳಲ್ಲಿ ಗುಡಿಗಳನ್ನು ಸಾಂಸ್ಕೃತಿಕ ಕೇಂದ್ರಗಳಾಗಿ ಮಾರ್ಪಡಿಸಲು ಯತ್ನಿಸಿದರು. ಗುಡಿಗಳಿಗಿಂತ ಮುಖ್ಯವಾಗಿ ಗ್ರಂಥಾಲಯ, ಶಿಕ್ಷಣಸಂಸ್ಥೆ, ಉದ್ಯಮಗಳು ಬೇಕೆಂಬ ಹೊಸ ಚಳವಳಿಯನ್ನು ರೂಪಿಸಿದರು.

ಯಾವುದೇ ಸಾಂಸ್ಕೃತಿಕ ನಾಯಕರ ವ್ಯಕ್ತಿತ್ವ, ಚಿಂತನೆ ಹಾಗೂ ಕ್ರಿಯಾಶೀಲತೆ ರೂಪುಗೊಳ್ಳುವುದು, ಅವರ ಕಾಲದ ಸಾಮಾಜಿಕ ವಾಸ್ತವ ಮತ್ತು ಅದನ್ನು ಮುಖಾಮುಖಿ ಆಗುವುದಕ್ಕೆ ಆಯ್ದುಕೊಂಡ ಹಾದಿಯಿಂದ ಮಾತ್ರವಲ್ಲ; ಅವರ ಎದುರಾಳಿಗಳ ವಿರೋಧ ಹಾಗೂ ಸಂಗಾತಿಗಳ ನೆರವಿನ ಸ್ವರೂಪದಿಂದ ಕೂಡ. ಈ ಹಿನ್ನೆಲೆಯಲ್ಲಿ ಗುರುಗಳ ಚಳವಳಿಗೆ ಕುವೆಂಪು ಅವರ ಲೋಕದೃಷ್ಟಿಯನ್ನೇ ಹೊಂದಿದ್ದ ಕುಮಾರನ್ ಆಶಾನರು ಕಾವ್ಯದ ಆಯಾಮ ಕೊಟ್ಟರು; ಮೈಸೂರು ಸಂಸ್ಥಾನದ ವೈದ್ಯಾಧಿಕಾರಿಯಾಗಿದ್ದ ಡಾ.ಪಲ್ಪು, ಆಧುನಿಕ ವಿಜ್ಞಾನ, ತಂತ್ರಜ್ಞಾನ ಹಾಗೂ ಉದ್ಯಮಶೀಲತೆಯ ಮಗ್ಗುಲನ್ನು ಜೋಡಿಸಿದರು; ಎಡಪಂಥೀಯ ವಿಚಾರಧಾರೆ ಹೊಂದಿದ್ದ ರಾಜಕಾರಣಿ ಅಯ್ಯಪ್ಪನ್ ಸಮಾಜವಾದಿ ಮುಖವನ್ನು ಲಗತ್ತಿಸಿದರು. ಸನ್ಯಾಸಿ, ಕವಿ, ವೈದ್ಯ, ರಾಜಕಾರಣಿಗಳ ಈ ಚತುಷ್ಕೂಟವು, ಕೇರಳದ ಸಮಾಜ, ಧರ್ಮ, ಶಿಕ್ಷಣ ಕ್ಷೇತ್ರಗಳಲ್ಲಿ ಮಾಡಿದ ಪ್ರಯೋಗಗಳು, ಆಧುನಿಕ ಭಾರತದ ಸಾಮಾಜಿಕ ಚರಿತ್ರೆಯಲ್ಲಿ ಉಜ್ವಲವಾದ ಅಧ್ಯಾಯಗಳಾಗಿವೆ. ❖

ನಾರಾಯಣ ಗುರುಗಳ ಕುರಿತ ಇನ್ನಷ್ಟು ಲೇಖನಗಳಿಗೆ ನೋಡಿ: www.prajavani.net

ದಲಿತ ಸಾಹಿತ್ಯದ ಪೂರ್ವಸೂರಿ

ಎಂ.ಎಸ್.ಶೇಖರ್

ಸೋಸಲೆ ಸಿದ್ದಪ್ಪ ಅವರು ಹೊಸಗನ್ನಡ ಅರುಣೋದಯ ಕಾಲಘಟ್ಟದ ಬಹುಮುಖ್ಯ ಕವಿ. ಗದ್ಯದ ವಿವಿಧ ಪ್ರಕಾರಗಳಲ್ಲಿಯೂ ಸಾಹಿತ್ಯಕೃಷಿ ಮಾಡಿರುವ ಇವರು, ಹಿರಿಯ ತಲೆಮಾರಿನ ಲೇಖಕರಾಗಿದ್ದಾರೆ. ಬಹುಮುಖ ಪ್ರತಿಭೆಯ ಇವರು; ತಂಬೂರಿ, ಪಿಟೀಲು, ಹಾರ್ಮೋನಿಯಂ ತಾಳಮೇಳ ಮತ್ತು ಚಿಟುಕುದಾಳಗಳ ಬಗ್ಗೆ ಆಸಕ್ತಿ ಇದ್ದ ಸಂಗೀತಪ್ರಿಯರೂ ಆಗಿದ್ದರು. ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳ ಬಗ್ಗೆ ಒಳ್ಳೆಯ ಜ್ಞಾನವಿದ್ದ ಸಿದ್ದಪ್ಪ ಅವರು, ರಾಮಾಯಣ, ಮಹಾಭಾರತಗಳನ್ನು ಕರಗತ ಮಾಡಿಕೊಂಡಿದ್ದರು. ಗಾಂಧಿಮಾರ್ಗಿಗಳಾಗಿದ್ದ ಅವರು, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅಭಿಮಾನಿಯಾಗಿದ್ದರು. ಸಾಂಸ್ಕೃತಿಕ, ಚಾರಿತ್ರಿಕ, ಸಾಮಾಜಿಕ, ಧಾರ್ಮಿಕ, ಪೌರಾಣಿಕ, ಆಧ್ಯಾತ್ಮಿಕ ಮುಂತಾದ ವಿಚಾರಗಳ ನೆಲೆಯಲ್ಲಿ ಸಾಹಿತ್ಯ ಕೃಷಿ ಮಾಡಿರುವುದು ಅವರ ಸೃಜನಶೀಲ ಪ್ರತಿಭೆಗೆ ಸಾಕ್ಷಿಯಂತಿದೆ.

ಸಿದ್ದಪ್ಪ ಅವರು ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕು ಸೋಸಲೆ ಗ್ರಾಮದವರು. ಸಿದ್ದಪ್ಪಾಜಿ ಒಕ್ಕಲು. ತಂದೆ ಜವರಯ್ಯನ ಸಿದ್ಧಮಲ್ಲಯ್ಯ. ತಾಯಿ ಮಾದಮ್ಮ. ಈ ದಂಪತಿಗೆ 1892ರ ಆಗಸ್ಟ್ 18ರಂದು ಜನಿಸಿದರು. ಚಾರಿತ್ರಿಕ ವೈಶಿಷ್ಟ್ಯದ ಸೋಸಲೆ ಗ್ರಾಮದ ದಲಿತ ಸಮುದಾಯ 19ನೇ ಶತಮಾನದಲ್ಲಿಯೇ ಶಿಕ್ಷಣವನ್ನು ಪಡೆದಿದೆ. 1918ರಲ್ಲಿ ಜನಿಸಿದ ಎಸ್.ಎಂ.ಸಿದ್ದಯ್ಯ ಬಿ.ಎಸ್ಸಿ.,ಎಲ್.ಎಲ್.ಬಿ ಪದವಿ ಪಡೆದು ವಕೀಲರಾಗಿ, ಮೈಸೂರು–ಚಾಮರಾಜನಗರ ಲೋಕಸಭಾ ಕ್ಷೇತ್ರದ ಸದಸ್ಯರಾಗಿಯೂ ಆಯ್ಕೆಯಾದವರು. ಸೋಸಲೆ ಬಿ.ರಾಚಪ್ಪ ಅವರು ಮೈಸೂರು ಪ್ರಾಂತ್ಯದಲ್ಲಿ ಬಿ.ಎ ಪದವಿ ಪಡೆದು ಕಮಿಷನರ್ ಆದ ನಿಮ್ನವರ್ಗದ ಮೊದಲ ವ್ಯಕ್ತಿ. ಸೋಸಲೆಯ ಡಾ. ಬರಕುಚೇಲ ಎಂಬುವರು ಎಂ.ಬಿ.ಬಿ.ಎಸ್. ಎಂ.ಡಿ ಮಾಡಿ, ಅಮೆರಿಕದಲ್ಲಿ ನೆಲೆಸಿ, ಪ್ರಸಿದ್ಧ ಯೂರಾಲಜಿಸ್ಟ್ ಆಗಿ ಹೆಸರಾದವರು. ಇಂತಹ ತುಂಬ ಅಪರೂಪದ ಸಾಂಸ್ಕೃತಿಕ ವಾತಾವರಣದ ಈ ಸಾಧನೆಗಳಿಗೆ ದಲಿತ ಸಮುದಾಯದಿಂದ ಮೊತ್ತಮೊದಲು ಒಂಟಿಸಲಗದಂತೆ ಅಕ್ಷರಲೋಕವನ್ನು ಪ್ರವೇಶಿಸಿರುವ, ಹೊಸಗನ್ನಡ ಅರುಣೋದಯ ಕಾಲದ ಮೊದಲ ತಲೆಮಾರಿನ ದಲಿತ ಕವಿ, ಲೇಖಕ, ಶಿಕ್ಷಕ ಆಗಿರುವ ಸೋಸಲೆ ಸಿದ್ದಪ್ಪ ಅವರು ಇದಕ್ಕೆಲ್ಲ ಬಹುಮುಖ್ಯ ಪ್ರೇರಣೆ.

ಸಿದ್ದಪ್ಪನವರು ಬಾಲ್ಯದಿಂದಲೂ ಸ್ವಭಾವತಃ ಗಂಭೀರ ಸ್ವಭಾವದವರು. ತಂದೆ-ತಾಯಿಗಳ ಪ್ರಬಲ ಇಚ್ಛೆಯಂತೆ ಊರ ಪಕ್ಕದ ಕಾವೇರಿ ನದಿದಂಡೆಯ ಮರಳ ಮೇಲೆ ಅಕ್ಷರ ಅಭ್ಯಾಸ ಮಾಡಿದವರು. ಈ ತಲೆಮಾರು ದಾಸ ಪರಂಪರೆಯ ಅಧ್ವೈರ್ಯುಗಳಾದ ಪುರಂದರದಾಸರು ಹಾಗೂ ಕನಕ ದಾಸರ ಗುರುಗಳಾಗಿದ್ದ, ಬನ್ನೂರು ಮೂಲದ ವ್ಯಾಸರಾಯರು ಸ್ಥಾಪಿಸಿದ ಸೋಸಲೆ ಮಠದಲ್ಲಿ ನಡೆಯುತ್ತಿದ್ದ ಪೂಜೆ ಪುನಸ್ಕಾರ, ಮಡಿಮೈಲಿಗೆ, ಆಚಾರ ವಿಚಾರಗಳ ಪ್ರಭಾವಕ್ಕೆ ಒಳಗಾಗಿದೆ. ಸಿದ್ಧಮಲ್ಲಯ್ಯ, ಮಗ ಸಿದ್ದಪ್ಪ ಅವರಿಗೆ ಶಿಕ್ಷಣದ ಅಭಿರುಚಿ ಹುಟ್ಟಿಸಿ ಅಕ್ಷರಮೋಹವನ್ನು ಬೆಳೆಸಿದರು. ಬ್ರಾಹ್ಮಣ ಅಗ್ರಹಾರವೆಂದೇ ಹೆಸರಾಗಿದ್ದ ಸೋಸಲೆಯಲ್ಲಿ ರಾಮಾಯಣ, ಮಹಾಭಾರತ ಕತೆಗಳನ್ನು ಪಠಿಸುವ ಅಭ್ಯಾಸ ಮಾಡಿಸಿದರು. ಕಟ್ಟಾ ದೈವಭಕ್ತ ಮನೆತನವಾಗಿದ್ದ ಸಿದ್ದಪ್ಪ ಅವರ ಮನೆಯಲ್ಲಿ ನಿತ್ಯವೂ ಧರ್ಮಗ್ರಂಥಗಳ ಪಠಣ ನಡೆಯುತ್ತಿತ್ತು. ಓದಿನಲ್ಲಿ ತುಂಬು ಆಸಕ್ತಿ ಇದ್ದ ಸಿದ್ದಪ್ಪ ಅವರು, ಬಾಲ್ಯದಲ್ಲಿದ್ದಾಗಲೇ ಕಾವೇರಿ ನದಿತೀರದ ಪ್ರಕೃತಿ ಸೊಬಗು ಕಂಡು ಹಿಗ್ಗುತ್ತಿದ್ದರಂತೆ.

ಪ್ರಾಥಮಿಕ ಶಿಕ್ಷಣವನ್ನು ಸೋಸಲೆಯಲ್ಲಿಯೆ ಮುಗಿಸಿದ ಸಿದ್ದಪ್ಪ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರಿನಲ್ಲಿ ಅಸ್ಪೃಶ್ಯ ಮಕ್ಕಳಿಗಾಗಿ ತೆರೆದಿದ್ದ ವಸತಿಶಿಕ್ಷಣ ಶಾಲೆಗಳಲ್ಲಿ ಶಿಕ್ಷಣ ಪಡೆದರು. ತಲಕಾಡು ರಂಗೇಗೌಡ, ವರದರಾಜ ಅಯ್ಯಂಗಾರ್ ಅವರಂಥ ಶಿಕ್ಷಕರು ಸಿದ್ದಪ್ಪ ಅವರ ಪ್ರತಿಭೆಯನ್ನು ಮೆಚ್ಚಿ ಪ್ರೋತ್ಸಾಹಿಸಿದರು. 1910ರಲ್ಲಿಯೇ ಸಿದ್ದಪ್ಪ ಅವರು ಮೈಸೂರು ಪ್ರಾಂತ್ಯದಲ್ಲಿ ದಲಿತರಲ್ಲಿ ಮೊದಲಿಗರಾಗಿ ಲೋಯರ್ ಸೆಕೆಂಡರಿ (ಕೆ.ಎಲ್), ಆನಂತರ ಯು.ಎಸ್. ಕೋರ್ಸನ್ನು ಮುಗಿಸಿದರು. ವಿದ್ಯಾರ್ಥಿ ದೆಸೆಯಲ್ಲಿಯೇ ಸಿದ್ದಪ್ಪ ಅವರು ಸಾಹಿತ್ಯವನ್ನು ಗಾಢವಾಗಿ ಅಧ್ಯಯನ ಮಾಡುವ, ಬರೆಯುವ ಹವ್ಯಾಸದವರಾಗಿದ್ದರು. ಪ್ರಾಚೀನ ಕನ್ನಡ ಸಾಹಿತ್ಯ ಪರಂಪರೆಯನ್ನು ಗಾಢವಾಗಿ ಅಧ್ಯಯನ ಮಾಡಿದ್ದರು.



ಸಾಹಿತ್ಯ, ಸಂಗೀತ, ಕಲೆ ಶಾಸ್ತ್ರೀಯತೆಯ ಅಪಾರ ಜ್ಞಾನಸಂಪತ್ತನ್ನು ಗಳಿಸಿದ್ದ ಸಿದ್ದಪ್ಪ, 1915ರಲ್ಲಿಯೆ ಟಿ.ನರಸೀಪುರ ತಾಲ್ಲೂಕು ಬನ್ನೂರಿನ ಪಂಚಮ ಶಾಲೆಗೆ ಶಿಕ್ಷಕರಾಗಿ ನೇಮಕಗೊಂಡಿದ್ದರು. ನವೋದಯ ಸಾಹಿತ್ಯ ದಿಗ್ಗಜರು ಬರವಣಿಗೆ ಪ್ರಾರಂಭಿಸುವ ಮುನ್ನವೇ ಸಿದ್ದಪ್ಪ ಅವರು ತಮ್ಮ ಶಿಕ್ಷಕ ವೃತ್ತಿಯ ಜೊತೆಜೊತೆಗೆ ಸಾಹಿತ್ಯ ರಚಿಸುವ ಹಾದಿಯಲ್ಲಿದ್ದರು. 1917ರಲ್ಲಿ 'ಶ್ರೀ ಚಾಂಗದೇವನ ಚರಿತ್ರೆ', 1922ರಲ್ಲಿ 'ಇಂಗ್ಲೆಂಡ್ ಚರಿತ್ರೆ', 1928ರಲ್ಲಿ 'ಅಳುವ ಮಹಾಸ್ವಾಮಿಯವರಾದ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರ ದಿವ್ಯಚರಿತ್ರೆ' ಎಂಬ ವಿಶಿಷ್ಟ ಕೃತಿಗಳನ್ನು ಬರೆದಿದ್ದಾರೆ.

1926ರಲ್ಲಿ ಬಂದ ಬಿ.ಎಂ.ಶ್ರೀ ಅವರ 'ಇಂಗ್ಲಿಷ್ ಗೀತೆಗಳು' ಕೃತಿ ಬರುವ ಮುಂಚೆಯೇ ಇವರು ಎರಡು ಕೃತಿಗಳನ್ನು ಬರೆದಿದ್ದರು. ಕನ್ನಡ ನವೋದಯ ಕಾವ್ಯ ಚಿಗುರೊಡೆಯುವ ಮುನ್ನವೇ ಕಾವ್ಯಕೃಷಿ ಮಾಡಿರುವ ಸಿದ್ದಪ್ಪ, 1931ರಲ್ಲಿ ಭಾಮಿನಿಷಟ್ಪದಿಯಲ್ಲಿ ಬರೆದಿರುವ 'ಗೋವುಗಳ ಗೋಳಾಟ' ಖಂಡಕಾವ್ಯ ಪ್ರಕಟವಾಗಿತ್ತು. ಅಂದಿನ ವಿಮರ್ಶಕರು ಸಿದ್ದಪ್ಪ ಅವರ ಸಾಹಿತ್ಯ ಕೃಷಿಯನ್ನು ಗುರುತಿಸದೆ ಹೋಗಿರುವುದರಿಂದ ಅವರ ಇತರೆ ಕೃತಿಗಳಿಗೆ ಪ್ರೋತ್ಸಾಹ ಸಿಗದೆ ಹಸ್ತಪ್ರತಿಯಲ್ಲೇ ಉಳಿದಿರುವುದು ವಿಷಾದದ ಸಂಗತಿ.

ಸಿದ್ದಪ್ಪ ಅವರದು ಒಂದರ್ಥದಲ್ಲಿ ಗಜಗಂಭೀರವಾದ ವ್ಯಕ್ತಿತ್ವ. ಸುಮಾರು ಆರುಅಡಿ ಎತ್ತರದ ಗಟ್ಟಿಮುಟ್ಟಾದಾಳು. ಎತ್ತರದ ವ್ಯಕ್ತಿತ್ವ, ಕಟ್ಟುನಿಟ್ಟಿನ ಶಿಸ್ತು, ಶಿಕ್ಷಕ ವೃತ್ತಿಯನ್ನು ಪಾವಿತ್ರ್ಯವೆಂದು ಭಾವಿಸಿದ್ದವರು. ಸದಾ ಖಾದಿ ಬಿಳಿ ನಿಲುವಂಗಿ. ಅದರ ಮೇಲೆ ಖಾದಿಕೋಟು, ಬಿಳಿಯ ಕಚ್ಚೆಪಂಚೆ ತೊಡುತ್ತಿದ್ದರು. ತಲೆಗೆ ಮೈಸೂರು ರುಮಾಲುಪೇಟ. ಸ್ವಚ್ಛತೆಗೆ ಮೊದಲು ಆದ್ಯತೆ ನೀಡುತ್ತಿದ್ದರಂತೆ. ಕೈಯಲ್ಲೊಂದು ಚರ್ಮದಬ್ಯಾಗನ್ನು ಹಿಡಿದುಕೊಂಡು, ಅದರೊಳಗೆ ತಮ್ಮ ಬರಹಗಳನ್ನು ತುಂಬಿಕೊಂಡು ಶಿಸ್ತಿನ ಸಿಪಾಯಿಯಂತೆ ಶಿಕ್ಷಕವೃತ್ತಿಯನ್ನು ಮಾಡಿರುವ ಹೆಗ್ಗಳಿಕೆ ಇವರದು.

1915ರಲ್ಲಿ ಬನ್ನೂರಿನ ಪಂಚಮಶಾಲೆಯಲ್ಲಿ ಶಿಕ್ಷಕವೃತ್ತಿ ಆರಂಭಿಸಿದರು. ಬಳಿಕ ಮೈಸೂರು ಜಲಪುರಿಗೆ ವರ್ಗಾವಣೆಗೊಂಡರು. ಮುಂದೆ ಇಟ್ಟಿಗೆಗೂಡಿನ ಶಾಲೆಗೆ ಮುಖ್ಯ ಶಿಕ್ಷಕರಾಗಿ ಬಡ್ತಿ ಹೊಂದಿದರು. ಹೀಗೆ ಅಗಾಧಪ್ರೀತಿಯಿಂದ ಶಿಕ್ಷಣ ಭೀಷ್ಮನಂತೆ ಮಕ್ಕಳಿಗೆ ಅಕ್ಷರ ಕಲಿಸುವ ಕಾಯಕ ಮಾಡುತ್ತ 1942ರಲ್ಲಿ ನಿವೃತ್ತಿ ಹೊಂದಿದರು. ಬೋಧಿಸುವುದನ್ನು ಒಂದು ಕಲೆ ಎಂದು ನಂಬಿದ್ದ ಸಿದ್ದಪ್ಪ, ತಮ್ಮ ಅಪಾರವಾದ ಬೋಧನಾನುಭವದ ಸಾರದಂತೆ 'ಬಾಲಬೋಧೆ' ಕೃತಿಯನ್ನು ಬರೆದಿದ್ದಾರೆ. ಶಿಕ್ಷಕವೃತ್ತಿಯಿಂದ ನಿವೃತ್ತರಾದ ಸಿದ್ದಪ್ಪ ಆನಂತರ 1954ರಲ್ಲಿ ನಿಧನರಾಗುವವರೆಗೂ ತಮ್ಮನ್ನು ತಾವು ಸಾಹಿತ್ಯಸೃಷ್ಟಿಗೆ ತೊಡಗಿಸಿಕೊಂಡರು.

ಸಿದ್ದಪ್ಪ ಅಪ್ಪಟ ಕಾವ್ಯಪ್ರತಿಭೆ. ಛಂದಸ್ಸು-ಅಲಂಕಾರಗಳಂತಹ ಶಾಸ್ತ್ರೀಯ ಶಿಷ್ಟಪರಂಪರೆಯ ಕವಿ. 'ಗೋವುಗಳ ಗೋಳಾಟ' ಕಾವ್ಯವನ್ನು ಭಾಮಿನಿ ಷಟ್ಪದಿಯಲ್ಲಿ ಬರೆದಿದ್ದಾರೆ.

'ಸಣ್ಣಕುಲದವ ದೊಡ್ಡಕುಲದವ
ನೆನ್ನುವಂತಹ ಭಾವನೆಯ ನೀ
ವಿನ್ನು ಮನದೊಳು ತಂದುಕೊಳ್ಳದೆ ಮನ್ನಿಸುವುದೆನ್ನ
ಸಣ್ಣಮಳಲೊಗಿಪ್ಪ ವಜ್ರವು
ತನ್ನ ಪ್ರಭೆಯನು ತೋರದಿರುವುದೆ
ಸಣ್ಣದೊಡ್ಡವನೆಂಬ ಭಾವನೆ ಸಣ್ಣವಗೆ ಮಾತ್ರ' ಎಂಬ ಚಿತ್ರಣ ಚಿಂತನಶೀಲವಾಗಿದೆ.

1931ರಲ್ಲಿ ಮೈಸೂರು ಡಿಸ್ಟ್ರಿಕ್ಟ್ ಆ್ಯಂಡ್ ಸೆಷನ್ಸ್ ಜಡ್ಜ್ ಆಗಿದ್ದ ಕೆ.ನಾರಾಯಣರಾವ್ ಅವರು, 1939ರಲ್ಲಿ 'ಗಿರಿಜಾ ಕಲ್ಯಾಣವೆಂಬ ಹರಿಕಥೆ ಪುಸ್ತಕವು', 1942ರಲ್ಲಿ 'ಚಂದ್ರಹಾಸನ ಬಾಲ್ಯ ಎಂಬ ಹರಿಕಥೆ ಪುಸ್ತಕವು', 'ಬೇಡರಕಣ್ಣಪ್ಪನ ಕತೆ' ಕಾವ್ಯಕೃತಿಗಳಲ್ಲಿ ಸಿದ್ದಪ್ಪ ಅವರು ಲಯ, ಬಿಹಾಸ್, ಬೇಗಡೆ, ಕಂದ, ರೂಪಕತಾಳ, ಕಾಪಿನಾರಾಯಣಿ, ಆದಿತಾಳ, ಅಟ್ಟತಾಳ, ಶಂಕರಾಭರಣ, ಬಿಲಹರಿ ಮುಂತಾದ ಸಂಗೀತಲಯವನ್ನು ಪ್ರಯೋಗ ಮಾಡಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸಿದ್ದಪ್ಪ ಅವರಿಗೆ 'ನವಕವಿ' ಎಂಬ ಬಿರುದು ನೀಡಿ ಗೌರವಿಸಿದ್ದಾರೆ.

ಸಿದ್ದಪ್ಪನವರ ಗದ್ಯ ಕೂಡ ವಿಶಿಷ್ಟವಾಗಿದೆ. ವ್ಯಾಸರಾಯ ಮಠದ ಗಾಢ ಪ್ರಭಾವವಿದ್ದ ಇವರು ತಮ್ಮ ಕೃತಿಗಳನ್ನು ಪ್ರಾರಂಭಿಸುವ ಮುನ್ನ 'ಓಂ ಶ್ರೀ ಗುರು ಪರಬ್ರಹ್ಮಾಯ ನಮಃ' ಈ ರೀತಿಯ ಶಾಸ್ತ್ರೀಯ ಮನೋಧರ್ಮದಿಂದಲೇ ಪ್ರಾರಂಭ ಮಾಡುವ ಪ್ರವೃತ್ತಿ ಹೊಂದಿದ್ದರು. ಇವರ ಹದಿಮೂರು ಗದ್ಯಕೃತಿಗಳು ಕಾವ್ಯಾತ್ಮಕವಾದ ಶಿಷ್ಟಭಾಷೆಯಲ್ಲಿವೆ. ಕೆಲವು ಗದ್ಯ ಪದ್ಯಗಳೆರಡರ ಚಂಪೂಮಾರ್ಗದಲ್ಲಿಯೂ ಇವೆ. ಚಾರಿತ್ರಿಕ ನೆಲೆಯ, ಪೌರಾಣಿಕ ನೆಲೆಯ ಆಧ್ಯಾತ್ಮಿಕ ನೆಲೆಯ, ಮಾನವೀಯ ನೆಲೆಯ ನೀತಿಪ್ರಧಾನವೇ ಇವರ ಗದ್ಯಕೃತಿಯ ತಿರುಳಾಗಿದೆ.

'ಕಲ್ಯಾಣಪುರುಷನ ಸುಗುಣಗ್ರಂಥ' ಕೃತಿಯಲ್ಲಿ 'ಪ್ರಿಯೆಕೇಳು', 'ಪ್ರಿಯೆ ಆಲಿಸುವಂತಳಾಗು' ಎಂಬ ಶೈಲಿ ಇದ್ದು ಕವಿಮುದ್ದಣನ ಮುದ್ದಣ ಮನೋರಮೆಯರ ಸಲ್ಲಾಪದ ಓದಿನ ನೆನಪು ತರುವಂತಿದೆ. 1917ರಲ್ಲಿ ಬರೆದಿರುವ 'ಶ್ರೀಚಾಂಗದೇವಚರಿತ್ರೆ', 1922ರಲ್ಲಿ ಬರೆದಿರುವ 'ಇಂಗ್ಲೆಂಡ್ ಚರಿತ್ರೆ' ಬ್ರಿಟಿಷ್ ಆಳ್ವಿಕೆಯ ಚಾರಿತ್ರಿಕತೆಯನ್ನು ಕಟ್ಟಿಕೊಡುತ್ತವೆ. 1928ರಲ್ಲಿ ಬರೆದಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಚರಿತ್ರೆ ಅವರ ಸಾಂಸ್ಕೃತಿಕ, ಸಾಮಾಜಿಕ ಸುಧಾರಣಾ ಕೆಲಸಗಳ ಮೇಲೆ ಹೊಸಬೆಳಕನ್ನು ಚೆಲ್ಲುವಂತಿದೆ. ಪ್ರತಿದಿನ ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಸ್ನಾನಮಾಡಿ, ಪೂಜೆ ಮುಗಿಸಿ, ಬರವಣಿಗೆ ಕೆಲಸ ಮಾಡುವ ಪ್ರವೃತ್ತಿಯು ಇವರದಾಗಿತ್ತು. ಎಳೆಯಮಕ್ಕಳಿಗೆ ಮಮಕಾರದಿಂದ ಬೋಧಿಸುವ ಬಗ್ಗೆ 'ಹೊಸಗನ್ನಡ ಬಾಲಬೋಧೆ' ಕೃತಿಯನ್ನು ಬರೆದಿದ್ದಾರೆ. 1954ರಲ್ಲಿ ಬರೆದಿರುವ ಭಾಷಣರೂಪದ ಪುಸ್ತಕದಲ್ಲಿ 'ನಂಜನಗೂಡಿಗೆ ನಾವು ದೇವರದರ್ಶನಕ್ಕಾಗಿ ಹೋಗುವುದೇನೊ ನಿಜ. ಆದರೆ ನಂಜುಂಡೇಶ್ವರನ ದರ್ಶನ ನಮಗಿಲ್ಲ. ನಮ್ಮ ದರ್ಶನ ನಂಜುಂಡೇಶ್ವರನಿಗಿಲ್ಲ' ಎಂಬ ಸಿದ್ದಪ್ಪ ಅವರ ವಿಷಾದನೀಯ ಮಾತುಗಳು ಅಂದಿನ ಸಾಮಾಜಿಕ ಸ್ಥಿತಿಗತಿಗಳ ಮೇಲೆ ಬೆಳಕು ಚೆಲ್ಲುತ್ತವೆ.

ದಲಿತರು ಎಂದರೆ ಅಯ್ಯೋ ಕಡುಕಷ್ಟದಲ್ಲಿರುವವರು, ಅವರ ಬದುಕು ದುರ್ಗಮಯ, ಅಸ್ಪೃಶ್ಯರು ಎಂಬ ಸಾಂಪ್ರದಾಯಿಕ ಅಭಿಪ್ರಾಯಗಳಿಗಿಂತ ಭಿನ್ನವಾಗಿ ದಲಿತ ಸಮುದಾಯ ಬದುಕಿದೆ. ಸಾಂಸ್ಕೃತಿಕಲೋಕ, ಸಾಮಾಜಿಕ ಲೋಕ, ಆಧ್ಯಾತ್ಮಿಕಲೋಕ, ಸಾಹಿತ್ಯ ಸಂಗೀತಲೋಕ, ಶೈಕ್ಷಣಿಕ ಲೋಕದಲ್ಲಿ ಅವರದೇ ಆದ ಕಾರ್ಯಸಾಧನೆ ಮಾಡಿದವರು ಇದ್ದಾರೆ ಎಂಬುದನ್ನು ಸಿದ್ದಪ್ಪ ಅವರಂಥ ಸಾಧಕರ ಮೂಲಕ ನೋಡುವ ಅವಶ್ಯಕತೆ ಇದೆ. ❖

ಮುನ್ನೋಟ 22-08-2021 ರಿಂದ 28-08-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಉದ್ಯೋಗಸ್ಥರಿಗೆ ಮೇಲಧಿಕಾರಿಗಳಿಂದ ಸೂಕ್ತ ಸಹಾಯ ದೊರೆಯುತ್ತದೆ. ಉನ್ನತಾಧಿಕಾರಿಗಳ ಬೆಂಬಲದಿಂದ ಕಾರ್ಯಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಿರಿ. ಜವಳಿ ವ್ಯಾಪಾರಿಗಳಿಗೆ ವ್ಯಾಪಾರ ಕುದುರುತ್ತದೆ. ಮೇಲ್ದರ್ಜೆ ಗುತ್ತಿಗೆದಾರರಿಗೆ ಹೊಸ ಗುತ್ತಿಗೆಗಳು ದೊರೆಯುತ್ತವೆ. ಆವೇಗದಿಂದ ಮಾತನಾಡುವುದು ನಿಮಗೆ ನಷ್ಟವನ್ನು ಉಂಟುಮಾಡಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆ ಮಾಡುವ ಕಾಲ. ವ್ಯಾಸಂಗ ವಿಚಾರದಲ್ಲಿ ಅನುಕೂಲಕರ ವಾತಾವರಣವಿರುತ್ತದೆ. ಉದ್ದಿಮೆದಾರರು ಹೊಸ ಯಂತ್ರವೊಂದನ್ನು ಖರೀದಿ ಮಾಡುವ ಸಂದರ್ಭವಿದೆ. ಸಂಗಾತಿಯ ಆಶೋತ್ತರಗಳ ಈಡೇರಿಕೆಗಾಗಿ ಆಭರಣ ಕೊಳ್ಳುವಿರಿ. ರಾಜಕೀಯ ವ್ಯಕ್ತಿಗಳು ಸಮೂಹದಲ್ಲಿ ಮಾತನಾಡುವಾಗ ಎಚ್ಚರವಿರಲಿ. ವರ್ಗಾವಣೆಯನ್ನು ಬಯಸುತ್ತಿದ್ದವರಿಗೆ ವರ್ಗಾವಣೆ ಸಿಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ದಿನಸಿ ವ್ಯಾಪಾರಿಗಳಿಗೆ ಉತ್ತಮವಾದ ಲಾಭವಿರುತ್ತದೆ. ರಾಸಾಯನಿಕ ವಸ್ತುಗಳನ್ನು ಮಾರಾಟ ಮಾಡುವವರಿಗೆ ಉತ್ತಮ ವ್ಯಾಪಾರ ನಡೆದು ಆದಾಯ ಹೆಚ್ಚುತ್ತದೆ. ನೀರಿನ ವ್ಯಾಪಾರವನ್ನು ಮಾಡುವವರಿಗೆ ವ್ಯಾಪಾರ ಹೆಚ್ಚುತ್ತದೆ. ಮಕ್ಕಳ ಓದಿನ ಬಗ್ಗೆ ಅತೀವ ಕಾಳಜಿ ವಹಿಸಬೇಕಾದೀತು. ನ್ಯಾಯಾಲಯದಲ್ಲಿ ನಡೆಯುತ್ತಿರುವ ಕಟ್ಟಳೆಗಳು ನಿಧಾನವಾಗಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವೈದ್ಯಕೀಯ ವಿದ್ಯಾರ್ಥಿಗಳಿಗೆ ಅವರ ಸಾಧನೆಗೆ ತಕ್ಕಂತೆ ಪುರಸ್ಕಾರಗಳು ದೊರೆಯುತ್ತವೆ. ಅವಕಾಶವೊಂದರಿಂದ ಉತ್ತೇಜಿತರಾಗಿ ವ್ಯವಹಾರದಲ್ಲಿ ಭರವಸೆಯಿಟ್ಟು ಮುನ್ನುಗ್ಗುವಿರಿ. ಆಸೆಪಟ್ಟ ಭೂಮಿಯನ್ನು ಖರೀದಿ ಮಾಡಲು ಉತ್ಸುಕತೆ ತೋರುವಿರಿ. ಸಾರ್ವಜನಿಕ ರಂಗದಲ್ಲಿ ಇರುವವರಿಗೆ ಗೌರವ ಮತ್ತು ಪುರಸ್ಕಾರಗಳು ದೊರೆಯುವ ಸಾಧ್ಯತೆ ಇದೆ. ಬಟ್ಟೆ ವ್ಯಾಪಾರಿಗಳಿಗೆ ವ್ಯವಹಾರ ವೃದ್ಧಿಸುತ್ತದೆ.

ಸಿಂಹ — ಮಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವಿವಾದಿತ ಆಸ್ತಿಯೊಂದು ನಿಮ್ಮ ಪಾಲಿಗೆ ಒದಗಿಬರಲಿದೆ. ಹೈನುಗಾರಿಕೆಯಲ್ಲಿ ತೊಡಗಿಕೊಂಡವರಿಗೆ ಸ್ವಲ್ಪ ಹಿನ್ನಡೆಯಾದರೂ ಉಪ ಉತ್ಪನ್ನಗಳಿಂದ ಅದನ್ನು ಸರಿದೂಗಿಸಬಹುದು. ಕೃಷಿಕರಿಗೆ ಹೆಚ್ಚಿನ ಅನುಕೂಲ ಒದಗಿಬರುತ್ತದೆ. ಶುಭಕಾರ್ಯಗಳಿಗೆ ಹೋಗಿ ಬರಬೇಕಾದ ಅನಿವಾರ್ಯ ಇರಬಹುದು. ನಿಮ್ಮ ಮಾತಿಗೆ ಹೆಚ್ಚಿನ ಮಹತ್ವ ಬಂದು ಉದ್ಯೋಗಿಗಳ ನಡುವೆ ಕಿರಿಕಿರಿಯಾಗಬಹುದು.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಕೆಲವು ರಾಜಕೀಯ ವ್ಯಕ್ತಿಗಳ ಸಾಧನೆಗಳು ಅವರ ನಾಯಕರುಗಳಿಗೆ ತೃಪ್ತಿಯನ್ನು ತರುತ್ತದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಆದ ಪ್ರಗತಿಯನ್ನು ಕಂಡು ಸಂತೋಷಿಸುವಿರಿ. ಪ್ರೀತಿಪಾತ್ರರೊಂದಿಗೆ ನಿಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುವಿರಿ. ಲೇಖಕರು ಮತ್ತು ಪ್ರಕಾಶಕರೊಡನೆ ಒಪ್ಪಂದಗಳು ಏರ್ಪಟ್ಟು ಹೊಸ ಕೃತಿಗಳು ಬಿಡುಗಡೆಯಾಗುತ್ತವೆ. ನೆರೆಹೊರೆಯವರೊಂದಿಗೆ ಉತ್ತಮ ಬಾಂಧವ್ಯ ಬೆಳೆಯುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖ 1,2,3
ಜೀವನಶೈಲಿಯಲ್ಲಿ ಸಾಕಷ್ಟು ಬದಲಾವಣೆ ಮತ್ತು ಹೊಂದಾಣಿಕೆಯನ್ನು ಮಾಡಿಕೊಳ್ಳಲೇಬೇಕಾದ ಅನಿವಾರ್ಯತೆ ಇರುತ್ತದೆ. ಕೆಲವರಿಗೆ ಅವರ ಬುದ್ಧಿ ಮತ್ತು ಸಾಮರ್ಥ್ಯಕ್ಕೆ ತಕ್ಕಂತಹ ಉದ್ಯೋಗ ದೊರೆತು ಸಂತಸವಾಗುತ್ತದೆ. ಮಕ್ಕಳ ನಡವಳಿಕೆಗಳ ಬಗ್ಗೆ ಸರಿಯಾಗಿ ಗಮನಹರಿಸುವುದು ಬಹಳ ಉತ್ತಮ. ಗೃಹೋಪಯೋಗಿ ವಸ್ತುಗಳನ್ನು ಖರೀದಿಸುವ ಸಾಧ್ಯತೆಗಳಿವೆ.

ವೃಶ್ಚಿಕ — ವಿಶಾಖ 4 ಅನೂರಾಧ, ಜ್ಯೇಷ್ಠ
ಲಲಿತಕಲೆಯಲ್ಲಿ ತೊಡಗಿಸಿಕೊಂಡಿರುವವರಿಗೆ ಸೃಜನಶೀಲತೆಯ ಉತ್ತುಂಗಕ್ಕೆ ಏರುವ ಅವಕಾಶ ದೊರೆಯುತ್ತದೆ. ಕೆಲವೊಂದು ಘಟನೆಗಳು ಮನಸ್ಸಿಗೆ ಮುದ ನೀಡುತ್ತವೆ. ಆಪ್ತರ ಆರೋಗ್ಯ ಸುಧಾರಣೆಯಿಂದ ನಿಮಗೆ ತುಸು ನಿರಾಳವೆನಿಸುವುದು. ರಾಜಕೀಯ ಕ್ಷೇತ್ರದಲ್ಲಿರುವವರಿಗೆ ಬಿಡುವಿಲ್ಲದ ಕೆಲಸಗಳಿರುತ್ತವೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮ ವಿರುದ್ಧ ಪಿತೂರಿ ನಡೆಸುತ್ತಿರುವವರ ಸುಳಿವು ನಿಮಗೆ ಸಿಕ್ಕಿ ಅವರ ಬಣ್ಣ ಬಯಲಾಗಲಿದೆ. ಸಹೋದರನಿಗೆ ಉದ್ಯೋಗ ದೊರೆಯುವ ಸಾಧ್ಯತೆ ಇದೆ. ದೈನಂದಿನ ಕೆಲಸಗಳಲ್ಲಿ ಉತ್ಸಾಹ ಮೂಡಿ ಗಣನೀಯ ಸಾಧನೆ ಮಾಡುವಿರಿ. ನೆರೆಹೊರೆಯವರೊಂದಿಗೆ ಉತ್ತಮ ಬಾಂಧವ್ಯದಿಂದ ಸಂತಸ ಮೂಡುವುದು. ಆರ್ಥಿಕವಾಗಿ ಚೇತರಿಸಿಕೊಳ್ಳಲು ಪ್ರಯತ್ನ ಮಾಡುವಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಕೆಲವೊಂದು ಭರವಸೆಗಳು ಹರಿದುಬಂದು ನಿಮಗೆ ಸಾಕಷ್ಟು ಸಂತೋಷವಾಗುವುದು. ಸಾಮಾಜಿಕ ಸೇವಾಕಾರ್ಯದಲ್ಲಿ ತೊಡಗಿಕೊಳ್ಳುವ ಆಸಕ್ತಿ ಮೂಡುತ್ತದೆ. ವೃತ್ತಿಯಲ್ಲಿ ಸವಾಲುಗಳು ಎದುರಾಗಬಹುದು. ಎದೆಗುಂದದೆ ಮುನ್ನುಗ್ಗಿರಿ. ಹಿತಶತ್ರುಗಳ ವಿಚಾರದಲ್ಲಿ ಹೆಚ್ಚಿನ ಜಾಗ್ರತೆ ಅಗತ್ಯ. ವ್ಯವಹಾರದಲ್ಲಿ ಆಗುತ್ತಿದ್ದ ನಷ್ಟ ನಿಮ್ಮ ಎಚ್ಚರಿಕೆಯಿಂದ ತಪ್ಪಲಿದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವ್ಯವಹಾರದಲ್ಲಿ ಎಲ್ಲರನ್ನೂ ಹೊಂದಿಕೊಂಡು ಹೋಗುವ ನಿಮ್ಮ ಸ್ವಭಾವದಿಂದಾಗಿ ಮಹತ್ವದ ಸ್ಥಾನವೊಂದು ದೊರೆಯುತ್ತದೆ. ನಂಬಿಕಸ್ಥ ವ್ಯಕ್ತಿಗಳೆಂದು ತಿಳಿದು ನಿಮ್ಮ ವಿಚಾರಗಳನ್ನು ಹಂಚಿಕೊಳ್ಳುವುದು ನಿಮಗೆ ದುಬಾರಿಯಾಗಬಹುದು. ಯುವಕರಿಗೆ ಉದ್ಯೋಗದಲ್ಲಿ ವಿರೋಧಿಗಳು ಹುಟ್ಟಿಕೊಳ್ಳುವರು. ಪ್ರೀತಿಸಿದ ಹೆಣ್ಣು ಕೈಕೊಡುವ ಸಾಧ್ಯತೆ ಇದೆ. ಕಣ್ಣಿನ ಸೋಂಕು ನಿವಾರಣೆಯಾಗುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಕೆಲವರಿಗೆ ವೃತ್ತಿ ಬದಲಾವಣೆಯನ್ನು ಮಾಡುವ ಯೋಗವಿದೆ. ಹೊಸ ಆಭರಣಗಳನ್ನು ಕೊಳ್ಳಲು ಮನಸ್ಸಾದರೂ ಈಗ ಈಡೇರುವುದಿಲ್ಲ. ಹಿರಿಯರಿಂದ ಬರಬೇಕಾಗಿದ್ದ ಬಾಕಿ ಹಣ ಈಗ ಬರುತ್ತದೆ. ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರು ರಾಜಕೀಯವಾಗಿ ಮುನ್ನೆಲೆಗೆ ಬರುವರು. ಸಂಗಾತಿಯ ಆರೋಗ್ಯದ ಕಡೆ ಹೆಚ್ಚಿನ ಗಮನ ವಹಿಸಿರಿ.

ಪದಬಂಧ 2701



ಮೇಲಿನಿಂದ ಕೆಳಕ್ಕೆ

1. ಬಹುತೇಕ ನಡೆಯುವ ಎಲ್ಲಾ ಕಾರ್ಯಕ್ರಮಗಳು, ಹೋರಾಟಗಳು ಪ್ರಜೆಗಳ ಪರವಾಗಿ 4
2. ಮದುವೆಯಾದ ಹೆಣ್ಣಿನ ಜನ್ಮಗೃಹ 5
3. ನರನಾರಾಯಣರ ನಡುವೆ ಕಲಹಪ್ರಿಯ ಮಹರ್ಷಿಯ ದೊಡ್ಡಕತೆ 6
4. ಕರುಣೆಯನ್ನು ಹೆಸರಲ್ಲಿ ಪಡೆದ ಯುವತಿ 4
7. ದೇವರಿಂದ ಪಡೆಯಬಹುದಾದ ದೊಡ್ಡದಾದ ಕೊಡುಗೆ 4
9. ಚಿಂತೆ, ಚಿಂತನೆಗಳು, ಗೊಂದಲಗಳಿಗೆ ನೆಲೆಯಾಗಿರುವ ನಮ್ಮ ಆಂತರ್ಯ 2
11. ಜೇನಿನಂತೆ ಸವಿಯಾದ, ಮನಸ್ಸಿಗೆ ಹಿತವಾದ ಕಾವ್ಯ ರಚನೆ 6
12. ಗುಡಿಸಿಲಲ್ಲಿ ಅಡಕವಾಗಿರುವ ಮಂದಿರ 2
13. ಶ್ರೀಕೃಷ್ಣನ ಅಚ್ಚುಮೆಚ್ಚಿನ ಸತಿ 3
14. ಇಲ್ಲೇ, ಇದೇ ಬದಕಲ್ಲೇ ನಾವು ಕಾಣುವ ಸ್ವರ್ಗ ಮತ್ತು ಅದಕ್ಕೆ ವ್ಯತಿರಿಕ್ತವಾದ ಕಷ್ಟ ಕಾರ್ಪಣ್ಯದ ಸ್ಥಿತಿ 5
16. ಅಂತರಾಳದ ಸಂಪೂರ್ಣ ಒಪ್ಪಿಗೆ 4
17. ಬೆಂಗಳೂರಿನಲ್ಲಿ ನಡೆಯುವ ಧರ್ಮರಾಯ ಸತಿ ದ್ರೌಪದಿಯ ಶಕ್ತ್ಯುತ್ಸವ 3

ಎಡದಿಂದ ಬಲಕ್ಕೆ

1. ವಿಶ್ವದಲ್ಲೇ ಹೆಸರು ಪಡೆದ ಕೀರ್ತಿವಂತ 5
3. ಹೆಸರು ಸೂಚಿಸುವ ನಿರ್ದೇಶಕ ಶಬ್ದ 4
5. ಶ್ರೇಷ್ಠನಾದ ಹರನಿವನು 5
6. ಯಜ್ಞಕ್ಕೆ ಪ್ರಸಿದ್ಧನಾದ ಸಮರ್ಥ ಪೂಜ್ಯ 4
7. ನಮ್ಮ ಉಳಿವಿಗೆ ನಾವು ಬೆಳಸಲೇಬೇಕಾಗಿರುವ ವೃಕ್ಷ 2
8. ದೀಪಾವಳಿಗೆ ಬೆಳಗುವ ಬೆಂಕಿಕಡ್ಡಿ 3
9. ಗ್ರಹಗಳ ಸಂಚಾರದ ಗೃಹ 2
10. ಮದುಮಗನ ಪ್ರವೇಶ 5
12. ಸಜ್ಜನಿಕೆ ಸೌಜನ್ಯದ ಸ್ವಭಾವದವರು 5
14. ಮಿಡಿಯುವ ರಕ್ತನಾಳ 2
15. ಬಿಡುವಿನ ದಿನ ಬಟ್ಟೆ ಒಗೆಯುವವ 3
16. ಅತ್ಯಮೂಲ್ಯ ಪೂಸು 2
17. ಕಟ್ಟಡ ಕೆಲಸಕ್ಕೆ ಬೇಕಾಗುವ ಸಲಕರಣೆ ಹಿಡಿದ ಶಾನುಭೋಗ 4
18. ಬಹಳ ನಯವಾದ ಸೂಕ್ಷ್ಮವಾದ ಮಂದಿ 5
19. ನಡೆಯುವ ದಾರಿಯ ಅವಸ್ಥೆಯನ್ನೇ ಕಳೆದುಕೊಂಡವ 4
20. ತಾವರೆಯನ್ನು ಹಿಡಿದಿರುವವಳು 5

ಪದಬಂಧ ಉತ್ತರ -2700

ಮೇಲಿಂದ ಕೆಳಕ್ಕೆ

1. ಸಂಧ್ಯಾರಾಗ 2.ನಸುಗೆಂಪು 3.ಸುಮಶರಧರ 4.ತರುಣಶಕ್ತಿ 6.ಮಾರಣ 9.ರುದ್ರಗೀತ 10.ರಾಯರು 12.ಶಮಂತಕ 13.ಕವಿರಾಜಮಾರ್ಗ 14.ಕರ್ಪೂರ 15.ಸಂಸಾರನೌಕೆ 16.ದೂರ್ವಾಸ 17.ವಾಯುಜಲ 18.ರೆಪ್ಪೆಹೊಡಿ

ಎಡದಿಂದ ಬಲಕ್ಕೆ

1. ಸಂವಿಧಾನ 3.ಸುಭಾಷಿತ 5.ಸುದ್ದಿಮಾಧ್ಯಮ 7.ಶರವಣ 8.ಗರುಡಪುರಾಣ 11.ಧನಶಕ್ತಿ 13.ಕರುಣಾಕರ 15.ಸಂತಕವಿ 16.ದೂರವಾಣಿಕರೆ 19.ರಜನಿಜ 20.ಮಾನಸಪೂಜ 21.ಕೆಳವರ್ಗ 22.ಲಜ್ಜೆಗೇಡಿ

ಸ್ವಂತಿಕೆಯ ಹುಡುಕಾಟದಲ್ಲಿ ಬೆಳೆದ ಸಾಲುಗಳು

ಪದ್ಮನಾಭ ಭಟ್

ಇದು ಭುವನಾ ಹಿರೇಮಠ ಅವರ ಎರಡನೇ ಕವನ ಸಂಕಲನ. ಕಾವ್ಯದೊಟ್ಟಿಗಿನ ಆರಂಭಿಕ ಸಹವಾಸ ನೀಡುವ ಆಮಿಷಗಳು, ರೊಮ್ಯಾಂಟಿಕ್ ಕಲ್ಪನೆಗಳನ್ನೆಲ್ಲ ದಾಟಿಕೊಂಡು, ತನ್ನ ಅಂತರಂಗದ ನಿಜದನಿಯನ್ನು ಶೋಧಿಸಿಕೊಳ್ಳುವ ಪ್ರಯತ್ನ ಈ ಸಂಕಲನದಲ್ಲಿ ಎದ್ದು ಕಾಣುತ್ತದೆ. ಕಾವ್ಯದ ವಸ್ತು, ನಿರ್ವಹಣೆ, ಶಿಲ್ಪ, ಭಾಷೆಯ ಬಳಕೆ ಎಲ್ಲ ದೃಷ್ಟಿಯಿಂದಲೂ ಈ ಪ್ರಯತ್ನ ಸಂಕಲನದುದ್ದಕ್ಕೂ ಕಾಣಿಸುತ್ತದೆ. ಆದರೆ ಅದರಲ್ಲಿ ಪೂರ್ತಿ ಯಶಸ್ವಿಯಾಗಿಲ್ಲ ಎಂಬುದಕ್ಕೂ ಇಲ್ಲಿ ಪುರಾವೆಗಳಿವೆ.

'ನಾನು' ಮತ್ತು 'ನೀನು' ಎಂಬುದು, ಅವರಿಬ್ಬರ ಆಚೆಗೊಂದು ಜಗತ್ತೇ ಇಲ್ಲವೇನೋ ಅನ್ನುವಷ್ಟು ಹೊಸ ತಲೆಮಾರಿನ ಹಲವು ಕವಿಗಳಲ್ಲಿ ಕ್ಲೀಷೆಯಾಗಿದೆ. ಭುವನಾ ಅವರ ಪದ್ಯಗಳಲ್ಲಿಯೂ ಈ 'ನಾನು' ಮತ್ತು 'ನೀನು' ಬರುತ್ತಾರೆ. ಆದರೆ ಅವರು ಹಲವು ಸಂಗತಿಗಳನ್ನು ಒಳಗೊಂಡಿರುವ ಪರಿಸರದ ಒಂದು ಭಾಗವಾಗಿ ಬರುತ್ತಾರೆ. ಅಷ್ಟೇ ಅಲ್ಲ, ತಮ್ಮಿಂದ ತಾವೇ ಪಾರಾಗುವ ಊರುಗೋಲಾಗಿಯೂ ಅವರು ಪರಸ್ಪರ ಒದಗಿಬರುತ್ತಾರೆ. 'ಪಾರಾಗಬೇಕಿದೆ ನಾನು ನನ್ನಿಂದ/ ಅವನು ಅವನಿಂದ/ ಇಬ್ಬರೂ ಈ ಕನಸಿನಿಂದ'.

'ರಾತ್ರಿ ಮತ್ತು ಕನ್ನಡಿ' ಎಂಬ ಪದ್ಯವನ್ನೇ ನೋಡಿ. ಇಲ್ಲಿ ಬರುವ ಇಬ್ಬರು ಸಾಕ್ಷಿಗಳಷ್ಟೆ. ಅವರು ಪರಿಧಿಯ ಕೇಂದ್ರದಲ್ಲಿಲ್ಲ; ಅದರ ಒಂದು ಭಾಗವಾಗಿದ್ದಾರಷ್ಟೆ; ಅಲ್ಲಿನ ಬಿಂಬಗಳಿಗೆ ಸಾಕ್ಷಿಯಾಗಿದ್ದಾರೆ. ಕತ್ತಲಾವರಿಸಿದ ಈ ಲೋಕದ ಭಾಗವಾದ ನೋವು ಅವರದಷ್ಟೆ.

'ದೇವಿಯೆಂದರು ರಾತ್ರಿಯನ್ನು/ ಕತ್ತಲೆಂದರು ದೇವಿಯನ್ನು/ ಕತ್ತಲನ್ನು ಅಜ್ಞಾನ ದಾರಿದ್ರ್ಯ/ ವಿಪರ್ಯಾಸವೆಂದರೆ,/ಈಗ ಇಡೀ ಲೋಕಕ್ಕೆ ಕತ್ತಲಾವರಿಸಿದೆ'. ಮತ್ತೆ ಈ ಅಜ್ಞಾನದ ಕತ್ತಲನ್ನು ದಾಟಿದರೆ ಅವನು ಅವಳಾಗಬಹುದು, ಅವಳು ಅವನಾಗಬಹುದು. ಅಕ್ಕನ 'ನಡುವೆ ಸುಳಿವಾತ್ಮನು' ನೆನಪಾಗುವಂಥ ಮುಂದಿನ ಸಾಲುಗಳು ಹೀಗಿವೆ: 'ಆ ಗೌರಿಕೊಳ ದಾಟಿದರೆ/ ಹೆಣ್ಣು ಗಂಡಾಗುವನು/ ಗಂಡು ಹೆಣ್ಣಾಗುವಳು/ ಈ ಕತ್ತಲು ಬೆಳಕಾಗುವುದೇ?/ ನಾನು ನೀನು ಅದಲು ಬದಲು ಕಂಚಿ ಬದಲು.'

ಹೀಗೆ ಹೊರಗಿನಿಂದ ಬೇರೆ ಬೇರೆಯಾಗಿ ಕಾಣಿಸುವವರೆಲ್ಲರೂ ಆಳದಲ್ಲಿ ಒಂದೇ ಆಗಿರುತ್ತಾರೆ ಎಂಬ ಧ್ವನಿ ಅವರ ಹಲವು ಕವಿತೆಗಳಲ್ಲಿ ಸೂಚ್ಯವಾಗಿ ಬರುವುದು ಕುತೂಹಲಕಾರಿ. 'ಅಕ್ಕಿ ಆರಿಸಬೇಕು' ಕವನವನ್ನೇ ಗಮನಿಸಿ. ಈ ಪದ್ಯದಲ್ಲಿ ಹಲವು ಹೆಣ್ಣುಗಳ ಚಿತ್ರಗಳಿವೆ. ಮೊಸರಲ್ಲೂ ಕಲ್ಲು ಹುಡುಕುವಂಥ ಗಂಡನಿಂದ ಕುಂಡೆ ಮೇಲೆ ಬರೆ ಎಳೆಸಿಕೊಳ್ಳುವ, ಕೆನ್ನೆ ಮೇಲೆ ಬೆರಳ ಗುರುತು ಮೂಡಿಸಿಕೊಳ್ಳುವ ಹೆಣ್ಣು, ಚಟಚಟನೆ ಸಿಡಿಯುವ ಅಗ್ನಿಕುಂಡದಲ್ಲಿ ಕಿಚ್ಚು ಹಾಯುವ ಪುರಾಣದ

ಪು: 114 ₹120

ಮತ್ತೆ ಮತ್ತೆ ಮರ್ತ್ಯಕ್ಕಿಳಿಯುತ್ತೇನೆ
ಲೇ: ಭುವನಾ ಹಿರೇಮಠ
ಪ್ರ: ಸಮಕಾಲೀನ ಓದು ಬರಹ
ಸಂ: 9538650944

ಸೀತೆಯಂಥ ಹೆಣ್ಣು, ಅನುದಿನವೂ ಕತ್ತಲೆಯಿಂದ (ಕತ್ತಲೆಯಲ್ಲಿ?) ಬಲಾತ್ಕಾರಕ್ಕೊಳಗಾಗುವ ಹೆಣ್ಣು, ಪ್ರತೀ ಹೆರಿಗೆಗೂ ಹರಕೆ ಹೊರುವ ಸೂಲಗಿತ್ತಿಯೆಂಬ ಹೆಣ್ಣು, ಜೋಳಿಗೆ ತುಂಬೆಲ್ಲ ಕುಡಿಗಳ ತುಂಬಿಕೊಂಡ ಭಿಕ್ಷುಕ ರೂಪದ ಹೆಣ್ಣು... ಮತ್ತಾ ಹೆಣ್ಣು ಕವಿಗೆ ತನ್ನ ಲೋಕವನ್ನೆಲ್ಲ ಹೊತ್ತುಕೊಂಡ ಜಗದಂಬೆಯಂತೆ ಕಾಣಿಸುತ್ತಾಳೆ. ಹಲವು ಕಾಲ, ರೂಪಗಳಲ್ಲಿ ಕಾಣಿಸಿಕೊಳ್ಳುವ ಈ ಹೆಣ್ಣುಗಳು ಬೇರೆ ಬೇರೆಯಲ್ಲ ಎಂಬುದನ್ನು ಕವಿ, ಕವಿತೆಯ ಕಟ್ಟುವಿಕೆಯ ಕ್ರಮದಲ್ಲಿಯೇ ನಮಗೆ ಮನದಟ್ಟು ಮಾಡುತ್ತಾರೆ.

ಇಲ್ಲಿನ ಹಲವು ಪದ್ಯಗಳು ಇನ್ನೊಂದು ಪದ್ಯದಲ್ಲಿ ಮುಂದುವರಿಯುತ್ತವೆ; ತಮ್ಮನ್ನು ತಾವು ವಿಸ್ತರಿಸಿಕೊಳ್ಳುತ್ತವೆ. ಹಾಗೆಯೇ ಒಂದರ ವಸ್ತು ಇನ್ನೊಂದರಲ್ಲಿ ಮತ್ತೊಂದು ಬಗೆಯಲ್ಲಿ ಕಾಣಿಸಿಕೊಳ್ಳುವುದೂ ಇದೆ. ಸತ್ಯವೆಂಬಂತೆ ತೋರುವುದನ್ನು ಹಲವು ಆಯಾಮಗಳಿಂದ ನೋಡಿ, ತನ್ನೊಳಗೆ ಇಳಿಸಿಕೊಳ್ಳುವ ಈ ಪ್ರಯತ್ನ ಮತ್ತೊಂದು ಬಗೆಯಲ್ಲಿ ತನ್ನದೇ ಅಭಿವ್ಯಕ್ತಿಯ ಭಾಷೆಯನ್ನು ಕಟ್ಟಿಕೊಳ್ಳುವ ಪ್ರಯತ್ನವಾಗಿಯೂ ಕಾಣುತ್ತದೆ. ಈ ಪ್ರಯತ್ನದಲ್ಲಿಯೇ ಅವರು ತಮ್ಮ ಹಿಂದಿನವರಿಂದಲೂ, ವರ್ತಮಾನದಿಂದಲೂ, ಆಧುನಿಕ ಬದುಕಿನ ಬಿರುಕುಗಳಿಂದಲೂ ಸಾಕಷ್ಟು ಪಡೆದುಕೊಳ್ಳುತ್ತಾರೆ. ಭೂತ, ವರ್ತಮಾನ ಮತ್ತು ಭವಿಷ್ಯಗಳ ಚಿತ್ರಗಳು ಪರಸ್ಪರ ಒಂದಕ್ಕೊಂದು ಹೆಣೆದುಕೊಂಡೇ ಇವರ ಪದ್ಯಗಳಲ್ಲಿ ಬರುತ್ತವೆ.

ವಿಮರ್ಶೆ

ಹಲವು ಗಟ್ಟಿ ರಚನೆಗಳಿರುವ ಈ ಸಂಕಲನದಲ್ಲಿ, ಅಳ್ಳಕವೆನಿಸುವ ಕಾವ್ಯಗಳೂ ಇವೆ. ಭಾಷೆಯಲ್ಲಿಯೇ ಮೈಮರೆಯುವ ಮೋಹ, ಹುಸಿ ಬೌದ್ಧಿಕತೆಯ ಆಕರ್ಷಣೆ, ವಾಚಾಳಿತನಗಳಿಂದ ಸಡಿಲಗೊಂಡ ರಚನೆಗಳೂ ಇವೆ.

'ಎರಡೆರಡು ಗೋರಿಯಲಿ ಪ್ರತ್ಯೇಕವಾಗಿ' ಎಂಬ ಪದ್ಯ ಶುರುವಾಗುವುದು ಹೀಗೆ: 'ಪ್ರತಿ ರಾತ್ರಿಗೂ ನಿಲ್ಲದೆ ಉರುಳುತ್ತಲೇ ಇರುವ ಕಾಲ/ ಈ ಬೀದಿಗಳಲ್ಲಿ ಆ ಆಗಸದಲ್ಲಿ/ ಮನೆಮನೆಯ ಪಡಸಾಲೆಯಲ್ಲಿ/ ಅಡ್ಡಗೋಡೆಯ ಸಣ್ಣ ಸಣ್ಣ ಮಾಡಿನಲ್ಲಿ/ ಮೊಸರಾಗುವ ಕುಡಿಕೆಯಲ್ಲಿ/ಯಾರ ಅರಿವಿಗೂ ಬರದೆ ವೇದ್ಯವಾಗಿ ಸಾಗುತಿರಲು/...' ಕಾಲದ ಉರುಳುವಿಕೆಯನ್ನು ಹಲವು ತಾಜಾ ಚಿತ್ರಗಳ ಮೂಲಕ ಹೇಳುವ ಪದ್ಯದಲ್ಲಿ ಬರುವ 'ವೇದ್ಯವಾಗಿ' ಎಂಬ ಸಾಲು ಮೈಮರೆಸಿ ಓದಿಸಿಕೊಂಡು ಹೋಗುತ್ತದೆ. ವೇದ್ಯ ಎಂದರೆ ಜ್ಞಾನಿ, ತಿಳಿದವನು, ತಿಳಿದುದು ಎನ್ನುವ ಅರ್ಥಗಳಿವೆ. 'ಯಾರ ಅರಿವಿಗೂ ಬಾರದೆ ತಿಳಿದು ಸಾಗುವುದು ಎಂದರೆ ಏನು?' ತನ್ನ ಶಬ್ದಕೋಶದ ಅರ್ಥವನ್ನು ಹೊರತುಪಡಿಸಿ ಈ ಪದ ಈ ಸನ್ನಿವೇಶದಲ್ಲಿ ಬೇರೆ ಅರ್ಥಸಾಧ್ಯತೆಗಳನ್ನು ಹೊರಡಿಸುತ್ತಿದೆಯೇ? ಅಥವಾ ಬರಿ ಶಬ್ದ ಚಮತ್ಕಾರಕ್ಕಾಗಿ ಬಳಕೆಯಾಗಿದೆಯೇ? ಕವಿಗೆ ತನ್ನ ಪದ್ಯದಲ್ಲಿ ಬರುವ ಒಂದೊಂದು ಶಬ್ದವನ್ನೂ ಯಾಕೆ ಬಳಸುತ್ತಿದ್ದೇನೆ ಎಂಬುದರ ಅರಿವಿರಬೇಕು. ಅಷ್ಟೇ ಅಲ್ಲ, ಅದು ಲೋಕಾರೂಢಿಯಲ್ಲಿ ಯಾವ ಅರ್ಥವನ್ನು ಹೊರಡಿಸುತ್ತದೆ ಎಂಬುದೂ ತಿಳಿದಿದ್ದಾಗಲಷ್ಟೇ ಅದನ್ನು ಮುರಿದುಕಟ್ಟಲು ಸಾಧ್ಯ.

'ಅರ್ಥ ಕಾಮ ಮೋಕ್ಷ ಮತ್ತು ಸ್ವರ್ಗಕ್ಕಾಗಿ' ಪದ್ಯದಲ್ಲಿ ಬರುವ 'ಬಿಕನಾಸಿ ಜ್ಯೋತಿರ್ವರ್ಷಗಳು', 'ಕುಲಗೇಡಿ ಕ್ಯಾಲೆಂಡರುಗಳು', 'ಅನಾಥ ತಾರೀಖುಗಳು' – ಇಂಥ ಪದಪುಂಜಗಳು ವಿಕ್ಷಿಪ್ತವೆನಿಸುವ ಪದಜೋಡಣೆಯಿಂದ ಹುಸಿ ಆಕರ್ಷಣೆ ಹುಟ್ಟಿಸುತ್ತವೆಯೇ ಹೊರತು ಒಟ್ಟಾರೆ ಕಾವ್ಯಕ್ಕೆ ಬಹುಮುಖ್ಯವಾದದ್ದನ್ನೇನೂ ಸೇರಿಸುವುದಿಲ್ಲ. ಸೂಕ್ಷ್ಮವಾಗಿ ನೋಡಿದರೆ ಇವು ಅತಿ ವಾಚಾಳಿತನದಿಂದ, ಪರಪರೆ ಬೆಗಡೆಯಂಥ ಭಾಷೆಯ ಹೊಳಪಿನಿಂದ ಕವಿತೆಯ ಶಿಲ್ಪವನ್ನು ಶಿಥಿಲಗೊಳಿಸುತ್ತಿರುತ್ತವೆ.

ಇವು ಪದಗಳ ಆಕರ್ಷಣೆಯಾದರೆ, 'ನೀನು ನೆನಪಾಗುತ್ತಿ' ಎಂಬಂಥ ಸಾಧಾರಣ ಪದ್ಯಗಳು, ಕವಿತೆಯ ಕುರಿತಾದ ರೊಮ್ಯಾಂಟಿಕ್ ಆಕರ್ಷಣೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಕವಿ ಇನ್ನೂ ಪೂರ್ತಿ ಯಶಸ್ವಿಯಾಗಿಲ್ಲ ಎಂಬುದನ್ನು ಸೂಚಿಸುವಂತಿವೆ.

ಇಂಥ 'ಮೇಲುನೋಟ'ದ ಆಕರ್ಷಣೆಗಳನ್ನು ಮೀರುವ ರಿಸ್ಕ್ ಅನ್ನು ತೆಗೆದುಕೊಂಡಾಗಲಷ್ಟೆ ತಮ್ಮ ನಿಜಧ್ವನಿಯ ಹುಡುಕಾಟಕ್ಕೆ ಅರ್ಥ ಸಿಗುತ್ತದೆ. ಮತ್ತು ಮುಂದಿನ ಬರವಣಿಗೆಯಲ್ಲಿ ಭುವನಾ ಈ ರಿಸ್ಕ್ ಅನ್ನು ತೆಗೆದುಕೊಂಡು ಯಶಸ್ವಿಯಾಗುವ ಲಕ್ಷಣಗಳಂತೂ ಈ ಕವನಸಂಕಲನದಲ್ಲಿ ಇವೆ. ❖

ಕಥೆ

ಮಂಜಯ್ಯ ದೇವರಮನಿ
ಬರೆದ ಕಥೆ
ಕಾಡ್ಕೋಣ ಭೂತಲಿಂಗ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/short-story

ಕವಿತೆ

ಲಕ್ಷ್ಮಣ ವಿ. ಎ.
ಬರೆದ ಕವಿತೆ
ಅವಳ ಹೊಕ್ಕುಳ

ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/poetry

ಸಕ್ಕರೆ ಕಾಯಿಲೆ ಕುರಿತು ಸಮಗ್ರ ವಿವರ

ಇಂದಿನ ಸನ್ನಿವೇಶದಲ್ಲಿ ಸಕ್ಕರೆ ಕಾಯಿಲೆ ಪೀಡಿತರಿಲ್ಲದ ಒಂದಾದರೂ ಮನೆ ಸಿಕ್ಕೀತೇ? ಈ ಪ್ರಶ್ನೆಗೆ ಪ್ರಾಯಶಃ 'ಇಲ್ಲ' ಎನ್ನುವ ಉತ್ತರವೇ ಸಿಕ್ಕೀತು. ಜಗತ್ತಿನಲ್ಲಿ ಚೀನಾ ಹೊರತುಪಡಿಸಿದರೆ ಅತ್ಯಧಿಕ ಸಕ್ಕರೆ ಕಾಯಿಲೆ ಹೊಂದಿದವರ ದೇಶವೆಂದರೆ ಅದು ಭಾರತ. ದಿನೇ ದಿನೇ ಈ ಸಂಖ್ಯೆ ಏರುತ್ತಲೇ ಇದೆ. ಸಕ್ಕರೆ ಕಾಯಿಲೆಯಿಂದ ಹಲವು ಆರೋಗ್ಯ ಸಮಸ್ಯೆಗಳು ಎದುರಾಗುವುದನ್ನು ನಾವು ನಿತ್ಯವೂ ನೋಡಬಹುದು. ಇಂತಹ ಸನ್ನಿವೇಶದಲ್ಲಿ ಸಕ್ಕರೆ ಕಾಯಿಲೆಯನ್ನು ನಾವು ಹೇಗೆ ನಿರ್ವಹಿಸಬೇಕು, ಅದರೊಂದಿಗೆ ನಾವು ಆರಾಮವಾದ ಜೀವನವನ್ನು ಹೇಗೆ ಸಾಗಿಸಬೇಕು ಎಂಬ ಮಾಹಿತಿಯೊಂದಿಗೆ ಡಾ.ಎಸ್.ಪಿ.ಯೋಗಣ್ಣ ಅವರ 'ಸಕ್ಕರೆ ಕಾಯಿಲೆ: ಪ್ರಶ್ನೆ–ಉತ್ತರ' ಕೃತಿ ಹೊರಬಂದಿದೆ.

ವಾಸಿಯಾಗದ ದೀರ್ಘಕಾಲಿಕ ಕಾಯಿಲೆಗಳನ್ನು ಮನೆಯಲ್ಲಿ ಇಟ್ಟುಕೊಳ್ಳಲೇಬೇಕಾದ ಅನಿವಾರ್ಯ ಅತಿಥಿಯಂತೆ ಸ್ವೀಕರಿಸಿ, ಉಪಚರಿಸಿ, ನೆಮ್ಮದಿಯನ್ನು ಕಾಪಾಡಿಕೊಳ್ಳಬೇಕು ಎನ್ನುವುದು ಲೇಖಕರ ಹಿತನುಡಿ. ಕೃತಿಯಲ್ಲಿ ಅವರು ನೀಡಿರುವ ಸಲಹೆಗಳು ಈ ಆಶಯಕ್ಕೆ ಪೂರಕವಾಗಿವೆ. ಸಕ್ಕರೆ ಕಾಯಿಲೆ ಎಂದರೇನು, ಗ್ಲುಕೋಸ್ ಏರಿಳಿತವಾಗುವುದು ಏಕೆ, ಈ ಕಾಯಿಲೆಗೆ ಕಾರಣಗಳು ಏನು, ಇರುವ ವಿಧಗಳು ಯಾವುವು, ಮೂತ್ರಜನಕಾಂಗ, ಕಣ್ಣು, ನರಮಂಡಲದ ಮೇಲೆ ಈ ಕಾಯಿಲೆ ಬೀರುವ ಪರಿಣಾಮಗಳೇನು – ಇವೇ ಮೊದಲಾದ ಪ್ರಶ್ನೆಗಳನ್ನು ಹಾಕಿಕೊಂಡು ಸುದೀರ್ಘವಾಗಿ ಚರ್ಚಿಸಲಾಗಿದೆ. ಔಷಧಿ–ಚಿಕಿತ್ಸೆಗಳ ಕುರಿತು ವಿವರವಾದ ಮಾಹಿತಿ ಒದಗಿಸಲಾಗಿದೆ. ಯೋಗ ಮತ್ತು ವ್ಯಾಯಾಮದ ಮಹತ್ವವನ್ನೂ ತಿಳಿಸಿಕೊಡಲಾಗಿದೆ. ಪ್ರತಿಯೊಂದು ಸಮಸ್ಯೆ, ಪರಿಹಾರದ ಕುರಿತು ಸಚಿತ್ರವಾಗಿ ವಿವರಿಸಲಾಗಿದೆ. ಸಕ್ಕರೆ ಕಾಯಿಲೆ ಕುರಿತು ಮನೆಯಲ್ಲಿ ಇರಬೇಕಾದ ಕೈಪಿಡಿಯಂತೆ ಈ ಕೃತಿ ಭಾಸವಾಗುತ್ತದೆ. ❖

ಮೊದಲ ಓದು

ಪು: 300 ₹225

ಸಕ್ಕರೆ ಕಾಯಿಲೆ: ಪ್ರಶ್ನೆ–ಉತ್ತರ
ಲೇ: ಡಾ.ಎಸ್.ಪಿ. ಯೋಗಣ್ಣ
ಪ್ರ: ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
ಸಂ: 9663113722

ಬೆಂಕಿಯಲ್ಲಿ ಅರಳಿದ ಬಹುಮುಖಿ ವ್ಯಕ್ತಿತ್ವ

ಸುಭಾಷ್ ರಾಜಮಾನೆ

ಈಚೆಗಷ್ಟೇ ನಿಧನರಾದ ಖ್ಯಾತ ವೈದ್ಯೆ ಹಾಗೂ ಲೇಖಕಿ ಡಾ.ಎಚ್. ಗಿರಿಜಮ್ಮನವರ ಆತ್ಮಕತೆ 'ಕಾಡುತಾವ ನೆನಪುಗಳು'. ಬಹುಹಿಂದೆಯೇ ಪ್ರಕಟವಾದರೂ ಯಾಕೋ ಇದು ಓದುಗರ ಗಮನ ಸೆಳೆದಂತೆ ಕಾಣುವುದಿಲ್ಲ. ಹೀಗೆ ಎಷ್ಟೋ ಮಹಿಳಾ ಆತ್ಮಕಥನಗಳು ಅನಾದರಕ್ಕೆ ಒಳಗಾಗಿವೆ.

ಈ ಆತ್ಮಕತೆಯು ಗಿರಿಜಮ್ಮನವರ ಕತೆ ಕಾದಂಬರಿಗಳ ಕಥನದ ರೀತಿ ಅನಿರೀಕ್ಷಿತ ತಿರುವುಗಳಿಂದ ಬೆಚ್ಚಿ ಬೀಳಿಸುವಂತಿದೆ. ಇದು ತಮ್ಮ 'ಮಾನಸ ಪುತ್ರಿ' ಚಿನ್ನುಗೆ (ಚಿನ್ಮಯಿ, ಈಗ ವೈದ್ಯೆಯಾಗಿದ್ದಾರೆ) ಉದ್ದೇಶಿಸಿ ಬರೆದ ಆತ್ಮನಿವೇದನೆಯ ಧಾಟಿಯಲ್ಲಿದೆ. ತಮ್ಮ ನೆನಪುಗಳ ಮೂಲಕ ಗಿರಿಜಮ್ಮನವರು ತಮ್ಮ ಬದುಕನ್ನು ನಿಕಷಕ್ಕೆ ಒಡ್ಡಿಕೊಂಡಿದ್ದಾರೆ. ಅವರು ಪಟ್ಟ ಪಾಡೆಲ್ಲವೂ ಸವಿಗಾನವಾಗಿಲ್ಲ; ಬಹುತೇಕ ಶೋಕಗೀತವೇ ಆಗಿದೆ. ಬದುಕಿನ ಹಾದಿಯಲ್ಲಿ ಎದುರಾದ ಮುಳ್ಳುಗಳನ್ನು ಹಾಗೂ ಅವು ಚುಚ್ಚಿ ಗಾಯಗೊಳಿಸಿದ್ದನ್ನು ನಿರ್ಭಿಡೆಯಿಂದ ಹೇಳಿಕೊಂಡಿದ್ದಾರೆ. ಅವರು ಹಾದುಬಂದ ಹಾದಿಯಲ್ಲಿನ ಸಾಮಾಜಿಕ ವಿಕೃತಿಗಳನ್ನು ತೋರಿಸುತ್ತಲೇ ಅಂತಹವುಗಳನ್ನೆಲ್ಲ ಮೆಟ್ಟಿನಿಂತ ಬಗೆಯನ್ನು ಸಂಯಮದಿಂದ ನಿರೂಪಿಸಿದ್ದಾರೆ. ನಮ್ಮ ಸಮಾಜವು ಮಹಿಳೆಯರನ್ನು ಎಷ್ಟೊಂದು ಅಮಾನುಷವಾಗಿ ನಡೆಸಿಕೊಳ್ಳುತ್ತದೆ ಎಂಬುದಕ್ಕೆ ಈ ಕೃತಿಯು ಸಾಕ್ಷಿಗಲ್ಲಾಗಿದೆ.

ಗಿರಿಜಮ್ಮನವರು ತಮ್ಮ ಆತ್ಮಕತೆಯಲ್ಲಿ ಪ್ರಪಂಚದೊಳಗೆ ಮೂರು ಬಗೆಯ ನ್ಯಾಯಗಳಿರುವುದನ್ನು ಪ್ರಸ್ತಾಪಿಸುತ್ತಾರೆ. ಮೊದಲನೆಯದಾಗಿ, ಒಂದು ಬೆಕ್ಕು ತನ್ನ ಮರಿಗಳ ಸುರಕ್ಷತೆಗಾಗಿ ತನ್ನ ಬಾಯಿಂದಲೇ ಕಚ್ಚಿಕೊಂಡು ಸುರಕ್ಷಿತ ಜಾಗದಲ್ಲಿ ಇರಿಸುತ್ತದೆ. ಎರಡನೆಯದಾಗಿ, ಕೋತಿ ತನ್ನ ಮರಿಯನ್ನು ಬಿಗಿದಪ್ಪಿಕೋ ಎಂದು ಸೂಚಿಸುತ್ತದೆ; ಆದರೆ ಬಿದ್ದರೆ ತಾನು ಹೊಣೆಯಲ್ಲ ಎಂಬಂತೆ ಜಿಗಿಯುತ್ತದೆ. ಮೂರನೆಯದಾಗಿ, ನೀರು ಧುಮುಕಿ ಹರಿಯುವ ಜಾಗದಲ್ಲಿ ಕುರಿಮರಿಯು ನೀರು ಕುಡಿಯುತ್ತಿದ್ದಾಗ ತೋಳ ಕಾಲುಕೆರೆದು ಅದನ್ನು ಹರಿದು ತಿನ್ನಲು ಹೊಂಚು ಹಾಕಿರುತ್ತದೆ. ಈ ಹಿನ್ನೆಲೆಯಲ್ಲಿ ಅವರ ಬದುಕು ಮೂರನೆಯ ಪ್ರಕಾರದ ನ್ಯಾಯಕ್ಕೆ ಸೇರುತ್ತದೆ ಎಂದು ಹೇಳಿಕೊಂಡಿದ್ದಾರೆ. ತನ್ನಪಾಡಿಗೆ ತಾನಿದ್ದರೂ ಈ ಸಮಾಜ ಬಿಡಲಾರದು ಎಂದು ಗಿರಿಜಮ್ಮನವರು ನೋವು ಮತ್ತು ವಿಷಾದದಿಂದ ಬರೆಯುತ್ತಾರೆ. ಇಲ್ಲಿ ಸಮಾಜವೆಂದರೆ ಪುರುಷ ಪ್ರಾಧಾನ್ಯವನ್ನು ಪೋಷಿಸುತ್ತಿರುವ ಯಜಮಾನಿಕೆಯಾಗಿದೆ.



ಪು: 156 ₹150

ಕಾಡುತಾವ ನೆನಪುಗಳು
ಲೇ: ಡಾ.ಎಚ್. ಗಿರಿಜಮ್ಮ
ಪ್ರ: ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು
ಸಂ: 9740066842

ಗಿರಿಜಮ್ಮನವರು ತಮ್ಮ ವೃತ್ತಿಶಿಕ್ಷಣ ಹಾಗೂ ವೃತ್ತಿ ಜೀವನದಲ್ಲಿ ಅವಮಾನ, ನೋವು, ಅನ್ಯಾಯಗಳನ್ನು ಎದುರಿಸುವ ಸನ್ನಿವೇಶಗಳು ನಿರ್ಮಾಣವಾಗುತ್ತವೆ. ವೈದ್ಯಕೀಯ ಶಿಕ್ಷಣ ಪಡೆಯುವ ಹೊತ್ತಿನಲ್ಲಿಯೇ ತಾವು ಇಷ್ಟಪಟ್ಟ ಹಿರಿಯ ವೈದ್ಯರೊಬ್ಬರಿಂದ ತಿರಸ್ಕೃತರಾಗಿ ಪ್ರೇಮ ಭಂಗವಾಗುತ್ತದೆ. ಅದನ್ನು ಹೇಗೋ ಉನ್ನತ ವೈದ್ಯಕೀಯ ಶಿಕ್ಷಣ ಪಡೆಯುವಾಗ ಮರೆಯಲು ಪ್ರಯತ್ನಿಸಿದರೆ ಅಲ್ಲಿ ವೈದ್ಯರಿಂದ ಕಿರುಕುಳ ಶುರುವಾಗುತ್ತದೆ. ಓದಿನಲ್ಲಿ ಜಾಣೆಯಾಗಿದ್ದ ಮತ್ತು ಹಗಲಿರುಳು ಶ್ರಮಿಸುತ್ತಿದ್ದ ಗಿರಿಜಮ್ಮರ ಮನಸ್ಸು ಕುಗ್ಗಿ ಹೋಗುತ್ತದೆ. ಅಸೈನ್‌ಮೆಂಟ್‌ಗಳೆಲ್ಲವೂ ಸರಿಯಾಗಿದ್ದರೂ ಸಹಿ ಹಾಕದೇ ವೈದ್ಯರೊಬ್ಬರು ಲೈಂಗಿಕವಾಗಿ ಪೀಡಿಸುತ್ತಾರೆ. ಇವುಗಳಿಂದ ನೊಂದುಕೊಳ್ಳುವ ಗಿರಿಜಮ್ಮ ಅಸೈನ್‌ಮೆಂಟ್ ಅನ್ನು ಆ ವೈದ್ಯನ ಮೇಜಿನ ಮೇಲೆ ಬಿಸಾಕುವಷ್ಟು ಎದೆಗಾರಿಕೆ ತೋರಿಸುತ್ತಾರೆ.

ಗಿರಿಜಮ್ಮನವರು ಯಾವುದೇ ಬಗೆಯ ತಾರತಮ್ಯ ಹಾಗೂ ಅನ್ಯಾಯವನ್ನು ಸಹಿಸದ ನೇರಾನೇರ ಖಡಕ್ ಮಾತಿನವರಾಗಿದ್ದರು. ಆದರೆ ಎಷ್ಟೋ ಅಪಮಾನಗಳಿಂದ ವಿಚಲಿತರಾಗಿದ್ದೂ ಇದೆ. ಉನ್ನತ ವೈದ್ಯಕೀಯ ಶಿಕ್ಷಣವನ್ನು ಅರ್ಧದಲ್ಲಿಯೇ ತೊರೆದ ನಿದರ್ಶನವೂ ಇದೆ. ಸರ್ಕಾರಿ ವೈದ್ಯಾಧಿಕಾರಿಯಾಗಿ ಹಳ್ಳಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡಾಗಲೂ ಅವರಿಗೆ ಅಭದ್ರತೆಯೇ ಕಾಡುತ್ತದೆ. ಆದರೂ ರೋಗಿಗಳ ಬಗ್ಗೆ ಅಪಾರ ಕಾಳಜಿ ಹೊಂದಿದ್ದವರು. ಎಷ್ಟೇ ದಕ್ಷತೆಯಿಂದ ಮತ್ತು ಪಾರದರ್ಶಕತೆಯಿಂದ ದುಡಿದರೂ ಅವರು ಹಿಂಸೆ ಅನುಭವಿಸುವುದು ತಪ್ಪುವುದಿಲ್ಲ. ಸಲ್ಲದ ಅಪಪ್ರಚಾರಗಳಿಂದ ಅವರ ಮಾನಸಿಕ ನೆಮ್ಮದಿಯನ್ನು ಕದಡಿಸಲಾಗುತ್ತದೆ. ಇಂತಹ ಅಡಚಣೆಗಳ ನಡುವೆಯೂ ಗಿರಿಜಮ್ಮನವರು ಧೃತಿಗೆಡದೆ ಏಕಾಂಗಿಯಾಗಿ ಸಂಘರ್ಷ ನಡೆಸುತ್ತಾರೆ. ಆದರೆ ಕೌಟುಂಬಿಕ ಹಿಂಸೆ ಮತ್ತು ಸಾರ್ವಜನಿಕ ಹಿಂಸೆಗಳಿಂದ ಅವರ ಬದುಕು ಮುಕ್ತವಾಗಿರಲಿಲ್ಲ.

ಒಳನೋಟ

ಎಷ್ಟೇ ನೋವು ಅನುಭವಿಸಿದರೂ ಗಿರಿಜಮ್ಮನವರು ತಮ್ಮ ಅಂತರಂಗದಲ್ಲಿ ಪ್ರೀತಿಯನ್ನು ತುಂಬಿಕೊಂಡಿದ್ದರು. ನಿಷ್ಕಪಟ ಮನಸ್ಸಿನಿಂದ ಯುವಕನೊಬ್ಬನನ್ನು ಪ್ರೀತಿಸುತ್ತಾರೆ. ಆದರೆ ಮದುವೆಯಾಗಲು ಆತ ನಿರಾಕರಿಸುತ್ತಾನೆ. ಆ ಯುವಕ ಮಾತ್ರ ತನ್ನದೇನೂ ತಪ್ಪಿಲ್ಲವೆಂಬಂತೆ ಬೇರೆ ಮದುವೆಯಾಗುತ್ತಾನೆ. ಪ್ರಶ್ನಿಸಿದರೆ ಗಿರಿಜಮ್ಮನವರಿಗೆ ಸಿಕ್ಕಿದ್ದು ಹಾದರದ ಹಣೆಪಟ್ಟಿ; ಊರ ತುಂಬ ವದಂತಿಗಳನ್ನು ಹಬ್ಬಿಸಿ ಅವರ ತೇಜೋವಧೆ ಮಾಡಲಾಗುತ್ತದೆ. ಇದರಿಂದ ನೊಂದುಕೊಳ್ಳುವ ಅವರ ಸಂಬಂಧಿಕರು ದೂರವಾಗುತ್ತಾರೆ. ಆದರೆ ಗಿರಿಜಮ್ಮನವರ ಸಂಪಾದನೆಯ ದುಡ್ಡು ಮಾತ್ರ ಅವರಿಗೆ ಬೇಕಿರುತ್ತದೆ; ಗಿರಿಜಮ್ಮನವರ ನೋವು, ಸಂಕಟಗಳಿಗೆ ಸ್ಪಂದಿಸದಷ್ಟು ಅನಾಮಿಕರಾಗುತ್ತಾರೆ. ಇದರ ಪರಿಣಾಮವೆಂದರೆ ಗಿರಿಜಮ್ಮ ಒಂಟಿಯಾಗಿ ಖಿನ್ನತೆಯಿಂದ ಆಮೆಯಂತೆ ಚಿಪ್ಪಿನೊಳಗೆ ಸೇರಿಕೊಳ್ಳುತ್ತಾರೆ.

ಗಿರಿಜಮ್ಮನವರದ್ದು ವರ್ಣರಂಜಿತ ಮತ್ತು ಕ್ರಿಯಾಶೀಲ ವ್ಯಕ್ತಿತ್ವವಾಗಿತ್ತು. ಸಾಹಿತ್ಯ, ಶಿಕ್ಷಣ, ವೈದ್ಯಕೀಯ, ಸಿನಿಮಾ, ಸಾಕ್ಷ್ಯಚಿತ್ರ, ಧಾರಾವಾಹಿ ಮೊದಲಾದ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಆಧುನಿಕ ಸೌಕರ್ಯಗಳಿಲ್ಲದ ದಾವಣಗೆರೆಯ ಹಳ್ಳಿಗಾಡಿನ ಸರ್ಕಾರಿ ಶಾಲೆಯಲ್ಲಿ ಓದಿ, ಮುಂದೆ ವೈದ್ಯಕೀಯ ಕ್ಷೇತ್ರದಲ್ಲಿ ಉನ್ನತ ಪದವಿ ಪಡೆದವರು. ಕನ್ನಡದಲ್ಲಿ ಎಂ.ಎ. ಸ್ನಾತಕೋತ್ತರ ಪದವಿ, ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ ಪದವಿ ಹಾಗೂ ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಡಿ.ಲಿಟ್. ಪದವಿ ಪಡೆದುಕೊಂಡಿದ್ದು ಅವರ ಅಭಿರುಚಿಯ ಹರವನ್ನು ತೋರಿಸುತ್ತದೆ.

ಗಿರಿಜಮ್ಮನವರು ಪರಿಶುದ್ಧ ಮನಸ್ಸಿನ, ಅಂತಃಕರಣ ತುಂಬಿದ, ಮಾನವೀಯ ಮೌಲ್ಯಗಳ ವೈದ್ಯರಾಗಿದ್ದರು. ಕನ್ನಡದ ಲೇಖಕಿಯಾಗಿ ಜನಪ್ರಿಯರಾಗಿದ್ದರು. ಆದರೆ ತಮ್ಮ ವೈಯಕ್ತಿಕ ಬಾಳಿನಲ್ಲಿ ಬಹಳಷ್ಟು ಹಿಂಸೆ, ನೋವು, ವೇದನೆ, ಕ್ರೌರ್ಯಗಳನ್ನು ಅನುಭವಿಸಿದ್ದು ಎಂತಹವರನ್ನು ಕೂಡ ಕಂಗಾಲಾಗುವಂತೆ ಮಾಡುತ್ತದೆ. 'ಕಾಡತಾವ ನೆನಪುಗಳು' ಆತ್ಮಕತೆಯು ಗಿರಿಜಮ್ಮನವರ ಸಾರ್ವಜನಿಕ ಸಾಧನೆ ಹಾಗೂ ಅವರ ಖಾಸಗಿ ಬದುಕಿನ ತೊಳಲಾಟದ ವೈರುಧ್ಯಗಳನ್ನು ದಾಖಲಿಸುತ್ತದೆ. ಮಹಿಳೆಯೊಬ್ಬಳು ತನ್ನ ನನಸಾಗದ ಕನಸುಗಳನ್ನು ದಿಟ್ಟತನದಿಂದ ಆತ್ಮಾವಲೋಕನ ಮಾಡಿಕೊಂಡಿರುವುದರಿಂದ ಈ ಕೃತಿಯು ಮುಖ್ಯವಾಗುತ್ತದೆ. ❖

ಅಳುವ ನೆಲ!

10ನೇ ಪುಟದಿಂದ...

ಅಫ್ಗಾನಿಸ್ತಾನದ ಮರುನಿರ್ಮಾಣ ಕಾರ್ಯದಲ್ಲಿ ಭಾರತವೂ ತೊಡಗಿಸಿಕೊಂಡಿದ್ದು, ಮೂಲಸೌಕರ್ಯ ವೃದ್ಧಿ, ಸಂಸತ್ ಭವನ ನಿರ್ಮಾಣ, ಕೌಶಲಾಭಿವೃದ್ಧಿ ಮತ್ತಿತರ ಚಟುವಟಿಕೆಗಳಲ್ಲಿ ಭಾರಿ ಪ್ರಮಾಣದ ಹಣವನ್ನು ತೊಡಗಿಸಿದೆ. ಅದರ ಈ ಹೂಡಿಕೆಯಲ್ಲಿ ಸ್ವಹಿತಾಸಕ್ತಿಯೂ ಇದೆ. ಭಾರತದೊಂದಿಗೆ ಪರ್ಷಿಯಾ ಹಾಗೂ ಸೆಂಟ್ರಲ್ ಏಷ್ಯಾದ ಸಂಪರ್ಕ ಸೇತು ಎನಿಸಿರುವ ಅಫ್ಗಾನಿಸ್ತಾನ, ಸಾವಿರಾರು ವರ್ಷಗಳಿಂದ ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು. ಒಂದು ಕಾಲದಲ್ಲಿ ಬಹುತೇಕ ಅಫ್ಗನ್ ಸಂಗೀತಗಾರರು ಪಟಿಯಾಲಾ ಘರಾಣಾದ ಶಿಷ್ಯವೃಂದಕ್ಕೆ ಸೇರಿದವರಾಗಿದ್ದರು. ಭಾರತದ ಸಿನಿಮಾಗಳು, ಟಿ.ವಿ ಧಾರಾವಾಹಿಗಳು ಇಲ್ಲಿ ಭಾರಿ ಜನಪ್ರಿಯವಾಗಿದ್ದವು. ಸಾಸ್ ಭೀ ಕಭಿ ಬಹೂ ಥಿ, ಕಸೌಟಿ ಜಿಂದಗಿ ಕೀ, ಕುಂ ಕುಂ, ಕಹಾನಿ ಘರ್ ಘರ್ ಕೀ ಮೊದಲಾದ ಧಾರಾವಾಹಿಗಳನ್ನು ಇಲ್ಲಿನ ಜನ ಮುಗಿಬಿದ್ದು ನೋಡುತ್ತಿದ್ದರು.

ತಾಲಿಬಾನ್ ಆಡಳಿತ ಮತ್ತೆ ಮರುಸ್ಥಾಪನೆ ಆಗಿದ್ದರಿಂದ ಭಾರತ ಈಗ ಭದ್ರತೆ ಸೇರಿದಂತೆ ಎಲ್ಲ ವಿಷಯಗಳಲ್ಲೂ ಜಾಗ್ರತೆ ವಹಿಸಬೇಕಿದೆ. ಭಾರತದ ಹೂಡಿಕೆಯ ಭವಿಷ್ಯದ ಕುರಿತು ಸ್ಪಷ್ಟತೆ ಇಲ್ಲ. ಅಫ್ಗಾನಿಸ್ತಾನದಲ್ಲಿ ಏನೇ ಸಂಭವಿಸಿದರೂ ಅದರ ಪರಿಣಾಮ ನೇರವಾಗಿ ನಮ್ಮ ಮೇಲೂ ಆಗುತ್ತದೆ. ಮೊದಲ ಸಲ ತಾಲಿಬಾನ್ ಅಧಿಕಾರಕ್ಕೆ ಬಂದಾಗ ಪಾಕಿಸ್ತಾನ ಹಾಗೂ ಸೌದಿ ಅರೇಬಿಯಾ ಸರ್ಕಾರಗಳು ಮಾತ್ರ ಅದನ್ನು ಮಾನ್ಯ ಮಾಡಿದ್ದವು. ಆದರೆ, ಈ ಸಲ ಕಾಬೂಲ್ ವಶಪಡಿಸಿಕೊಳ್ಳಲು ತಾಲಿಬಾನ್ ಮುನ್ನುಗ್ಗುತ್ತಿರುವಾಗಲೇ ಮಾಸ್ಕೊ, ಟೆಹರಾನ್, ಬೀಜಿಂಗ್ ಮೊದಲಾದ ಕಡೆಗಳಿಂದ ಅದಕ್ಕೆ ಮಾನ್ಯತೆ ಸಿಕ್ಕಿದೆ. ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಅಧಿಕಾರದ ಚುಕ್ಕಾಣಿ ಹಿಡಿದ ಮೇಲೆ ಅಲ್ಲಿಂದ ಹೊರಟಿರುವ ಸಂದೇಶಗಳು ಮಿಶ್ರಭಾವವನ್ನು ಉಂಟುಮಾಡಿವೆ. ಎಲ್ಲರಿಗೂ ಕ್ಷಮಾದಾನದ ಘೋಷಣೆ ಮಾಡುವ ಮೂಲಕ ತಾಲಿಬಾನ್ ತುಸು ಬದಲಾದಂತೆ ತೋರಿಸಿಕೊಳ್ಳುತ್ತಿದೆ. ಆದರೆ, ಅದರೊಂದಿಗೆ ವ್ಯವಹರಿಸುವಾಗ ಎಚ್ಚರಿಕೆಯಿಂದ ಹೆಜ್ಜೆ ಇಡುವುದು ಅನಿವಾರ್ಯವಾಗಿದೆ.

ಮಹಿಳೆಯರಿಗೆ ಕೆಲಸ ಮಾಡಲು ಅವಕಾಶ ನೀಡುವ ಕುರಿತು ತಾಲಿಬಾನ್ ಸಂಘಟನೆಯಲ್ಲಿ ಚಿಂತನೆ ನಡೆದಿರುವುದು ಸತ್ಯವಾದರೂ ಇಂತಹ ವಿಷಯಗಳಲ್ಲಿ ಅದರ ರಾಜಕೀಯ ವಿಭಾಗದ ಮಾತಿಗಿಂತಲೂ ಸೇನಾ ವಿಭಾಗದ ಮಾತಿಗೆ ಮಾನ್ಯತೆ ದೊರೆಯುವ ಸಾಧ್ಯತೆ ಹೆಚ್ಚು. ಏಕೆಂದರೆ, ಈಗ ಸಿಕ್ಕ

ದೇಶ ತೊರೆಯಲು ನೂಕುನುಗ್ಗಲು... ಕಾಬೂಲ್ ವಿಮಾನ ನಿಲ್ದಾಣದ ಮುಂದೆ ಜಮಾಯಿಸಿದ ಜನಸ್ತೋಮ...

ಸಂಘರ್ಷದ ಸಂದರ್ಭದಲ್ಲಿ ಪೋಷಕರಿಂದ ಬೇರ್ಪಟ್ಟ ಮಗುವೊಂದು ನಿದ್ದೆಗೆ ಜಾರಿರುವುದು

ಅಧಿಕಾರ ಅದರ ಹೋರಾಟದ ಫಲ. ಸಿದ್ಧಾಂತದ ವಿಷಯದಲ್ಲಿ ತಾಲಿಬಾನ್‌ನ ವಿವಿಧ ಗುಂಪುಗಳಲ್ಲಿ ಅಂತಹ ಭಿನ್ನಾಭಿಪ್ರಾಯ ಢಾಳಾಗಿ ಗೋಚರಿಸಿಲ್ಲ. ಕಳೆದ ಸಲದಂತೆ ಜಗತ್ತಿನಲ್ಲಿ ಮೂಲೆಗುಂಪಾಗಿ ಉಳಿಯಲು ಬಯಸದ ತಾಲಿಬಾನ್, ವಿವಿಧ ರಾಷ್ಟ್ರಗಳ ವಿಶ್ವಾಸ ಗಳಿಸುವ ಕಡೆಗೆ ಗಮನಹರಿಸಿದಂತಿದೆ. ಆದರೆ, ಅಂತಹ ವಿಶ್ವಾಸ ಗಿಟ್ಟಿಸುವುದು ಅಷ್ಟು ಸುಲಭವಲ್ಲ. ಎಲ್ಲರನ್ನೂ ಒಳಗೊಳ್ಳುವ ಸರ್ಕಾರದ ರಚನೆ, ಆಧುನಿಕ ಕಾನೂನುಗಳಿಗೆ ಅನುಗುಣವಾದ ಆಡಳಿತ, ಲಿಂಗ ಸಮಾನತೆ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಭಯೋತ್ಪಾದನೆಗೆ ಅಫ್ಗನ್ ನೆಲ 'ಲಾಂಚ್ ಪ್ಯಾಡ್' ಆಗದಂತೆ ನೋಡಿಕೊಳ್ಳುವಲ್ಲಿ ತಾಲಿಬಾನ್ ತೋರುವ ವರ್ತನೆಯಲ್ಲಿ ಜಗತ್ತು ಅದನ್ನು ನಂಬುವ ಪ್ರಶ್ನೆ ಅಡಗಿದೆ. ಅಲ್ ಕೈದಾ ಹಾಗೂ ಇಸ್ಲಾಮಿಕ್ ಸ್ಟೇಟ್‌ನ ಬೇರುಗಳು ಅಫ್ಗಾನಿಸ್ತಾನದಲ್ಲೂ ಹರಡಿಕೊಂಡಿದ್ದು, ಅದನ್ನು ಕಿತ್ತೊಗೆಯಬೇಕು ಎಂದೂ ಜಗತ್ತು ಬಯಸಿದೆ. ತಾಲಿಬಾನ್ ಈ ಬಯಕೆಯನ್ನು ಈಡೇರಿಸುವ ನಿಟ್ಟಿನಲ್ಲಿ ಹೇಗೆ ಹೆಜ್ಜೆ ಹಾಕಲಿದೆ ಎಂಬುದು ಕುತೂಹಲಕಾರಿಯಾಗಿದೆ.

ಚಾವಣಿಯಿಲ್ಲದ ಗೋಡೆಗೆ ಆತುಕೊಂಡು ಕುಳಿತ ಮಕ್ಕಳಿಗೆ ಮೇಷ್ಟ್ರು ಸಿಗುವರೇ? ರೆಡ್‌ಕ್ರಾಸ್‌ನ ಕೈಯಿಲ್ಲದ, ಕಾಲು ಮುರಿದುಕೊಂಡ ಮಕ್ಕಳ ದಸ್ತಾವೇಜಿನ ಪಟ್ಟಿ ಮತ್ತೆ ಬೆಳೆಯದಂತೆ ಅಲ್ಲಿ ಶಾಂತಿ ನೆಲೆಸುವುದೇ ಎಂಬ ಪ್ರಶ್ನೆ ಉಳಿದೆಲ್ಲಕ್ಕಿಂತಲೂ ಬಹುಮುಖ್ಯವಾಗಿದೆ.

ಲೇಖಕ: ವಿದೇಶಾಂಗ ನೀತಿ ಹಾಗೂ ಜಾಗತಿಕ ರಾಜಕೀಯ ವಿದ್ಯಮಾನಗಳ ವಿಶ್ಲೇಷಕ, ದೆಹಲಿ ಮೂಲದ ಪತ್ರಕರ್ತ

ಕನ್ನಡಕ್ಕೆ: ಪ್ರವೀಣ ಕುಲಕರ್ಣಿ

ಸ್ತ್ರೀ ಸ್ವಾತಂತ್ರ್ಯ ಮತ್ತೆ ಹರಣ

ಇಪ್ಪತ್ತು ವರ್ಷಗಳ ಹಿಂದೆ ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಅಧಿಕಾರದಲ್ಲಿದ್ದಾಗ ಮಹಿಳೆಯರು ಒಬ್ಬಂಟಿಯಾಗಿ ಮನೆಬಿಟ್ಟು ಹೊರಹೋಗುವಂತಿರಲಿಲ್ಲ. ಅಡಿಯಿಂದ ಮುಡಿಯವರೆಗೆ ಬುರ್ಖಾ ಧರಿಸಿಕೊಂಡು, ಮನೆಯ ಪುರುಷ ಸಂಬಂಧಿಯೊಬ್ಬರ ಜತೆಯಲ್ಲೇ ಹೊರಹೋಗಬೇಕಿತ್ತು. ಮಹಿಳೆಯರಿಗೆ ಕೆಲಸ ಮಾಡುವುದಕ್ಕಾಗಲಿ ಇಷ್ಟಪಟ್ಟ ಉಡುಗೆ ತೊಡುವುದಕ್ಕಾಗಲಿ, ಸಂಗೀತ ಕೇಳುವುದಕ್ಕಾಗಲಿ, ಹಾಡು ಹಾಡುವುದಕ್ಕಾಗಲಿ ಅನುಮತಿ ಇರಲಿಲ್ಲ. ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಸರ್ಕಾರ ಉರುಳಿ, ಪ್ರಜಾಪ್ರಭುತ್ವ ಸರ್ಕಾರ ರಚನೆಯಾದ ಮೇಲೆ ಮಹಿಳೆಯರಿಗೆ ಕೆಲಸ ಮಾಡಲು ಅನುಮತಿ ಸಿಕ್ಕಿತು. ಸರ್ಕಾರಿ ಇಲಾಖೆಗಳಲ್ಲೂ ಅವರನ್ನು ನೇಮಕ ಮಾಡಿಕೊಳ್ಳಲಾಯಿತು. ಕಾಬೂಲ್‌ನಲ್ಲಿ ಫ್ಯಾಷನ್ ಷೋಗಳು ನಡೆಯತೊಡಗಿದವು. ಮನೆಯ ಕತ್ತಲಲ್ಲೇ ಬಂದಿಯಾಗಿದ್ದ ಸುಂದರಿಯರು ಅಲಂಕಾರ ಮಾಡಿಕೊಂಡು ರ್‍ಯಾಂಪ್ ಮೇಲೆ ಹೆಜ್ಜೆ ಹಾಕತೊಡಗಿದರು. ತಮಗೆ ಇಷ್ಟವಾದ ದಿರಿಸು ತೊಟ್ಟು ಸಂಭ್ರಮಿಸಿದರು. ಹೋಟೆಲ್‌ಗಳಲ್ಲಿಯೂ ಅವರ ಕಿಲಕಿಲ ನಗು ಕೇಳಬಹುದಾಗಿತ್ತು. ಸಿನಿಮಾ ಹಾಲ್‌ಗಳು ಮತ್ತೆ ತೆರೆದವು. ಚಿತ್ರ ನೋಡಲು ಜನ ಮುಗಿಬಿದ್ದರು. ತಾಲಿಬಾನ್ ಸರ್ಕಾರ ಮರುಸ್ಥಾಪನೆ ಆಗಿದ್ದರಿಂದ ಎಲ್ಲವೂ ಈಗ ಮೊದಲಿದ್ದ ಸ್ಥಾನಕ್ಕೆ ಬಂದು ನಿಂತಿವೆ.

ಕಾಬೂಲ್‌ನಲ್ಲಿ ನಡೆದ ಫ್ಯಾಷನ್ ಷೋದಲ್ಲಿ ಭಾಗವಹಿಸಲು ಸಿದ್ಧಗೊಳ್ಳುತ್ತಿದ್ದ ರೂಪದರ್ಶಿ

ನೀವೇ ಪ್ರಕಾಶಕ...

10ನೇ ಪುಟದಿಂದ...

'ನಮ್ಮ ಪುಸ್ತಕ ಯಾರು ಪ್ರಕಟಿಸುತ್ತಾರೆ ಎಂದು ಹೊಸಬರು ಕೇಳುವ ಪ್ರಶ್ನೆಗಳಿಗೆ ಡಿಜಿಟಲ್ ವೇದಿಕೆಯಲ್ಲಿ ಒಂದಿಷ್ಟು ಪರಿಹಾರ ಸಿಗುತ್ತದೆ. ಬರಹಗಾರರು ಎಷ್ಟೇ ಸಣ್ಣ ಊರಿನಲ್ಲಿ ಇರಲಿ, ಅವರ ಬರಹವು ಯೂನಿಕೋಡ್‌ನಲ್ಲಿ ಇದ್ದರೆ, ಮೈಲ್ಯಾಂಗ್ ವೇದಿಕೆಯಲ್ಲಿ ಒಂದು ಖಾತೆ ತೆರೆದು, ಅಲ್ಲಿ ಅವರು ತಮ್ಮ ಇ–ಪುಸ್ತಕವನ್ನು ಪ್ರಕಟಿಸಬಹುದು. ಆ ಪುಸ್ತಕದ ಬೆಲೆ ಎಷ್ಟಿರಬೇಕು ಎಂಬುದನ್ನೂ ಅವರೇ ತೀರ್ಮಾನಿಸಬಹುದು' ಎಂದು ಶೆಟ್ಟಿ ತಮ್ಮ ಸಂಸ್ಥೆಯ ಹೊಸ ಹೆಜ್ಜೆಯ ಕುರಿತು ವಿವರ ನೀಡಿದರು.

ಮೈಲ್ಯಾಂಗ್ ಸಂಸ್ಥೆಯ ಪ್ರತಿನಿಧಿಗಳು ಇ–ಪುಸ್ತಕದ ಹೂರಣವನ್ನು ಒಮ್ಮೆ ಪರಿಶೀಲಿಸಿ, ನಂತರ ಅದನ್ನು ತಮ್ಮ ವೇದಿಕೆ ಮೂಲಕ ಓದುಗರ ಮುಂದೆ ಇರಿಸುತ್ತಾರೆ. ಪುಸ್ತಕದ ಪರಿಶೀಲನೆ ಕೆಲಸವು ಸಾಮಾನ್ಯವಾಗಿ 48 ಗಂಟೆಗಳಲ್ಲಿ ಆಗುತ್ತದೆ ಎಂಬುದು ಸಂಸ್ಥೆಯ ಹೇಳಿಕೆ. ಪುಸ್ತಕದ ಮಾರಾಟದಿಂದ ಬಂದ ಹಣದಲ್ಲಿ ಒಂದು ಪಾಲು ಲೇಖಕರಿಗೆ ಸಂದಾಯವಾಗುತ್ತದೆ. 'ಮೊದಲ ಬಾರಿಗೆ ಪುಸ್ತಕ ಪ್ರಕಟಿಸಬೇಕು ಎಂಬ ಬಯಕೆ ಹೊಂದಿರುವವರಿಗೆ, ಖರ್ಚಿಲ್ಲದೆ ಆ ಕೆಲಸ ಆಗುವ ಮಾರ್ಗವಿದು. ಪುಸ್ತಕ ಪ್ರಕಟಿಸುವ ಪ್ರಕ್ರಿಯೆಯನ್ನು ಎಲ್ಲರ ಕೈಗೂ ಎಟಕುವಂತೆ ಆಗಿಸುವ ಪ್ರಯತ್ನ ಕೂಡ ಹೌದು ಇದು' ಎಂದು ಅವರು ಪ್ರತಿಪಾದಿಸಿದರು.

ಇದೇ ಮಾದರಿಯ ಪ್ರಯತ್ನಕ್ಕೆ ಮುಂದಾಗಿರುವ ಋತುಮಾನ ಸಂಸ್ಥೆಯು, ತಾವೇ ಪುಸ್ತಕ ಪ್ರಕಟಿಸಲು ಬಯಸುವವರಿಗೆ ಎರಡು ಬಗೆಯ ಸೇವೆಗಳನ್ನು ಆರಂಭಿಸಿದೆ. ಬರಹ ಸಿದ್ಧವಿದ್ದರೆ ಅದನ್ನು ಇ–ಪುಸ್ತಕ ರೂಪಕ್ಕೆ ಪರಿವರ್ತಿಸಿಕೊಡುವ ಕೆಲಸ ಹಾಗೂ ಬೇಡಿಕೆ ಬಂದಾಗ ಮಾತ್ರ ಮುದ್ರಿಸಿಕೊಡುವ (print on demand) ಕೆಲಸವನ್ನು ಋತುಮಾನ ತಂಡ ಮಾಡುತ್ತಿದೆ. 'ಇ–ಪುಸ್ತಕ ಅಥವಾ ಮುದ್ರಿತ ಪುಸ್ತಕವು ನಾವು ಬಯಸುವ ಗುಣಮಟ್ಟವನ್ನು ಹೊಂದಿದ್ದರೆ ಅದನ್ನು ನಮ್ಮ ವೇದಿಕೆಯ ಮೂಲಕವೇ ಮಾರಾಟಕ್ಕೆ ಇರಿಸುತ್ತೇವೆ. ಗುಣಮಟ್ಟ ನಮಗೆ ಒಪ್ಪಿತವಾಗದೆ ಇದ್ದರೆ ಅದರ ಮಾರಾಟದ ಹೊಣೆಯನ್ನು ನಾವು ಹೊತ್ತುಕೊಳ್ಳುವುದಿಲ್ಲ' ಎಂದು ಋತುಮಾನ ಪ್ರತಿನಿಧಿ ಕುಂಟಾಡಿ ನಿತೇಶ್ ಹೇಳಿದರು. ಆದರೆ, ಅವರು ಸಿದ್ಧಪಡಿಸಿ ಕೊಡುವ ಇ–ಪುಸ್ತಕವನ್ನು ಬೇರೆ ಬೇರೆ ಡಿಜಿಟಲ್ ವೇದಿಕೆಗಳ ಮೂಲಕ ಓದುಗರಿಗೆ ತಲುಪಿಸುವ ಅವಕಾಶ ಲೇಖಕರಿಗೆ ಸಿಗುತ್ತದೆ.

ಪ್ಲೇಬುಕ್ಸ್ ವೇದಿಕೆಯ ಮೂಲಕವೂ ಲೇಖಕರು ತಮ್ಮ ಪುಸ್ತಕಗಳನ್ನು ತಾವೇ ಪ್ರಕಟಿಸಬಹುದು. ಆದರೆ, ಅಲ್ಲಿ ಕನ್ನಡದ ಅನುಭವ ಸಿಗುವುದಿಲ್ಲ. 'ಆ ವೇದಿಕೆಯು ಕನ್ನಡ ಪುಸ್ತಕಗಳಿಗೆ ಸೀಮಿತವಾದುದಲ್ಲ. ಅಲ್ಲಿಗೆ ಬರುವ ಓದುಗರು ಕನ್ನಡದ ಪುಸ್ತಕಗಳನ್ನೇ ಅರಸಿ ಬಂದಿರುತ್ತಾರೆ ಎನ್ನಲು ಆಗದು' ಎಂದು ಪ್ರಕಾಶಕರೊಬ್ಬರು ಅಭಿಪ್ರಾಯ ವ್ಯಕ್ತಪಡಿಸಿದರು.

'ನನಗೆ ಈಗ ಓದುಗರಿಂದ ಒಳ್ಳೆಯ ಪ್ರತಿಕ್ರಿಯೆಗಳು ಬರುತ್ತಿವೆ. ಇ–ಪುಸ್ತಕ ಪ್ರಕಟಣೆಯಲ್ಲಿ ಹೆಚ್ಚಿನ ರಿಸ್ಕ್ ಇಲ್ಲ. ಬರಹಗಾರನಾಗಿ ಅಷ್ಟೇನೂ ಹೆಸರು ಮಾಡಿರದಿದ್ದ ನನ್ನಂಥವರಿಗೆ ಇದು ಒಳ್ಳೆಯ ಅವಕಾಶಗಳನ್ನು ಸೃಷ್ಟಿಸಿಕೊಡುತ್ತದೆ. ನಮ್ಮ ಇ–ಪುಸ್ತಕವು ಯಶಸ್ಸು ಕಂಡರೆ, ಪಿಓಡಿ ಮಾದರಿಯಲ್ಲಿ ಪ್ರತಿಗಳನ್ನು ಮುದ್ರಿಸಬಹುದು. ಇ–ಪುಸ್ತಕದ ಕಾರಣದಿಂದಾಗಿ, ವಿದೇಶದಲ್ಲಿರುವ ಕನ್ನಡದ ಓದುಗರನ್ನೂ ತಲುಪಿದ್ದೇನೆ. ನಾನೇ ಮುದ್ರಿತ ಪುಸ್ತಕ ಮಾಡಿದ್ದಿದ್ದರೆ, ವಿದೇಶಗಳಲ್ಲಿನ ಓದುಗರನ್ನು ತಲುಪುವುದು ಕಷ್ಟವಾಗುತ್ತಿತ್ತು' ಎಂದು ಕುಲಕರ್ಣಿ ಅವರು ತಮ್ಮ ಪುಸ್ತಕದ ಸುತ್ತಲಿನ ಅನುಭವವನ್ನು ಹಂಚಿಕೊಂಡರು.

'ತಮ್ಮ ಬರಹದಲ್ಲಿನ ಗಟ್ಟಿತನದ ಬಗ್ಗೆ ವಿಶ್ವಾಸವಿದ್ದರೂ, ಪುಸ್ತಕ ಮುದ್ರಿಸುವ, ಅದನ್ನು ಮಾರಾಟ ಮಾಡುವ ಹಣಕಾಸಿನ ಹೊರೆಯನ್ನು ಹೊತ್ತುಕೊಳ್ಳಲಾರೆ ಎನ್ನುವ ಲೇಖಕರಿಗೆ ಇದು ಒಳ್ಳೆಯ ಅವಕಾಶ' ಎಂದು ಯುವ ಲೇಖಕರೊಬ್ಬರು ಹೇಳಿದರು. ಅವರು ದುಡ್ಡು–ಕಾಸಿನ ಬಗ್ಗೆ ಬರೆದಿರುವ ಲೇಖನಗಳ ಸಂಗ್ರಹವೊಂದನ್ನು ಇ–ಪುಸ್ತಕವಾಗಿ ಪ್ರಕಟಿಸುವ ಬಯಕೆ ಹೊಂದಿದ್ದಾರೆ. ಓದುಗರು ಇಷ್ಟಪಟ್ಟರೆ ಅದನ್ನು ಬೇಡಿಕೆ ಆಧರಿಸಿ ಮುದ್ರಿತ ರೂಪದಲ್ಲಿ ತರಬಹುದು ಎಂಬ ಆಲೋಚನೆ ಅವರದ್ದು.

ಎಲ್ಲರೂ ತಮ್ಮ ಪುಸ್ತಕಗಳನ್ನು ತಾವೇ ಪ್ರಕಟಿಸಲು ಆರಂಭಿಸಿದರೆ, ಗುಣಮಟ್ಟವನ್ನು ಕಾಯುವ ಕೆಲಸ ಯಾರು ಮಾಡುತ್ತಾರೆ ಎಂಬ ಪ್ರಶ್ನೆ ಇದೆ. ಈ ವಿಚಾರದಲ್ಲಿ ಋತುಮಾನ ಹಾಗೂ ಮೈಲ್ಯಾಂಗ್ ಸಂಸ್ಥೆಗಳು ಬೇರೆ ಬೇರೆ ನಿಲುವು ತಾಳಿವೆ. 'ಗುಣಮಟ್ಟ ನಮ್ಮ ನಿರೀಕ್ಷೆಗೆ ತಕ್ಕಂತೆ ಇಲ್ಲದಿದ್ದರೆ ನಮ್ಮ ವೇದಿಕೆ ಮೂಲಕ ಮಾರಾಟ ಇಲ್ಲ' ಎಂದು ಋತುಮಾನ ಹೇಳಿದೆ. ಆದರೆ ಮೈಲ್ಯಾಂಗ್ ಸಂಸ್ಥೆಯು 'ಈ ವಿಚಾರದಲ್ಲಿ ನಮಗೆ ಓದುಗರ ತೀರ್ಮಾನವೇ ಅಂತಿಮ. ಯಾವುದು ಚೆನ್ನ, ಯಾವುದು ಅಲ್ಲ ಎಂಬುದನ್ನು ಓದುಗರೇ ತೀರ್ಮಾನಿಸುವರು' ಎಂಬ ನಿಲುವು ಹೊಂದಿದೆ. ❖

ಆಧ್ಯಾತ್ಮಿಕ ಅನುಭೂತಿಯ ಭೂತಾನ

ಚಿತ್ರ-ಲೇಖನ: ಲಿಂಗರಾಜು ಡಿ.ಎಸ್.

ಪ್ರವಾಸ

ಭೂತಾನ್ ಜಗತ್ತಿನಲ್ಲೇ ಸಂತಸ ಸೂಚ್ಯಂಕದ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿತ್ತು! ಈ ಬಗ್ಗೆ ಓದಿದಾಗ ಅಲ್ಲಿಗೆ ಭೇಟಿ ನೀಡಬೇಕೆಂಬ ಬಯಕೆ ಚಿಗುರೊಡೆಯುತ್ತಿತ್ತು. ನನ್ನ ಪರಿಚಿತ ಗ್ಯಾಂಗ್‌ಟಾಕ್‌ನ ಪ್ರವಾಸಿ ಆಯೋಜಕ ರಾಜುಲಾಮಾನ ಮಾರ್ಗದರ್ಶನದ ಮೇರೆಗೆ ಬೆಂಗಳೂರಿನಿಂದ ವಿಮಾನದಲ್ಲಿ ಹೊರಟು ಕೋಲ್ಕತ್ತದ ಮೂಲಕ ಬಾಗ್‌ಡೋಗ್ರಾ ಸೇರಿದ್ದೆವು. ಪಾಸ್‌ಪೋರ್ಟ್ ಇದ್ದವರು ನೇರವಾಗಿ ಪಾರೊ ನಗರಕ್ಕೆ ವಿಮಾನದಲ್ಲಿ ತೆರಳಬಹುದು. ನಾವು ರಾಜುಲಾಮಾನ ಸೂಚನೆಯ ಮೇರೆಗೆ ರಸ್ತೆ ಪ್ರಯಾಣವನ್ನು ಆಯ್ಕೆ ಮಾಡಿಕೊಂಡಿದ್ದೆವು.

ಬಾಗ್‌ಡೋಗ್ರಾ ಪಟ್ಟಣದಿಂದ ರಸ್ತೆಯಲ್ಲಿ 154 ಕಿ.ಮೀ ಪ್ರಯಾಣಿಸಿ ಪಶ್ಚಿಮ ಬಂಗಾಳದ ಗಡಿಯಲ್ಲಿ ಕೊನೆಯ ಪಟ್ಟಣ ಜೈಗಾಂವ್ ದಾಟಿ ಭೂತಾನದ ಫುಂಟ್‌ಶೋಲಿಂಗ್ ಪ್ರವೇಶಿಸಿದ್ದೆವು. ಅಲ್ಲಿ ವಿದೇಶಿಯರೆಲ್ಲಾ ಕಡ್ಡಾಯವಾಗಿ ರಸ್ತೆ ಪರ್ಮಿಟ್ ಪಡೆದು ಮುಂದೆ ಹೋಗಬೇಕು. ಫುಂಟ್‌ಶೋಲಿಂಗ್ ತಲುಪುವಾಗ ಸಂಜೆಗತ್ತಲು. ನಮಗಾಗಿ ಕೊಠಡಿ ಕಾಯ್ದಿರಿಸಿದ್ದ ಹೋಟೆಲ್ ದಾಮ್‌ಚೆನ್ ಪ್ರವೇಶಿಸುತ್ತಿದ್ದಂತೆ ಎಲ್ಲರಿಗೂ ಭೂತಾನ್ ಪದ್ಧತಿಯಂತೆ ಬಿಳಿ ಶಲ್ಯದಂತಹ ವಸ್ತ್ರವನ್ನು ಹೊದ್ದಿಸಿ ಸ್ವಾಗತ ಕೋರಿದ್ದರು. ಎಲ್ಲರ ಮುಖದಲ್ಲಿ ಅರಳಿದ ಮಂದಹಾಸ ಕೊನೆಯವರೆಗೂ ಮಾಸಲಿಲ್ಲ. ಇದಕ್ಕೇ ಇರಬೇಕು ಭೂತಾನನ್ನು ಸಂತಸದ ರಾಷ್ಟ್ರ ಎಂದು ಕರೆದಿರುವುದು!

ಫುಂಟ್‌ಶೋಲಿಂಗ್ ಮತ್ತು ಜೈಗಾಂವ್ ನಗರದ ನಡುವೆ ಒಂದು ಕಬ್ಬಿಣದ ಸರಳುಗಳ ಬೇಲಿ ಮತ್ತು ಭವ್ಯ ಪ್ರವೇಶ ದ್ವಾರವಿದೆ. ಜನ ಸರಕು-ಸರಂಜಾಮು ಖರೀದಿಗಾಗಿ ಯಾವುದೇ ತೊಂದರೆ ಇಲ್ಲದೆ ಗೇಟ್ ದಾಟಿ ಹೋಗಿ ಬರುತ್ತಾರೆ. ಭಾರತದ ಕಡೆ ಜನಸಂದಣಿ, ಚೌಕಾಸಿ, ವ್ಯಾಪಾರಿಗಳ ಕೂಗಾಟ, ವಾಹನಗಳ ಹಾರ್ನ್ ಸದ್ದು, ಆಟೊಗಳ ಅಬ್ಬರ. ಭೂತಾನದ ಫುಂಟ್‌ಶೋಲಿಂಗ್ ನಿಶ್ಶಬ್ದ, ನಿರುಮ್ಮಳ!

ಭಾರತ ಮತ್ತು ಚೀನಾ (ಟಿಬೆಟ್) ದೇಶಗಳ ನಡುವೆ ಇರುವ 20 ಜಿಲ್ಲೆಗಳ ಭೂತಾನ್ ದೇಶದ ಜನಸಂಖ್ಯೆ ಸುಮಾರು 7.70 ಲಕ್ಷ ಮಾತ್ರ. ಇಲ್ಲಿನ ಜನ ಚೀನಾದಷ್ಟೇ ಭಾರತವನ್ನೂ ಗೌರವಿಸುತ್ತಾರೆ. ಹಿಂದಿ ಮತ್ತು ಇಂಗ್ಲಿಷ್ ಎಲ್ಲರಿಗೂ ಗೊತ್ತು. ಬಹುತೇಕ ಭೂತಾನೀ ಯುವಜನರು ತಮ್ಮ ಉನ್ನತ ವಿದ್ಯಾಭ್ಯಾಸಕ್ಕೆ ಅಥವಾ ಉದ್ಯೋಗಕ್ಕೆ ಕೋಲ್ಕತ್ತ ಇಲ್ಲವೆ ಬೆಂಗಳೂರು ಆಯ್ಕೆ ಮಾಡುತ್ತಾರೆ. ದೇಶದ ಶೇ 74.8 ಜನ ಕರ್ಮಠ ಬೌದ್ಧ ವಜ್ರಯಾನ ಪಂಥಕ್ಕೆ ಸೇರಿದವರಾಗಿದ್ದು ಬಹುತೇಕರು ಕರ್ನಾಟಕದ ಬೈಲಕುಪ್ಪೆಯನ್ನು

ಭೂತಾನ್ ಮಹಾದ್ವಾರ

ಟೈಗರ್ ನೆಸ್ಟ್‌ನ ರಮಣೀಯ ನೋಟ

ನೋಡಿ ಬಂದಿದ್ದಾರೆ.

ಭೂತಾನ್ ದೇಶವು ಪುರಾತನ ಕಾಲದಿಂದ ರಾಜವಂಶಗಳ ಆಳ್ವಿಕೆಯಲ್ಲಿದ್ದು ನಂತರ ಈಸ್ಟ್ ಇಂಡಿಯಾ ಕಂಪನಿ ಹಾಗೂ ಬ್ರಿಟಿಷ್ ಪ್ರಭುತ್ವದ ಅಧೀನಕ್ಕೆ ಬಂದಿತ್ತು. 1949ರ ಆಗಸ್ಟ್ 8ರಂದು ಸ್ವಾತಂತ್ರ್ಯ ದೊರೆತ ನಂತರ ರಾಜಪ್ರಭುತ್ವ ಮುಂದುವರೆದು ಈಗ ಜಿಗ್ಮೆ ಖೇಸರ್ ನಾಮ್‌ಗ್ಯಾಲ್ ವಾಂಗ್‌ಚುಕ್ ಅರಸರಾಗಿದ್ದಾರೆ. ರಾಜಕುಟುಂಬದ ಬಿಆರ್ (ಭೂತಾನ್ ರಾಯಲ್) ಎಂಬ ಟ್ಯಾಗ್ ಹೊಂದಿದ ಕೆಂಪು ಬೋರ್ಡ್ ವಾಹನಗಳು ಎದುರು ಬಂದಾಗ ಪ್ರತೀ ಭೂತಾನಿಯರೂ ವಾಹನ ನಿಲ್ಲಿಸಿ ಅಥವಾ ನಿಧಾನ ಮಾಡಿ ತಲೆ ತಗ್ಗಿಸಿ ಗೌರವ ಸಲ್ಲಿಸುತ್ತಾರೆ. ಭಾರತ ಮತ್ತು ಚೀನಾವು ಭೂತಾನ್ ದೇಶವನ್ನು ಕ್ರಮವಾಗಿ ಪ್ರಜಾಪ್ರಭುತ್ವ ಮತ್ತು ಕಮ್ಯೂನಿಸಂ ಕಡೆಗೆ ಆಕರ್ಷಿಸಲು ಸತತವಾಗಿ ಓಲೈಸುತ್ತಿವೆ. ಜಗತ್ತಿನ ಪ್ರಬಲ ಮಿಲಿಟರಿ ಶಕ್ತಿಗಳ ಪಟ್ಟಿಯಲ್ಲಿ ಭೂತಾನಿನದ್ದು ಕೊನೆಯ ಸ್ಥಾನ. ಇಲ್ಲಿ ಅಪರಾಧಗಳು ಸಂಭವಿಸುವುದೇ ಅಪರೂಪವಂತೆ.

ಭೂತಾನವೆಂಬ ಅರಳು ಮಲ್ಲಿಗೆಗೆ ನೀವು ಭೂತಾನ್ ಕರೆನ್ಸಿ ಎಂಗುಲ್ತ್ರುಂ ಅನ್ನು ಕಡ್ಡಾಯವಾಗಿ ಕೊಂಡೊಯ್ಯಬೇಕಾಗಿಲ್ಲ. ಭಾರತೀಯ ರೂಪಾಯಿಯನ್ನು ಎಲ್ಲೆಡೆ ಸ್ವೀಕರಿಸಲಾಗುತ್ತದೆ. ವಸ್ತುಗಳ ಬೆಲೆ ಸ್ವಲ್ಪ ಹೆಚ್ಚು ಎನ್ನಿಸಿದರೂ ಅವೆಲ್ಲ ಹೊರಗಿನಿಂದಲೇ ಬರಬೇಕಾದ ಸಂದರ್ಭ ನೋಡಿದಾಗ ಕೊಡುವ ಹಣಕ್ಕೆ ಮೌಲ್ಯವಿದೆ ಎನ್ನಿಸುತ್ತದೆ. ಅದ್ಭುತ ಪ್ರಕೃತಿ ಸೌಂದರ್ಯ ಕಣ್ಣು ತುಂಬಿಕೊಳ್ಳುತ್ತಾ ಫುಂಟ್‌ಶೋಲಿಂಗ್ ಬಿಟ್ಟು 147 ಕಿ.ಮೀ ದೂರದ ಭೂತಾನಿನ ರಾಜಧಾನಿ ಥಿಂಪು ತಲುಪಿದ್ದೇ ತಿಳಿಯಲಿಲ್ಲ.

> ಭಾರತದ ಕಡೆ ಜನಸಂದಣಿ, ಚೌಕಾಸಿ, ವ್ಯಾಪಾರಿಗಳ ಕೂಗಾಟ, ವಾಹನಗಳ ಹಾರ್ನ್ ಸದ್ದು. ಭೂತಾನ ಕಡೆ ನಿಶ್ಯಬ್ದ, ನಿರುಮ್ಮಳ!

ತಂಪಾದ ವಾತಾವರಣ ಹಾಗೂ ಸ್ವಚ್ಛವಾದ ರಸ್ತೆಗಳು ಬಹಳ ಖುಷಿ ಕೊಟ್ಟವು. ಥಿಂಪುವಿನಲ್ಲಿ ಚಾಲಕ ರಿನ್‌ಜಿನ್ ಜೋಂಗ್‌ಪಾ ರಸ್ತೆಯಲ್ಲಿ ತರಕಾರಿ ಕೈಚೀಲ ಹಿಡಿದು ಹೋಗುತ್ತಿದ್ದ ಮಹಿಳೆಯನ್ನು ತೋರಿಸಿ ಆಕೆ ಭೂತಾನ್ ಪ್ರಧಾನಮಂತ್ರಿಯ ಪತ್ನಿ ಎಂದಾಗ ಆಕೆಯ ಸರಳತೆ ನೋಡಿ ನಾವೆಲ್ಲಾ ಬೆರಗಾಗಿದ್ದೆವು. ದೇಶದ ಸರ್ಕಾರಿ ನೌಕರರಿಗೆ ಹೆಚ್ಚಿನ ವೇತನ ನೀಡುತ್ತಿರುವುದರಿಂದ ದೇಶದ ಆಡಳಿತದಲ್ಲಿ ಲಂಚಗುಳಿತನ ಇಲ್ಲ. ದ್ವಿಸದನ ಪದ್ಧತಿ ಇರುವ ದೇಶದ ಚುನಾವಣೆಯ ಅಭ್ಯರ್ಥಿಯಾಗಲು ಜನ ಅಷ್ಟೇನೂ ಉತ್ಸಾಹ ತೋರಿಸುತ್ತಿಲ್ಲ. ಇದರಿಂದ ಜನಪ್ರತಿನಿಧಿಗಳ ಸಂಖ್ಯೆಯಲ್ಲಿ ಕುಸಿತವಾಗಿದೆಯಂತೆ.

ಭೂತಾನ್ ದೇಶದ ರಾಜಧಾನಿ ಥಿಂಪು, ಫುಂಟ್‌ಶೋಲಿಂಗ್, ಪಾರೊ, ಪುನಾಕಗಳಲ್ಲೆಲ್ಲಾ ಮನೆಗಳು ಸಾಂಪ್ರದಾಯಿಕ ಶೈಲಿಯಲ್ಲಿವೆ. ಧಾರ್ಮಿಕ ಸ್ಥಳಗಳು ಮತ್ತು ಆಡಳಿತ ಕಚೇರಿಗಳನ್ನು 'ಜಬಶಿ' ಶೈಲಿಯಲ್ಲಿ ನಿರ್ಮಿಸಲಾಗುತ್ತದೆ. ರಸ್ತೆಗಳನ್ನು ಗುಡಿಸಿ ಚೊಕ್ಕಟವಾಗಿಡಲಾಗಿದೆ. ಉತ್ಪಾದನೆಯಾಗುತ್ತಿರುವ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡುತ್ತಿರುವುದರಿಂದ ಭೂತಾನ್ ವಿಶ್ವದ ದೇಶಗಳಲ್ಲಿ ಪ್ರಥಮ ಕಾರ್ಬನ್ ನೆಗೆಟಿವ್ ದೇಶ ಎಂಬ ಮಾನ್ಯತೆ ಗಳಿಸಿದೆ. ಜಗತ್ತಿನಲ್ಲಿ ಪೆರು ಬಿಟ್ಟರೆ ಭೂತಾನಿನಲ್ಲಿ ಮಾತ್ರ ಶಿಶ್ನಾರಾಧನೆ ಕಾಣುತ್ತದೆ. ಬಹುತೇಕ ಮನೆಗಳ ಮುಂದೆ ಶಿಶ್ನದ ಚಿತ್ರಗಳನ್ನು ಕಾಣಬಹುದು. ಭೂತಾನೀಯರ ದೃಷ್ಟಿಯಲ್ಲಿ ಶಿಶ್ನ ಫಲವತ್ತತೆಯ ಸಂಕೇತವಂತೆ!

ಭೂತಾನ್ ರಾಜ ದಂಪತಿ, ಸಾಂಪ್ರದಾಯಕ ದಿರಿಸಿನಲ್ಲಿ

ಅಹಹಾ ಸದ್ದು!

ರಸ್ತೆಗಳಲ್ಲಿ ವಾಹನ ಚಾಲಕರು ಮನಬಂದಂತೆ ವಾಹನಗಳನ್ನು ನಿಲ್ಲಿಸಲು ಅನುಮತಿ ಇಲ್ಲ. ನಿಗದಿತ ಸ್ಥಳದಲ್ಲಿ ಮಾತ್ರ ಪಾರ್ಕಿಂಗ್ ಮಾಡಬೇಕು. ಹಾರ್ನ್ ಮಾಡುತ್ತಾ ಓವರ್ ಟೇಕಿಂಗ್ ಮಾಡುವಂತಿಲ್ಲ. ಭೂತಾನ್ ದೇಶದ ಯಾವ ನಗರದಲ್ಲೂ ಟ್ರಾಫಿಕ್ ಲೈಟುಗಳು ಇಲ್ಲದಿರುವುದೇ ವಿಶೇಷ. ರಸ್ತೆ ದಾಟುವ ಪಾದಚಾರಿಗಳನ್ನು ಕಂಡಕೂಡಲೇ ವಾಹನ ನಿಲ್ಲಿಸಿ ರಸ್ತೆ ದಾಟಲು ಅವಕಾಶ ಮಾಡಿಕೊಡಲಾಗುತ್ತದೆ. ರಸ್ತೆ ನಿಯಮಗಳನ್ನು ಉಲ್ಲಂಘಿಸಿದ ಚಾಲಕರಿಗೆ ಕನಿಷ್ಠ 2,500 ರೂಪಾಯಿ ದಂಡ ವಿಧಿಸುತ್ತಾರೆ. ಎರಡನೇ ಬಾರಿ ದಂಡ ತೆರುವ ಚಾಲಕನ ಚಾಲನಾ ಪರವಾನಗಿ ರದ್ದಾಗುತ್ತದೆ. ವಿಶೇಷವೆಂದರೆ ಹೀಗೆ ದಂಡ ತೆತ್ತವರೆಲ್ಲ ಭಾರತೀಯ ಚಾಲಕರಂತೆ!

ಭೂತಾನ್ ದೇಶದಲ್ಲಿ ಮದ್ಯದ ಮಾರಾಟಕ್ಕೆ ವಿಶೇಷ ಅನುಮತಿ ಅಗತ್ಯವಿಲ್ಲ. ದಿನಸಿ ಅಂಗಡಿಗಳಲ್ಲಿ ಕೂಡಾ ಮದ್ಯ ದೊರೆಯುತ್ತದೆ. ಆದರೇ ಕುಡಿದು ಚಿತ್ತಾದ ಭೂತಾನೀಯರು ಎಲ್ಲೂ ಕಾಣಲಿಲ್ಲ. ಭೂತಾನೀಯರು ಹುಟ್ಟುತ್ತಲೇ ಎಲೆ ಅಡಿಕೆ (ದೋಮಾ) ಬಾಯಲ್ಲಿಟ್ಟುಕೊಂಡು ಬಂದಿರುತ್ತಾರೇನೋ! ನಮ್ಮೊಡನೆ ಮಾತನಾಡುತ್ತಿದ್ದ ಪೊಲೀಸರ ಎಲೆ ಅಡಿಕೆಯ ಕೆಂಪು ರಸ ಎಲ್ಲಿ ಹಾರುತ್ತದೋ ಅಂತ ದೂರದಲ್ಲೇ ನಿಂತು ಮಾತನಾಡುತ್ತಿದ್ದೆ. ಭೂತಾನಿನಲ್ಲಿ ಸಿಗರೇಟ್ ಮತ್ತು ತಂಬಾಕಿನ ಪದಾರ್ಥಗಳನ್ನು ನಿಷೇಧಿಸಲಾಗಿದೆ.

ಪಾರೊ ಎಂಬ ಸ್ವರ್ಗ

ಎರಡು ದಿನ ಥಿಂಪುವಿನಲ್ಲಿ ಕಳೆದು 51 ಕಿ.ಮೀ. ದೂರದ ಪಾರೊ ಕಡೆಗೆ ತೆರಳಿ ಒಂದು ಅದ್ಭುತ ರೆಸಾರ್ಟ್‌ನಲ್ಲಿ ತಂಗಿದ್ದೆವು. ಪಾರೊ ನಗರದಲ್ಲಿ ಭೂತಾನಿನ ಏಕೈಕ ವಿಮಾನ ನಿಲ್ದಾಣವಿದೆ. ಇಲ್ಲಿಗೆ ಡ್ರುಕ್ ಏರ್‌ಲೈನ್ಸ್ ಮತ್ತಿತರ ಅಂತರರಾಷ್ಟ್ರೀಯ ವಿಮಾನಗಳು ಬಂದು ಹೋಗುತ್ತವೆ. ಪಕ್ಕದ ಬೆಟ್ಟದ ಮೇಲೆ ನಿಂತು ವಿಮಾನಗಳ ಆಗಮನ, ನಿರ್ಗಮನವನ್ನು ನೋಡಬಹುದು.

ಮಾರನೇ ದಿನ ಪಾರೋದಿಂದ 11 ಕಿ.ಮೀ ದೂರವಿರುವ ಟೈಗರ್ ನೆಸ್ಟ್ ಬೆಟ್ಟ ಏರುವ ಪ್ರಯತ್ನ ಮಾಡಿ ಯಶಸ್ವಿಯಾಗಿದ್ದೆವು. ಟೈಗರ್ ನೆಸ್ಟ್ ಗುಹೆಯ ಪ್ರವೇಶದ ಮುನ್ನ ಎಲ್ಲಾ ವಿದೇಶಿ ನಾಗರಿಕರು ಕಡ್ಡಾಯವಾಗಿ ತಮ್ಮ ರೋಡ್ ಪರ್ಮಿಟ್ ತಂದಿರಬೇಕು ಮತ್ತು ಕೈ ಮುಚ್ಚುವಂತಹ ಅಂಗಿಗಳನ್ನು ಹಾಕಿಕೊಂಡಿರಬೇಕು ಎಂಬ ನಿಯಮವಿದೆ. ನಮಗೆ ಈ ನಿಯಮದ ಬಗ್ಗೆ ತಿಳಿದಿರಲಿಲ್ಲ. ಅಲ್ಲಿದ್ದ ಪೊಲೀಸರು ತಮ್ಮ ಸಿವಿಲ್ ಉಡುಪುಗಳನ್ನು ನಮಗೆ ಕೊಟ್ಟು ನೆರವಾಗಿದ್ದರು. ಇದಕ್ಕೆ ಬದಲಾಗಿ ಮುಗುಳುನಗುವಿನ ವಿನಿಮಯವಾಯಿತು ಅಷ್ಟೆ!

ಸುಮಾರು ಕ್ರಿ.ಶ. 9ನೇ ಶತಮಾನದಲ್ಲಿ ನಿರ್ಮಿಸಲಾದ ಗುಹಾಲಯದಲ್ಲಿ ಗುರು ಪದ್ಮಸಂಭವ ತಪಸ್ಸು ಕೈಗೊಂಡಿದ್ದನಂತೆ. ಪದ್ಮಸಂಭವನ ಎಂಟು ಅಭಿವ್ಯಕ್ತಿಗಳನ್ನು ಪ್ರತಿನಿಧಿಸುವ ಈ ಬೆಟ್ಟವನ್ನು 'ಅಷ್ಟನಾಮಗಳ ಗುರುವಿನ ನೆಲೆ' ಎಂದು ಕರೆಯಲಾಗುತ್ತದೆ. ಸುಮಾರು 3120 ಮೀಟರ್ ಎತ್ತರವಿರುವ ಟೈಗರ್ ನೆಸ್ಟ್ ಹತ್ತಲು 2 ಗಂಟೆಗಳ ಅವಧಿ ಬೇಕು! ಇದೊಂದು ಅದ್ಭುತ ಹಾಗೂ ಅನನ್ಯ ಅನುಭವ! ಭೂತಾನ್ ಜನ ಕಡ್ಡಾಯವಾಗಿ ಪ್ರತಿದಿನ ತಮ್ಮ ರಾಷ್ಟ್ರೀಯ ಉಡುಪಾದ ಗೌ ಮತ್ತು ಕೀರಾ ಧರಿಸುತ್ತಾರೆ. ನಡುವಯಸ್ಸು ದಾಟಿದವರೆಲ್ಲ ಕೈಯಲ್ಲಿ ಜಪಮಾಲೆಯನ್ನೋ ಅಥವಾ ಟಿಬೆಟಿಯನ್ ವೀಲ್ ಆಫ್ ಲೈಫ್ ಚಕ್ರವನ್ನು ತಿರುಗಿಸುತ್ತಾ 'ಓಂ ಮಣಿ ಪದ್ಮೇಹಂ' ಶ್ಲೋಕ ಉಚ್ಚರಿಸುತ್ತಿರುವುದು ಸಾಮಾನ್ಯ ದೃಶ್ಯ.

ಭೂತಾನ್ ಜನಸಂಖ್ಯೆಯಲ್ಲಿ ಮಹಿಳೆಯರ ಸರಾಸರಿ ಸಂಖ್ಯೆ ಹೆಚ್ಚು. ಪುರುಷರು ಸಾಮಾನ್ಯವಾಗಿ ಭಾರತ ಮತ್ತು ಚೀನಾ ದೇಶಗಳಲ್ಲಿ ದುಡಿಯಲು ಹೋಗಿದ್ದರೆ ಮಹಿಳೆಯರು ಇಲ್ಲೇ ಉಳಿದು ವ್ಯಾಪಾರ-ವಹಿವಾಟು, ಮನೆ-ಮಾರುಗಳ ಏರ್ಪಾಡು ನೋಡಿಕೊಳ್ಳುತ್ತಾರೆ. ಹೋಟೆಲುಗಳಲ್ಲಿ ನಿಮ್ಮ ಲಗೇಜುಗಳನ್ನು ರೂಮಿಗೆ ಸಾಗಿಸಿಕೊಡುವುದು ಕೂಡಾ ಮಹಿಳೆಯರೇ. ಮಹಿಳೆಯರನ್ನು ಗೌರವದಿಂದ ಕಾಣುವ ಭೂತಾನ್ ದೇಶದಲ್ಲಿ ವೇಶ್ಯಾವಾಟಿಕೆಯನ್ನು ಘೋರ ಅಪರಾಧ ಎಂದು ಪರಿಗಣಿಸಲಾಗುತ್ತದೆ. ಈ ಪುಟ್ಟ ನಾಡಿನ ಜನರ ಆತ್ಮವಿಶ್ವಾಸ, ಗಾಢ ಜೀವನಪ್ರೀತಿ ಮತ್ತು ದೇಶಪ್ರೇಮ ನಮಗೆ ಆದರ್ಶವಾಗಬಲ್ಲದು.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಕೂಡುವ-ಕಳೆಯುವ ಕಾಗದದ ಕ್ಯಾಲ್ಕುಲೇಟರ್

1	2	3	4	5	6	7	8	9	10
11	12	13	14	15	16	17	18	19	20
21	(22)	23	24	25	26	27	28	29	30
31	32	33	34	35	36	37	38	39	40
41	42	43	44	45	46	47	(48)	49	50
51	52	53	54	55	56	57	58	59	60
61	62	63	(64)	65	66	67	68	69	70
71	72	73	74	75	76	77	78	79	80
81	82	83	84	85	86	87	88	89	90
91	92	93	94	95	96	97	98	99	100
101	102	103	104	105	106	107	108	109	110
111	112	113	114	115	116	(117)	118	119	120

ನಿಮಗೆ ಈ ಪಟ್ಟಿಯಲ್ಲಿನ ಎರಡು ಸಂಖ್ಯೆಗಳನ್ನು ಕೂಡಿಸಬೇಕಾದರೆ ಮೊದಲ ಸಂಖ್ಯೆಯನ್ನು ಗುರ್ತಿಸಿ ಅದರಿಂದ ಎರಡನೇ ಸಂಖ್ಯೆಯ ದಶಕ ಸ್ಥಾನದಷ್ಟು ಕೆಳಗೆ ಬನ್ನಿ ಹಾಗೂ ಬಿಡಿ ಅಂಕಿಯಷ್ಟು ಸ್ಥಾನ ಮುಂದಕ್ಕೆ ಸಾಗಿ ಅಲ್ಲಿ ಸಿಗುವುದೇ ನಿಮ್ಮ ಉತ್ತರ. ಹಾಗೆಯೇ ಕಳೆಯಬೇಕಿದ್ದರೆ ಯಾವ ಸಂಖ್ಯೆಯಲ್ಲಿ ಕಳೆಯಬೇಕಿದೆಯೋ ಆ ಸಂಖ್ಯೆ ಗುರ್ತಿಸಿ ಅದರಿಂದ ಎರಡನೇ ಸಂಖ್ಯೆ ಅಂದರೆ ಕಳೆಯುವ ಸಂಖ್ಯೆಯ ದಶಕ ಸ್ಥಾನದಷ್ಟು ಮೇಲಕ್ಕೆ ಹೋಗಿ ಬಿಡಿ ಸ್ಥಾನದಷ್ಟು ಎಡಕ್ಕೆ ಸಾಗಿ ಅಲ್ಲಿ ಸಿಗುವುದೇ ನಿಮ್ಮ ಉತ್ತರ.

ಉದಾ: 64 + 53

ಮೊದಲು 68ಅನ್ನು ಪಟ್ಟಿಯಲ್ಲಿ ಗುರುತಿಸಿ. ಆ ಸ್ಥಾನದಿಂದ ಕೆಳಕ್ಕೆ ಎರಡನೇ ಸಂಖ್ಯೆಯ ದಶಕ 5 ಇರುವುದರಿಂದ 5 ಸ್ಥಾನ ಬನ್ನಿ. ಹಾಗೆಯೇ ಬಿಡಿ ಸ್ಥಾನದಲ್ಲಿ 3 ಇರುವುದರಿಂದ 3 ಸ್ಥಾನ ಮುಂದಕ್ಕೆ ಹೋದರೆ ನಿಮಗೆ 117 ಸಿಗುತ್ತದೆ. ಅದೇ ಉತ್ತರ.

ಉದಾ: 48-26

ಮೊದಲು 48ಅನ್ನು ಗುರುತಿಸಿ. ಆ ಸ್ಥಾನದಿಂದ ಮೇಲಕ್ಕೆ ಎರಡನೇ ಸಂಖ್ಯೆಯ ದಶಕ 2 ಇರುವುದರಿಂದ 2 ಸ್ಥಾನ ಬನ್ನಿ. ಹಾಗೆಯೇ ಬಿಡಿ ಸ್ಥಾನದಲ್ಲಿ 6 ಇರುವುದರಿಂದ 6 ಸ್ಥಾನ ಎಡಕ್ಕೆ ಹೋದರೆ ನಿಮಗೆ 22 ಸಿಗುತ್ತದೆ. ಅದೇ ಉತ್ತರ.

ಡಣ್ಣ ಚಕ್ಕು ಕೇಶ್ರಷ್ಟ ಕಥೆಯ

ರಾಷ್ಟ್ರಧ್ವಜದ ಬೆಂಗೇರಿ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ದೇಶಕ್ಕೆ ರಾಷ್ಟ್ರಧ್ವಜಗಳನ್ನು ಸಿದ್ಧಪಡಿಸಿಕೊಡುತ್ತಿರುವ ಖಾದಿ ಗ್ರಾಮೋದ್ಯೋಗ ಸಂಘ ಹುಬ್ಬಳ್ಳಿಯ ಬೆಂಗೇರಿಯಲ್ಲಿದೆ



ಮೊದಲು ರೈತರಿಂದ ಪಡೆದ ಹತ್ತಿಯಿಂದ ಚರಕದಲ್ಲಿ ನೂಲನ್ನು ತೆಗೆದು, ಧ್ವಜದ ಬಟ್ಟೆಯನ್ನು ತಯಾರು ಮಾಡಲಾಗುತ್ತದೆ

ನೂಲು ತೆಗೆದು ನೇಯ್ದ ಬಟ್ಟೆಯಿಂದ ನೈಸರ್ಗಿಕ ಬಣ್ಣಗಳ ನೆರವಿನಿಂದ ತ್ರಿವರ್ಣ ಧ್ವಜದ ಬಟ್ಟೆಯನ್ನು ಸಿದ್ಧಪಡಿಸಲಾಗುತ್ತದೆ



ತ್ರಿವರ್ಣ ಧ್ವಜದ ಮಧ್ಯದಲ್ಲಿ ಬರುವ ಅಶೋಕ ಚಕ್ರವನ್ನು ಸ್ಕ್ರೀನ್ ಪ್ರಿಂಟಿಂಗ್ ನೆರವಿನಿಂದ ಅದರಲ್ಲಿ ಮೂಡಿಸಲಾಗುತ್ತದೆ

ಒಮ್ಮೆ ತ್ರಿವರ್ಣ ಪಡೆದು, ಚಕ್ರವನ್ನೂ ಮೂಡಿಸಿಕೊಂಡ ಬಾವುಟ ಹೊರಬಂದ ಮೇಲೆ ಅದಕ್ಕೆ ಅಂತಿಮ ಸ್ಪರ್ಶ ನೀಡಲಾಗುತ್ತದೆ

ಬೆಂಗೇರಿಯಲ್ಲಿ ಹೀಗೆ ಸಿದ್ಧವಾದ ರಾಷ್ಟ್ರಧ್ವಜ ರಾಷ್ಟ್ರಪತಿ ಭವನವೂ ಸೇರಿದಂತೆ ದೇಶದ ಎಲ್ಲ ಕಡೆಗಳಲ್ಲಿ ಬಾನಾಡಿ ಆಗುತ್ತದೆ

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಿರಿ

1. ಗುಡ್ಡದ ನೀರು = ________
2. ಯಾರ ಹಾಲಕ್ಕಿ = ________
3. ಸಮ ನೆಲಕೆ = ________
4. ಕಾಯುವಾ ರವಿ = ________



ಶಬ್ದಗಳೊಡನೆ ಸರಸ

1. ಸ್ವಾರಸ್ಯಕರ ಶಬ್ದ

ಬ ಗೆ ಹ ರಿ ಸು ತ್ತ ಲೆ

ಇಲ್ಲಿರುವ ಶಬ್ದ ಬಂಧ ಸ್ವಾರಸ್ಯಕರವಾಗಿದೆ

2. ರಾಜನು ಯುದ್ಧ ಮಾಡಿ ಮಾಡಿ ಸತ್ತು ಹೋದನು.

ಇಲ್ಲಿ ಯಾವ ಪದದ ಹಿಂದೆ ಯಾವ ಅಕ್ಷರವನ್ನು ಸೇರಿಸಿದರೆ ರಾಜ ಜೀವಂತನಾಗುತ್ತಾನೆ?

ಉತ್ತರ :- 'ಸತ್ತು' ಹಿಂದೆ 'ಬೇ' ಸೇರಿಸಿ ಓದಿ

3. ಯಾರು ತೊಡದ ಬಟ್ಟೆ ಯಾವುದು?

ಉತ್ತರ: ಮೂರಾಬಟ್ಟೆ

ಟ್ವೆಂಟಿ – 20 ಮ್ಯಾಚ್

ಇಲ್ಲಿರುವ ಅಪೂರ್ಣ ಪದಗಳಿಗೆ ಸೂಕ್ತ ಸ್ಥಳದಲ್ಲಿ ದ್ವಂದ್ವಾಕ್ಷರ ಹೊಂದಿಸಿ

1.	ತ__ಮ__	A.	ಲಲ
2.	ಅ__ತ__	B.	ಪ್ರಪ್ರ
3.	ಗ__ಮು__	C.	ಗಗ
4.	ಹಿ__ಮಿ__	D.	ಡಿಡಿ
5.	ಹ__ಬಿ__	E.	ಡುಡು
6.	ಗ__ಬಿ__	F.	ರಿರಿ
7.	ನ__ಮ__	G.	ಗುಗು
8.	ನಾ__ನೋ__	H.	ಡೆಡೆ
9.	ಜ__ಮ__	I.	ಸಿಸಿ
10.	ನ__ಮ__	J.	ತತ
11.	ಅ__ವ್ಯ__	K.	ಳಿಳಿ
12.	ನೆ__ಜ__	L.	ರಿರಿ
13.	ಜ__ಮ__	M.	ರರ
14.	ಸ__ಕಾ__	N.	ಳಳ
15.	ಇ__ಮಿ__	O.	ರುರು
16.	ತೆ__ಮ__	P.	ನನ
17.	ಬಿ__ಗೂ__	Q.	ತಿತಿ
18.	ಆ__ಕಾ__	R.	ಳುಳು
19.	ಬಿ__ಬೇ__	S.	ರೆರೆ
20.	ಏ__ಬೀ__	T.	ಡಡ

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಸಸ್ಯ 2. ಹಣೆ 3. ಸರಿ 4. ಗುರಿ
5. ಮುರು 6. ಜಳ 7. ನಗೆ 8. ಜೀನ

1.		ವ		5.		ರಿ	
2.		ಜ		6.		ದ	
3.		ನ		7.		ಗ	
4.		ದ		8.		ಕು	

ಮಜ ಮಜ ಮಜಕೂರದ ಆಗಸ್ಟ್ 15ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದ ಹಿಗ್ಗು

1. ಸಕಲ 2. ಮಾನ್ಯತೆ 3. ಗುರಾಣಿ 4. ಹಿಡಿತ
5. ಗುಜರಿ 6. ಮುರಾರಿ 7. ಗಾಯನ 8. ಮಹಡಿ

ಅದಲು ಬದಲು ಕಂಚಿ ಕದಲು ...

1. ವಿರಾಜಮಾನ 2. ಹತ್ತಿ ಅರಳೆ 3. ಹಕ್ಕಿನ ಅರಿವು 4. ವರರ ಗಾದಿ

ಜಾಣಪದ ಆಟ

1. ಜರಡಿ 2. ಚಕ್ಕಡಿ 3. ಸರತಿ 4. ವ್ಯಾಕುಲ 5. ಹವನ
(ಇವಲ್ಲದೇ ಬೇರೆ ಪ್ರಾಸಪದಗಳು ಇದ್ದರೂ ಸರಿ)

ಸಮನಾರ್ಥಕ ಪದಗಳು

1. ನೀರಜ 2. ಸರೋಜ 3. ಪಂಕಜ 4. ಕಮಲ 5. ಜಡೇಜ 6. ಪದ್ಮ

ಟ್ವೆಂಟಿ 20 ಮ್ಯಾಚ್

1-O 2-H 3-L 4-F 5-R 6-C 7-P 8-S 9-J 10-M
11-N 12-G 13-D 14-E 15-B 16-I 17-K 18-T 19-Q 20-A

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಖುಷಿ ಕೆಂಚನಗೌಡರ
ಬೆಂಗಳೂರು

ಪ್ರೇರಣಾ ಸುರೇಶ್
ದೊಡ್ಡಬಳ್ಳಾಪುರ

ಶ್ರೇಯಾ ಜವಳಿ
ಸಿಂಧನೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್: ಹರಿಯಾಣ ಹುಡುಗನ ಸಾಧನೆ

ಬೆಳ್ಳಿ ಪಥದಲ್ಲಿ ಅಮಿತ್ ನಡಿಗೆ

ಅಮಿತ್ ಖತ್ರಿ– ಭಾರತ ಅಥ್ಲೆಟಿಕ್ಸ್ ಫೆಡರೇಷನ್ ಟ್ವಿಟರ್ ಚಿತ್ರ

ನೈರೋಬಿ (ಪಿಟಿಐ): ಭಾರತದ ಅಮಿತ್ ಖತ್ರಿ ಶನಿವಾರ ಇಲ್ಲಿ ನಡೆದ 20 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 10 ಸಾವಿರ ಮೀಟರ್ಸ್ ನಡಿಗೆಯಲ್ಲಿ ಬೆಳ್ಳಿ ಪದಕ ಜಯಿಸಿದರು.

ಹರಿಯಾಣದ 17 ವರ್ಷದ ಅಮಿತ್, 42 ನಿಮಿಷ, 17.94ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಕೆನ್ಯಾದ ಹ್ಯಾರಿ ಸ್ಟೋನ್ (42 ನಿ. 10.84 ಸೆ.) ಚಿನ್ನದ ಪದಕ ಜಯಿಸಿದರು. ಸ್ಪೇನ್‌ನ ಪಾಲ್ ಮೆಕ್‌ಗ್ರಾ (42 ನಿ. 26.11 ಸೆ) ಕಂಚಿನ ಪದಕ ಪಡೆದರು. ಈ ಕೂಟದಲ್ಲಿ ಭಾರತಕ್ಕೆ ಒಲಿದ ಎರಡನೇ ಪದಕ ಇದಾಗಿದೆ. ಈಚೆಗೆ 4X400 ಮೀಟರ್ಸ್ ಮಿಶ್ರ ರಿಲೆ ತಂಡವು ಕಂಚಿನ ಪದಕ ಗಳಿಸಿತ್ತು.

ಹೋದ ಜನವರಿಯಲ್ಲಿ ನಡೆದಿದ್ದ ಫೆಡರೇಷನ್ ಕಪ್ ಜೂನಿಯರ್ ರಾಷ್ಟ್ರೀಯ ಕೂಟದಲ್ಲಿ ಅಮಿತ್ (40ನಿ,40.97ಸೆ) ಚಿನ್ನದ ಪದಕ ಜಯಿಸಿದ್ದರು. ಅವರಿಗೆ ಇದು ಮೊದಲ ಅಂತರರಾಷ್ಟ್ರೀಯ ಸ್ಪರ್ಧೆ.

ಸ್ಪರ್ಧೆಯಲ್ಲಿ ಅಮಿತ್ ಮೊದಲ ಒಂಬತ್ತು ಸಾವಿರ ಮೀಟರ್ಸ್ ದೂರದವರೆಗೂ ಮುನ್ನಡೆ ಸಾಧಿಸಿದ್ದರು. ಆದರೆ, ಚಿನ್ನದ ಪದಕದ ಸನಿಹದಲ್ಲಿ ಎಡವಿದರು. ಅದಕ್ಕೆ ಕಾರಣವಾಗಿದ್ದು ಸ್ಪರ್ಧೆ ನಡೆದ ಪ್ರದೇಶವು ಎತ್ತರದಲ್ಲಿರುವುದು. ಸಮುದ್ರಮಟ್ಟದಿಂದ ಸುಮಾರು 1800 ಮೀಟರ್ಸ್ ಎತ್ತರದಲ್ಲಿರುವ ಈ ಪ್ರದೇಶದಲ್ಲಿ ನಡೆಯುವಾಗ ಅಮಿತ್ ಉಸಿರಾಟದ ತೊಂದರೆ ಅನುಭವಿಸಿದರು. ಇದರಿಂದಾಗಿ ಅವರ ವೇಗ ಕುಂಠಿತವಾಯಿತು.

ಟಾಪ್ಸ್‌ಗೆ ಸೇರಿಸಲು ಕೋಚ್ ಮನವಿ: ಅಮಿತ್ ಅವರನ್ನು ಟಾರ್ಗೆಟ್ ಒಲಿಂಪಿಕ್ಸ್ ಪೋಡಿಯಂ ಯೋಜನೆಗೆ (ಟಾಪ್ಸ್) ಸೇರಿಸಬೇಕೆಂದು ಅವರ ಕೋಚ್ ಚಂದನ್ ಸಿಂಗ್ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

‘ಅಮಿತ್ ಅವರ ನಡಿಗೆ ತಂತ್ರಗಳು ಉತ್ತಮವಾಗಿವೆ. ಕೆಲವೇ ವರ್ಷಗಳಲ್ಲಿ ಆತ ದೇಶದ ಅಗ್ರ ನಡಿಗೆ ಸ್ಪರ್ಧಿ ಆಗುವ ಸಾಧ್ಯತೆಯಿದೆ. ಆದರೆ ಆತನಿಗೆ ಆರ್ಥಿಕ ನೆರವು ಬೇಕು. ಹೀಗಾಗಿ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಅವರನ್ನು ಟಾಪ್ಸ್‌ಗೆ ಸೇರಿಸಿಕೊಳ್ಳಬೇಕು’ ಎಂದು ಪುಣೆಯ ಆರ್ಮಿ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಚಂದನ್ ಅವರು ಹೇಳಿದ್ದಾರೆ.

ಪ್ರಿಯಾ ವೈಯಕ್ತಿಕ ಶ್ರೇಷ್ಠ ಸಾಧನೆ: ಮಹಿಳೆಯರ 400 ಮೀ. ಓಟದಲ್ಲಿ ಭಾರತದ ಪ್ರಿಯಾ ಮೋಹನ್ ಅವರು ಕೂದಲೆಳೆ ಅಂತರದಲ್ಲಿ ಕಂಚಿನ ಪದಕ ತಪ್ಪಿಸಿಕೊಂಡರು.

ಕರ್ನಾಟಕದ ಅಥ್ಲೀಟ್ ವೈಯಕ್ತಿಕ ಶ್ರೇಷ್ಠ ಸಾಧನೆ 52.77 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಕೆನ್ಯಾದ ಸಿಲ್ವಿಯಾ ಚೆಲಾಂಗಟ್ (52.23 ಸೆ.) ಕಂಚು ಗೆದ್ದರು.

ಆರ್‌ಸಿಬಿಗೆ ಹೆಸನ್ ಕೋಚ್

ಐಪಿಎಲ್ ಟೂರ್ನಿ: ತಂಡ ತೊರೆದ ಸೈಮನ್ ಕ್ಯಾಟಿಚ್

ಪ್ರಜಾವಾಣಿ ವಾರ್ತೆ

ಮೈಕ್ ಹೆಸನ್

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಕೋಚ್, ಆಸ್ಟ್ರೇಲಿಯಾದ ಸೈಮನ್ ಕ್ಯಾಟಿಚ್ ತಂಡವನ್ನು ತೊರೆದಿದ್ದು 14ನೇ ಆವೃತ್ತಿಯ ಎರಡನೇ ಹಂತದಲ್ಲಿ ಮೈಕ್ ಹೆಸನ್ ಕೋಚ್ ಆಗಿ ಕಾರ್ಯನಿರ್ವಹಿಸುವರು.

ಬದಲಾವಣೆಗಳನ್ನು ಶನಿವಾರ ಪ್ರಕಟಣೆಯ ಮೂಲಕ ತಿಳಿಸಿರುವ ತಂಡದ ಆಡಳಿತ ಮೂವರು ಆಟಗಾರರನ್ನು ಕೈಬಿಟ್ಟು ಮೂವರನ್ನು ಸೇರ್ಪಡೆಗೊಳಿಸಲಾಗಿದೆ ಎಂದು ತಿಳಿಸಿದೆ. ಶ್ರೀಲಂಕಾದ ಲೆಗ್ ಸ್ಪಿನ್ನರ್ ವಾಣಿಂದು ಹಸರಂಗ, ಮಧ್ಯಮ ವೇಗಿ ದುಷ್ಮಂತ ಚಮೀರ ಮತ್ತು ಆಸ್ಟ್ರೇಲಿಯಾದ ಆಲ್‌ರೌಂಡರ್ ಟಿಮ್ ಡೇವಿಡ್ ಅವರನ್ನು ತಂಡಕ್ಕೆ ಕರೆಸಿಕೊಳ್ಳಲಾಗಿದೆ.

ಇವರು ಕ್ರಮವಾಗಿ ಆಸ್ಟ್ರೇಲಿಯಾದ ಆ್ಯಡಂ ಜಂಪಾ, ಆಸ್ಟ್ರೇಲಿಯಾದ ಡ್ಯಾನಿಯಲ್ ಸ್ಯಾಮ್ಸ್ ಮತ್ತು ನ್ಯೂಜಿಲೆಂಡ್‌ನ ಫಿನ್ ಅಲೆನ್ ಅವರ ಬದಲಿಗೆ ತಂಡವನ್ನು ಸೇರಿಕೊಳ್ಳಲಿದ್ದಾರೆ.

ಭಾರತದ ಆಟಗಾರರು ಮತ್ತು ನೆರವು ಸಿಬ್ಬಂದಿ ಶನಿವಾರದಿಂದ ಏಳು ದಿನ ಬೆಂಗಳೂರಿನಲ್ಲಿ ಕ್ವಾರಂಟೈನ್‌ಗೆ ಒಳಗಾಗಲಿದ್ದಾರೆ. ಈ ಅವಧಿಯಲ್ಲಿ ಮೂರು ದಿನ ಕೋವಿಡ್ ಪರೀಕ್ಷೆ ನಡೆಯಲಿದೆ. 29ರಂದು ವಿಶೇಷ ವಿಮಾನದಲ್ಲಿ ಯುಎಇಗೆ ತೆರಳಲಿದ್ದಾರೆ. ವಿದೇಶಿ ಆಟಗಾರರು ದುಬೈನಲ್ಲಿ ತಂಡವನ್ನು ಸೇರಿಕೊಳ್ಳಲಿದ್ದಾರೆ. ಅಲ್ಲಿ ಎಲ್ಲರೂ ಆರು ದಿನಗಳ ಕ್ವಾರಂಟೈನ್‌ಗೆ ಒಳಗಾಗುವರು.

ಈ ಬಾರಿ ಐಪಿಎಲ್‌ನ ಮೊದಲ ಪಂದ್ಯದಲ್ಲಿ ಆರ್‌ಸಿಬಿ ತಂಡ ಸೆಪ್ಟೆಂಬರ್ 20ರಂದು ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಸೆಣಸಲಿದೆ.

ಮುಂಬೈ ಇಂಡಿಯನ್ಸ್ ತಂಡದವರು ಅಬುಧಾಬಿಯಲ್ಲಿ ಶನಿವಾರ ಅಭ್ಯಾಸ ಆರಂಭಿಸಿದ್ದು ಲೆಗ್ ಸ್ಪಿನ್ನರ್ ಪೀಯೂಷ್ ಚಾವ್ಲಾ ಮತ್ತು ಬ್ಯಾಟಿಂಗ್ ಕೋಚ್ ರಾಬಿನ್ ಸಿಂಗ್ ಮಾತುಕತೆಯಲ್ಲಿ ತೊಡಗಿದ್ದರು –ಮುಂಬೈ ಇಂಡಿಯನ್ಸ್ ಮೀಡಿಯಾ ಚಿತ್ರ

ಸಿಂಗಪುರದ ಮೊದಲ ಕ್ರಿಕೆಟಿಗ

ನವದೆಹಲಿ (ಪಿಟಿಐ): ಟಿಮ್ ಡೇವಿಡ್ ಅವರು ಐಪಿಎಲ್‌ನಲ್ಲಿ ಆಡಲಿರುವ ಸಿಂಗಪುರದ ಮೊದಲ ಆಟಗಾರ ಎನಿಸಲಿದ್ದಾರೆ. ಪಾಲಕರು ಆಸ್ಟ್ರೇಲಿಯಾಗೆ ವಲಸೆ ಹೋದ ಕಾರಣ ಅಲ್ಲಿ ಬೆಳೆದ ಅವರು ಈಗ ಸಿಂಗಪುರ ತಂಡದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಆಡುತ್ತಿದ್ದಾರೆ. ರಾಷ್ಟ್ರೀಯ ತಂಡದಲ್ಲಿ 14 ಪಂದ್ಯಗಳನ್ನು ಆಡಿದ್ದು 558 ರನ್ ಗಳಿಸಿದ್ದಾರೆ.

ಒಟ್ಟಾರೆ 49 ಟಿ20 ಪಂದ್ಯಗಳನ್ನು ಆಡಿದ್ದು ಬಿಬಿಎಲ್ ಮತ್ತು ಪಿಎಸ್‌ಎಲ್‌ನಲ್ಲಿ ಒಟ್ಟು 1171 ರನ್ ಕಲೆ ಹಾಕಿದ್ದಾರೆ.

ಬಟ್ಲರ್ ಅಲಭ್ಯ?: ಇಂಗ್ಲೆಂಡ್‌ನ ಜೋಸ್ ಬಟ್ಲರ್ ಅವರು ಟೂರ್ನಿಗೆ ಅಲಭ್ಯರಾಗುವ ಸಾಧ್ಯತೆ ಇದೆ ಎಂದು ರಾಜಸ್ತಾನ್ ರಾಯಲ್ಸ್ ಶನಿವಾರ ತಿಳಿಸಿದೆ. ಮಗುವಿನ ನಿರೀಕ್ಷೆಯಲ್ಲಿರುವ ಬಟ್ಲರ್ ಅವರು ಪತ್ನಿ ಜೊತೆ ಇರಲು ಬಯಸಿದ್ದಾರೆ’ ಎಂದು ಕ್ಲಬ್ ಟ್ವೀಟ್ ಮಾಡಿದೆ.

ಕ್ರಿಕೆಟ್: ರೋಶಿನಿ ಅಜೇಯ ಶತಕ

ರೋಶಿನಿ ಕಿರಣ್

ಬೆಂಗಳೂರು: ರೋಶಿನಿ ಕಿರಣ್ (ಔಟಾಗದೆ 101, 113 ಎಸೆತ, 17 ಬೌಂಡರಿ) ಅವರ ಅಮೋಘ ಶತಕವು ಕೆಎಸ್‌ಸಿಎ ಅಂತರ ವಲಯ 19 ವರ್ಷದೊಳಗಿನವರ ಮಹಿಳಾ ಕ್ರಿಕೆಟ್ ಟೂರ್ನಿಯಲ್ಲಿ ‘ಸಿ’ ತಂಡಕ್ಕೆ ಗೆಲುವು ತಂದುಕೊಟ್ಟಿತು. ಅವರ ಆಟದ ನೆರವಿನಿಂದ ತಂಡವು ಶನಿವಾರ ‘ಬಿ’ ತಂಡವನ್ನು ಐದು ವಿಕೆಟ್‌ಗಳಿಂದ ಸೋಲಿಸಿತು.

ಬಿ ತಂಡದ ಚಂದಸಿ ಕೃಷ್ಣಮೂರ್ತಿ ಗಳಿಸಿದ ಶತಕ (ಔಟಾಗದೆ 100, 109ಎ, 16 ಬೌ.) ವ್ಯರ್ಥವಾಯಿತು.

ಸಂಕ್ಷಿಪ್ತ ಸ್ಕೋರ್: ‘ಬಿ’ ತಂಡ: 47.4 ಓವರ್‌ಗಳಲ್ಲಿ 218 ಆಲೌಟ್ (ಕೃಷಿಕಾ ರೆಡ್ಡಿ 27, ಚಂದಸಿ ಕೃಷ್ಣಮೂರ್ತಿ ಔಟಾಗದೆ 100; ರೀಮಾ ಫರೀದ್ 24ಕ್ಕೆ 3). ‘ಸಿ’ ತಂಡ: 44.1 ಓವರ್‌ಗಳಲ್ಲಿ 5 ವಿಕೆಟ್‌ಗೆ 219 (ರೋಶಿನಿ ಕಿರಣ್ ಔಟಾಗದೆ 101, ತೇಜಸ್ವಿನಿ 39; ಮಿಥಾಲಿ ವಿನೋದ್ 35ಕ್ಕೆ2). ಫಲಿತಾಂಶ: ‘ಸಿ’ ತಂಡಕ್ಕೆ 5 ವಿಕೆಟ್‌ಗಳ ಜಯ.

‘ಎ’ ತಂಡ: 47.3 ಓವರ್‌ಗಳಲ್ಲಿ 199 ಆಲೌಟ್ (ಆರ್ಯಾಹಿ ಕೆ. 26, ಸಲೋನಿ ಪಿ. ಔಟಾಗದೆ 32, ಪ್ರೇರಣಾ ಜಿ.ಆರ್. ಔಟಾಗದೆ 53; ಚಿನ್ಮಯಾ 34ಕ್ಕೆ 2). ‘ಡಿ’ ತಂಡ: 48.1 ಓವರ್‌ಗಳಲ್ಲಿ 164 (ಪೂಜಾ ಡಿ. 62; ಸವಿ 22ಕ್ಕೆ 2, ಅರ್ಚಿತಾ ಬಿ. 19ಕ್ಕೆ 3, ಸಲೋನಿ ಪಿ. 22ಕ್ಕೆ 2). ಫಲಿತಾಂಶ: ‘ಎ’ ತಂಡಕ್ಕೆ 35 ರನ್‌ಗಳ ಜಯ.

ಬೋರಾ ಭರ್ಜರಿ ಶತಕ: ಜಾಯ್ ಬೋರಾ (148, 121ಎಸೆತ, 23 ಬೌಂಡರಿ) ಹಾಗೂ ಸೃಜನ್ ನಂದನ್ (120, 128ಎ, 16 ಬೌ.) ಅವರ ಭರ್ಜರಿ ಶತಕಗಳ ಬಲದಿಂದ ಮಾಡರ್ನ್ ಕ್ರಿಕೆಟ್ ಕ್ಲಬ್ ತಂಡವು ರಾಜಾಜಿನಗರ ಕ್ರಿಕೆಟರ್ಸ್ ತಂಡವನ್ನು ಮಣಿಸಿತು.

ಇಲ್ಲಿ ನಡೆಯುತ್ತಿರುವ ಅಂತರ ಕ್ಲಬ್ ಕ್ರಿಕೆಟ್ ಟೂರ್ನಿಯಲ್ಲಿ ಶನಿವಾರ ಮಾಡರ್ನ್ ಸಿಸಿಗೆ 189 ರನ್‌ಗಳಿಂದ ಜಯ ಒಲಿಯಿತು.

ಮಂಗಳೂರು, ಬೀಗಲ್ಸ್ ಚಾಂಪಿಯನ್

ಬ್ಯಾಸ್ಕೆಟ್‌ಬಾಲ್: ಬ್ಯಾಂಕ್ ಆಫ್ ಬರೋಡಾ, ನಿಟ್ಟೆ ಕೆ.ಎಸ್.ಹೆಗ್ಡೆ ಸಂಸ್ಥೆಗೆ ಸೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರು ಬ್ಯಾಸ್ಕೆಟ್ ಬಾಲ್ ಕ್ಲಬ್ ಮತ್ತು ಬೆಂಗಳೂರಿನ ಬೀಗಲ್ಸ್ ಕ್ಲಬ್ ತಂಡದವರು ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಆಯೋಜಿಸಿದ್ದ 3x3 ರಾಜ್ಯಮಟ್ಟದ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪುರುಷರ ವಿಭಾಗದ ಫೈನಲ್‌ನಲ್ಲಿ ಮಂಗಳೂರು ತಂಡ 21-13ರಲ್ಲಿ ಬ್ಯಾಂಕ್ ಆಫ್ ಬರೋಡಾ ತಂಡವನ್ನು ಮಣಿಸಿತು. ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಬೀಗಲ್ಸ್ 18-16ರಲ್ಲಿ ನಿಟ್ಟೆ ಕೆ.ಎಸ್.ಹೆಗ್ಡೆ ಸಂಸ್ಥೆಯ ತಂಡವನ್ನು ಸೋಲಿಸಿತು.

ಪುರುಷರ ವಿಭಾಗದ ಸೆಮಿಫೈನಲ್ ಪಂದ್ಯಗಳಲ್ಲಿ ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ 21-16ರಲ್ಲಿ ಎಂಇಜಿ ವಿರುದ್ಧ ಮತ್ತು ಬ್ಯಾಂಕ್ ಆಫ್ ಬರೋಡ 21-9ರಲ್ಲಿ ಎಎಸ್‌ಸಿ ವಿರುದ್ಧ ಗೆಲುವು ದಾಖಲಿಸಿದವು.

ಮಹಿಳೆಯರ ವಿಭಾಗದ ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಬೀಗಲ್ಸ್ 17-10ರಲ್ಲಿ ರಾಜ್‌ಕುಮಾರ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ವಿರುದ್ಧ ಮತ್ತು ಕೆ.ಎಸ್.ಹೆಗ್ಡೆ ಸಂಸ್ಥೆಯ ತಂಡ 10–9ರಲ್ಲಿ ಮೌಂಟ್ಸ್ ಕ್ಲಬ್ ವಿರುದ್ಧ ಜಯ ಸಾಧಿಸಿತು.

‘ಎ’ ಡಿವಿಷನ್ ಟೂರ್ನಿಯ ಕೊನೆಯ ಲೀಗ್ ಪಂದ್ಯ 23ರ ಸೋಮವಾರ ಮಧ್ಯಾಹ್ನ 3.30ಕ್ಕೆ ನಡೆಯಲಿದ್ದು ಬ್ಯಾಂಕ್ ಆಫ್ ಬರೋಡಾ ಮತ್ತು ಎಎಸ್‌ಸಿ ತಂಡಗಳು ಮುಖಾಮುಖಿಯಾಗಲಿವೆ. ನಂತರ ‘ಬಿ’ ಡಿವಿಷನ್ ಲೀಗ್‌ನ ಫೈನಲ್ ಪಂದ್ಯ ನಡೆಯಲಿದ್ದು ಎಂಎನ್‌ಕೆ ರಾವ್ ಪಾರ್ಕ್ ಮತ್ತು ಎಂಇಜಿ–ಸೆಂಟರ್ ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ.

ಈ ಎರಡೂ ಪಂದ್ಯಗಳು ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿವೆ.

ಪುರುಷರ ವಿಭಾಗದ ಪ್ರಶಸ್ತಿ ಗೆದ್ದ ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡ. (ಎಡದಿಂದ): ನರಸಿಂಹನ್ ಎ.ಕೆ, ರಜತ್ ಕೆ.ಆರ್, ಆದಿತ್ಯ ಮಹಾಲೆ (ಕೋಚ್), ಶಶಾಂಕ್ ರೈ ಮತ್ತು ಸಂಕೃತ್ ಹರಿಮೋಹನ್

ಮಹಿಳೆಯರ ವಿಭಾಗದ ಚಾಂಪಿಯನ್ ಆದ ಬೀಗಲ್ಸ್ ತಂಡ. (ಎಡದಿಂದ): ಮೇಖಲಾ ಗೌಡ, ಸಂಜನಾ ಕುಮಾರ್, ಮೋಹನ್ ಕುಮಾರ್ (ಕೋಚ್), ಚಂದನಾ ಶೇಖರ್ ಮತ್ತು ಮುಬಾ ತನ್ವೀರ್ – ಪ್ರಜಾವಾಣಿ ಚಿತ್ರಗಳು

ಎಎಫ್‌ಸಿ ಕಪ್: ಬಿಎಫ್‌ಸಿ ಕನಸು ಭಗ್ನ

ಮಾಲಿ, ಮಾಲ್ಡೀವ್ಸ್ (ಪಿಟಿಐ): ಬಾಂಗ್ಲಾದೇಶದ ಬಶುಂಧರಾ ಕಿಂಗ್ಸ್ ತಂಡದ ಎದುರಿನ ಪಂದ್ಯ ಗೋಲುರಹಿತ ಡ್ರಾದಲ್ಲಿ ಅಂತ್ಯಗೊಳ್ಳುವುದರೊಂದಿಗೆ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡದ ಎಎಫ್‌ಸಿ ಕಪ್ ಟೂರ್ನಿಯ ನಾಕೌಟ್ ಹಂತಕ್ಕೇರುವ ಕನಸು ಭಗ್ನಗೊಂಡಿದೆ.

ಶನಿವಾರ ಇಲ್ಲಿ ನಡೆದ ‘ಡಿ’ ಗುಂಪಿನ ಪಂದ್ಯದ 74ನೇ ನಿಮಿಷದಲ್ಲಿ ಬಿಎಫ್‌ಸಿಯ ಅಲನ್ ಹೆನ್ರಿಕ್ ಕೋಸ್ಟಾ ಹೆಡರ್ ಮೂಲಕ ಚೆಂಡನ್ನು ಗೋಲುಪೆಟ್ಟಿಗೆಯತ್ತ ಸಾಗಿಸಿದ್ದರು. ಆದರೆ ಅದು ಕ್ರಾಸ್‌ಬಾರ್‌ಗೆ ಸೋಂಕಿ ವಾಪಸ್ ಚಿಮ್ಮಿತು.

ಸುನಿಲ್ ಚೆಟ್ರಿ ನೇತೃತ್ವದ ಬೆಂಗಳೂರು ತಂಡ ಕೊನೆಯ ಹಂತದಲ್ಲಿ ಭಾರಿ ಆಕ್ರಮಣ ನಡೆಸಿ ಗೆಲುವಿಗಾಗಿ ಪ್ರಯತ್ನಿಸಿತು. ಆದರೆ ಬಶುಂಧರಾ ತಂಡದ ಗೋಲ್‌ಕೀಪರ್ ಅನಿಸುರ್ ರಹಿಮಾನ್ ಅವರು ಅಮೋಘ ಕೈಚಳಕದ ಮೂಲಕ ಮಿಂಚಿದರು. ಬಾಂಗ್ಲಾದೇಶ ಪ್ರೀಮಿಯರ್ ಲೀಗ್‌ನ ಚಾಂಪಿಯನ್ ಬಶುಂಧರಾ ಗುಂಪಿನಲ್ಲಿ ನಾಲ್ಕು ಪಾಯಿಂಟ್‌ಗಳೊಂದಿಗೆ ನಾಕೌಟ್ ಹಂತಕ್ಕೇರುವತ್ತ ಹೆಜ್ಜೆ ಹಾಕಿದೆ.

ಭಾರತ ಚೆಸ್ ಸಂಸ್ಥೆ–ಎಐಸಿಎಫ್ ನಡುವೆ ರಾಜಿ

ಲಖನೌ (ಪಿಟಿಐ): ವರ್ಷಗಳ ಕಾಲದ ಆಂತರಿಕ ಕಲಹಕ್ಕೆ ತೆರೆ ಎಳೆದಿರುವ ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್) ಮತ್ತು ಭಾರತ ಚೆಸ್ ಸಂಸ್ಥೆಗಳು ಇನ್ನು ಮುಂದೆ ಒಂದೇ ಸಂಘಟನೆಯಡಿ ಕಾರ್ಯನಿರ್ವಹಿಸುವುದಾಗಿ ಶನಿವಾರ ಪ್ರಕಟಿಸಿವೆ.

ಈ ನಿರ್ಧಾರವನ್ನು ಚೆಸ್ ಪಟುಗಳು ಮತ್ತು ಆಡಳಿತದವರು ಸ್ವಾಗತಿಸಿದ್ದು ದೇಶದಲ್ಲಿ ಈ ಕ್ರೀಡೆಯ ಬೆಳವಣಿಗೆಗೆ ಇದು ನೆರವಾಗಲಿದೆ ಎಂದಿದ್ದಾರೆ.

ಎಐಸಿಎಫ್ ಅಧ್ಯಕ್ಷ ಸಂಜಯ್ ಕಪೂರ್ ‘ರಾಷ್ಟ್ರ ಮಟ್ಟದಲ್ಲಿ ಮಾತ್ರವಲ್ಲ, ರಾಜ್ಯಗಳಲ್ಲೂ ಚೆಸ್ ಸಂಸ್ಥೆಗಳಲ್ಲಿ ಭಿನ್ನಮತ ಇತ್ತು. ರಾಜಿಯಿಂದಾಗಿ ಈಗ ಎಲ್ಲ ಸಮಸ್ಯೆಗಳಿಗೂ ಕೊನೆ ಹಾಡಲಾಗಿದೆ’ ಎಂದಿದ್ದಾರೆ.

‘ಹೊಸ ಪದಾಧಿಕಾರಿಗಳ ಆಯ್ಕೆ ಬಳಿಕ ಪ್ರತಿಯೊಂದು ಸದಸ್ಯ ಸಂಘಟನೆಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ಎಲ್ಲರನ್ನೂ ಒಂದೇ ಸೂರಿನಡಿ ತರುವುದು ನಮ್ಮ ಉದ್ದೇಶ’ ಎಂದು ಕಾರ್ಯದರ್ಶಿ ಭರತ್ ಸಿಂಗ್ ಚೌಹಾಣ್ ಹೇಳಿದರು.

ಕುಸ್ತಿ: ಕಂಚಿನ ಪದಕದ ಸುತ್ತಿಗೆ ರವಿ

ಯೂಫಾ, ರಷ್ಯಾ (ಪಿಟಿಐ): ಭಾರತದ ರವಿ ಮಲಿಕ್, ವಿಶ್ವ ಜೂನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ನ ಗ್ರೀಕೊ ರೋಮನ್ ವಿಭಾಗದಲ್ಲಿ ಕಂಚಿನ ಪದಕದ ಸುತ್ತಿಗೆ ಪ್ರವೇಶಿಸಿದ್ದಾರೆ.

82 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಅವರು ಕಿರ್ಗಿಸ್ತಾನದ ಝುನಿಶ್ ಹುಮ್ನಬೆಕೊಬ್ ಅವರನ್ನು 18–9ರಿಂದ ಮಣಿಸಿ ಸೆಮಿಫೈನಲ್‌ಗೆ ಕಾಲಿಟ್ಟರು.

ನಾಲ್ಕರ ಘಟ್ಟದ ಬೌಟ್‌ನಲ್ಲಿ ಅರ್ಮೇನಿಯಾದ ಕರೆನ್ ಖಚತ್ರಿಯನ್ ಎದುರು ರವಿ ಮುಗ್ಗರಿಸಿದರು. ಕರೆನ್ ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಗೆಲುವು ಸಾಧಿಸಿದರು.

ಸವಾಲುಗಳ ಸಾಗರದಲ್ಲಿ ಈಜಿದ ನಿರಂಜನ್

ಪ್ಯಾರಾಲಿಂಪಿಕ್ಸ್‌ಗೆ ಕನ್ನಡಿಗ; 19 ಶಸ್ತ್ರಚಿಕಿತ್ಸೆಗಳ ನೋವು ಮೀರಿದ ಈಜುಪಟು

• ಗಿರೀಶ ದೊಡ್ಡಮನಿ

ಬೆಂಗಳೂರು: ಬಾಲ್ಯದಿಂದ ಕಾಡಿದ ಅಂಗವೈಕಲ್ಯದ ಸವಾಲು, ಹತ್ತೊಂಬತ್ತು ಶಸ್ತ್ರಚಿಕಿತ್ಸೆಗಳ ನೋವು ಮೀರಿ ನಿಂತ ಬೆಂಗಳೂರಿನ ನಿರಂಜನ್ ಮುಕುಂದನ್ ಇದೀಗ ಟೋಕಿಯೊ ವಿಮಾನವೇರಲು ಸಿದ್ಧರಾಗಿದ್ದಾರೆ.

ಹುಟ್ಟಿನಿಂದಲೇ ಕಾಡಿದ ಬೆನ್ನುಹುರಿಯ ದೌರ್ಬಲ್ಯದಿಂದಾಗಿ ನಿರಂಜನ್‌ಗೆ ನಿಲ್ಲಲು ಸಾಧ್ಯವಾಗುತ್ತಿರಲಿಲ್ಲ. ಏಳನೇ ವಯಸ್ಸಿನಲ್ಲಿ ವೈದ್ಯರೊಬ್ಬರು ಅಕ್ವಾ ಥೆರಪಿ (ಈಜು) ಅಥವಾ ಕುದುರೆ ಸವಾರಿ ಕಲಿಸಿ ಎಂದು ಪಾಲಕರಿಗೆ ಸಲಹೆ ನೀಡಿದರು. ಖಾಸಗಿ ಕಂಪೆನಿಯ ಉದ್ಯೋಗಿಗಳಾಗಿದ್ದ ಅಪ್ಪ ಆರ್. ಮುಕುಂದನ್ ಮತ್ತು ತಾಯಿ ಎಂ. ಲಕ್ಷ್ಮೀ ಅವರು ಮಗನಿಗೆ ಅಕ್ವಾ ಥೆರಪಿಯನ್ನೇ ಆಯ್ಕೆ ಮಾಡಿಕೊಂಡರು.

ಮಗನ ಕಾಲುಗಳಿಗೆ ಶಕ್ತಿ ತುಂಬಲು ಅಪ್ಪ, ಅಮ್ಮ ಮಾಡಿದ ನಿರ್ಧಾರ ಇವತ್ತು ರಂಗು ತಂದಿದೆ. ಇದೇ 24ರಿಂದ ಜಪಾನಿನ ಟೋಕಿಯೊದಲ್ಲಿ ಆಯೋಜನೆ ಆಗಲಿರುವ ಪ್ಯಾರಾಲಿಂಪಿಕ್ಸ್‌ನಲ್ಲಿ ನಿರಂಜನ್ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ.

ಈ ಹಾದಿಯಲ್ಲಿ ಅವರು ಅನುಭವಿಸಿದ ನೋವು ಹಲವು. 19 ಶಸ್ತ್ರಚಿಕಿತ್ಸೆಗಳಿಗೆ ಒಳಗಾಗಿದ್ದಾರೆ. ಆದರೆ, ಆ ನೋವುಗಳನ್ನು ನುಂಗುತ್ತ ಕಳೆದ 19 ವರ್ಷಗಳಲ್ಲಿ ಅಂತರರಾಷ್ಟ್ರೀಯ ಪ್ಯಾರಾ ಈಜುಕೂಟಗಳಲ್ಲಿ 50ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಪದಕಗಳನ್ನು ಗೆದ್ದ ದಾಖಲೆಯನ್ನೂ ಮಾಡಿದ್ದಾರೆ. ಬಿ.ಕಾಂ ಪದವೀಧರರಾಗಿರುವ ಅವರು, ಕ್ರೀಡಾ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಪದವಿಯನ್ನೂ ಗಳಿಸಿದ್ದಾರೆ. ತಮ್ಮ ಸಾಧನೆಯ ಹಾದಿಯ ಕುರಿತು 26 ವರ್ಷದ ನಿರಂಜನ್ ‘**ಪ್ರಜಾವಾಣಿ**’ಯೊಂದಿಗೆ ಹಂಚಿಕೊಂಡಿದ್ದಾರೆ.

ನಿರಂಜನ್ ಮುಕುಂದನ್

- **ಈಜು ಕ್ರೀಡೆಗೆ ಬಂದಿದ್ದು ಹೇಗೆ? ಸ್ಪರ್ಧಾತ್ಮಕ ಈಜುಗಾರನಾಗುವ ವಿಶ್ವಾಸ ಮೊದಲ ಸಲ ಮೂಡಿದ್ದು ಹೇಗೆ?**

ಬೆನ್ನುಹುರಿಯ (ಸ್ಪೈನಾ ಬೈಫಿರಾ) ಸಮಸ್ಯೆಯಿಂದಾಗಿ ನನಗೆ ನಡೆಯಲು ಬರುತ್ತಿರಲಿಲ್ಲ. ಕಾಲುಗಳ ಶಕ್ತಿ ಹೆಚ್ಚಿಸಲು ವೈದ್ಯರು ಅಕ್ವಾಥೆರಪಿಯ (ಈಜು ಚಿಕಿತ್ಸೆ) ಸಲಹೆ ನೀಡಿದ್ದರು. ಅದರಂತೆ ಜಯನಗರದ ಪಿ.ಎಂ. ಈಜುಕೊಳಕ್ಕೆ ಅಪ್ಪ ನನ್ನನ್ನು ಸೇರಿಸಿದರು. ನಡೆಯಲು ಕಷ್ಟಪಡುತ್ತಿದ್ದ ನನಗೆ ಈಜುವುದು ಸುಲಭ ಎನಿಸಿತು. ಮೀನಿನಂತೆ ಈಜುತ್ತಿದ್ದೆ. ಅಲ್ಲಿದ್ದ ಕೆಲವು ಕೋಚ್‌ಗಳು ಇದನ್ನು ಗಮನಿಸಿದರು. ಅಲ್ಲಿದ್ದ ಮುಖ್ಯ ಕೋಚ್ ಆಗಿದ್ದ ಜಾನ್ ಕ್ರಿಸ್ಟೋಫರ್ ಅಪ್ಪ ಅಮ್ಮನಿಗೆ ಧೈರ್ಯ ತುಂಬಿ ಪ್ಯಾರಾ ಕ್ರೀಡೆಗೆ ಹಾಕಲು ಕಾರಣರಾದರು. ನನ್ನ ಕಾಲ ಮೇಲೆ ನಾನು ನಿಲ್ಲುವಂತಾಗಬೇಕು ಎಂಬ ಆಸೆ ಪಾಲಕರದ್ದಾಗಿತ್ತು.

- **ಈ ಹಾದಿಯಲ್ಲಿ ನಿಮಗೆ ಎದುರಾದ ಸವಾಲುಗಳೇನು?**

ತರಬೇತಿ ಆರಂಭವಾಗಿ ಮೂರು ತಿಂಗಳು ಆದ ನಂತರ ಮೊದಲ ಬಾರಿ ರಾಜ್ಯಮಟ್ಟದ ಈಜು ಸ್ಪರ್ಧೆಯಲ್ಲಿ ಭಾಗವಹಿಸಿದ್ದೆ. ಆದರಲ್ಲಿ ಕೊನೆಯ ಸ್ಥಾನ ಪಡೆದಿದ್ದೆ. ಆಗ ತುಂಬಾ ಬೇಸರವಾಗಿತ್ತು. ಆಗಲೇ ಬಿಟ್ಟುಬಿಡಬೇಕು ಎಂದು ಕೋಚ್‌ಗೆ ಹೇಳಿದ್ದೆ. ಅವರು ಒಪ್ಪಲಿಲ್ಲ. ಸೋಲುಗಳಿಗೆ ಹೆದರಬೇಡ. ಸಾಮಾನ್ಯರೊಂದಿಗೇ ಇಷ್ಟು ಚೆನ್ನಾಗಿ ಈಜಿದ್ದಿ, ಪ್ಯಾರಾ ಕೆಟಗರಿಯಲ್ಲಿ ಇನ್ನೂ ಚೆನ್ನಾಗಿ ಮಾಡಲು ಸಾಧ್ಯವಿದೆ ಎಂದು ಹುರಿದುಂಬಿಸಿದರು. ಅದು ಇವತ್ತು ಪ್ಯಾರಾಲಿಂಪಿಕ್ಸ್‌ಗೆ ಪ್ರವೇಶ ಪಡೆಯುವ ಮಟ್ಟಕ್ಕೆ ಬಂದಿದೆ. ಅಂಗವಿಕಲರಿಗೆ ಕ್ರೀಡೆ ಬೇಕಿಲ್ಲ. ಹೊರೆಯೆಂಬ ಭಾವ ವ್ಯಕ್ತಪಡಿಸಿದ್ದವರೆಲ್ಲ ಇವತ್ತು ಅಭಿನಂದಿಸುತ್ತಿದ್ದಾರೆ.

- **ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕ ಜಯದ ವಿಶ್ವಾಸವಿದೆಯೇ?**

ನಾನು ಪ್ಯಾರಾಲಿಂಪಿಕ್ಸ್‌ನಲ್ಲಿ 50 ಮೀಟರ್ ಬಟರ್‌ಫ್ಲೈನಲ್ಲಿ ಕ್ವಾಲಿಫೈ ಆಗಿದ್ದೇನೆ. ಇದು ನನ್ನ ನೆಚ್ಚಿನ ವಿಭಾಗ. ವಿಶ್ವ ರ‍್ಯಾಂಕಿಂಗ್‌ನಲ್ಲಿ ಹತ್ತನೇ ಶ್ರೇಯಾಂಕ ಪಡೆದಿದ್ದೇನೆ. ಜಪಾನ್ ವಾತಾವರಣಕ್ಕೆ ತಕ್ಕಂತೆ ಇಲ್ಲಿ ಅಭ್ಯಾಸ ಮಾಡಿದ್ದೆವೆ. 2012ರಲ್ಲಿ ಭಾರತ ಪ್ರತಿನಿಧಿಸುತ್ತಿದ್ದೆ. ಆಗ ಈ ಕನಸು ಕಂಡಿದ್ದೆ. 2016ರಲ್ಲಿ ತಾಂತ್ರಿಕ ಕಾರಣಗಳಿಗಾಗಿ ಹೋಗಲು ಸಾಧ್ಯವಾಗಿರಲಿಲ್ಲ ಅದೇ ವರ್ಷ ಸ್ಕಾಲರ್‌ಷಿಪ್ ಸಿಕ್ಕಿತು. ಥೈಲ್ಯಾಂಡ್ ನಲ್ಲಿ ತರಬೇತಿ ಪಡೆದೆ. ಸ್ಪೇನ್‌ಗೂ ಹೋಗುವ ಅವಕಾಶ ಸಿಕ್ಕಿತು. ಅಲ್ಲಿ ಒಲಿಂಪಿಯನ್ ಕೋಚ್ ಮಿಗೆಲ್ ಅವರ ಮಾರ್ಗದರ್ಶನ ಸಿಕ್ಕಿತು. ಫೈನಲ್ ಪ್ರವೇಶಿಸುವ ಗುರಿ ಇದೆ.

- **ಬಯೋಬಬಲ್ ಸವಾಲು ಗಳೇನು?**

ಬಹಳಷ್ಟು ಕಟ್ಟುನಿಟ್ಟಾದ ನಿಯಮಗಳಿವೆ. ಅದಕ್ಕೆ ಹೊಂದಿಕೊಳ್ಳುವ ಅನಿವಾರ್ಯತೆ ಇದೆ. ಈ ಬಾರಿ ಒಲಿಂಪಿಕ್ಸ್‌ನಲ್ಲಿ ಸಾಧನೆ ಮಾಡಿರುವವರಿಂದ ನನಗೆ ಬಹಳ ಸ್ಫೂರ್ತಿಸಿಗುತ್ತಿದೆ. ಇಡೀ ಭಾರತವೇ ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು ಗಾಲ್ಫ್ ಕ್ರೀಡೆಯನ್ನು ನೋಡುವಂತೆ ಮಾಡಿದ ಅದಿತಿ ಅಶೋಕ್, ನನ್ನ ಸ್ನೇಹಿತ, ಈಜುಪಟು ಶ್ರೀಹರಿ ನಟರಾಜ್, ಚಿನ್ನದ ಪದಕ ವಿಜೇತ ನೀರಜ್ ಚೋಪ್ರಾ ಸಾಧನೆಗಳು ಪ್ರೇರಣಾದಾಯಕ.

- **ಕ್ರೀಡೆಯನ್ನು ಆಯ್ಕೆ ಮಾಡಿಕೊಳ್ಳುವ ಅಂಗವಿಕಲ ಮಕ್ಕಳಿಗೆ ನಿಮ್ಮ ಸಂದೇಶ**

ಅಂಗವಿಕಲರಿಗೆ ಅನುಕಂಪಕ್ಕಿಂತ ಅವಕಾಶ ನೀಡಬೇಕು. ಗ್ರಾಮೀಣ ಭಾಗಗಳಲ್ಲಿ ಬಹಳಷ್ಟು ಪ್ರತಿಭಾವಂತರಿದ್ದಾರೆ. ಕುಟುಂಬ, ಸಮಾಜದಲ್ಲಿ ಜಾಗೃತಿ ಮೂಡಬೇಕು. ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಬೇಕು.

- **ಕೊರೊನಾ ಕಾಲಘಟ್ಟದಲ್ಲಿ ಎದುರಿಸಿದ ಸವಾಲುಗಳೇನು?**

ಕೋವಿಡ್‌ನಿಂದಾಗಿ ತರಬೇತಿಯಲ್ಲಿ ಅಡೆತಡೆಗಳು ಬಹಳಷ್ಟಾದವು. ಡ್ರೈಲ್ಯಾಂಡ್ ಟ್ರೇನಿಂಗ್ ಮಾತ್ರ ಸಾಧ್ಯವಿತ್ತು. ಮನೆಯಲ್ಲಿ ಅಭ್ಯಾಸ ಮಾಡುವುದು ಅನಿವಾರ್ಯವಾಗಿತ್ತು. ಅದಕ್ಕಾಗಿಯೇ ಕೋಚ್ ಗಳು ಸಹಾಯ ಮಾಡಿದರು. ಪ್ರಯಾಣ ನಿರ್ಬಂಧಗಳಿಂದಾಗಿ ಬಹಳಷ್ಟು ಸ್ಪರ್ಧೆಗಳಿಗೆ ಹೋಗಲು ಕಷ್ಟವಾಯಿತು. ಮೂರು ತಿಂಗಳುಗಳ ಹಿಂದೆ ಕೊರೊನಾದಿಂದಾಗಿ ಅಜ್ಜಿಯನ್ನು ಕಳೆದುಕೊಂಡೆ. ಅಪ್ಪ, ಅಮ್ಮ ಇಬ್ಬರೂ ನೌಕರಿಗೆ ಹೋಗುತ್ತಿದ್ದಾಗ ನನ್ನನ್ನು ಅಜ್ಜಿಯೇ ನೋಡಿಕೊಂಡಿದ್ದರು. ಅವರೇ ಪ್ರತಿ ಹೆಜ್ಜೆಯಲ್ಲಿಯೂ ಬೆಂಬಲಿಸಿದ್ದಾರೆ. ಪ್ಯಾರಾಲಿಂಪಿಕ್‌ನಲ್ಲಿ ನಾನು ಭಾಗವಹಿಸುವುದನ್ನು ನೋಡಲು ಅವರಿಲ್ಲ.